ಶುಕ್ರವಾರ, ಜುಲೈ 23, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 204 | ಪುಟ 22
www.prajavani.net
/prajavani.net @prajavani /prajavani http://bit.ly/Prajavani



ಇಂದಿನ ಪಾಡ್‌ಕಾಸ್ಟ್ ವಿಶೇಷ

ಕಥೆ ಕೇಳು ಮಗುವೆ ಸಿನಿಮಾ ಮ್ಯಾಟಿನಿ

ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ

Prajavani.net/podcast

ಆಳ–ಅಗಲ

ಪೆಗಾಸಸ್ ಕಣ್ಗಾವಲು ಕೋಟೆ ಬಯಲು

'ಕೋವಿಡ್ ಸಾವಿನ ಲೆಕ್ಕ ತಪ್ಪಿಲ್ಲ' 11

ಚಿನಕುರಳಿ

ಪ್ರಕಾಶ್ ಶೆಟ್ಟಿ



'ಎರಡು ತಿಂಗಳ ಹಿಂದೆಯೇ ನಿರ್ಧರಿಸಿದ್ದೆ; 25ರ ಸೂಚನೆಗೆ ಕಾಯುವೆ'

ರಾಜೀನಾಮೆಗೆ ಸೈ: ಬಿಎಸ್‌ವೈ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಪಕ್ಷದ ವರಿಷ್ಠರು ಹೇಳುವ ತನಕ ಮಾತ್ರ ಮುಖ್ಯಮಂತ್ರಿಯಾಗಿರುತ್ತೇನೆ. ರಾಜೀನಾಮೆ ನೀಡಿ ಎಂದ ತಕ್ಷಣವೇ ಕೊಡುತ್ತೇನೆ' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಮ್ಮ ನಿರ್ಧಾರ ಪ್ರಕಟಿಸಿದ್ದಾರೆ.

ಕಳೆದ ಕೆಲವು ದಿನಗಳಿಂದ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುತ್ತಾರೆ ಎಂಬ ವದಂತಿ ದಟ್ಟವಾಗಿ ಹಬ್ಬಿದಾಗಲೂ ಮೌನಕ್ಕೆ ಶರಣಾಗಿದ್ದ ಯಡಿಯೂರಪ್ಪ ಅವರು ಗುರುವಾರ ಮೌನ ಮುರಿದರು. ಇದೇ 25ರ ಬಳಿಕ ತಾವು ರಾಜೀನಾಮೆ ನೀಡಲು ಸಿದ್ಧರಿರುವುದಾಗಿ ಸ್ಪಷ್ಟವಾಗಿ ಹೇಳಿದ್ದಾರೆ.

ಸುದ್ದಿಗಾರರ ಜತೆ ಬೆಳಿಗ್ಗೆ ಮಾತನಾಡಿದ್ದ ಅವರು, 'ಇದೇ 25ಕ್ಕೆ ವರಿಷ್ಠರಿಂದ ಸಂದೇಶ ಬರಲಿದ್ದು, ಆ ಪ್ರಕಾರವೇ ನಡೆದುಕೊಳ್ಳುತ್ತೇನೆ' ಎಂದಿದ್ದರು. ಸಂಜೆ ವೇಳೆಗೆ ಅವರ ಮಾತುಗಳಲ್ಲಿ ರಾಜೀನಾಮೆ ನೀಡುವ ಕುರಿತು ಹೆಚ್ಚಿನ ಸ್ಪಷ್ಟತೆ ಕಂಡುಬಂದಿತು.

ಸಚಿವ ಸಂಪುಟ ಸಭೆಗೆ ಹಾಜರಾಗುವುದಕ್ಕೂ ಮುನ್ನ ಸುದ್ದಿಗಾರರ ಜತೆ ಮಾತನಾಡಿದ ಯಡಿಯೂರಪ್ಪ, 'ವರಿಷ್ಠರು ರಾಜೀನಾಮೆ ಕೊಡಿ ಎಂದ ತಕ್ಷಣವೇ ರಾಜೀನಾಮೆ ನೀಡುತ್ತೇನೆ. ಎರಡು ತಿಂಗಳ ಹಿಂದೆಯೇ ರಾಜೀನಾಮೆ ನೀಡುವುದಾಗಿ ಹೇಳಿದ್ದೆ. ಆದರೆ, ವರಿಷ್ಠರಿಂದ ಅಧಿಕೃತ ಸೂಚನೆ ಬಂದಿರಲಿಲ್ಲ. ಇದೇ 25ಕ್ಕೆ ಸೂಚನೆ ಬರಬಹುದು. ಅದಕ್ಕಾಗಿ ಕಾಯುತ್ತಿದ್ದೇನೆ' ಎಂದರು.

'ರಾಜೀನಾಮೆ ಬಳಿಕ ಪಕ್ಷದ ಸಂಘಟನೆಯಲ್ಲಿ ತೊಡಗಿಸಿಕೊಳ್ಳುವುದರ ಜತೆಗೆ, ಮುಂದಿನ ಚುನಾವಣೆಯಲ್ಲಿ ಪಕ್ಷವನ್ನು ಮರಳಿ ಅಧಿಕಾರಕ್ಕೆ ತರುತ್ತೇನೆ. ಆದರೆ, ಹೊಸ ಮುಖ್ಯಮಂತ್ರಿ ಯಾರು ಆಗಬೇಕು ಎಂಬ ಬಗ್ಗೆ ಯಾರ ಹೆಸರನ್ನೂ ಶಿಫಾರಸು ಮಾಡುವುದಿಲ್ಲ. ಅದರ ಅಗತ್ಯವೂ ಇಲ್ಲ. ಕೇಳಿದರೂ ಯಾರ ಹೆಸರನ್ನೂ ಹೇಳುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

'ಇದೇ 26 ಕ್ಕೆ ಮುಖ್ಯಮಂತ್ರಿ ಆಗಿ ಎರಡು ವರ್ಷ ಪೂರ್ಣಗೊಳ್ಳಲಿದೆ. ಈ ಸಂದರ್ಭದಲ್ಲಿ ಸರ್ಕಾರದ ಎರಡು ವರ್ಷಗಳ ಸಾಧನೆಯ ಬಗ್ಗೆ ವಿಶೇಷ ಕಾರ್ಯಕ್ರಮವಿದೆ' ಎಂದು ಬೆಳಿಗ್ಗೆ ಹೇಳಿದ್ದರು.

6ನೇ ಪುಟ ನೋಡಿ

ರವಿ, ಸಂತೋಷ್, ನಿರಾಣಿ ಹೆಸರು ಮುನ್ನೆಲೆಗೆ

ವಯಸ್ಸಿನ ಕಾರಣ ಕೊಟ್ಟು ಪದತ್ಯಾಗಕ್ಕೆ ಸಿದ್ಧ ಎಂದು ಯಡಿಯೂರಪ್ಪ ಘೋಷಣೆ ಮಾಡುತ್ತಿದ್ದಂತೆ, 15ನೇ ವಿಧಾನಸಭೆಯ ಇನ್ನುಳಿದ 20 ತಿಂಗಳ ಅವಧಿಯಲ್ಲಿ ಸರ್ಕಾರದ ಚುಕ್ಕಾಣಿ ಹಿಡಿಯುವರು ಯಾರು ಎಂಬ ಚರ್ಚೆ ಬಿಜೆಪಿಯಲ್ಲಿ ಬಿರುಸುಗೊಂಡಿದೆ.

ಯಡಿಯೂರಪ್ಪ ಅವರು ದೆಹಲಿಯಿಂದ ವಾಪಸ್ ಆದ ಬಳಿಕ, ನಾಯಕತ್ವ ಬದಲಾವಣೆ ಬಹುತೇಕ ಖಚಿತವಾಗಿತ್ತು. ಆ ವೇಳೆ, ಲಿಂಗಾಯತರನ್ನೇ ಉತ್ತರಾಧಿಕಾರಿಯಾಗಿ ಆಯ್ಕೆ ಮಾಡುವ ಬಗ್ಗೆ ಬಿಜೆಪಿ ವರಿಷ್ಠರು ಒಲವು ತೋರಿದ್ದಾರೆ ಎಂದು ಹೇಳಲಾಗಿತ್ತು. ವಾರ ಕಳೆಯುತ್ತಿದ್ದಂತೆ ಈ ಯಾದಿಯಲ್ಲಿ ಬದಲಾವಣೆಯಾಗುತ್ತಲೇ ಇದ್ದು, ಉತ್ತರಾಧಿಕಾರಿ ಯಾದಿಯಲ್ಲಿರುವವರ ಹೆಸರು ಮೇಲೆ–ಕೆಳಗೆ ಬದಲಾಗುತ್ತಿದೆ. ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿ, ಶಾಸಕ ಸಿ.ಟಿ. ರವಿ ಹೆಸರು ಎರಡು ದಿನಗಳಿಂದೀಚೆಗೆ ಮೊದಲ ಸಾಲಿಗೆ ಬಂದಿದೆ. ಒಕ್ಕಲಿಗ ಸಮುದಾಯಕ್ಕೆ ನೀಡುವುದಾದರೆ ಮೊದಲ ಆದ್ಯತೆ ರವಿ ಹಾಗೂ ಎರಡನೇಯದು ಸಿ.ಎನ್. ಅಶ್ವತ್ಥನಾರಾಯಣ ಅವರದ್ದಾಗಿದೆ.

ಬ್ರಾಹ್ಮಣ ಸಮುದಾಯಕ್ಕೆ ನೀಡುವುದಾದಲ್ಲಿ ಪ್ರಲ್ಹಾದ ಜೋಶಿ ಹೆಸರು ಪ್ರಧಾನವಾಗಿತ್ತು. ಆದರೆ, ಇನ್ನು 20 ತಿಂಗಳ ಅವಧಿಗೆ ರಾಜ್ಯ ರಾಜಕಾರಣಕ್ಕೆ ಬರಲು ಅವರು ಒಲವು ತೋರಿಲ್ಲ. ಕೇಂದ್ರ ಸರ್ಕಾರದಲ್ಲಿ ಸಂಸದೀಯ ವ್ಯವಹಾರಗಳನ್ನು ನೋಡಿಕೊಳ್ಳುತ್ತಿರುವ ಅವರನ್ನು ಬಿಟ್ಟುಕೊಡಲು ಪ್ರಧಾನಿ ಮೋದಿ ಅವರಿಗೆ ಮನಸ್ಸಿಲ್ಲ ಎನ್ನಲಾಗುತ್ತಿದೆ. ಹೀಗಾಗಿ, ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿಯಾಗಿರುವ ಬಿ.ಎಲ್. ಸಂತೋಷ್ ಹೆಸರು ಮುಂಚೂಣಿಗೆ ಬಂದಿದೆ.

6ನೇ ಪುಟ ನೋಡಿ

ವರಿಷ್ಠರ ನಿರ್ಧಾರಕ್ಕೆ ಬದ್ಧನಾಗಿರುತ್ತೇವೆ. ಅವರು ಯಾವ ನಿರ್ದೇಶನ ನೀಡುತ್ತಾರೋ ಅದನ್ನು ಪಾಲಿಸುತ್ತೇವೆ. ಜುಲೈ 26 ಕ್ಕೆ ಎಲ್ಲ ಗೊಂದಲಗಳಿಗೂ ತೆರೆ ಬೀಳಲಿದೆ

ಆರ್.ಅಶೋಕ
ಕಂದಾಯ ಸಚಿವ

ಸರ್ಕಾರಕ್ಕೆ ಎರಡು ವರ್ಷ ತುಂಬಿದ ಸಲುವಾಗಿ ಶಾಸಕರಿಗೆ ಔತಣ ಕೂಟ ನಡೆಸಬೇಕಿತ್ತು. ಆದರೆ, ವರಿಷ್ಠರ ಸೂಚನೆ ಮೇರೆಗೆ ರದ್ದುಪಡಿಸಲಾಯಿತು

ಬಸವರಾಜ ಬೊಮ್ಮಾಯಿ
ಗೃಹ ಸಚಿವ

ಸಂಸತ್ ಕಲಾಪ ನುಂಗಿದ ಪೆಗಾಸಸ್

ನವದೆಹಲಿ (ಪಿಟಿಐ): ಪೆಗಾಸಸ್ ಗೂಢಚರ್ಯೆಗೆ ಸಂಬಂಧಿಸಿದಂತೆ ವಿರೋಧ ಪಕ್ಷಗಳು ರಾಜ್ಯಸಭೆಯಲ್ಲಿ ಗದ್ದಲ ನಡೆಸಿದ ಕಾರಣ ಗುರುವಾರ ಕಲಾಪವನ್ನು ಮೂರು ಬಾರಿ ಮುಂದೂಡಲಾಯಿತು.

4

ಹೆಚ್ಚಿದ ಮಳೆಯ ಆರ್ಭಟ: ಪ್ರವಾಹ ಭೀತಿ

ಬೆಂಗಳೂರು: ಧಾರವಾಡ, ಬೆಳಗಾವಿ, ಉತ್ತರ ಕನ್ನಡ ಜಿಲ್ಲೆ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಗುರುವಾರ ದಿನವಿಡೀ ಮಳೆಯಾಗಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ. ಶಿರಾಡಿ ಘಾಟ್‌ನಲ್ಲಿ ಭೂಕುಸಿತವಾಗಿ ಸಂಚಾರ ಸ್ಥಗಿತಗೊಂಡಿದೆ.

10

ಮಾಧ್ಯಮ ಸಂಸ್ಥೆಗಳಲ್ಲಿ ಐ.ಟಿ ಶೋಧ

ನವದೆಹಲಿ/ಅಹಮದಾಬಾದ್: ದೈನಿಕ್ ಭಾಸ್ಕರ್ ದಿನಪತ್ರಿಕೆ ಮತ್ತು ಭಾರತ್ ಸಮಾಚಾರ್ ಸುದ್ದಿ ವಾಹಿನಿಯನ್ನು ನಡೆಸುತ್ತಿರುವ ಸಂಸ್ಥೆಗಳಿಗೆ ಸೇರಿದ ಸ್ಥಳಗಳಲ್ಲಿ ಆದಾಯ ತೆರಿಗೆ ಇಲಾಖೆ (ಐ.ಟಿ) ಅಧಿಕಾರಿಗಳು ಗುರುವಾರ ಶೋಧ ನಡೆಸಿದ್ದಾರೆ.

11

ಸಂಸತ್ ಭವನ ಸಮೀಪ ತಲುಪಿದ ರೈತರ ಪ್ರತಿಭಟನೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರ ಜಾರಿ ಮಾಡಿರುವ ಮೂರು ಕೃಷಿ ಕಾಯ್ದೆಗಳ ವಿರುದ್ಧ ಎಂಟು ತಿಂಗಳಿಂದ ದೆಹಲಿಯ ಗಡಿಗಳಲ್ಲಿ ಪ್ರತಿಭಟನೆ ನಡೆಸುತ್ತಿದ್ದ ರೈತರು, ಸಂಸತ್ತಿಗೆ ಸ್ವಲ್ಪವೇ ದೂರವಿರುವ ಜಂತರ್ ಮಂತರ್‌ಗೆ ಗುರುವಾರ ತಲುಪಿದರು.

11

ರಾತ್ರಿ ಆಶ್ರಯ ಕೇಂದ್ರಗಳ ಪರಿಶೀಲನೆಗೆ ಸೂಚನೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಅಸ್ತಿತ್ವದಲ್ಲಿರುವ ರಾತ್ರಿ ಆಶ್ರಯ ಕೇಂದ್ರಗಳಿಗೆ ದಿಢೀರ್ ಭೇಟಿ ನೀಡಿ ಪರಿಶೀಲಿಸುವಂತೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಪೀಪಲ್ಸ್ ಯೂನಿಯನ್ ಆಫ್ ಸಿವಿಲ್ ಲಿಬರ್ಟೀಸ್ (ಪಿಯುಸಿಎಲ್) ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿಗೆ ಪ್ರತಿಕ್ರಿಯೆಯಾಗಿ ಸರ್ಕಾರ ಸಲ್ಲಿಸಿದ್ದ ಹೇಳಿಕೆ ಅವಲೋಕಿಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಈ ಆದೇಶ ನೀಡಿತು.

ರಾಜ್ಯದಲ್ಲಿ ಒಟ್ಟಾರೆ 166 ಆಶ್ರಯ ಕೇಂದ್ರಗಳ ಅಗತ್ಯವಿದ್ದು, ಸದ್ಯ 46 ಆಶ್ರಯ ಕೇಂದ್ರಗಳಿವೆ. ಬೆಂಗಳೂರಿನಲ್ಲಿ 84 ಆಶ್ರಯ ಕೇಂದ್ರಗಳ ಅಗತ್ಯವಿದೆ. ಮೈಸೂರಿನಲ್ಲಿ 9 ತಾಣಗಳ ಅಗತ್ಯವಿದ್ದು, ಒಂದೇ ಕೇಂದ್ರವಿದೆ. ಹುಬ್ಬಳ್ಳಿ-ಧಾರವಾಡದಲ್ಲೂ ಒಂಬತ್ತು ತಾಣಗಳು ಅಗತ್ಯವಿದ್ದು, ಎರಡು ಕೇಂದ್ರಗಳಷ್ಟೇ ಇವೆ ಎಂದು ಸರ್ಕಾರ ವಿವರಿಸಿತು.

ಬೆಂಗಳೂರಿನಲ್ಲಿ 42 ಮತ್ತು ಇತರ ನಗರಗಳಲ್ಲೂ ಅಗತ್ಯಕ್ಕೆ ತಕ್ಕಂತೆ ಆಶ್ರಯ ಕೇಂದ್ರಗಳನ್ನು ಮುಂದಿನ ಮೂರು ತಿಂಗಳಲ್ಲಿ ಆರಂಭಿಸಬೇಕು ಎಂದು ಪೀಠ ನಿರ್ದೇಶನ ನೀಡಿತು.



ಟೋಕಿಯೊ ಒಲಿಂಪಿಕ್ಸ್ 2021 ಆರಂಭ


ಅಗತ್ಯ ಸೇವೆ: ಮುಷ್ಕರ ನಿಷೇಧಿಸುವ ಮಸೂದೆ ಮಂಡನೆ

ನವದೆಹಲಿ (ಪಿಟಿಐ): ಅಗತ್ಯ ರಕ್ಷಣಾ ಸೇವೆಗಳಲ್ಲಿ ತೊಡಗಿಸಿಕೊಂಡಿರುವವರು ಧರಣಿ ಮತ್ತು ಮುಷ್ಕರ ನಡೆಸುವುದನ್ನು ನಿಷೇಧಿಸುವ ಮಸೂದೆಯನ್ನು ಕೇಂದ್ರ ಸರ್ಕಾರ ಗುರುವಾರ ಲೋಕಸಭೆಯಲ್ಲಿ ಮಂಡಿಸಿದೆ.

ಪೆಗಾಸಸ್ ಬೇಹುಗಾರಿಕೆ ವಿವಾದದ ತನಿಖೆಗೆ ಮತ್ತು ಮೂರು ಕೃಷಿ ಕಾಯ್ದೆ ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿ ವಿರೋಧ ಪಕ್ಷದ ಸದಸ್ಯರು ಕೋಲಾಹಲ ಸೃಷ್ಟಿಸಿದ ನಡುವೆಯೂ ರಕ್ಷಣಾ ರಾಜ್ಯ ಸಚಿವ ಅಜಯ್ ಭಟ್ ಅವರು ಅಗತ್ಯ ರಕ್ಷಣಾ ಸೇವೆಗಳ ಮಸೂದೆ 2021 ಅನ್ನು ಸದನದ ಮುಂದಿಟ್ಟರು. ಜೂನ್‌ನಲ್ಲಿ ಹೊರಡಿಸಿದ್ದ ಸುಗ್ರೀವಾಜ್ಞೆಯ ಬದಲಿಗೆ ಈ ಮಸೂದೆಯನ್ನು ಸರ್ಕಾರ ತರಲು ಉದ್ದೇಶಿಸಿದೆ.

‘₹ 12 ಸಾವಿರ ಕೋಟಿ ಕಾಮಗಾರಿಗೆ ಅನುಮತಿ ನೀಡುವ ಅವಸರವೇಕೆ?’

ಪ್ರಜಾವಾಣಿ ವಾರ್ತೆ



ಮಳವಳ್ಳಿ (ಮಂಡ್ಯ ಜಿಲ್ಲೆ): ‘ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ರಾಜೀನಾಮೆ ನೀಡುತ್ತಾರೆ ಎಂದು ಹೇಳಲಾಗುತ್ತಿದ್ದು, ಈ ಹಂತದಲ್ಲಿ ₹ 12 ಸಾವಿರ ಕೋಟಿ ಯೋಜನೆಗಳಿಗೆ ತರಾತುರಿಯಲ್ಲಿ ಅನುಮತಿ ನೀಡುತ್ತಿದ್ದಾರೆ. ಏಕಿಷ್ಟು ಅವಸರ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಪ್ರಶ್ನಿಸಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಎರಡು ದಿನಗಳಲ್ಲಿ ಮುಖ್ಯಮಂತ್ರಿ ಬದಲಾಗುವುದಾದರೆ ಇಷ್ಟೊಂದು ವೆಚ್ಚದ ಕಾಮಗಾರಿಗೆ ಅನುಮತಿ ನೀಡುವ ನಿರ್ಧಾರದ ಹಿಂದಿನ ಉದ್ದೇಶ ಏನು? ಅವರಿಗೆ ಅಂತಹ ದರ್ದು ಏನಿದೆ? ರಾಜ್ಯದ ತೆರಿಗೆ ಹಣವನ್ನು ಲೂಟಿ ಮಾಡಲಿಕ್ಕಾ?’ ಎಂದು ಕೇಳಿದರು.

‘ನೀರಾವರಿ ಇಲಾಖೆಯ 4 ನಿಗಮಗಳಲ್ಲಿನ ಕಾಮಗಾರಿಗೆ ಅನುಮತಿ ನೀಡುತ್ತಿದ್ದಾರೆ. ಅದರಲ್ಲಿ ಕಾವೇರಿ ನೀರಾವರಿ ನಿಗಮಕ್ಕೆ ಕೇವಲ ₹ 1 ಸಾವಿರ ಕೋಟಿ ನೀಡುತ್ತಿದ್ದಾರೆ. ಮೈಸೂರು ಭಾಗದ ಜನರು ನಿಮಗೆ ಏನು ದ್ರೋಹ ಮಾಡಿದ್ದಾರೆ? ನಿಜವಾಗಿಯೂ ನೀರು ಕೊಡುವ ಉದ್ದೇಶ ನಿಮಗೆ ಇದೆಯೇ? ದುಡ್ಡು ಹೊಡೆಯುವ ಯೋಜನೆ ನಿಮ್ಮದು’ ಎಂದು ಆರೋಪಿಸಿದರು.

‘ಯಡಿಯೂರಪ್ಪ ರಾಜೀನಾಮೆ ನೀಡುವುದು, ಬಿಡುವುದು ಬಿಜೆಪಿಯ ಆಂತರಿಕ ವಿಚಾರ. ಅವರ ಪಕ್ಷದ ವಿಷಯದಲ್ಲಿ ನಾನು ಮೂಗು ತೂರಿಸುವುದಿಲ್ಲ. ಜನರು ಹಲವು ರೀತಿಯ ಸಮಸ್ಯೆ ಎದುರಿಸುತ್ತಿದ್ದರೂ 2 ವರ್ಷಗಳಿಂದ ಇಂತಹ ವಿಷಯ ಇಟ್ಟುಕೊಂಡು ಸಮಯ ವ್ಯರ್ಥ ಮಾಡುತ್ತಿದ್ದಾರೆ. ಆದಷ್ಟು ಬೇಗ ವಾತಾವರಣವನ್ನು ತಿಳಿಗೊಳಿಸಿ, ಉತ್ತಮ ಆಡಳಿತ ನೀಡುವಂತಾಗಬೇಕು’ ಎಂದರು.

ಮುಖ್ಯಮಂತ್ರಿಗೆ ಮಠಾಧೀಶರು ಬೆಂಬಲ ನೀಡಿದ್ದಾರೆ ಎಂಬ ವಿಚಾರಕ್ಕೆ, ‘ಇದಕ್ಕೆ ನಾನು ಯಾವುದೇ ಮಹತ್ವ ನೀಡುವುದಿಲ್ಲ. ರಾಜ್ಯದ ಜನ ನನ್ನನ್ನು ಜಾತಿಯಿಂದ ಗುರುತಿಸಿಲ್ಲ, ನನ್ನಲ್ಲಿರುವ ತಾಯಿ ಹೃದಯದಿಂದ ಗುರುತಿಸುತ್ತಾರೆ. ಜಾತಿಯ ಹೆಸರಿನಲ್ಲಿ ರಕ್ಷಣೆ ಪಡೆಯುವ ಅಗತ್ಯ ನನಗಿಲ್ಲ’ ಎಂದು ಹೇಳಿದರು.

‘ಕೈಗಾರಿಕಾಸ್ನೇಹಿ ಆಸ್ತಿ ತೆರಿಗೆ ಜಾರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೈಗಾರಿಕಾಸ್ನೇಹಿ ತೆರಿಗೆ ಸುಧಾರಣೆಗೆ ಮುಂದಾಗಿದ್ದು, ಈ ಬಗ್ಗೆ ಶೀಘ್ರ ಅಂತಿಮ ತೀರ್ಮಾನ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಕೈಗಾರಿಕೆ ಸಚಿವ ಜಗದೀಶ ಶೆಟ್ಟರ್ ಸೂಚಿಸಿದರು.


ಜಗದೀಶ ಶೆಟ್ಟರ್

ಪೌರಾಡಳಿತ ಸಚಿವ ಎಂಟಿಬಿ ನಾಗರಾಜ್, ನಗರಾಭಿವೃದ್ಧಿ ಸಚಿವ ಬಿ.ಎ. ಬಸವರಾಜ್, ಮೂರೂ ಇಲಾಖೆಗಳ ಹಿರಿಯ ಅಧಿಕಾರಿಗಳು ಮತ್ತು ಕೈಗಾರಿಕಾ ಸಂಸ್ಥೆಗಳ ಪ್ರತಿನಿಧಿಗಳ ಜೊತೆ ಗುರುವಾರ ಅವರು ಸಭೆ ನಡೆಸಿದರು. ಕೈಗಾರಿಕಾ ಸಂಸ್ಥೆಗಳ ಪ್ರತಿನಿಧಿಗಳು ತಮ್ಮ ಸಮಸ್ಯೆಗಳನ್ನು ಸಭೆಗೆ ತಿಳಿಸಿದರು.

‘ಕೈಗಾರಿಕೆಗಳಿಗೆ ವಿಧಿಸುವ ತೆರಿಗೆ ಬಹಳ ಹೆಚ್ಚಾಗಿವೆ. ಖಾಲಿ ಇರುವ ಜಾಗದ ಮೇಲೂ ಬಹಳಷ್ಟು ತೆರಿಗೆ ಹಾಕಲಾಗುತ್ತಿದೆ. ರಾಜ್ಯದಾದ್ಯಂತ ಪಾರದರ್ಶಕ ಹಾಗೂ ಒಂದೇ ರೀತಿಯ ತೆರಿಗೆ ಪದ್ಧತಿ ಅಳಡಿಸಿಕೊಳ್ಳುವುದು ಬಹಳ ಅವಶ್ಯಕ. ಹೀಗಾಗಿ, ಕೈಗಾರಿಕಾಸ್ನೇಹಿ ತೆರಿಗೆ ಪದ್ಧತಿಯ ಅನುಷ್ಠಾನಕ್ಕೆ ಅಗತ್ಯವಿರುವ ಸುಧಾರಣೆಗಳನ್ನು ಶೀಘ್ರ ಕೈಗೊಳ್ಳಬೇಕು’ ಎಂದು ಅದಿಕಾರಿಗಳಿಗೆ ಶೆಟ್ಟರ್ ಹೇಳಿದರು.

‘ಜಿಲ್ಲಾಧಿಕಾರಿಗಳು, ಮಹಾನಗರ ಪಾಲಿಕೆಯ ಆಯುಕ್ತರ ಸಭೆಯನ್ನು ಮುಂದಿನ ವಾರ ಆಯೋಜಿಸಬೇಕು. ಆ ಸಭೆಯಲ್ಲಿ ರಾಜ್ಯದಾದ್ಯಂತ ಕೈಗಾರಿಕೆಗಳಿಂದ ಬಾಕಿ ಇರುವ ತೆರಿಗೆಯ ಬಗ್ಗೆ ಮಾಹಿತಿ ಪಡೆದು, ಒಂದು ಬಾರಿಯ ವಿಶೇಷ ಯೋಜನೆ ಘೋಷಿಸುವಂಥ ನಿರ್ಧಾರ ತೆಗೆದುಕೊಳ್ಳಬೇಕು’ ಎಂದೂ ಅವರು ಸೂಚಿಸಿದರು.

‘ಹಳೆಯ ತೆರಿಗೆಯನ್ನು ಒಂದೇ ಬಾರಿಗೆ ಪಾವತಿಸುವ (ಒನ್ ಟೈಂ ಸೆಟಲ್‌ಮೆಂಟ್) ಯೋಜನೆ ಹಾಗೂ ತೆರಿಗೆಯಲ್ಲಿ ರಿಯಾಯಿತಿ ನೀಡುವ ಬಗ್ಗೆ ಅಂತಿಮ ನಿರ್ಧಾರಗಳನ್ನು ಕೈಗೊಳ್ಳಲಾಗಿದ್ದು, ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಲಾಗುವುದು’ ಎಂದು ನಗರಾಭಿವೃದ್ಧಿ ಸಚಿವ ಬಿ.ಎ. ಬಸವರಾಜ್ ತಿಳಿಸಿದರು.


ಚಾತುರ್ಮಾಸ್ಯ ಪೂರ್ವಭಾವಿಯಾಗಿ ಗುರುವಾರ ಮಧ್ಯಾಹ್ನ ರಾಘವೇಶ್ವರ ಶ್ರೀಗಳ ಪುರಪ್ರವೇಶ ನಡೆಯಿತು

ರಾಘವೇಶ್ವರ ಸ್ವಾಮೀಜಿ ಚಾತುರ್ಮಾಸ್ಯ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತಿ ಸ್ವಾಮೀಜಿಯವರ 28ನೇ ಚಾತುರ್ಮಾಸ್ಯ ಆಚರಣೆಯು ಇದೇ 24ರಿಂದ ಸೆ.20ರವರೆಗೆ ಗಿರಿನಗರದ ಶ್ರೀರಾಮಾಶ್ರಮದಲ್ಲಿ ನಡೆಯಲಿದೆ.

ಚಾತುರ್ಮಾಸ್ಯ ಪೂರ್ವಭಾವಿಯಾಗಿ ಗುರುವಾರ ಮಧ್ಯಾಹ್ನ ಶ್ರೀಗಳ ಪುರಪ್ರವೇಶ ವೈಭವದಿಂದ ನಡೆಯಿತು

ಗುರುಕುಲಗಳ ಬಗ್ಗೆ ಮಾಹಿತಿ ಪ್ರಸಾರ, ಘನ ಪಾರಾಯಣ, ವೇದ ಪಾರಾಯಣ, ಧನ್ವಂತರಿ ಹವನ, ಶ್ರೀಗಳ ವರ್ಧಂತಿ ಉತ್ಸವ ಸೇರಿದಂತೆ ಹಲವು ವಿಶೇಷ ಕಾರ್ಯಕ್ರಮಗಳು ಈ ಅವಧಿಯಲ್ಲಿ ನಡೆಯಲಿವೆ.

‘ಅರಿವಿನ ಹಣತೆಯ ಹಚ್ಚೋಣ-ವಿದ್ಯಾವಿಶ್ವವ ಕಟ್ಟೋಣ ಎಂಬ ಧ್ಯೇಯವಾಕ್ಯದೊಂದಿಗೆ ಈ ಚಾತುರ್ಮಾಸ್ಯವನ್ನು ಆಚರಿಸಲಾಗುತ್ತಿದೆ’ ಎಂದು ಚಾತುರ್ಮಾಸ್ಯ ಸಮಿತಿ ಅಧ್ಯಕ್ಷ ಯು.ಎಸ್.ಜಿ. ಭಟ್ ಪ್ರಕಟಣೆಯಲ್ಲಿ ಹೇಳಿದ್ದಾರೆ.

‘ಆಚರಣೆಯ ವೇಳೆ, ಕೋವಿಡ್ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುವುದು. ಭಿಕ್ಷಾಸೇವೆ, ಪಾದುಕಾಪೂಜೆಯಂಥ ಧಾರ್ಮಿಕ ವಿಧಿವಿಧಾನದಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳಲಾಗಿದೆ’ ಎಂದು ಅವರು ತಿಳಿಸಿದ್ದಾರೆ.

‘ಚಾತುರ್ಮಾಸ್ಯದಲ್ಲಿ ಸಂಗ್ರಹವಾಗುವ ಮೊತ್ತದಲ್ಲಿ ದೊಡ್ಡ ನಿಧಿಯೊಂದನ್ನು ವಿಶ್ವವಿದ್ಯಾಪೀಠದ ವಾರ್ಷಿಕ ನಿರ್ವಹಣೆಗಾಗಿ ಸಮರ್ಪಿಸಲು ಉದ್ದೇಶಿಸಲಾಗಿದೆ’ ಎಂದು ಹೇಳಿದ್ದಾರೆ.

‘ಖಾಸಗೀಕರಣದ ವ್ಯಸನದಲ್ಲಿ ಸರ್ಕಾರ’

ಬೆಂಗಳೂರು: ‘ಈ ಸರ್ಕಾರಗಳು ಖಾಸಗೀಕರಣದ ವ್ಯಸನದಲ್ಲಿ ಮುಳುಗಿವೆ. ಸಾರ್ವಜನಿಕ ವಲಯದ ಬಗ್ಗೆ ಮಾತನಾಡುವ ಅರ್ಥಶಾಸ್ತ್ರಜ್ಞರನ್ನು ವ್ಯಂಗ್ಯದಿಂದ ಕಾಣಲಾಗುತ್ತಿದ್ದು, ಅಷ್ಟರಮಟ್ಟಿಗೆ ಸರ್ಕಾರ ಜನರಲ್ಲಿ ಕೆಟ್ಟ ಅಭಿಪ್ರಾಯ ಮೂಡಿಸುತ್ತಿದೆ’ ಎಂದು ಅರ್ಥಶಾಸ್ತ್ರಜ್ಞ ಪ್ರೊ.ಟಿ.ಆರ್. ಚಂದ್ರಶೇಖರ್ ದೂರಿದರು.

ಸಾರ್ವಜನಿಕ ವಲಯದ ರಕ್ಷಣೆಗಾಗಿ ಬೆಂಗಳೂರು ವತಿಯಿಂದ ಹಮ್ಮಿಕೊಂಡಿದ್ದ ಆನ್‌ಲೈನ್ ಕಾರ್ಯಕ್ರಮದಲ್ಲಿ ‘ಸಾರ್ವಜನಿಕ ವಲಯ ಮತ್ತು ಉದ್ಯೋಗ’ ಕುರಿತು ಉಪನ್ಯಾಸ ನೀಡಿದರು. ‘ಸರ್ಕಾರವೂ ಸೇರಿದಂತೆ ಅದರ ನಿಯಂತ್ರಣ ಹಾಗೂ ಮಾಲೀಕತ್ವದಲ್ಲಿರುವ ಎಲ್ಲ ಸಂಸ್ಥೆಗಳು ಹಾಗೂ ಘಟಕಗಳು ಸಾರ್ವಜನಿಕ ವಲಯಕ್ಕೆ ಒಳಪಡುತ್ತವೆ. ಅಂತಹ ಮಹತ್ವವಾದ ಆರ್ಥಿಕ ಘಟಕವನ್ನು ಸರ್ಕಾರ ನಿರ್ನಾಮ ಮಾಡಲು ಹೊರಟಿದೆ’ ಎಂದು ಟೀಕಿಸಿದರು.

ಪರೀಕ್ಷಾ ಕೇಂದ್ರಗಳಿಗೆ ಸುರೇಶ್ ಕುಮಾರ್ ಭೇಟಿ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಬೆಂಗಳೂರು ಪೂರ್ವ ತಾಲೂಕಿನ ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರಗಳಿಗೆ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್.ಸುರೇಶ್ ಕುಮಾರ್ ಗುರುವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕೆ.ಆರ್.ಪುರದ ಐಟಿಐ ವಿದ್ಯಾಮಂದಿರ, ಕರ್ನಾಟಕ ಪಬ್ಲಿಕ್ ಶಾಲೆ, ಆವಲಹಳ್ಳಿ, ಕಾಡುಗೋಡಿ, ವೈಟ್‌ಫೀಲ್ಡ್ ಹಾಗೂ ವಿವಿಧ ಪರೀಕ್ಷಾ ಕೇಂದ್ರಗಳಿಗೆ ಅವರು ಭೇಟಿ ನೀಡಿದರು.

ಬಳಿಕ ಮಾತನಾಡಿದ ಅವರು,'ವಿದ್ಯಾರ್ಥಿಗಳ ಸುರಕ್ಷತೆ ದೃಷ್ಟಿಯಿಂದ ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿತ್ತು. ರಾಜ್ಯದಾದ್ಯಂತ ಎರಡನೇ ದಿನವೂ ಎಸ್ಸೆಸ್ಸೆಲ್ಸಿ ಪರೀಕ್ಷೆ ಯಾವುದೇ ಅಡಚಣೆಗಳಿಲ್ಲದೆ ಯಶಸ್ವಿಯಾಗಿ ನಡೆದಿವೆ' ಎಂದರು.

'ಶಾಲೆಗಳ ಪುನರಾರಂಭಕ್ಕೆ ಆಯುಕ್ತರ ನೇತೃತ್ವದಲ್ಲಿ ಕಾರ್ಯಪಡೆ ರಚನೆ ಮಾಡಲಾಗಿದೆ. ಅವರು ಸೋಮವಾರ ವರದಿ ನೀಡಲಿದ್ದು, ಬಳಿಕ ಮಕ್ಕಳ ಸುರಕ್ಷತೆಯ ಆದ್ಯತೆ ಮೇರೆಗೆ ಶಾಲೆಗಳನ್ನು ಆರಂಭಿಸುವ ನಿರ್ಧಾರ ತೆಗೆದುಕೊಳ್ಳಲಾಗುವುದು' ಎಂದು ಹೇಳಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಂತರಾಯ ಹಾಗೂ ಇಲಾಖೆ ಅಧಿಕಾರಿಗಳು ಇದ್ದರು.



ಕೆ.ಆರ್‌.ಪುರದ ಕರ್ನಾಟಕ ಪಬ್ಲಿಕ್ ಶಾಲೆಗೆ ಸಚಿವ ಸುರೇಶ್ ಕುಮಾರ್ ಭೇಟಿ ನೀಡಿದರು. ಪರೀಕ್ಷಾ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದ ಸಿಬ್ಬಂದಿ ಇದ್ದಾರೆ.

'ವಿದ್ಯುತ್ ಪರಿವರ್ತಕದಿಂದ ತೊಂದರೆ ಆಗದಂತೆ ಕ್ರಮ'

ಬೆಂಗಳೂರು: ನಗರದ ಪಾದಚಾರಿ ಮಾರ್ಗಗಳ ಮೇಲಿರುವ 3,196 ವಿದ್ಯುತ್ ಪರಿವರ್ತಕಗಳನ್ನು ತೆಗೆದು ಸಾರ್ವಜನಿಕರ ತಿರುಗಾಟಕ್ಕೆ ತೊಂದರೆ ಆಗದಂತೆ ಹೊಸದಾಗಿ ವಿನ್ಯಾಸಗೊಳಿಸಿದ ಕಂಬಗಳ ಮೇಲೆ (ಸ್ಪನ್ ಪೋಲ್ ಸ್ಟ್ರಕ್ಚರ್) ಪರಿವರ್ತಕ ಅಳವಡಿಸಲಾಗಿದೆ ಎಂದು ಹೈಕೋರ್ಟ್‌ಗೆ ಬೆಸ್ಕಾಂ ಮಾಹಿತಿ ನೀಡಿದೆ.

ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಪಿ. ರಾಜೇಂದ್ರ ಚೋಳನ್ ಸಲ್ಲಿಸಿದ್ದ ಪ್ರಮಾಣಪತ್ರದಲ್ಲಿ 'ಬಿಬಿಎಂಪಿ ವ್ಯಾಪ್ತಿಯಲ್ಲಿ ಇನ್ನೂ 2,785 ವಿದ್ಯುತ್ ಪರಿವರ್ತಕಗಳನ್ನು ಹೊಸ ವಿನ್ಯಾಸಕ್ಕೆ ಬದಲಾಯಿಸಲು ಗುರುತಿಸಲಾಗಿದೆ' ಎಂದಿದ್ದಾರೆ.

ಇವುಗಳಲ್ಲಿ 764 ವಿದ್ಯುತ್ ಪರಿವರ್ತಕಗಳನ್ನು ಬದಲಿಸುವ ಕಾರ್ಯ ನಡೆಯುತ್ತಿದೆ. ಉಳಿದ 2,021 ಕಡೆ ಪರಿವರ್ತಕ ಬದಲಿಸಲು ಹೊಸ ಯೋಜನೆ ರೂಪಿಸಲಾಗಿದೆ. ಸ್ಥಳಾಂತರಕ್ಕೆ ಸೂಕ್ತ ಸ್ಥಳಗಳನ್ನು ನೀಡುವಂತೆ ಬಿಬಿಎಂಪಿಗೆ ಕೋರಲಾಗಿದೆ ಎಂದು ವಿವರಿಸಿದ್ದಾರೆ.

'ಪಾದಚಾರಿ ಮಾರ್ಗದಲ್ಲಿನ ವಿದ್ಯುತ್ ಪರಿವರ್ತಕ ಗುರುತಿಸಲು ಬಿಬಿಎಂಪಿ ಜತೆ ಜಂಟಿಯಾಗಿ ಪರಿಶೀಲನೆ ನಡೆಸಿರುವುದು ಅಫಿಡವಿಟ್‌ನಲ್ಲಿ ಇಲ್ಲ. ಕೂಡಲೇ ಜಂಟಿಯಾಗಿ ಪರಿಶೀಲನೆ ನಡೆಸಿ ವರದಿ ಸಿದ್ಧಪಡಿಸಬೇಕು' ಎಂದು ಪೀಠ ತಿಳಿಸಿತು. ಈ ವರದಿ ಆಧರಿಸಿ ಹೊಸ ಹೇಳಿಕೆ ಸಲ್ಲಿಸುವಂತೆ ಬೆಸ್ಕಾಂಗೆ ನಿರ್ದೇಶನ ನೀಡಿದ ಪೀಠ, ವಿಚಾರಣೆಯನ್ನು ಆಗಸ್ಟ್ 13ಕ್ಕೆ ಮುಂದೂಡಿತು.

ಈ ಬಗ್ಗೆ ನಿವೃತ್ತ ವಿಂಗ್ ಕಮಾಂಡರ್ ಬಿ.ಜಿ. ಅತ್ರಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು.

ಸಚಿವರ ಹೇಳಿಕೆ ಪತ್ರ ಹರಿದುಹಾಕಿದ ಟಿಎಂಸಿ ಸಂಸದ ಶಂತನು ಸೇನ್

ಸಂಸತ್ ಕಲಾಪ ನುಂಗಿದ ಪೆಗಾಸಸ್

ನವದೆಹಲಿ (ಪಿಟಿಐ): ಪೆಗಾಸಸ್ ಗೂಢಚರ್ಯೆಗೆ ಸಂಬಂಧಿಸಿದಂತೆ ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಅವರು ರಾಜ್ಯಸಭೆಯಲ್ಲಿ ಗುರುವಾರ ಹೇಳಿಕೆ ನೀಡಲು ಮುಂದಾದಾಗ ಅವರ ಕೈಯಲ್ಲಿದ್ದ ಹೇಳಿಕೆ ಪತ್ರವನ್ನು ಟಿಎಂಸಿ ಸಂಸದ ಶಂತನು ಸೇನ್ ಕಸಿದುಕೊಂಡು, ಹರಿದು ಹಾಕಿದ್ದಾರೆ. ಗೂಢಚರ್ಯೆಗೆ ಸಂಬಂಧಿಸಿದಂತೆ ವಿರೋಧ ಪಕ್ಷಗಳು ರಾಜ್ಯಸಭೆಯಲ್ಲಿ ಗದ್ದಲ ನಡೆಸಿದ ಕಾರಣ ಗುರುವಾರ ಕಲಾಪವನ್ನು ಮೂರು ಬಾರಿ ಮುಂದೂಡಲಾಯಿತು.

ಪೆಗಾಸಸ್ ಗೂಢಚರ್ಯೆಗೆ ಸಂಬಂಧಿಸಿದಂತೆ ಸರ್ಕಾರವು ಸ್ಪಷ್ಟನೆ ನೀಡಬೇಕು ಎಂದು ಟಿಎಂಸಿ, ಕಾಂಗ್ರೆಸ್ ಸೇರಿದಂತೆ ಎಲ್ಲಾ ವಿರೋಧ ಪಕ್ಷಗಳ ಸದಸ್ಯರು ಬೆಳಿಗ್ಗೆ ರಾಜ್ಯಸಭೆಯಲ್ಲಿ ಒತ್ತಾಯಿಸಿದರು. ಸರ್ಕಾರವು ಉತ್ತರಿಸದೇ ಇದ್ದ ಕಾರಣ ಗದ್ದಲದ ವಾತಾವರಣ ನಿರ್ಮಾಣವಾಯಿತು. ಹೀಗಾಗಿ ಮಧ್ಯಾಹ್ನ 12ರ ವರೆಗೆ ಕಲಾಪವನ್ನು ಮುಂದೂಡಲಾಯಿತು. 12 ಗಂಟೆಗೆ ಕಲಾಪ ಆರಂಭವಾದಾಗಲೂ ಗದ್ದಲ ಮುಂದುವರಿಯಿತು. ಹೀಗಾಗಿ ಮಧ್ಯಾಹ್ನ 2 ಗಂಟೆವರೆಗೆ ಕಲಾಪ ಮುಂದೂಡಲಾಯಿತು.

ಕಲಾಪ ಮತ್ತೆ ಆರಂಭವಾದಾಗ, ಸಚಿವ ಅಶ್ವಿನಿ ವೈಷ್ಣವ್ ಅವರು ಹೇಳಿಕೆ ನೀಡಲು ಮುಂದಾದರು. ಆಗ ಅವರ ಕೈಯಲ್ಲಿದ್ದ ಪತ್ರವನ್ನು ಶಂತನು ಸೇನ್ ಕಸಿದುಕೊಂಡು, ಹರಿದುಹಾಕಿದರು. ಇದಕ್ಕೆ ಉಪಸಭಾಪತಿ ಹರಿವಂಶ್ ಅವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. 'ಬೆಳಿಗ್ಗೆಯಿಂದ ನೀವು ಆಗ್ರಹಿಸುತ್ತಿದ್ದ ವಿಷಯದ ಬಗ್ಗೆ ಸರ್ಕಾರವು ಹೇಳಿಕೆ ನೀಡಲು ಮುಂದಾದರೆ, ನೀವು ಅವಕಾಶ ನೀಡುತ್ತಿಲ್ಲ. ಈ ರೀತಿ ವರ್ತಿಸಬೇಡಿ' ಎಂದು ಹೇಳಿದರು.

ಆದರೂ ವಿರೋಧ ಪಕ್ಷಗಳ ಸದಸ್ಯರು ಗದ್ದಲ ಮುಂದುವರಿಸಿದರು. ಆಗ ಅಶ್ವಿನಿ ವೈಷ್ಣವ್ ಅವರು 'ಈ ಹೇಳಿಕೆಯನ್ನು ಸದನದ ಮುಂದೆ ಇರಿಸುತ್ತೇನೆ' ಎಂದರು. ಲೋಕಸಭೆಯಲ್ಲಿ ನೀಡಿದ್ದ ಹೇಳಿಕೆಯನ್ನೇ ಅಶ್ವಿನಿ ಇಲ್ಲಿ ಪುನರಾವರ್ತಿಸಿದರು. 'ಸರ್ಕಾರಕ್ಕೆ ಕೆಟ್ಟ ಹೆಸರು ತರಲು ಹೀಗೆ ಮಾಡಲಾಗಿದೆ. ಈ ವರದಿಗಳ ಹಿಂದೆ ಯಾವುದೇ ಆಧಾರವಿಲ್ಲ. ಈ ಹಿಂದೆಯೂ ಹೀಗೆ ಮಾಡಲಾಗಿತ್ತು' ಎಂಬುದು ಅವರ ಹೇಳಿಕೆಯಾಗಿತ್ತು.

'ಸರ್ಕಾರವು ತನ್ನ ಹೇಳಿಕೆಯನ್ನು ಸದನದ ಮುಂದೆ ಇರಿಸಿದೆ. ಯಾರಾದರೂ ಪ್ರಶ್ನೆ ಕೇಳುವುದಿದ್ದರೆ ಕೇಳಿ' ಎಂದು ಹರಿವಂಶ್ ಹೇಳಿದರು. ಆದರೆ, ವಿರೋಧ ಪಕ್ಷಗಳ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಹೀಗಾಗಿ ಮೂರನೇ ಬಾರಿ ಕಲಾಪವನ್ನು ಮುಂದೂಡಲಾಯಿತು.

ಶಂತನು ಸೇನ್ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಕೋರಲು ಸರ್ಕಾರ ಚಿಂತನೆ ನಡೆಸಿದೆ ಎಂದು ಮೂಲಗಳು ಹೇಳಿವೆ.

ವರದಿಗೆ ಈಗಲೂ ಬದ್ಧ: ಅಮ್ನೆಸ್ಟಿ ಇಂಟರ್‌ನ್ಯಾಷನಲ್

'ಪೆಗಾಸಸ್ ಪ್ರಾಜೆಕ್ಟ್‌ಗೆ ಸಂಬಂಧಿಸಿದಂತೆ ನಾವು ಬಹಿರಂಗಪಡಿಸಿರುವ ದತ್ತಾಂಶಗಳು, ವಿವರಗಳು ಮತ್ತು ವರದಿಗಳಿಗೆ ಈಗಲೂ ಬದ್ಧರಾಗಿದ್ದೇವೆ. ಇವುಗಳಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ' ಎಂದು ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಹೇಳಿದೆ.

'ಇಸ್ರೇಲ್‌ನ ಎನ್‌ಎಸ್‌ಒ ಗ್ರೂಪ್ ಅಭಿವೃದ್ಧಿಪಡಿಸಿರುವ ಪೆಗಾಸಸ್ ಕಣ್ಗಾವಲು ತಂತ್ರಾಂಶ ಬಳಸಿಕೊಂಡು ಗೂಢಚರ್ಯೆ ನಡೆಸಲಾಗಿದೆ. ಎನ್‌ಎಸ್‌ಒ ಗ್ರೂಪ್ ಗೂಢಚರ್ಯೆ ನಡೆಸಿದೆ ಎಂದು ನಾವು ಹೇಳಿಲ್ಲ ಎಂದು ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಹೇಳಿದೆ' ಎಂಬ ವಿವರ ಇರುವ ವರದಿಗಳು ಹಲವು ಸುದ್ದಿ ಪೋರ್ಟಲ್‌ಗಳಲ್ಲಿ ಪ್ರಕಟವಾಗಿವೆ.

'ಪೆಗಾಸಸ್ ಪ್ರಾಜೆಕ್ಟ್‌ಗೆ ಸಂಬಂಧಿಸಿದಂತೆ ಇಸ್ರೇಲ್‌ನ ಹೀಬ್ರೂ ಭಾಷೆಯಲ್ಲಿ ನೀಡಿದ್ದ ಹೇಳಿಕೆಯನ್ನು ತಪ್ಪಾಗಿ ಭಾಷಾಂತರ ಮಾಡಿ, ಸುಳ್ಳು ವರದಿಗಳನ್ನು ಪ್ರಕಟಿಸಲಾಗಿದೆ. ನಾವು ಬಿಡುಗಡೆ ಮಾಡಿರುವ ದತ್ತಾಂಶಗಳಲ್ಲಿ ಇರುವ ಫೋನ್ ಸಂಖ್ಯೆಗಳು, ಎನ್‌ಎಸ್‌ಒ ಗ್ರಾಹಕರು ಗೂಢಚರ್ಯೆ ನಡೆಸಲು ಆಯ್ದುಕೊಂಡಿದ್ದ ಸಂಖ್ಯೆಗಳು ಎಂದು ನಾವು ಈಗಲೂ ಹೇಳುತ್ತೇವೆ' ಎಂದು ಅಮ್ನೆಸ್ಟಿ ಸ್ಪಷ್ಟಪಡಿಸಿದೆ.

ನೇಮಕಾತಿಗಾಗಿ 220 ಎಫ್‌ಡಿಎ ಅಭ್ಯರ್ಥಿಗಳ ಅಲೆದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಎಸ್‌ಸಿ ಮೂಲಕ ಆಯ್ಕೆಯಾದ 220 ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಅಭ್ಯರ್ಥಿಗಳು ನೇಮಕಾತಿ ಆದೇಶ ನೀಡುವಂತೆ ಆರೋಗ್ಯ ಇಲಾಖೆಯ ಸುತ್ತ ಅಲೆದಾಡುತ್ತಿದ್ದಾರೆ. ನೇಮಕಾತಿ ಪತ್ರ ನೀಡುವಂತೆ ಆರ್ಥಿಕ ಇಲಾಖೆ ಸೂಚಿಸಿದರೂ ಆರೋಗ್ಯ ಇಲಾಖೆ ವಿನಾ ಕಾರಣ ವಿಳಂಬ ಮಾಡುತ್ತಿದೆ ಎಂದು ಅಭ್ಯರ್ಥಿಗಳು ಆರೋಪಿಸಿದ್ದಾರೆ.

ಈ ಹುದ್ದೆಗಳಿಗೆ 2017ರಲ್ಲಿ ಅಧಿಸೂಚನೆ ಹೊರಡಿಸಿ 2018ರಲ್ಲಿ ಪರೀಕ್ಷೆ ನಡೆಸಿ 2019ರಲ್ಲಿ ಫಲಿತಾಂಶ ಪ್ರಕಟಿಸಿದ್ದ ಕೆಪಿಎಸ್‌ಸಿ, 2020ರಲ್ಲಿ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಿತ್ತು. ಅಲ್ಲದೆ, ಸಂಬಂಧಿಸಿದ ಇಲಾಖೆಗಳಿಂದ ನೇಮಕಾತಿ ಆದೇಶ ಪಡೆದುಕೊಳ್ಳುವಂತೆ ಆಯ್ಕೆಯಾದವರಿಗೆ ತಿಳಿಸಿತ್ತು.

ಆಯ್ಕೆಗೊಂಡಿದ್ದ ಅಭ್ಯರ್ಥಿಗಳ ದಾಖಲಾತಿ ಪರಿಶೀಲನೆಯನ್ನು ವರ್ಷದ ಹಿಂದೆಯೇ (2020ರ ಜುಲೈ 9) ಆರೋಗ್ಯ ಇಲಾಖೆ ಮಾಡಿದೆ. ಅದೇ ಸಂದರ್ಭದಲ್ಲಿ ಕೋವಿಡ್ ಮೊದಲ ಅಲೆ ತೀವ್ರವಾಗಿದ್ದರಿಂದ ಆರ್ಥಿಕ ಮಿತವ್ಯಯದ ಕಾರಣ ನೀಡಿ ಆರ್ಥಿಕ ಇಲಾಖೆ ಎಲ್ಲ ನೇಮಕಾತಿಗಳಿಗೆ ತಡೆ ನೀಡಿತ್ತು. ತಡೆ ತೆರವುಗೊಳಿಸುವಂತೆ ಅಭ್ಯರ್ಥಿಗಳು ಬೀದಿಗಿಳಿದು ಪ್ರತಿಭಟನೆ ನಡೆಸಿದ್ದರಿಂದ ಇದೇ ಜನವರಿಯಲ್ಲಿ ಆದೇಶ ವಾಪಸು ಪಡೆದ ಆರ್ಥಿಕ ಇಲಾಖೆ, ನೇಮಕಾತಿ ಪೂರ್ವ ಪ್ರಕ್ರಿಯೆಗಳನ್ನು ಪೂರ್ಣಗೊಳಿಸುವಂತೆ ಸೂಚಿಸಿತ್ತು. ಆಯ್ಕೆಯಾದ 220 ಅಭ್ಯರ್ಥಿ ಗಳಿಗೆ ಜೂನ್ ಬಳಿಕ ನೇಮಕಾತಿ ಆದೇಶ ನೀಡುವಂತೆ ಆರೋಗ್ಯ ಇಲಾಖೆಗೆ ಏ. 29ರಂದು ಆರ್ಥಿಕ ಇಲಾಖೆ ಸೂಚಿಸಿತ್ತು.



ಎಫ್‌ಡಿಎ ಹುದ್ದೆಗೆ ನೇಮಕಗೊಂಡವರಿಗೆ ಅನುಕೂಲ ಮಾಡಿಕೊಡಲು ಸ್ಥಳ ಆಯ್ಕೆಗೆ ಕೌನ್ಸೆಲಿಂಗ್ ನಡೆಸಲು ತೀರ್ಮಾನಿಸಲಾಗಿದೆ. ಕೆಲವೇ ದಿನಗಳಲ್ಲಿ ನೇಮಕಾತಿ ಆದೇಶ ನೀಡಲಾಗುವುದು

ಕೆ.ವಿ. ತ್ರಿಲೋಕಚಂದ್ರ, ಆಯುಕ್ತರು, ಆರೋಗ್ಯ ಇಲಾಖೆ

'ಇಲಾಖೆಯ ಆಯುಕ್ತರು ಮತ್ತು ಮುಖ್ಯ ಆಡಳಿತಾಧಿಕಾರಿಯನ್ನು (ಸಿಎಒ) ತಿಂಗಳ ಹಿಂದೆಯೇ ಭೇಟಿ ಮಾಡಿದ್ದೆವು. ಕೌನ್ಸೆಲಿಂಗ್ ಮೂಲಕ ಸ್ಥಳ ನಿಯುಕ್ತಿ ಮಾಡಿ ನೇಮಕಾತಿ ಆದೇಶ ನೀಡುವುದಾಗಿ ಆಗ ಹೇಳಿದ್ದರು. ಈ ಮಧ್ಯೆ, ಇಲಾಖೆ ಸುಮಾರು 500 ದ್ವಿತೀಯ ದರ್ಜೆ ಸಹಾಯಕ (ಎಸ್‌ಡಿಎ) ನೌಕರರಿಗೆ ಕೌನ್ಸೆಲಿಂಗ್ ನಡೆಸಿ ಎಫ್‌ಡಿಎ ಹುದ್ದೆಗೆ ಬಡ್ತಿ ನೀಡಿದೆ. ಅವರೆಲ್ಲರೂ ರಾಜಕೀಯ, ಜಾತಿ, ಹಣದ ಪ್ರಭಾವ ಬಳಸಿ ಆಯಕಟ್ಟಿನ ಜಾಗಕ್ಕೆ ವರ್ಗಾವಣೆ ಮಾಡಿಕೊಂಡಿದ್ದಾರೆ. ಇದನ್ನು ಪ್ರಶ್ನಿಸಿದಾಗ ಜುಲೈ 8ರಿಂದ 12ರ ಒಳಗೆ ನಮಗೂ ಕೌನ್ಸೆಲಿಂಗ್ ಇಲ್ಲದೆ ಸ್ಥಳ ನಿಯುಕ್ತಿ ಮಾಡುವುದಾಗಿ ಸಿಎಒ ಭರವಸೆ ನೀಡಿದ್ದರು. ಆದರೆ, ಜುಲೈ 13ರಂದು ಮತ್ತೆ 35 ನೌಕರರಿಗೆ ಎಫ್‌ಡಿಎ ಹುದ್ದೆಗೆ ಕೌನ್ಸೆಲಿಂಗ್ ಮೂಲಕ ಪದೋನ್ನತಿ ನೀಡಲಾಗಿದೆ' ಎಂದು ಎಫ್‌ಡಿಎ ಹುದ್ದೆಗೆ ನೇಮಕಗೊಂಡಿರುವ ಅಭ್ಯರ್ಥಿಗಳು ದೂರಿದರು.

ಜ್ಯೇಷ್ಠತೆ ತಪ್ಪಿಸಲು ವಿಳಂಬ?

'ನಮಗೆ ನೇಮಕಾತಿ ಆದೇಶ ಪತ್ರ ನೀಡುವ ಮೊದಲು ಇಲಾಖೆಯಲ್ಲಿ ಸದ್ಯ ಕರ್ತವ್ಯದಲ್ಲಿರುವ ಎಸ್‌ಡಿಎ ನೌಕರರಿಗೆ ಎಫ್‌ಡಿಎ ಹುದ್ದೆಗಳಿಗೆ ಬಡ್ತಿ ನೀಡುವ ಮೂಲಕ ಅವರಿಗೆ ಸೇವಾ ಜ್ಯೇಷ್ಠತೆಯನ್ನು ಕಾಯ್ದುಕೊಳ್ಳಲಾಗಿದೆ. ಕೆಪಿಎಸ್‌ಸಿ ಮೂಲಕ ನೇರವಾಗಿ ಎಫ್‌ಡಿಎ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಜ್ಯೇಷ್ಠತೆ ತಪ್ಪಿಸುವ ಉದ್ದೇಶದಿಂದ ನೇಮಕಾತಿ ಆದೇಶ ನೀಡಲು ವಿಳಂಬ ಮಾಡಲಾಗುತ್ತಿದೆ' ಎಂದೂ ಆಯ್ಕೆಯಾದ ಅಭ್ಯರ್ಥಿಗಳು ದೂರಿದರು.

ಭಾರಿ ವಾಹನ ಸಂಚಾರ ನಿರ್ಬಂಧ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ರಾಷ್ಟ್ರೀಯ ಹೆದ್ದಾರಿ –169 (ತೀರ್ಥಹಳ್ಳಿ–ಶೃಂಗೇರಿ– ಮಂಗಳೂರು) ಕೆಲವೆಡೆ ಕಿರು ಸೇತುವೆಗಳು ಶಿಥಿಲವಾಗಿರುವುದರಿಂದ ಮಾರ್ಗದ ತನಿಕೋಡಿನಿಂದ ಎಸ್.ಕೆ.ಬಾರ್ಡರ್‌ವರೆಗೆ ಭಾರಿ ವಾಹನ ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿದೆ.

ಅ.15ರವರೆಗೆ ನಿರ್ಬಂಧ ವಿಧಿಸಲಾಗಿದೆ. ಬದಲಿ ಮಾರ್ಗದಲ್ಲಿ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ.

ಚಿಕ್ಕಮಗಳೂರು ಕಡೆಯಿಂದ ಸಂಚರಿಸುವ ಭಾರಿ ವಾಹನಗಳು ಬಾಳೆಹೊನ್ನೂರು – ಮಾಗುಂಡಿ – ಕಳಸ– ಕುದುರೆಮುಖ ಮಾರ್ಗವಾಗಿ ಎಸ್.ಕೆ.ಬಾರ್ಡರ್ ಹಾಗೂ ನರಸಿಂಹರಾಜಪುರ ಕಡೆಯಿಂದ ಸಂಚರಿಸುವ ಭಾರಿ ವಾಹನಗಳು ಕೊಪ್ಪ – ಜಯಪುರ – ಬಾಳೆಹೊಳೆ – ಕಳಸ – ಕುದುರೆಮುಖ ಮಾರ್ಗವಾಗಿ ಎಸ್.ಕೆ.ಬಾರ್ಡರ್ ತಲುಪಬಹುದು ಎಂದು ಜಿಲ್ಲಾಧಿಕಾರಿ ಕೆ.ಎನ್.ರಮೇಶ್ ಆದೇಶದಲ್ಲಿ ತಿಳಿಸಿದ್ದಾರೆ.

ನಂಜನಗೂಡಿನಲ್ಲಿ ಜಾಲ ಶಂಕೆ; ಸ್ವಯಂಪ್ರೇರಿತ ಪ್ರಕರಣ ದಾಖಲಿಸಿದ ಆಯೋಗ

ಶಿಶು ಮಾರಾಟ: ವರದಿ ಸಲ್ಲಿಸಲು ಗಡುವು

• ಕೆ.ನರಸಿಂಹಮೂರ್ತಿ

ಪ್ರಜಾವಾಣಿ ವಿಶೇಷ

ಮೈಸೂರು: ಜಿಲ್ಲೆಯ ನಂಜನಗೂಡಿನಲ್ಲಿ ಹಸುಗೂಸು ಮಾರಾಟ ಪ್ರಕರಣಕ್ಕೆ ಸಂಬಂಧಿಸಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿದ್ದು, ಮೂರು ದಿನದೊಳಗೆ ಸಮಗ್ರ ವರದಿ ಸಲ್ಲಿಸುವಂತೆ ಮೈಸೂರು ಜಿಲ್ಲಾಧಿಕಾರಿಗೆ ಗುರುವಾರ ಸೂಚಿಸಿದೆ.

ಜುಲೈ 17ರಂದು ಎಫ್‌ಐಆರ್ ದಾಖಲಾದ ಬಳಿಕ, ಮಗುವಿನ ತಾಯಿ ಹಾಗೂ ಮಗುವನ್ನು ಆಕೆಯಿಂದ ಪಡೆದ ಆರೋಪಿಯಾದ ನಂಜನಗೂಡಿನ ಶ್ರೀಮತಿ, ಮೈಸೂರಿನ ಶುಶ್ರೂಷಕಿಯ ವಿಚಾರಣೆ ನಡೆಸಿರುವ ಪೊಲೀಸರಿಗೆ, ಹಲವು ಮಕ್ಕಳ ಮಾರಾಟವಾಗಿರುವ ಶಂಕೆ ಮೂಡಿದೆ.

'ಆರೋಪಿಯು ನಂಜನಗೂಡಿನಲ್ಲಿ ಅಮೃತಾನಂದ ಶಿಶು ವಿಹಾರ ನಡೆಸುತ್ತಿದ್ದು, ಹಸುಗೂಸನ್ನು ಹೊಳೆನರಸೀಪುರದ ದಂಪತಿಗೆ ₹ 4 ಲಕ್ಷಕ್ಕೆ ಮಾರಿದ್ದರು. ಮಹಿಳೆಗೆ ₹ 1 ಲಕ್ಷ ನೀಡಿದ್ದರು' ಎಂದು ಮೂಲಗಳು ಖಚಿತಪಡಿಸಿವೆ.

ಆಶಾ ಕಾರ್ಯಕರ್ತೆ ಶಶಿಕಲಾ ಅವರ ಮೂಲಕ ಪ್ರಕರಣ ಬೆಳಕಿಗೆ ಬಂದ ಬಳಿಕ ಸಹಾಯಕ ಮಕ್ಕಳ ರಕ್ಷಣಾಧಿಕಾರಿಯು ದೂರು ದಾಖಲಿಸಿದ್ದರು. 'ಮಕ್ಕಳ ಮಾರಾಟ ಜಾಲ ಇಲ್ಲಿಂದಲೇ ರಾಜ್ಯದ ವಿವಿಧೆಡೆಗೆ ಹಬ್ಬಿರುವ ಶಂಕೆಯಿರುವುದರಿಂದ ತನಿಖೆ ನಡೆಸಬೇಕು' ಎಂದು ಆಗ್ರಹಿಸಿ ಒಡನಾಡಿ ಸೇವಾ ಸಂಸ್ಥೆಯ ನಿರ್ದೇಶಕ ಕೆ.ವಿ.ಸ್ಟ್ಯಾನ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಸಮಿತಿಗೆ ಜು.20ರಂದು ಪತ್ರ ಬರೆದಿದ್ದರು.

'ಪತಿ ತೀರಿಕೊಂಡ ಬಳಿಕ ಮಹಿಳೆಗೆ ಜೂನ್ 10ರಂದು ಮೈಸೂರಿನಲ್ಲಿ ಹೆರಿಗೆಯಾಗಿತ್ತು. ಮೂರು ದಿನಕ್ಕೆ ತಾಯಿಯನ್ನು ಪಟ್ಟಣಕ್ಕೆ ಕರೆತಂದ ಆರೋಪಿಯು ಅಂದೇ ಮಗುವನ್ನು ಎತ್ತಿಕೊಂಡು ಹೋಗಿದ್ದರು' ಎಂದು ದೂರಿನಲ್ಲಿದೆ.

'ಮೈಸೂರಿನ ಶುಶ್ರೂಷಕಿಯೇ ಮಗು ಮಾರಾಟದ ವ್ಯವಹಾರ ಕುದುರಿಸಿದ್ದರು' ಎಂದು ಮೂಲಗಳು ತಿಳಿಸಿವೆ.



ಹಸುಗೂಸು ಮಾರಾಟ ಪ್ರಕರಣದಲ್ಲಿ ಹಣ ವರ್ಗಾವಣೆಯಾಗಿರುವುದು ಖಚಿತವಾಗಿದೆ. ಮಾರಾಟ ಜಾಲದ ಕುರಿತು ತನಿಖೆ ಚುರುಕುಗೊಳಿಸಲಾಗಿದೆ

ಆರ್.ಚೇತನ್, ಎಸ್ಪಿ, ಮೈಸೂರು



ನಂಜನಗೂಡು ಹಸುಗೂಸು ಮಾರಾಟ ಪ್ರಕರಣದ ಹಿಂದೆ ದೊಡ್ಡ ಜಾಲವೇ ಇದೆ. ಸಮಗ್ರ ತನಿಖೆ ನಡೆಸಲಾಗುವುದು

ಪರಶುರಾಂ ಎಂ.ಎಲ್., ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ

ಎಚ್‌.ಡಿ.ಕೋಟೆಯಲ್ಲೂ ಪ್ರಕರಣ

ಎರಡು ತಿಂಗಳ ಹಿಂದೆ ಎಚ್‌.ಡಿ.ಕೋಟೆಯಲ್ಲೂ ಹಸುಗೂಸು ಮಾರಾಟ ಪ್ರಕರಣ ಬೆಳಕಿಗೆ ಬಂದಿತ್ತು. ಪಟ್ಟಣದ ಟೈಗರ್ ಬ್ಲಾಕ್ ನಿವಾಸಿ ಮಧುಮಾಲತಿ–ಅಂಬರೀಶ್ ದಂಪತಿಯು ಬೆಂಗಳೂರಿನ ರೋಜಾ ಎಂಬುವವರಿಂದ ಹೆಣ್ಣು ಮಗುವನ್ನು ಖರೀದಿಸಿ ತಂದಿದ್ದರು. ಪ್ರಕರಣ ದಾಖಲಾದ ಬಳಿಕ ರೋಜಾ ಅವರನ್ನು ಪೊಲೀಸರು ಬಂಧಿಸಿದ್ದರು. ಈಗ ಮಗು ಮಂಡ್ಯದ ಮಕ್ಕಳ ಆರೈಕೆ ಕೇಂದ್ರದಲ್ಲಿದೆ.

ಸಂತ್ರಸ್ತ ಒಂಟಿ ಮಹಿಳೆಯರೇ ಗುರಿ

'ಮಕ್ಕಳ ಮಾರಾಟ ಜಾಲಕ್ಕೆ ಸಂತ್ರಸ್ತ ಮಹಿಳೆಯರೇ ಗುರಿಯಾಗಿದ್ದಾರೆ' ಎಂಬುದು ಒಡನಾಡಿ ಸಂಸ್ಥೆಯ ಕ್ಷೇತ್ರ ಕಾರ್ಯಾಚರಣೆಯಿಂದ ತಿಳಿದುಬಂದಿದೆ.

'ಪತಿಯಿಂದ ಬೇರೆಯಾಗಿ ತಾಯಿ ಜೊತೆ ವಾಸಿಸುತ್ತಿದ್ದ ಬಡ ಮಹಿಳೆಯಿಂದ ಆಕೆಯ ಹೆಣ್ಣುಮಗುವನ್ನು ಕೆಲವು ವರ್ಷಗಳ ಹಿಂದೆ ಅನಾಥಾಶ್ರಮಕ್ಕೆಂದು ಮಹಿಳೆಯೊಬ್ಬರು ಪಡೆದಿದ್ದರು. ಬಡ ಮಹಿಳೆಯರನ್ನು ಸಂಪರ್ಕಿಸಿ, ಹಣದ ಆಮಿಷ ತೋರಿಸಿ ಮಕ್ಕಳನ್ನು ಹೆತ್ತು ಕೊಡುವಂತೆ ಪ್ರಚೋದಿಸುವ, ಅದರಲ್ಲಿ ಯಶ ಕಂಡಿರುವ ನಿದರ್ಶನಗಳು ಇವೆ' ಎಂದು ಸಂಸ್ಥೆಯ ನಿರ್ದೇಶಕ ಸ್ಟ್ಯಾನ್ಲಿ ತಿಳಿಸಿದ್ದಾರೆ.

ಪಕ್ಷದ ವರಿಷ್ಠರೊಂದಿಗೆ ಸಮಾಲೋಚನೆ

ದೆಹಲಿ: ಕಾಂಗ್ರೆಸ್ ಮುಖಂಡರ ದಂಡು

ಪ್ರಜಾವಾಣಿ ವಾರ್ತೆ


ನವದೆಹಲಿ: 'ಒಳಜಗಳ ಬಿಟ್ಟು ಸಾಮೂಹಿಕ ನಾಯಕತ್ವಕ್ಕೆ ಆದ್ಯತೆ ನೀಡಿ' ಎಂಬ ಸಂದೇಶವನ್ನು ರಾಜ್ಯ ಮುಖಂಡರಿಗೆ ನೀಡಿರುವ ಕಾಂಗ್ರೆಸ್ ವರಿಷ್ಠರು, ಈ ಕುರಿತ ಗೊಂದಲ ಮುಂದುವರಿಯದಂತೆ ತಡೆಯಲು ಜಿಲ್ಲಾವಾರು ಮುಖಂಡರೊಂದಿಗೆ ಮಾತುಕತೆ ನಡೆಸುತ್ತಿದ್ದಾರೆ.

ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರೊಂದಿಗೆ ಮಂಗಳವಾರವಷ್ಟೇ ಸಮಾಲೋಚನೆ ನಡೆಸಿ, 'ಮುಂದಿನ ಮುಖ್ಯಮಂತ್ರಿ' ಹೇಳಿಕೆಗೆ ಕಡಿವಾಣ ಹಾಕುವಂತೆ ಸೂಚಿಸಿದ್ದ ರಾಹುಲ್ ಗಾಂಧಿ, ಎರಡು ದಿನಗಳಿಂದ ವಿವಿಧ ಜಿಲ್ಲೆಗಳ ಮುಖಂಡರೊಂದಿಗೆ ಪಕ್ಷ ಸಂಘಟನೆ ಕುರಿತು ಚರ್ಚೆ ನಡೆಸಿದ್ದಾರೆ.

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ, ಮಾಜಿ ಅಧ್ಯಕ್ಷರಾದ ದಿನೇಶ್ ಗುಂಡೂರಾವ್, ಆರ್.ವಿ. ದೇಶಪಾಂಡೆ, ಮಾಜಿ ಸಚಿವರಾದ ಆರ್.ಬಿ. ತಿಮ್ಮಾಪುರ, ಬಸವರಾಜ ರಾಯರಡ್ಡಿ, ಅಮರೇಗೌಡ ಬಯ್ಯಾಪುರ, ಮುಖಂಡರಾದ ಅಶೋಕ ಪಟ್ಟಣ, ಐವಾನ್ ಡಿಸೋಜಾ, ಪ್ರಕಾಶ್ ರಾಠೋಡ ಮತ್ತಿತರರೊಂದಿಗೆ ಚರ್ಚಿಸಿರುವ ವರಿಷ್ಠರು, ಪಕ್ಷದ ಸ್ಥಿತಿಗತಿ ಕುರಿತು ಮಾಹಿತಿ ಸಂಗ್ರಹಿಸಿದರು ಎಂದು ಮೂಲಗಳು ಹೇಳಿವೆ.

ರಾಜ್ಯದಲ್ಲಿ ಆಡಳಿತಾರೂಢ ಬಿಜೆಪಿಯಲ್ಲಿ ಸಾಕಷ್ಟು ಗೊಂದಲಗಳು ಸೃಷ್ಟಿಯಾಗಿವೆ. ಮುಖ್ಯಮಂತ್ರಿ ಬದಲಾವಣೆಯ ಬೆನ್ನಲ್ಲೇ ರಾಜಕೀಯ ಬೆಳವಣಿಗೆಗಳ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ವಿಭಿನ್ನ ಕಾರ್ಯಸೂಚಿ ಸಿದ್ಧಪಡಿಸುವಂತೆ ವರಿಷ್ಠರು ಸಲಹೆ ನೀಡಿದರು. ಪ್ರತಿ ವಾರ ರಾಜ್ಯದ ವಿವಿಧ ಭಾಗಗಳ ನಾಯಕರೊಂದಿಗೆ ಈ ಸಂಬಂಧ ಚರ್ಚೆ ನಡೆಸಲಿದ್ದಾರೆ ಎಂದು ತಿಳಿದುಬಂದಿದೆ.

ಎರಡೇ ವರ್ಷದಲ್ಲಿ ಎಷ್ಟೊಂದು ಮೈಲುಗಲ್ಲು



ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಬೆಂಗಳೂರು: ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದು ಎರಡು ವರ್ಷಗಳು ಕಳೆಯುತ್ತಿದೆ. ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಉನ್ನತ ಶಿಕ್ಷಣ ಇಲಾಖೆಗೆ ಎರಡೇ ವರ್ಷಗಳಲ್ಲಿ ಹೊಸ ಸ್ವರೂಪ ನೀಡಿದ್ದಾರೆ.

ಉನ್ನತ ಶಿಕ್ಷಣ ಖಾತೆಯ ಸಚಿವರಾಗಿ ಇಷ್ಟು ಚಿಕ್ಕ ಅವಧಿಯಲ್ಲೇ ಪದವಿ ಕಾಲೇಜುಗಳು, ತಾಂತ್ರಿಕ ಶಿಕ್ಷಣ ಕೋರ್ಸ್‌ಗಳು, ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿ ಹಲವು ಮಹತ್ವದ ಸುಧಾರಣೆಗಳನ್ನು ತರುವಲ್ಲಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಯಶಸ್ಸು ಕಂಡಿದ್ದಾರೆ. ಕರ್ನಾಟಕದ ಉನ್ನತ ಶಿಕ್ಷಣ ಕ್ಷೇತ್ರವನ್ನು ಅಂತರರಾಷ್ಟ್ರೀಯ ಗುಣಮಟ್ಟಕ್ಕೆ ಸರಿಮಸಮನಾಗಿ ಅಭಿವೃದ್ಧಿಪಡಿಸುವ ಮಹತ್ವಾಕಾಂಕ್ಷೆಯೊಂದಿಗೆ ಮುನ್ನಡೆಯುತ್ತಿರುವ ಅವರ ಮುಂದೆ, ಹತ್ತು ಹಲವು ಯೋಜನೆಗಳಿವೆ.

2019ರ ಜುಲೈ 26ರಂದು ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿತು. ಕೆಲವೇ ದಿನಗಳಲ್ಲಿ ರಾಜ್ಯದ ಹಲವು ಜಿಲ್ಲೆಗಳೂ ಭೀಕರ ಪ್ರವಾಹದಿಂದ ಸಂಕಷ್ಟಕ್ಕೆ ಸಿಲುಕಿದವು. 2020ರಲ್ಲಿ ಕೋವಿಡ್, ಪ್ರವಾಹ ಸೇರಿದಂತೆ ಹಲವು ಸಮಸ್ಯೆಗಳು ರಾಜ್ಯವನ್ನು ಕಾಡಿದವು. ಈ ಅವಧಿಯಲ್ಲಿ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಎದುರಾದ ಹಲವು ಸಮಸ್ಯೆಗಳಿಗೆ ಪರಿಹಾರ ಒದಗಿಸಿದ ಉಪ ಮುಖ್ಯಮಂತ್ರಿಯವರು, ನಿರ್ದಿಷ್ಟ ಗುರಿಯೆಡೆಗೆ ಇಲಾಖೆಯನ್ನು ಕೊಂಡೊಯ್ಯುವ ಪ್ರಯತ್ನ ಮಾಡಿದ್ದಾರೆ.

ಪರಿವರ್ತನೆಯ ಹಾದಿಯಲ್ಲಿ: ಕೊರೊನಾ ವೈರಾಣು ಸೋಂಕಿನ ಕಾರಣದಿಂದ ಜಗತ್ತಿನ ಬಹುತೇಕ ರಾಷ್ಟ್ರಗಳಲ್ಲಿ ಭೌತಿಕವಾಗಿ ಶೈಕ್ಷಣಿಕ ತರಗತಿಗಳನ್ನು ನಡೆಸಲಾಗದ ಸ್ಥಿತಿ ಒಂದೂಕಾಲು ವರ್ಷದಿಂದಲೂ ಇದೆ. ಕರ್ನಾಟಕವನ್ನೂ ಈ ಸಮಸ್ಯೆ ಕೆಲಕಾಲ ಕಾಡಿತ್ತು. ಆದರೆ, ತಂತ್ರಜ್ಞಾನವನ್ನು ಯಶಸ್ವಿಯಾಗಿ ಬಳಸಿಕೊಂಡು ಆನ್‌ಲೈನ್ ತರಗತಿಗಳನ್ನು ಆರಂಭಿಸುವ ಇಚ್ಛಾಶಕ್ತಿ ತೋರಿದ ಅಶ್ವತ್ಥನಾರಾಯಣ, ಉನ್ನತ ಶಿಕ್ಷಣ ಕ್ಷೇತ್ರಕ್ಕೆ ಹೊಸ ಮಾದರಿಯನ್ನೇ ಪರಿಚಯಿಸಿದ್ದಾರೆ.

ಆನ್‌ಲೈನ್ ತರಗತಿಗಳ ಕುರಿತು ಹೆಚ್ಚು ಅರಿವಿಲ್ಲದ, ಪ್ರಾಯೋಗಿಕ ಅನುಭವ ಇಲ್ಲದ ಇಲಾಖೆಯನ್ನು ಅದದಕ್ಕೆ ಒಗ್ಗಿಸುವಲ್ಲಿ ಉಪ ಮುಖ್ಯಮಂತ್ರಿ ಯಶಸ್ಸು ಕಂಡಿದ್ದಾರೆ. ಆನ್‌ಲೈನ್ ತರಗತಿಗಳಿಂದ ದೂರ ಉಳಿಯುತ್ತಿದ್ದ ವಿದ್ಯಾರ್ಥಿಗಳನ್ನೂ ಅದರತ್ತ ಸೆಳೆಯುವಲ್ಲಿ ಅವರ ಪ್ರಯತ್ನ ಫಲ ನೀಡಿದೆ. ಬೋಧಕರು ಮತ್ತು ವಿದ್ಯಾರ್ಥಿಗಳನ್ನು ಏಕಕಾಲಕ್ಕೆ ಭೌತಿಕ ತರಗತಿಗಳಿಗೆ ಪರ್ಯಾಯವಾಗಿ ಆನ್‌ಲೈನ್ ತರಗತಿಗಳತ್ತ ಪರಿವರ್ತಿಸಿದ ಹೆಗ್ಗಳಿಕೆ ಅವರಿಗೆ ಸಲ್ಲುತ್ತದೆ.

'ಸ್ಮಾರ್ಟ್' ತರಗತಿ ಕೊಠಡಿಗಳು ಸಜ್ಜು: ಆನ್‌ಲೈನ್ ತರಗತಿಗಳನ್ನು ಸಾಮಾನ್ಯ ತರಗತಿ ಕೋಠಿಡಗಳ ಮೂಲಕ ನಡೆಸಲು ಕಷ್ಟ. ಇದಕ್ಕಾಗಿಯೇ ರಾಜ್ಯದ ಪದವಿ ಕಾಲೇಜುಗಳು, ಎಂಜಿನಿಯರಿಂಗ್ ಮತ್ತು ಡಿಪ್ಲೊಮಾ ಕಾಲೇಜುಗಳು, ಕೈಗಾರಿಕಾ ತರಬೇತಿ ಕೇಂದ್ರಗಳ (ಐಟಿಐ) ತರಗತಿ ಕೊಠಡಿಗಳನ್ನು 'ಸ್ಮಾರ್ಟ್ ಕ್ಲಾಸ್ ರೂಂ'ಗಳನ್ನಾಗಿ ಪರಿವರ್ತಿಸುವ ಯೋಜನೆಯನ್ನು ರೂಪಿಸಿ, ಅನುಷ್ಠಾನಕ್ಕೆ ತರುವ ಕೆಲಸವನ್ನು ಅಶ್ವತ್ಥನಾರಾಯಣ ಮಾಡಿದ್ದಾರೆ.

2020-21ರಲ್ಲಿ ₹ 27.77 ಕೋಟಿ ವೆಚ್ಚದಲ್ಲಿ 2,500 ತರಗತಿ ಕೊಠಡಿಗಳನ್ನು 'ಸ್ಮಾರ್ಟ್ ಕ್ಲಾಸ್ ರೂಂ'ಗಳನ್ನಾಗಿ ಪರಿವರ್ತಿಸಲಾಗಿದೆ. ಇಂತಹ ಪ್ರತಿ ತರಗತಿ ಕೊಠಡಿಗೂ ಪ್ರೊಜೆಕ್ಟರ್, ವೈಟ್ ಬೋರ್ಡ್, 'ಹೈಸ್ಪೀಡ್ ಇಂಟರ್‌ನೆಟ್' ಮತ್ತು ವಿದ್ಯುತ್ ಅಡಚಣೆ ತಪ್ಪಿಸಲು ಯುಪಿಎಸ್ ಒದಗಿಸಲಾಗಿದೆ. ಪಿಪಿಟಿ, ವಿಡಿಯೊ, ಆಡಿಯೊ ಮತ್ತು ಚಿತ್ರಗಳನ್ನು ಬಳಸಿಕೊಂಡು ಬೋಧಿಸಲು ಅನುಕೂಲ ಕಲ್ಪಿಸಲಾಗಿದೆ.

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು, ಸರ್ಕಾರಿ ಪಾಲಿಟೆಕ್ನಿಕ್‌ಗಳು ಮತ್ತು ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಉಳಿದ 6,000 ತರಗತಿ ಕೊಠಡಿಗಳನ್ನು ಸ್ಮಾರ್ಟ್‌ಕ್ಲಾಸ್ ರೂಂಗಳನ್ನಾಗಿ ಪರಿವರ್ತಿಸಲು ಉದ್ದೇಶಿಸಲಾಗಿದೆ. ರಾಜ್ಯದ ಉದ್ದಗಲಕ್ಕೂ ಒಟ್ಟಾರೆ 8,500 ಸ್ಮಾರ್ಟ್ ತರಗತಿಗಳನ್ನು ಸ್ಥಾಪಿಸುವ ಗುರಿಯೊಂದಿಗೆ ಉನ್ನತ ಶಿಕ್ಷಣ ಇಲಾಖೆ ಮುನ್ನಡೆಯುತ್ತಿದೆ.

ಎನ್‌ಇಪಿ ಜಾರಿಗೆ ಮುಂದಡಿ: ಹಿರಿಯ ವಿಜ್ಞಾನಿ ಡಾ.ಕೆ. ಕಸ್ತೂರಿ ರಂಗನ್ ನೇತೃತ್ವದ ಸಮಿತಿ ರೂಪಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್‌ಇಪಿ) ಅನುಷ್ಠಾನಕ್ಕೆ ತರುವಲ್ಲಿ ಕರ್ನಾಟಕವು ದೇಶದಲ್ಲೇ ಮುಂಚೂಣಿಯಲ್ಲಿದೆ. ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರ ಒತ್ತಾಸೆಯೇ ಇದಕ್ಕೆ ಕಾರಣ.

ಎನ್‌ಇಪಿ ಅನುಷ್ಠಾನಕ್ಕೆ ಕಾರ್ಯಪಡೆ ನೇಮಿಸಿ, ಸಲಹೆಗಳನ್ನು ಪಡೆಯಲಾಗಿದೆ. ಅಗತ್ಯ ಮೂಲಸೌಕರ್ಯವಿರುವ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಹೊಸ ಶೈಕ್ಷಣಿಕ ನೀತಿ ಜಾರಿಗೆ ಬರಲಿದೆ ಎಂಬ ಘೋಷಣೆಯನ್ನೂ ಉನ್ನತ ಶಿಕ್ಷಣ ಸಚಿವರು ಮಾಡಿದ್ದಾರೆ. ಆ ಮೂಲಕ ಜಾಗತಿಕ ಮಟ್ಟದ ಸ್ಪರ್ಧೆಗೆ ಪೂರಕವಾಗಿ ರಾಜ್ಯದ ಯುವ ಪೀಳಿಗೆಯನ್ನು ಸಜ್ಜುಗೊಳಿಸುವ ಪ್ರಯತ್ನಕ್ಕೆ ನಾಂದಿ ಹಾಡಿದ್ದಾರೆ. ❖



ವಿದ್ಯಾರ್ಥಿಗಳಿಗೆ ಟ್ಯಾಬ್ಲೆಟ್ ಪಿಸಿ ವಿತರಿಸಿದ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಮತ್ತು ಉನ್ನತ ಶಿಕ್ಷಣ ಸಚಿವ ಡಾ.ಸಿ. ಎನ್. ಅಶ್ವತ್ಥನಾರಾಯಣ. ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಿ. ಕುಮಾರ ನಾಯಕ್ ಮತ್ತು ಪ್ರೊ. ತಿಮ್ಮೇಗೌಡ ಇದ್ದಾರೆ

ಕ್ರಾಂತಿಕಾರಕ ಬದಲಾವಣೆಗೆ ನಾಂದಿಯಾದ ಎಲ್‌ಎಂಎಸ್

ನಗರ- ಗ್ರಾಮೀಣ, ಸರ್ಕಾರಿ ಶಿಕ್ಷಣ- ಖಾಸಗಿ ಶಿಕ್ಷಣ, ಇಂಗ್ಲಿಷ್ ಭಾಷೆ- ಪ್ರಾದೇಶಿಕ ಭಾಷೆ ಇಂತಹ ತಾರತಮ್ಯಗಳಿಲ್ಲದೇ ಎಲ್ಲರೂ ಗುಣಮಟ್ಟದ ಉನ್ನತ ಶಿಕ್ಷಣವನ್ನು ಪಡೆಯಲು ಅನುಕೂಲವಾಗುವಂತಹ 'ಸಮಗ್ರ ಕಲಿಕಾ ನಿರ್ವಹಣಾ ವ್ಯವಸ್ಥೆ'ಯನ್ನು (ಎಲ್‌ಎಂಎಸ್) ರಾಜ್ಯದ ಉನ್ನತ ಶಿಕ್ಷಣ ಇಲಾಖೆ ಪರಿಚಯಿಸಿದೆ.

ವಿದ್ಯಾರ್ಥಿಯು ಎಲ್‌ಎಂಎಸ್ ವೆಬ್ ಪೋರ್ಟಲ್, ಡೆಸ್ಕ್ ಟಾಪ್ ಅಥವಾ ಮೊಬೈಲ್ ತಂತ್ರಾಂಶ ಬಳಸಿಕೊಂಡು ಕಲಿಯಬಹುದು. ಸುಮಾರು 3.5 ಲಕ್ಷಕ್ಕೂ ಹೆಚ್ಚು ಅತ್ಯುತ್ತಮವಾದ ಕಲಿಕಾ ವಿಷಯಗಳು ಎಲ್‌ಎಂಎಸ್‌ನಲ್ಲಿ ಲಭ್ಯವಿವೆ. ಕಾಲೇಜು ಶಿಕ್ಷಣದಿಂದ ವಿಶ್ವವಿದ್ಯಾಲಯದ ಹಂತದವರೆಗೆ ವಿದ್ಯಾರ್ಥಿ ಹಾಗೂ ಬೋಧಕರು ಇಬ್ಬರ ಕಲಿಕೆ, ಮೌಲ್ಯಮಾಪನಕ್ಕೆ ನೆರವಾಗುವಂತಹ ಕಲಿಕಾ ಸಾಮಗ್ರಿಗಳು ಇಲ್ಲಿವೆ.

ವಿದ್ಯಾರ್ಥಿಗಳು ತಾವು ಇರುವ ಸ್ಥಳದಿಂದಲೇ ಎಲ್ಲವನ್ನೂ ಕಲಿಯಲು ಸಾಧ್ಯವಾಗುವ ಮುಕ್ತ ವ್ಯವಸ್ಥೆಯೊಂದನ್ನು ರೂಪಿಸಬೇಕು ಎಂಬ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರ ಹಂಬಲವೇ ಎಲ್‌ಎಂಎಸ್ ಜಾರಿಗೆ ಕಾರಣ. ಈ ವ್ಯವಸ್ಥೆಯು ಬೋಧನೆ, ಕಲಿಕೆ, ನಿರಂತರ ಮೌಲ್ಯಮಾಪನ, ತಿದ್ದುಪಡಿ ಮೂಲಕ ಉನ್ನತ ಶಿಕ್ಷಣದಲ್ಲಿ ಪರಿಪೂರ್ಣತೆ ಸಾಧಿಸಲು ಅವಕಾಶ ಕಲ್ಪಿಸಿದೆ.



2020ರಲ್ಲಿ ಕೋವಿಡ್ ಬಿಕ್ಕಟ್ಟಿನ ನಡುವೆಯೇ ನಡೆದ ಸಿಇಟಿ ಪರೀಕ್ಷೆ ವೇಳೆ ಪಿಪಿಇ ಕಿಟ್ ಧರಿಸಿ ಪರೀಕ್ಷಾ ಕೇಂದ್ರಗಳಿಗೆ ಭೇಟಿನೀಡಿ ಧೈರ್ಯ ತುಂಬಿದ್ದ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ

ಕಠಿಣ ಪರಿಸ್ಥಿತಿಯಲ್ಲೂ ಇಲಾಖೆ ಹಳಿ ತಪ್ಪದಂತೆ ಮುನ್ನಡೆಸಿದ ತೃಪ್ತಿ

ರಾಜ್ಯದ ಬಿಜೆಪಿ ಸರ್ಕಾರಕ್ಕೆ ಈಗ ಎರಡು ವರ್ಷ. ಇದರ ನಿಮಿತ್ತ ಉನ್ನತ ಶಿಕ್ಷಣ ಇಲಾಖೆಯನ್ನು ಮುನ್ನಡೆಸುತ್ತಿರುವ ಉಪ ಮುಖ್ಯಮಂತ್ರಿ ಡಾ.ಸಿ. ಎನ್.ಅಶ್ವತ್ಥನಾರಾಯಣ ಇಲಾಖೆಯ ಕೆಲಸಗಳ ಬಗ್ಗೆ ಇಲ್ಲಿ ಮುಕ್ತವಾಗಿ ಮಾತನಾಡಿದ್ದಾರೆ.



ವಿದ್ಯಾರ್ಥಿಗಳಿಗೆ ಟ್ಯಾಬ್ಲೆಟ್ ಪಿಸಿ ವಿತರಿಸಿದ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ. ಇಲಾಖೆಯ ಆಯುಕ್ತ ಪ್ರದೀಪ್ ಇದ್ದಾರೆ

ಸಂದರ್ಶನ

- **ಪ್ರಶ್ನೆ: ರಾಜ್ಯವೂ ಬಹಳ ಸಂಕಷ್ಟ ಕಾಲದಲ್ಲಿದ್ದಾಗ ನಿಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂತು? ಉನ್ನತ ಶಿಕ್ಷಣ ಇಲಾಖೆ ಬಹಳ ಮಹತ್ವ ಮತ್ತು ಎರಡು ವರ್ಷ ನಿಭಾಯಿಸಿದ ಬಗ್ಗೆ ಹೇಳುವಿರಾ?**

ಉತ್ತರ: ಉಪ ಮುಖ್ಯಮಂತ್ರಿ ಪದವಿಯ ಜತೆಗೆ ಉನ್ನತ ಶಿಕ್ಷಣ ಖಾತೆ ಸಚಿವನಾಗುತ್ತೇನೆ ಎಂದು ನಾನು ಕನಸಿನಲ್ಲೂ ಭಾವಿಸಿದವನಲ್ಲ. ಇಂಥ ಜವಾಬ್ದಾರಿಯನ್ನು ವಹಿಸಿದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಪಕ್ಷಕ್ಕೆ ಆಭಾರಿಯಾಗಿದ್ದೇನೆ. ಮುಖ್ಯಮಂತ್ರಿಗಳು ನನಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿದ್ದಾರೆ. ಸತತ ಎರಡು ವರ್ಷ ಪ್ರವಾಹದಿಂದ ಸಂಕಷ್ಟ ಉಂಟಾಯಿತು. ಇಂಥ ಕಠಿಣ ಸಮಯದಲ್ಲಿ ಉನ್ನತ ಶಿಕ್ಷಣ ಇಲಾಖೆಯನ್ನು ಹಳಿ ತಪ್ಪದಂತೆ ಮುನ್ನಡೆಸಿದ್ದೇನೆ. ಈ ವಿಷಯದಲ್ಲಿ ಮುಖ್ಯಮಂತ್ರಿಗಳ ಮಾರ್ಗದರ್ಶನವನ್ನು ನಾನು ಮರೆಯಲಾರೆ.

- **ಪ್ರಶ್ನೆ: ಉನ್ನತ ಶಿಕ್ಷಣ ಇಲಾಖೆಯಲ್ಲಿ ಆಗಿರುವ ಸಾಧನೆಗಳ ಬಗ್ಗೆ ತಿಳಿಸುವಿರಾ?**

ಉತ್ತರ: ಡಿಜಿಟಲ್ ಕಲಿಕೆಗೆ ಒತ್ತು, ಹೊಸ ವಿಶ್ವವಿದ್ಯಾಲಯಗಳ ಸ್ಥಾಪನೆ, ಇ-ಆಫೀಸ್, ಏಕೀಕೃತ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ, ಕಲಿಕಾ ನಿರ್ವಹಣಾ ವ್ಯವಸ್ಥೆ, ಹೆಲ್ಪ್ ಎಜ್ಯುಕೇಟ್, ಸಹಾಯಕ ಪ್ರಾಧ್ಯಾಪಕರು ಮತ್ತು ಪ್ರಾಂಶುಪಾಲರ ನೇರ ನೇಮಕ ಸೇರಿದಂತೆ ಅನೇಕ ಸುಧಾರಣಾ ಕ್ರಮಗಳನ್ನು ಕೈಗೊಂಡಿದ್ದೇವೆ. ಕಳೆದ ಶೈಕ್ಷಣಿಕ ವರ್ಷದಲ್ಲಿ ಪದವಿ ವಿದ್ಯಾರ್ಥಿಗಳಿಗೆ 1.10 ಲಕ್ಷ ಲ್ಯಾಪ್‌ಟಾಪ್‌ಗಳನ್ನು ಕೊಡಲಾಗಿತ್ತು. ಈ ಶೈಕ್ಷಣಿಕ ವರ್ಷದಲ್ಲಿ 1.55 ಲಕ್ಷದಷ್ಟು ಎಂಜಿನಿಯರಿಂಗ್, ಪಾಲಿಟೆಕ್ನಿಕ್ ವಿದ್ಯಾರ್ಥಿಗಳಿಗೆ ಟ್ಯಾಬ್ಲೆಟ್ ಪಿಸಿಗಳನ್ನು ವಿತರಿಸಲಾಗಿದೆ.ನಾವು ಭರವಸೆ ನೀಡುತ್ತಾ ಸುದ್ದಿಯಾಗುತ್ತಿಲ್ಲ. ಕೆಲಸ ಮಾಡುತ್ತಾ ಇಡೀ ವ್ಯವಸ್ಥೆಯನ್ನು ಮುನ್ನಡೆಸುತ್ತಿದ್ದೇವೆ.

- **ಪ್ರಶ್ನೆ: ಕಳೆದ ವರ್ಷ ಸಿಇಟಿ ಪರೀಕ್ಷೆಯನ್ನು ಯಾವುದೇ ಸಮಸ್ಯೆಯಾಗದಂತೆ ನಿರ್ವಹಿಸಿದಿರಿ. ಈ ವರ್ಷ ಹೇಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದೀರಿ? ಮೂರನೇ ಅಲೆ ಆತಂಕ ಇದೆಯಲ್ಲ.**

ಉತ್ತರ: ಕಳೆದ ವರ್ಷ ಮೊದಲ ಅಲೆ ಇತ್ತು. ಪರೀಕ್ಷೆ ಬರೆಯುವ ವಿದ್ಯಾರ್ಥಿಗಳ ಬಗ್ಗೆ ಪೋಷಕರಿಗಷ್ಟೇ ಅಲ್ಲದೆ, ಸರ್ಕಾರಕ್ಕೂ ಆತಂಕ ಇತ್ತು. ಆದರೆ, ಸಿಇಟಿ ಪರೀಕ್ಷೆ ನಡೆಸಲೇಬೇಕಾಗಿತ್ತು. ನಡೆಸಲಾಯಿತು ಕೂಡ. ರಾಜ್ಯ ಹೈಕೋರ್ಟ್ ಕಣ್ಗಾವಲು ನಡುವೆ ಒಂದು ಸಣ್ಣ ಸಮಸ್ಯೆಯೂ ಆಗದಂತೆ ಪರೀಕ್ಷೆ ಸಂಪನ್ನವಾಯಿತು. ಕೋವಿಡ್ ಪಾಸಿಟಿವ್ ಬಂದಿದ್ದ 60ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆ ಬರೆದು ಉತ್ತಮ ರ‍್ಯಾಂಕ್ ಪಡೆದರು. ಸ್ವತಃ ನಾನೇ ಪಿಪಿಇ ಕಿಟ್ ಧರಿಸಿಕೊಂಡು ಪರೀಕ್ಷೆ ಬರೆಯುತ್ತಿದ್ದ ವಿದ್ಯಾರ್ಥಿಗಳನ್ನು ಭೇಟಿಯಾಗಿದ್ದೆ. ಎರಡು ದಿನ ನಡೆದ ಪರೀಕ್ಷೆಯಲ್ಲಿ ಎಲ್ಲಿಯೂ ಒಂದು ಅಪಸ್ವರವೂ ಬರಲಿಲ್ಲ. ಸಮಸ್ಯೆಗಳು ಬಂದಾಗ ಓಡಿಹೋಗುವುದು ಸುಲಭ. ಆದರೆ, ಸಮಸ್ಯೆಗೆ ಎದೆಯೊಡ್ಡಿ ನಿಂತು ಗೆಲ್ಲುವುದು ಬಹಳ ಮುಖ್ಯ

- **ಪ್ರಶ್ನೆ: GetCETgoದಿಂದ ಎಷ್ಟು ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ?**

ಉತ್ತರ: ಕಳೆದ ವರ್ಷ ರಾಜ್ಯದ ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶ ಇತ್ತು. ಎರಡು ಲಕ್ಷ ವಿದ್ಯಾರ್ಥಿಗಳು ಕೋಚಿಂಗ್ ಪಡೆದಿದ್ದರು. ಈ ವರ್ಷ ಸಿಇಟಿ ಬರೆಯಲು ಇಚ್ಛಿಸುವ ಜಗತ್ತಿನ ಯಾವುದೇ ಮೂಲೆಯಲ್ಲಿರುವ ವಿದ್ಯಾರ್ಥಿಯೂ GetCETgo ಪೋರ್ಟಲ್‌ಗೆ ಲಾಗಿನ್ ಆಗಿ ಕಲಿಯಬಹುದು. ವೆಬ್‌ಸೈಟ್, ಯುಟ್ಯೂಬ್ ಇಲ್ಲವೇ GetCETgo ಆಪ್ ಮೂಲಕವೂ ಕೋಚಿಂಗ್ ಪಡೆಯಬಹುದು. ಹಳ್ಳಿ ವಿದ್ಯಾರ್ಥಿಗಳು, ಆರ್ಥಿಕ ದುರ್ಬಲರ ಮಕ್ಕಳು ಕೂಡ ವೈದ್ಯರು, ಎಂಜಿನಿಯರುಗಳು ಆಗುತ್ತಿದ್ದಾರೆ. ನಮ್ಮ ಸರ್ಕಾರಕ್ಕೆ ಧನ್ಯತಾ ಭಾವ ಬಂದಿದೆ. ಇದಕ್ಕಿಂತ ಸಾರ್ಥಕತೆ ಏನಿದೆ?

- **ಪ್ರಶ್ನೆ: ಪದವಿ ಕಾಲೇಜುಗಳಲ್ಲಿ ಬೋಧಕರ ಕೊರತೆ ನಿವಾರಣೆಗೆ ಸರ್ಕಾರ ಏನು ಕ್ರಮ ವಹಿಸಿದೆ?**

ಉತ್ತರ: ಇನ್ನು ಆರು ತಿಂಗಳಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ 1,242 ಸಹಾಯಕ ಪ್ರಾಧ್ಯಾಪಕರು ಹಾಗೂ 310 ಪ್ರಾಂಶುಪಾಲರನ್ನು ನೇರ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. ಇನ್ನೂ 8,000 ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಉದ್ದೇಶಿಸಲಾಗಿದೆ. ಹಣಕಾಸು ಇಲಾಖೆ ಒಪ್ಪಿಗೆ ಸಿಕ್ಕಿದ ಕೂಡಲೇ ನೇಮಕ ಪ್ರಕ್ರಿಯೆ ಆರಂಭಿಸಲಾಗುವುದು.

- **ಪ್ರಶ್ನೆ: ಉನ್ನತ ಶಿಕ್ಷಣಕ್ಕೆ ಸಂಬಂಧಿಸಿ ನಿಮ್ಮ ಮುಂದಿನ ಸವಾಲು ಮತ್ತು ಗುರಿಗಳೇನು?**

ಉತ್ತರ: ಆಗಸ್ಟ್ ತಿಂಗಳಲ್ಲಿ ಸಿಇಟಿ ಪರೀಕ್ಷೆ ಇದೆ. ಅದನ್ನು ಯಶಸ್ವಿಯಾಗಿ ನಡೆಸಿ ಕೌನ್ಸೆಲಿಂಗ್ ಮುಗಿಸಬೇಕು. ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಯ ಬಗ್ಗೆ ಇನ್ನಷ್ಟು ಮುಂದೆ ಹೋಗಬೇಕಿದೆ. ಇದರ ಜತೆಯಲ್ಲಿ ಸಂಶೋಧನಾ ಕೇಂದ್ರಗಳ ಸ್ಥಾಪನೆ, ಎಂಜಿನಿಯರಿಂಗ್ ಕಾಲೇಜುಗಳಲ್ಲಿ ವಿಜ್ಞಾನ ಕೋರ್ಸ್ ಬೋಧನೆ, ಪ್ರತಿಷ್ಠಿತ ಯೂನಿವರ್ಸಿಟಿ ವಿಶ್ವೇಶ್ವರಯ್ಯ ತಾಂತ್ರಿಕ ಕಾಲೇಜನ್ನು (UVCE) ಐಐಟಿ ಮಾದರಿಯಲ್ಲಿ ಅಭಿವೃದ್ಧಿಪಡಿಸುವುದು, ತಾಂತ್ರಿಕವಾಗಿ ಇಡೀ ಉನ್ನತ ಶಿಕ್ಷಣ ವ್ಯವಸ್ಥೆಗೆ ಶಕ್ತಿ ತುಂಬುವುದು ಸೇರಿ ಅನೇಕ ಹೆಗ್ಗುರಿಗಳಿವೆ. ಇನ್ನೆರಡು ವರ್ಷಗಳಲ್ಲಿ ಈ ಎಲ್ಲ ಯೋಜನೆಗಳು ಖಚಿತವಾಗಿ ಕಾರ್ಯರೂಪಕ್ಕೆ ಬರಲಿವೆ.



ವಿದೇಶಿ ತಂತ್ರಜ್ಞರ ಜತೆ ಚರ್ಚೆಯಲ್ಲಿ ತೊಡಗಿಸಿರುವ ಡಿಸಿಎಂ ಡಾ.ಸಿ. ಎನ್. ಅಶ್ವತ್ಥನಾರಾಯಣ



ದಾವಣಗೆರೆ ವಿಶ್ವವಿದ್ಯಾಲಯದ ನೂತನ ವಿಜ್ಞಾನ ಶೈಕ್ಷಣಿಕ ಕಟ್ಟಡದ ಮೊದಲ ಮಹಡಿ ಉದ್ಘಾಟಿಸಿದ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ



ಬೆಂಗಳೂರಿನ ಅಂಬೇಡ್ಕರ್ ಸ್ಕೂಲ್ ಆಫ್ ಎಕಾಮಿಕ್ಸ್‌ನ ಕಟ್ಟಡದ ನಕ್ಷೆ ವೀಕ್ಷಿಸಿದ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ

ಸರ್ಕಾರಿ ಕಾಲೇಜಿನಲ್ಲಿ 'ಸಂಧ್ಯಾಶಕ್ತಿ'



ವಿದ್ಯಾರ್ಥಿಗಳು ಮತ್ತು ಪೋಷಕರ ಜತೆ ಸಂವಾದದಲ್ಲಿ ತೊಡಗಿರುವ ಡಿಸಿಎಂ ಡಾ.ಸಿ.ಎನ್. ಅಶ್ವತ್ಥನಾರಾಯಣ

ಬೆಂಗಳೂರು: ಜಾಗತೀಕರಣ ಹಾಗೂ ಇತ್ತೀಚೆಗಿನ ಕೋವಿಡ್-19 ಸಾಂಕ್ರಾಮಿಕ ತಂದೊಡ್ಡಿರುವ ಆರ್ಥಿಕ ಸಂಕಷ್ಟದಿಂದಾಗಿ ಪದವಿ ಶಿಕ್ಷಣವನ್ನು ಅರ್ಧಕ್ಕೆ ಬಿಟ್ಟು, ಉದ್ಯೋಗಕ್ಕೆ ಸೇರುವವರ ಸಂಖ್ಯೆ ಹೆಚ್ಚಾಗುತ್ತಿದೆ. ಇಂಥ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಅವಕಾಶಗಳನ್ನು ಕಲ್ಪಿಸಲು ರಾಜ್ಯ ಸರ್ಕಾರ 'ಸಂಧ್ಯಾ ಶಕ್ತಿ' ಯೋಜನೆ ರೂಪಿಸಿದೆ. ಈ ಯೋಜನೆಯಡಿ ನಗರ ಪಾಲಿಕೆಗಳ ವ್ಯಾಪ್ತಿಯ 11 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಂಜೆ ಕಾಲೇಜುಗಳನ್ನು ಆರಂಭಿಸಲು ಸಿದ್ಧತೆ ನಡೆಸಿದೆ. ಇರುವ ಸಂಪನ್ಮೂಲಗಳನ್ನೇ ಬಳಸಿಕೊಂಡು, ಈ ಕಾಲೇಜುಗಳನ್ನು ನಡೆಸಲು ಸಿದ್ಧತೆ ನಡೆಸಿದೆ. ಇದು ಉದ್ಯೋಗಸ್ಥರಿಗೂ ಉನ್ನತ ಶಿಕ್ಷಣದ ಅವಕಾಶಗಳನ್ನು ನೀಡುವ ಸರ್ಕಾರದ ಮಹತ್ವದ ನಿರ್ಧಾರವಾಗಿದೆ.

ಸಾಮರ್ಥ್ಯ ವೃದ್ಧಿಯ ಸಾರ್ಥಕ ಕಾರ್ಯಕ್ರಮ: ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆಡಳಿತ, ಬ್ಯಾಂಕಿಂಗ್ ಮತ್ತು ಗ್ರೂಪ್-ಸಿ ಎಲ್ಲ ಸೇವೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡಿಗರಿರಬೇಕು ಎಂದು ಸರ್ಕಾರ ಬಯಸಿದೆ. ಇಂಥ ಸೇವೆಗಳ ಪ್ರವೇಶಕ್ಕಾಗಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯುವವರಿಗೆ ನೆರವಾಗಲು ಉನ್ನತ ಶಿಕ್ಷಣ ಇಲಾಖೆ 'ಸಾಮರ್ಥ್ಯ-ಸಾರಥ್ಯ' ಹೆಸರಿನ ಯೋಜನೆ ರೂಪಿಸಿದೆ. ಇದರ ಅಡಿ, ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳ ಸಾಮರ್ಥ್ಯ ಹೆಚ್ಚಿಸಲು ತರಬೇತಿ ನೀಡಲಾಗುತ್ತಿದೆ. 2020-21ನೇ ಸಾಲಿನಲ್ಲಿ ₹ 5 ಕೋಟಿ ಅನುದಾನದಲ್ಲಿ ರಾಜ್ಯದ ಸುಮಾರು 5 ಲಕ್ಷ ವಿದ್ಯಾರ್ಥಿಗಳು ಈ ತರಬೇತಿಯ ಪ್ರಯೋಜನ ಪಡೆಯಲಿದ್ದಾರೆ. ಕನ್ನಡ – ಕನ್ನಡಿಗ–ಕರ್ನಾಟಕ–ಎನ್ನುವುದನ್ನು ಘೋಷವಾಕ್ಯಕ್ಕೆ ಸೀಮಿತವಾಗಿಸದೇ, ಅದನ್ನು ಕೃತಿಯಲ್ಲೂ ತರುವ ಪ್ರಯತ್ನ ಮಾಡುತ್ತಿದೆ ಯಡಿಯೂರಪ್ಪ ಸರ್ಕಾರ.

'ಎಂಜಿನಿಯರಿಂಗ್'ನಲ್ಲೂ ವಿಜ್ಞಾನ ಕೋರ್ಸ್: ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಬಹುಶಿಸ್ತೀಯ ಬೋಧನಾ ಕ್ರಮದಂತೆ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ವಿಜ್ಞಾನ ಆಧಾರಿತ ಕೋರ್ಸುಗಳನ್ನು ಬೋಧಿಸಲು ಸರ್ಕಾರ ಉತ್ಸುಕವಾಗಿದೆ. ಐಐಎಸ್‌ಸಿ ಮಾದರಿಯಲ್ಲಿ ವಿಜ್ಞಾನ ಕಲಿಕೆಯ ಗುಣಮಟ್ಟ ತರಬೇಕೆಂಬ ಗುರಿ ಇದೆ. ರಾಜ್ಯದಲ್ಲಿ ಉತ್ತಮ ಮೂಲಸೌಕರ್ಯವುಳ್ಳ 100 ರಿಂದ 110 ಕಾಲೇಜುಗಳಲ್ಲಿ ಬಿ.ಎಸ್ಸಿ ಮಾದರಿಯ 4 ವರ್ಷಗಳ ವಿಜ್ಞಾನ ಆಧಾರಿತ ಕೋರ್ಸುಗಳನ್ನು ಆರಂಭಿಸುವ ಬಗ್ಗೆ ರೂಪುರೇಷೆ ಸಿದ್ಧಪಡಿಸಲು ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಉನ್ನತ ಶಿಕ್ಷಣ ಪರಿಷತ್‌ಗೆ ನಿರ್ದೇಶನ ನೀಡಿದ್ದಾರೆ.

ಕೋವಿಡ್ ಬಿಕ್ಕಟ್ಟಿನಲ್ಲೂ ಉನ್ನತ ಶಿಕ್ಷಣಕ್ಕೆ 'ಹೈಟೆಕ್ ಸ್ಪರ್ಶ'

ಬೆಂಗಳೂರು: ವೈದ್ಯಕೀಯ ಪದವಿಯಂತಹ ಉನ್ನತ ಶಿಕ್ಷಣದ ಹಿನ್ನೆಲೆಯಿರುವ ಉಪಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥನಾರಾಯಣ, ಬೇರು ಮಟ್ಟದಿಂದಲೂ ಆ ಕ್ಷೇತ್ರದ ಆಗು-ಹೋಗುಗಳ ಬಗ್ಗೆ ಅರಿತವರು. ಈ ಅರಿವು – ಅನುಭವಗಳಿಂದಾಗಿ ಅವರು ಎರಡು ವರ್ಷಗಳಿಂದ ರಾಜ್ಯದ ಉನ್ನತ ಶಿಕ್ಷಣ ಕ್ಷೇತ್ರಕ್ಕೆ 'ಹೈಟೆಕ್' ಸ್ಪರ್ಶ ನೀಡಿದ್ದಾರೆ.

ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ತಂತ್ರಜ್ಞಾನ ಖಾತೆ ಸಚಿವರಾಗಿರುವ ಅಶ್ವತ್ಥನಾರಾಯಣ, ಕೋವಿಡ್ ಬಿಕ್ಕಟ್ಟಿನ ನಡುವೆಯೂ ಉನ್ನತ ಶಿಕ್ಷಣ ಕ್ಷೇತ್ರವನ್ನು ಕ್ರಿಯಾಶೀಲವಾಗಿಟ್ಟಿದ್ದಾರೆ. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಮೂಲಸೌಕರ್ಯಗಳನ್ನು ಸೃಷ್ಟಿಸುತ್ತಾ, ಹೊಸ ಹೊಸ ಕಲಿಕಾ ವಿಧಾನಗಳ ಅಳವಡಿಕೆ ಮುಂದಾಗಿದ್ದಾರೆ. ಸರ್ವರಿಗೂ ಗುಣಮಟ್ಟದ ಶಿಕ್ಷಣ ಸಿಗಬೇಕೆಂಬ ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯದ ಸಾಕಾರಕ್ಕಾಗಿ ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ ಪದವಿ ಕಾಲೇಜು ಆರಂಭಕ್ಕೆ ಕ್ರಮ ಕೈಗೊಂಡಿದ್ದಾರೆ.


ರಾಜ್ಯದ 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು, 87 ಪಾಲಿಟೆಕ್ನಿಕ್‌ಗಳು, 14 ಎಂಜಿನಿಯರಿಂಗ್ ಕಾಲೇಜುಗಳ ವಿದ್ಯಾರ್ಥಿಗಳು ಸರ್ಕಾರವೇ ಒದಗಿಸಿರುವ ಲ್ಯಾಪ್‌ಟಾಪ್, ಟ್ಯಾಬ್ಲೆಟ್ ಪಿಸಿ ಬಳಸಿಕೊಂಡು ಆನ್‌ಲೈನ್ ತರಗತಿಗಳಲ್ಲಿ ಪಾಠ ಕೇಳುತ್ತಿದ್ದಾರೆ. ಇದರಿಂದಾಗ ಅಂಗೈನಲ್ಲೇ ಜ್ಞಾನದ ಕಿಂಡಿಯೊಂದು ತೆರೆದು ಕೊಂಡಂತಾಗಿದೆ.

ಆನ್‌ಲೈನ್ ತರಗತಿಗಳ ಜತೆಗೆ, ಕಾಲೇಜು ಶಿಕ್ಷಣ ಇಲಾಖೆ ಆರಂಭಿಸಿದ 'ಜ್ಞಾನ ನಿಧಿ' ಮತ್ತು 'ವಿಜಯೀಭವ' ಯೂಟ್ಯೂಬ್ ಚಾನೆಲ್‌ಗಳು ವಿದ್ಯಾರ್ಥಿಗಳಿಗೆ ಒಂದು ರೀತಿ ಆಪ್ತಬಂಧುಗಳಾದವು. ಈ ಚಾನೆಲ್‌ಗಳಮೂಲಕ ಸುಮಾರು 70 ಸಾವಿರ ಆನ್‌ಲೈನ್ ತರಗತಿಗಳು ನಡೆದಿವೆ. 12,500 ವಿಡಿಯೊ ತರಗತಿಗಳನ್ನು ಅಪ್‌ಲೋಡ್ ಮಾಡಲಾಗಿದೆ. ಸರ್ಕಾರ ಕೈಗೊಂಡ ಈ 'ಆಧುನಿಕ ಉಪಕ್ರಮ'ದಿಂದ ವಿದ್ಯಾರ್ಥಿಗಳು ಉದ್ಯೋಗ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳ ಮಾಹಿತಿಯ ಜತೆಗೆ, ಕೌಶಲಾಧಾರಿತ ಉದ್ಯೋಗಗಳ ಬಗ್ಗೆಯೂ ಮಾಹಿತಿ ಪಡೆಯಲು ಅನುಕೂಲವಾಗಿದೆ.

'ಸಹಭಾಗಿತ್ವ'ದೊಂದಿಗೆ ಅಭಿವೃದ್ಧಿ

ಉನ್ನತ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರದ ಪ್ರಯತ್ನವೊಂದೇ ಸಾಲುವುದಿಲ್ಲ. ಸಮಾಜದ ನೆರವೂ ಅಗತ್ಯ ಎಂಬುದನ್ನು ಮನಗಂಡ ಸರ್ಕಾರ, ದಾನಿಗಳ ನೆರವಿನೊಂದಿಗೆ ಉನ್ನತ ಶಿಕ್ಷಣ ಕ್ಷೇತ್ರವನ್ನು ಬಲಪಡಿಸಲು 'ಹೆಲ್ಪ್ ಎಜುಕೇಟ್' ಎಂಬ ಯೋಜನೆ ರೂಪಿಸಿತು. ಈ ಯೋಜನೆಯಡಿ ಬಹುರಾಷ್ಟ್ರೀಯ ಕಂಪನಿ ಕಾಗ್ನಿಜೆಂಟ್ ಇಂಡಿಯಾ ಕಂಪನಿಯು ಸರ್ಕಾರಿ ಪದವಿ, ಎಂಜಿನಿಯರಿಂಗ್, ತಾಂತ್ರಿಕ ಕಾಲೇಜುಗಳಿಗೆ 12,000ಕ್ಕೂ ಹೆಚ್ಚು ಡೀಬಾಂಡೆಡ್ ಕಂಪ್ಯೂಟರ್‌ಗಳನ್ನು ಪೂರೈಸಿದೆ. ಇದು ಕಾಲೇಜುಗಳಲ್ಲಿ 'ಕಂಪ್ಯೂಟರ್ ಲ್ಯಾಬ್'ಗಳ ಅಭಿವೃದ್ಧಿಗೆ ನೆರವಾಗಿದೆ. ಉನ್ನತ ಶಿಕ್ಷಣ ಸಚಿವಾಲಯದ ಈ 'ಸಹಭಾಗಿತ್ವ'ದ ಉಪಕ್ರಮ ಲಕ್ಷಾಂತರ ವಿದ್ಯಾರ್ಥಿಗಳಿಗೆ ಕಂಪ್ಯೂಟರ್‌ಗಳು ಲಭ್ಯವಾಗುವಂತೆ ಮಾಡಿದೆ.

ಕಾಲೇಜುಗಳಲ್ಲಿ ಆನ್‌ಲೈನ್ ತರಗತಿಗಳ ಜತೆಗೆ, ದ್ವಿತೀಯ ಪಿಯುಸಿ ನಂತರ ವೃತ್ತಿಪರ ಕೋರ್ಸ್‌ಗಳಿಗೆ ತೆರಳುವ ವಿದ್ಯಾರ್ಥಿಗಳಿಗೆ ನೆರವಾಗಲು 'Get CET Go' ಎಂಬ ಆನ್‌ಲೈನ್ ಕೋಚಿಂಗ್ ವ್ಯವಸ್ಥೆ ರೂಪಿಸಿದ್ದು, ಉನ್ನತ ಶಿಕ್ಷಣ ಸಚಿವಾಲಯದ ದೂರದೃಷ್ಟಿಗೆ ಹಿಡಿದ ಕನ್ನಡಿ. ಇದು ಸಿಇಟಿ, ನೀಟ್ ಮತ್ತು ಜೆಇಇ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಶಿಕ್ಷಣ ಇಲಾಖೆ ನೀಡಿದ ಉತ್ತಮ ಕೊಡುಗೆ. ಸುಮಾರು 2 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದಿದ್ದಾರೆ. ಖರ್ಚಿಲ್ಲದೇ, ವೆಬ್‌ಸೈಟ್, ಯೂಟ್ಯೂಬ್ ಅಥವಾ 'ಗೆಟ್ ಸೆಟ್ ಗೊ' ಅಪ್ಲಿಕೇಷನ್ ಮೂಲಕ ಜಗತ್ತಿನ ಯಾವ ಮೂಲೆಯಲ್ಲಿ ಕುಳಿತು ಕೋಚಿಂಗ್ ಪಡೆಯುವಂತಹ ವ್ಯವಸ್ಥೆ ಇದು. ❖



ಉತ್ತಮ ಆಡಳಿತ ದಿ ಕಾರ್ಯಕ್ರಮದಲ್ಲಿ ರಾಜ್ಯದ ವಿಶ್ವವಿದ್ಯಾಲಯಗಳ ಕುಲಪತಿಗಳ ಜೊತೆಗೆ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ

ಅಭಿವೃದ್ಧಿಯತ್ತ ದಿಟ್ಟ ಹೆಜ್ಜೆ

ರಾಜ್ಯ ಸರ್ಕಾರ ಶಿಕ್ಷಣ ಕ್ಷೇತ್ರದಲ್ಲಿ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿಗೆ ನೀಡಿದ ಆದ್ಯತೆಯನ್ನು ಇಲಾಖೆಯ ಅಭಿವೃದ್ಧಿಗೂ ನೀಡಿದೆ. ಉನ್ನತ ಶಿಕ್ಷಣ ಇಲಾಖೆಯ ಪ್ರಕ್ರಿಯೆಗಳು ವೇಗವಾಗಿ, ಪಾರದರ್ಶಕವಾಗಿಡಲು 'ಇ-ಆಫೀಸ್' ಜಾರಿಗೆ ತಂದಿದೆ. ವಿಶ್ವವಿದ್ಯಾಲಯದ ಎಲ್ಲ ಕಾರ್ಯಗಳನ್ನು ಆನ್‌ಲೈನ್ ಮೂಲಕ ಒಂದೇ ವೇದಿಕೆಯಡಿ ತರುವ 'ಏಕೀಕೃತ ವಿಶ್ವವಿದ್ಯಾಲಯ ಹಾಗೂ ಕಾಲೇಜು ನಿರ್ವಹಣಾ ವ್ಯವಸ್ಥೆ'(ಯುಯುಸಿಎಂಎಸ್) ಜಾರಿಗೊಳಿಸಿದೆ.

ಬೋಧನೆ-ಕಲಿಕೆ ಪ್ರಕ್ರಿಯೆಯನ್ನು ಪರಿಣಾಮಕಾರಿಯಾಗಿಸುವ ನಿಟ್ಟಿನಲ್ಲಿ ರಾಜ್ಯದ ಪದವಿ ಕಾಲೇಜುಗಳಿಗೆ ವಿವಿಧ ವಿಷಯ ಗಳಲ್ಲಿ 1,242 ಅಧ್ಯಾಪಕರು ಮತ್ತು 310 ಪ್ರಾಚಾರ್ಯರ ನೇಮಕಕ್ಕೆ, ವಿಶೇಷ ನೇಮಕಾತಿ ನಿಯಮಗಳನ್ನು ರೂಪಿಸಿದೆ. ಇದಲ್ಲದೇ, ಸರ್ಕಾರಿ/ ಅನುದಾನಿತ ಕಾಲೇಜುಗಳು ಮತ್ತ ಪಾಲಿಟೆಕ್ನಿಕ್ ಗಳಲ್ಲಿನ ಬೋಧಕ ಸಿಬ್ಬಂದಿಗೆ 7ನೇ ಯುಜಿಸಿ/ ಎಐಸಿಟಿಇ ವೇತನ ಶ್ರೇಣಿಯನ್ನು ಅನುಷ್ಠಾನಗೊಳಿಸಿರುವುದು ಸರ್ಕಾರದ ಮತ್ತೊಂದು ಮಹತ್ವದ ಕ್ರಮವಾಗಿದೆ.

ಕಿರಿದಾಗುತ್ತಾ ಸಾಗುವ ರಾಜಕಾಲುವೆ; ನಿವಾಸಿಗಳ ನೆಮ್ಮದಿ ಕೆಡಿಸಿದ ಪ್ರವಾಹ • ಈ ವರ್ಷ ಸಮಸ್ಯೆ ಆಗದು: ಬಿಬಿಎಂಪಿ

‘ಮಾನ್ಯತಾ’ ಸುತ್ತಲ ಬಡಾವಣೆಗಳಿಗೆ ಜಲಕಂಟಕದ ಭಯ

• ವಿಜಯಕುಮಾರ್ ಎಸ್.ಕೆ.





ಮಾನ್ಯತಾ ಟೆಕ್ ಪಾರ್ಕ್ ಹಿಂಭಾಗ ರಾಜಕಾಲುವೆಗೆ ಇದ್ದ ಮೇಲ್ಚಾವಣಿ ತೆರವುಗೊಳಿಸಿರುವುದು(ಎಡಚಿತ್ರ) ಮರಿಯಣ್ಣಪಾಳ್ಯ ಬಳಿ ಕಿರಿದಾಗುತ್ತಾ ಸಾಗಿರುವ ರಾಜಕಾಲುವೆ —ಪ್ರಜಾವಾಣಿ ಚಿತ್ರಗಳು/ಅನುಪ್ ರಾಘ ಟಿ.

ಬೆಂಗಳೂರು: ರಾಜಕಾಲುವೆಯಿಂದ ನೀರು ಉಕ್ಕಿ ಮನೆಗೆ ನುಗ್ಗುವ ಭಯ, ಮಳೆಗಾಲದಲ್ಲಿ ಮಾಯವಾದ ಸುಖನಿದ್ರೆ, ಮನೆಗಳ ತಳಪಾಯವನ್ನೇ ಎತ್ತರಿಸುತ್ತಿರುವ ನಿವಾಸಿಗಳು...

ಇದು ಮಾನ್ಯತಾ ಟೆಕ್‌ಪಾರ್ಕ್ ಹಿಂಭಾಗದಲ್ಲಿರುವ ಮರಿಯಣ್ಣಪಾಳ್ಯದ ಡಿಫೆನ್ಸ್ ಲೇಔಟ್ ನಿವಾಸಿಗಳ ಸ್ಥಿತಿ. ಕಳೆದ ವರ್ಷ ಮಳೆಗಾಲದಲ್ಲಿ ಕೆರೆ, ಕಟ್ಟೆಗಳು, ರಾಜಕಾಲುವೆಗಳೆಲ್ಲವೂ ತುಂಬಿ ಹರಿದವು. ಈ ಸಂದರ್ಭದಲ್ಲಿ ಮರಿಯಣ್ಣಪಾಳ್ಯ ಮತ್ತು ಮಾನ್ಯತಾ ಟೆಕ್‌ಪಾರ್ಕ್ ಪ್ರದೇಶ ಸಂಪೂರ್ಣ ಜಲಾವೃತಗೊಂಡಿತ್ತು. ಇಲ್ಲಿನ ನಿವಾಸಿಗಳಲ್ಲಿ ಜಲಪ್ರಳಯವೇ ಸಂಭವಿಸಿರಬಹುದು ಎಂಬ ಅನುಮಾನ ಹುಟ್ಟುವಂತೆ ಮಾಡಿತ್ತು.

ಹೆಬ್ಬಾಳ ಕೆರೆ ಮತ್ತು ನಾಗವಾರ ಕೆರೆಗಳು ತುಂಬಿದ ನಂತರ ಪಿನಾಕಿನಿ ಕಣಿವೆ ಕಡೆಗೆ ನೀರು ಹರಿಯುತ್ತದೆ. ಯಲಹಂಕ, ಅಲ್ಲಾಳಸಂದ್ರ, ಜಕ್ಕೂರು, ರಾಚೇನಹಳ್ಳಿ ಕೆರೆಗಳ ಕಡೆಯಿಂದ ಬರುವ ಮತ್ತೊಂದು ರಾಜಕಾಲುವೆ ಮತ್ತು ಹೆಗಡೆ ನಗರ, ಶಿವರಾಮ ಕಾರಂತ ನಗರ ಕಡೆಯಿಂದ ಬರುವ ಮಗದೊಂದು ರಾಜಕಾಲುವೆ ಕೂಡ ಮಾನ್ಯತಾ ಟೆಕ್‌ಪಾರ್ಕ್ ಆವರಣ ಪ್ರವೇಶಿಸುವ ಮೊದಲೇ ಒಟ್ಟುಗೂಡಿ ಹರಿಯುತ್ತವೆ.

‘ಆಗ ನೀರಿನ ಪ್ರಮಾಣ ಮೂರುಪಟ್ಟು ಹೆಚ್ಚಾಗುತ್ತದೆ. ನೀರಿನ ಹರಿವಿಗೆ ತಕ್ಕಂತೆ ರಾಜಕಾಲುವೆ ದೊಡ್ಡದಾಗುತ್ತಾ ಹೋಗಬೇಕು. ಆದರೆ, ಇಲ್ಲಿ ತದ್ವಿರುದ್ಧವಾಗಿದೆ. ನಾಗವಾರ ಬಳಿ ದೊಡ್ಡದಾಗಿ ಕಾಣಿಸುವ ರಾಜಕಾಲುವೆ ಮಾನ್ಯತಾ ಟೆಕ್ ಪಾರ್ಕ್ ದಾಟಿ, ಥಣಿಸಂದ್ರ ಮುಖ್ಯ ರಸ್ತೆಯಲ್ಲಿನ ಎಲಿಮೆಂಟ್ಸ್ ಮಾಲ್

ಕೊಚ್ಚಿ ಹೋಗದಿರಲಿ ಬದುಕು 5

ಬಳಿಗೆ ಹೋಗುವಷ್ಟರಲ್ಲಿ ಚಿಕ್ಕದಾಗಿದೆ. ಹೀಗಾಗಿಯೇ ನೀರು ಸರಾಗವಾಗಿ ಹರಿದು ಹೋಗಲು ಸಾಧ್ಯವಾಗದೆ ಸುತ್ತಮುತ್ತಲ ಬಡಾವಣೆಗಳಿಗೆ ನುಗ್ಗುತ್ತಿದೆ’ ಎನ್ನುತ್ತಾರೆ ಸ್ಥಳೀಯರು.

‘ರಾಜಕಾಲುವೆಯನ್ನು ಕಾಂಕ್ರೀಟ್ ಮಯ ಮಾಡುವುದರಿಂದ ಯಾವುದೇ ಪ್ರಯೋಜನ ಇಲ್ಲ. ನೀರು ಇಂಗಲು ಅವಕಾಶ ಇರಬೇಕು. ಪ್ರತಿ ರಾಜಕಾಲುವೆಗೂ ಬಫರ್ ವಲಯ ಇರಬೇಕು. ರಾಜಕಾಲುವೆಯನ್ನೇ ಕಿರಿದು ಮಾಡಿದ್ದು, ಬಫರ್ ವಲಯವಂತೂ ಇಲ್ಲವೇ ಇಲ್ಲ. ಹೀಗಾಗಿ ಜೋರು ಮಳೆ ಬಂದಾಗ ನೀರು ಮನೆಗಳಿಗೆ ನುಗ್ಗುತ್ತಿದೆ’ ಎನ್ನುತ್ತಾರೆ ಅವರು.

ಮಾನ್ಯತಾ ಟೆಕ್‌ಪಾರ್ಕ್ ಆವರಣದೊಳಗಿನ ರಾಜಕಾಲುವೆಗೆ ಹಾಕಿದ್ದ ಚಾವಣಿಯನ್ನು ಬಿಬಿಎಂಪಿ ಅಧಿಕಾರಿಗಳು ಕಳೆದ ವರ್ಷ ತೆರವುಗೊಳಿಸಿದ್ದರು. ಈಗ ಡಿಫೆನ್ಸ್ ಲೇಔಟ್ ಪಕ್ಕದಲ್ಲಿ ಎರಡು ರಾಜಕಾಲುವೆ ವಿಲೀನ ಆಗುವ ಸ್ಥಳದಲ್ಲಿದ್ದ ಚಾವಣಿಯನ್ನೂ ತೆಗೆದು ಅದರಲ್ಲಿದ್ದ ಕಸ-ಕಡ್ಡಿಯನ್ನು ಹೊರ ಹಾಕಿದ್ದಾರೆ. ನೀರು ನುಗ್ಗಿದ್ದ ಸ್ಥಳ ಗುರುತಿಸಿ ತಡೆಗೋಡೆಯನ್ನೂ ಎತ್ತರಿಸಿದ್ದಾರೆ.

ಆದರೂ, ಕಿರಿದಾಗಿರುವ ರಾಜಕಾಲುವೆ ಉಕ್ಕುವ ಭಯ ಜನರಲ್ಲಿ ಕಡಿಮೆಯಾಗಿಲ್ಲ. ಈ ವರ್ಷ ಇನ್ನೂ ಜೋರು ಮಳೆ ಬಂದಿಲ್ಲ. ನಾಗವಾರ ಮತ್ತು ರಾಚೇನಹಳ್ಳಿ ಕೆರೆಗಳು ತುಂಬಿದರೆ ಸಮಸ್ಯೆ ಮತ್ತೆ ಎದುರಾಗಲಿದೆ ಎಂಬ ಆತಂಕದಲ್ಲಿದ್ದಾರೆ.

ವಿಡಿಯೋ ನೋಡಲು ಈ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ



ಪ್ರತಿವರ್ಷ ಮಳೆ ನೀರು ಬಡಾವಣೆಗೆ ನುಗ್ಗುತ್ತಿದೆ. ರಾಜಕಾಲುವೆ ನೀರಿಗೆ ಹೆದರಿ ಮನೆಯ ಅಡಿಪಾಯವನ್ನೇ ಎತ್ತರಿಸಿ ಮನೆ ಕಟ್ಟಿದ್ದೇವೆ. ಇದನ್ನೂ ಮೀರಿ ಮನೆಯೊಳಗೆ ನೀರು ಬರುವ ಸಾಧ್ಯತೆಯೂ ಇದೆ

ಶ್ಯಾಮಸುಂದರ್, ಡಿಫೆನ್ಸ್ ಲೇಔಟ್



ಕಳೆದ ವರ್ಷ ಈ ಭಾಗದಲ್ಲಿ ಜಲಪ್ರಳಯವೇ ಆಯಿತು ಎಂಬ ಅನುಮಾನ ಹುಟ್ಟಿಸಿತ್ತು. ಆದರೂ, ರಾಜಕಾಲುವೆ ಸರಿಪಡಿಸುವ ಕೆಲಸ ಆಗಿಲ್ಲ. ಜೋರು ಮಳೆ ಬಂದರೆ ಮತ್ತೆ ಅದೇ ಸಮಸ್ಯೆ ಆಗುವ ಆತಂಕ ಇದೆ

ನಾಗನಾಯ್ಕ, ಮರಿಯಣ್ಣಪಾಳ್ಯ



ಕಳೆದ ವರ್ಷ ನಾಗವಾರ ಕೆರೆ ತುಂಬಿ ಹರಿದು ನೀರು ಡಿಫೆನ್ಸ್ ಲೇಔಟ್‌ಗೆ ತುಂಬಿಕೊಂಡಿತ್ತು. ಈ ವರ್ಷವೂ ಅದೇ ರೀತಿ ಸಮಸ್ಯೆ ಆಗುವ ಭಯ ಇದೆ. ರಾಜಕಾಲುವೆ ವಿಸ್ತರಿಸಿ ನೀರು ಹರಿದು ಹೋಗುವಂತೆ ಮಾಡಬೇಕು

ರವಿಶಂಕರ್, ಮರಿಯಣ್ಣಪಾಳ್ಯ

‘ಯಾವುದೇ ಸಮಸ್ಯೆ ಆಗದು’

‘ಮಾನ್ಯತಾ ಟೆಕ್ ಪಾರ್ಕ್ ಆವರಣದಲ್ಲಿ ರಾಜಕಾಲುವೆಗೆ ಹಾಕಿದ್ದ ಚಾವಣಿ ಮತ್ತು ಪೈಪ್‌ಗಳನ್ನು ತೆರವುಗೊಳಿಸಿದ್ದೇವೆ. ಆದ್ದರಿಂದ ಈ ವರ್ಷ ಯಾವುದೇ ಸಮಸ್ಯೆ ಆಗದು’ ಎಂದು ಬಿಬಿಎಂಪಿ ಮುಖ್ಯ ಎಂಜಿನಿಯರ್ (ರಾಜಕಾಲುವೆ) ಬಿ.ಎಸ್. ಪ್ರಹ್ಲಾದ್ ತಿಳಿಸಿದರು.

‘ಡಿಫೆನ್ಸ್ ಲೇಔಟ್ ಪಕ್ಕದ ರಾಜಕಾಲುವೆ ಚಾವಣಿಯನ್ನೂ ತೆಗೆದು ಸ್ವಚ್ಛಗೊಳಿಸಲಾಗಿದೆ. ಜನರು ಆತಂಕಪಡದೆ ನೆಮ್ಮದಿಯಿಂದ ಇರಬಹುದು’ ಎಂದರು.

ಅಡಿಪಾಯವನ್ನೇ ಎತ್ತರಿಸುತ್ತಿರುವ ನಿವಾಸಿಗಳು

ಮರಿಯಣ್ಣಪಾಳ್ಯದ ಡಿಫೆನ್ಸ್ ಲೇಔಟ್‌ನಲ್ಲಿ ಇತ್ತೀಚೆಗೆ ಮನೆ ಕಟ್ಟುತ್ತಿರುವ ಜನರು, ಅಡಿಪಾಯವನ್ನೇ ಎತ್ತರಿಸುತ್ತಿದ್ದಾರೆ. ಒಬ್ಬರು ರಸ್ತೆಯಿಂದ ಎರಡೂವರೆ ಅಡಿ ಎತ್ತರಕ್ಕೆ ಅಡಿಪಾಯ ಎತ್ತರಿಸಿದ್ದರೆ, ಮತ್ತೊಬ್ಬರು 5 ಅಡಿಯಷ್ಟು ಎತ್ತರಿಸಿ ಕಟ್ಟಡ ನಿರ್ಮಿಸುತ್ತಿದ್ದಾರೆ.

‘ಮಳೆಗಾಲದಲ್ಲಿ ಆಗುವ ಸಮಸ್ಯೆ ನೆನಪಿಸಿಕೊಂಡರೆ ಈ ಬಡಾವಣೆಯಲ್ಲಿ ಮನೆ ಕಟ್ಟುವುದೇ ಬೇಡ ಎಂದುಕೊಂಡಿದ್ದೆವು. ಅನಿವಾರ್ಯವಾಗಿ ತಳಪಾಯ ಎತ್ತರಿಸಿ ಕಟ್ಟುತ್ತಿದ್ದೇವೆ’ ಎಂದು ಮನೆ ನಿರ್ಮಾಣ ಕೆಲಸ ಮಾಡಿಸುತ್ತಿದ್ದ ಸೋಮಶೇಖರ್ ಹೇಳಿದರು.

ಮಳೆಗಾಲದಲ್ಲಿ ಮನೆಗೆ ನೀರು ನುಗ್ಗಲಿದೆ ಎಂಬ ಆತಂಕದಲ್ಲಿ ನೆಲಮಹಡಿಯ ಮನೆಗಳನ್ನು ಹಲವರು ಖಾಲಿ ಮಾಡಿದ್ದಾರೆ ಎಂದೂ ತಿಳಿಸಿದರು.

ರಾಷ್ಟ್ರೀಯ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗೆ ಮಾರ್ಗದರ್ಶನ

‘ಅನ್ ಅಕಾಡೆಮಿ’ ಜತೆ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ರಾಜ್ಯದ ವಿದ್ಯಾರ್ಥಿಗಳು ಹೆಚ್ಚಿನ ಪ್ರಮಾಣದಲ್ಲಿ ತೇರ್ಗಡೆಯಾಗಿ ಉದ್ಯೋಗ ಪಡೆಯಲು ಸಾಧ್ಯವಾಗುವಂತೆ ಮಾರ್ಗದರ್ಶನ ನೀಡಲು ಆನ್‌ಲೈನ್ ಕಲಿಕಾ ವೇದಿಕೆ ‘ಅನ್ ಅಕಾಡೆಮಿ’ ಜತೆ ರಾಜ್ಯ ಸರ್ಕಾರ ಒಪ್ಪಂದ ಮಾಡಿಕೊಂಡಿದೆ.

ಉನ್ನತ ಶಿಕ್ಷಣ ಖಾತೆ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರ ಸಮ್ಮುಖದಲ್ಲಿ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತ ಪ್ರದೀಪ್ ಪ್ರಭಾಕರ್ ಮತ್ತು ‘ಅನ್ ಅಕಾಡೆಮಿ’ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವಿವೇಕ್ ಸಿನ್ಹಾ ಈ ಒಪ್ಪಂದಕ್ಕೆ ಗುರುವಾರ ಸಹಿ ಹಾಕಿದರು.

‘2021ರಿಂದ 2024ರವರೆಗೆ ಈ ಒಪ್ಪಂದ ಜಾರಿಯಲ್ರಲಿ ಇಲಿದೆ. ಈ



‘ಅನ್ ಅಕಾಡೆಮಿ’ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವಿವೇಕ್ ಸಿನ್ಹಾ ಹಾಗೂ ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತ ಪ್ರದೀಪ್ ಪ್ರಭಾಕರ್ ಒಪ್ಪಂದದ ಪ್ರತಿಯನ್ನು ವಿನಿಮಯ ಮಾಡಿಕೊಂಡರು. ಈ ಸಂದರ್ಭದಲ್ಲಿ ಇಲಾಖೆ ಪ್ರಧಾನ ಕಾರ್ಯದರ್ಶಿ ಕುಮಾರ ಜಿ ನಾಯಕ್ ಹಾಗೂ ಉಪಮುಖ್ಯಮಂತ್ರಿ ಸಿ.ಎನ್. ಅಶ್ವತ್ಥನಾರಾಯಣ ಇದ್ದರು

ಅವಧಿಯಲ್ಲಿ ಪ್ರತಿವರ್ಷ 1,500 ವಿದ್ಯಾರ್ಥಿಗಳಂತೆ ಒಟ್ಟು 4,500 ವಿದ್ಯಾರ್ಥಿಗಳಿಗೆ ಅನ್ ಅಕಾಡೆಮಿ ಉಚಿತ ತರಬೇತಿ ನೀಡಲಿದೆ. ಆರು ತಿಂಗಳಿಗೊಮ್ಮೆ ಆನ್‌ಲೈನ್ ಪರೀಕ್ಷೆಗಳನ್ನು ನಡೆಸಿ, ಆಯ್ಕೆಯಾಗುವ 750 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗುವುದು. ಆ ವಿದ್ಯಾರ್ಥಿಗಳನ್ನು ಯಾವುದೇ ಶುಲ್ಕವಿಲ್ಲದೆ ಅನ್ ಅಕಾಡೆಮಿ ಚಂದಾದಾರರನ್ನಾಗಿ ಮಾಡಲಾಗುವುದು’ ಎಂದು ಅಶ್ವತ್ಥನಾರಾಯಣ ತಿಳಿಸಿದರು.

‘ಸರ್ಕಾರಿ ಪದವಿ, ಸ್ನಾತಕೋತ್ತರ, ಎಂಜನಿಯರಿಂಗ್, ಪಾಲಿಟೆಕ್ನಿಕ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಈ ಯೋಜನೆಯ ಫಲಾನುಭವಿಗಳು. ಕೇಂದ್ರ ಆಡಳಿತ ಸೇವೆ, ಬ್ಯಾಂಕಿಂಗ್, ಗ್ರೂಪ್ ‘ಸಿ’ ಸೇರಿದಂತೆ ವಿವಿಧ ವಲಯಗಳಲ್ಲಿ 3 ಲಕ್ಷಕ್ಕೂ ಹೆಚ್ಚು ಉದ್ಯೋಗಾವಕಾಶಗಳಿಗೆ ಪ್ರತಿವರ್ಷ ಕೇಂದ್ರ ಸರ್ಕಾರ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ ಆಯ್ಕೆ ಮಾಡುತ್ತಿದೆ. ಆದರೆ, ಈ ಆಯ್ಕೆಯಲ್ಲಿ ಕನ್ನಡಿಗ ವಿದ್ಯಾರ್ಥಿಗಳು ಹಿಂದೆಬೀಳುತ್ತಿದ್ದಾರೆ. ಅದನ್ನು ಸರಿಪಡಿಸುವ ಉದ್ದೇಶದಿಂದ ಅನ್ ಅಕಾಡೆಮಿ ಜತೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ’ ಎಂದೂ ಅವರು ವಿವರಿಸಿದರು.

ಶಶಿಧರ ಭಟ್‌ಗೆ ‘ಹರ್ಮನ್ ಮೊಗ್ಲಿಂಗ್’ ಪುರಸ್ಕಾರ

ಕಾರವಾರ: ಕರ್ನಾಟಕ ಜರ್ನಲಿಸ್ಟ್ ಯೂನಿಯನ್‌ನ ಉತ್ತರ ಕನ್ನಡ ಜಿಲ್ಲಾ ಘಟಕ ಪ್ರದಾನ ಮಾಡುವ ‘ಹರ್ಮನ್ ಮೊಗ್ಲಿಂಗ್ 2021’ರ ರಾಜ್ಯ ಮಟ್ಟದ ಪುರಸ್ಕಾರಕ್ಕೆ ಪತ್ರಕರ್ತ ಶಶಿಧರ ಭಟ್ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ₹ 10 ಸಾವಿರ ನಗದು, ಪ್ರಶಸ್ತಿ ಪತ್ರ, ಸ್ಮರಣಿಕೆ ಮತ್ತು ಸನ್ಮಾನವನ್ನು ಒಳಗೊಂಡಿದೆ.



ಶಶಿಧರ ಭಟ್

ಭಟ್ಕಳದ ನ್ಯೂ ಇಂಗ್ಲಿಷ್ ಸ್ಕೂಲ್‌ನ ದಿವಂಗತ ಕಮಲಾವತಿ ರಾಮನಾಥ್ ಶಾನಭಾಗ ಸಭಾಭವನದಲ್ಲಿ ಜುಲೈ 31ರಂದು ಮಧ್ಯಾಹ್ನ 3ಕ್ಕೆ ನಡೆಯಲಿರುವ ಪತ್ರಿಕಾ ದಿನಾಚರಣೆ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಯೂನಿಯನ್ ಜಿಲ್ಲಾ ಘಟಕದ ಅಧ್ಯಕ್ಷ ಮನಮೋಹನ್ ನಾಯ್ಕ ಹಾಗೂ ಪ್ರಧಾನ ಕಾರ್ಯದರ್ಶಿ ಸುಬ್ರಹ್ಮಣ್ಯ ಭಟ್ ದಾಸನಕೂಡಿಗೆ ತಿಳಿಸಿದ್ದಾರೆ.

ಸಿದ್ದಾಪುರದ ಶಶಿಧರ ಭಟ್ ಅವರು, ಬೆಂಗಳೂರನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡಿದ್ದಾರೆ. 35 ವರ್ಷಕ್ಕೂ ಅಧಿಕ ಕಾಲದಿಂದ ವಿವಿಧ ಮುದ್ರಣ ಮತ್ತು ದೃಶ್ಯ ಮಾಧ್ಯಮಗಳಲ್ಲಿ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಿದ್ದಾರೆ.

ಡಿಪ್ಲೊಮಾ ಪರೀಕ್ಷೆ ನಡೆಸದಂತೆ ಪ್ರಾಂಶುಪಾಲರಿಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಾಂತ್ರಿಕ ಶಿಕ್ಷಣ ನಿರ್ದೇಶನಾಲಯವು (ಡಿಟಿಎ) ಇದೇ 28ರಿಂದ ನಿಗದಿಪಡಿಸಿರುವ ಡಿಪ್ಲೊಮಾ ಪರೀಕ್ಷೆಗಳನ್ನು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕೂಡಲೇ ರದ್ದು ಮಾಡಬೇಕು ಎಂದು ಒತ್ತಾಯಿಸಿ ಡಿಪ್ಲೊಮಾ ಕಾಲೇಜುಗಳ ಪ್ರಾಂಶುಪಾಲರಿಗೆ ವಿದ್ಯಾರ್ಥಿಗಳು ಗುರುವಾರ ಮನವಿ ಸಲ್ಲಿಸಿದರು.

ಪರೀಕ್ಷೆ ರದ್ದು ಮಾಡುವಂತೆ ಡಿಪ್ಲೊಮಾ ವಿದ್ಯಾರ್ಥಿಗಳು ರಾಜ್ಯದಾದ್ಯಂತ ಪ್ರತಿಭಟನೆ ನಡೆಸುತ್ತಿದ್ದು, ಅದರ ಭಾಗವಾಗಿ ನಗರದ ಶ್ರೀಜಯಚಾಮರಾಜೇಂದ್ರ ಪಾಲಿಟೆಕ್ನಿಕ್ (ಎಸ್‌ಜೆಪಿ), ಆಚಾರ್ಯ ಪಾಠಶಾಲಾ ಪಾಲಿಟೆಕ್ನಿಕ್, ಪಿವಿಪಿ ಡಿಪ್ಲೊಮಾ ಕಾಲೇಜು, ಕೆ.ಎಸ್. ಪಾಲಿಟೆಕ್ನಿಕ್, ಜಾಲಪ್ಪ ಪಾಲಿಟೆಕ್ನಿಕ್, ಶಾಂತಿನಿಕೇತನ ಪಾಲಿಟೆಕ್ನಿಕ್, ಆಕ್ಸ್‌ಫರ್ಡ್ ಪಾಲಿಟೆಕ್ನಿಕ್ ಸೇರಿದಂತೆ ವಿವಿಧ ಡಿಪ್ಲೊಮಾ ಕಾಲೇಜುಗಳಲ್ಲಿ ಪ್ರಾಂಶುಪಾಲರಿಗೆ ಮನವಿ ಸಲ್ಲಿಸುವ ಮೂಲಕ ಪರೀಕ್ಷೆ ರದ್ದು ಮಾಡಲು ಆಗ್ರಹಿಸಿದರು.

‘ಡಿಟಿಇ ನಿರ್ಧಾರದಿಂದ ಡಿಪ್ಲೊಮಾ ವಿದ್ಯಾರ್ಥಿಗಳು ಆತಂಕಕ್ಕೆ ಒಳಗಾಗಿದ್ದಾರೆ. ಪ್ರಥಮ ಮತ್ತು ದ್ವಿತೀಯ ವರ್ಷದ ಡಿಪ್ಲೊಮಾ



ವಿಶ್ವಭಾರತಿ ಪದವಿ ಪೂರ್ವ ಕಾಲೇಜಿನ ಡಿಪ್ಲೊಮಾ ವಿದ್ಯಾರ್ಥಿಗಳು ಪ್ರಾಂಶುಪಾಲರಿಗೆ ಮನವಿ ಸಲ್ಲಿಸಿದರು.

ವಿದ್ಯಾರ್ಥಿಗಳು 18 ವರ್ಷದೊಳಗಿನವರಾಗಿದ್ದು, ಕೋವಿಡ್ ಲಸಿಕೆ ಪಡೆದಿಲ್ಲ. ಈ ಪರಿಸ್ಥಿತಿಯಲ್ಲಿ ಪರೀಕ್ಷೆ ನಿಗದಿ ಮಾಡಿರುವುದು ಅಘಾತಕಾರಿ’ ಎಂದು ವಿದ್ಯಾರ್ಥಿಗಳು ಬೇಸರ ವ್ಯಕ್ತಪಡಿಸಿದರು.

‘ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳು ಒಂದೇ ಸೆಮಿಸ್ಟರ್ ಪರೀಕ್ಷೆ ನಡೆಸುವುದಾಗಿ ಸುತ್ತೋಲೆ ಹೊರಡಿಸಿವೆ. ಆದರೆ, ಬೆಂಗಳೂರು ವಿಶ್ವವಿದ್ಯಾಲಯ ಎರಡೂ ಸೆಮಿಸ್ಟರ್ ಪರೀಕ್ಷೆ ನಡೆಸುವ ಮೂಲಕ ತಾರತಮ್ಯ ಮಾಡುತ್ತಿದೆ’ ಎಂದು ದೂರಿದರು.

ಎಐಡಿಎಸ್‌ಒ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕಲ್ಯಾಣ್ ಕುಮಾರ್, ‘ಒಂದು ತಿಂಗಳ ಅವಧಿಯಲ್ಲಿ ಎರಡು ಸೆಮಿಸ್ಟರ್ ಪರೀಕ್ಷೆ ನಡೆಸದೆ, ಒಂದೇ ಸೆಮಿಸ್ಟರ್‌ನ ಪರೀಕ್ಷೆ ನಡೆಸಬೇಕು. ಪಿಯುಸಿ ಪರೀಕ್ಷೆಯಂತೆ ಡಿಪ್ಲೊಮಾ ಸೆಮಿಸ್ಟರ್ ಪರೀಕ್ಷೆ ರದ್ದುಗೊಳಿಸಬೇಕು. ಆಂತರಿಕ ಮೌಲ್ಯಮಾಪನ ಅಥವಾ ವೈಜ್ಞಾನಿಕ ಮಾನದಂಡದ ಮೌಲ್ಯಮಾಪನ ನಡೆಸಬೇಕು. ಎಲ್ಲ ವಿದ್ಯಾರ್ಥಿಗಳು ಲಸಿಕೆ ಪಡೆದ ನಂತರ ಭೌತಿಕ ತರಗತಿಗಳನ್ನು ಆರಂಭಿಸಬೇಕು. ಈ ಸಂಬಂಧ ಯುಜಿಸಿ ಮಾರ್ಗಸೂಚಿಯನ್ನು ಡಿಟಿಇ ಮತ್ತು ವಿಶ್ವವಿದ್ಯಾಲಯಗಳು ಪಾಲಿಸಬೇಕು’ ಎಂದು ಆಗ್ರಹಿಸಿದರು.

ಪೆಗಾಸಸ್: ಅನಿಲ್ ಅಂಬಾನಿ ಮೇಲೂ ನಿಗಾ–ವರದಿ

ನವದೆಹಲಿ (ಪಿಟಿಐ): ಪೆಗಾಸಸ್ ಗೂಢಚರ್ಯೆಯ ಸಂಭಾವ್ಯ ಗುರಿಗಳಲ್ಲಿ ಕೈಗಾರಿಕೋದ್ಯಮಿ ಅನಿಲ್ ಅಂಬಾನಿ ಮತ್ತು ಎಡಿಎ ಗ್ರೂಪ್‌ನ ಹಿರಿಯ ಅಧಿಕಾರಿ ಸೇರಿದ್ದಾರೆ ಎಂದು ಗುರುವಾರ ‘ದಿ ವೈರ್’ ವರದಿ ಮಾಡಿದೆ.

ಅನಿಲ್ ಅಂಬಾನಿ ಮತ್ತು ಅನಿಲ್ ಧೀರೂಭಾಯ್ ಅಂಬಾನಿ ಸಮೂಹದ (ಎಡಿಎಜಿ) ಇನ್ನೊಬ್ಬ ಅಧಿಕಾರಿ ಬಳಸಿದ ಫೋನ್ ಸಂಖ್ಯೆಗಳು ಸೋರಿಕೆಯಾದ ಪಟ್ಟಿಯಲ್ಲಿವೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಅಂಬಾನಿ ಅವರ ಹೊರತಾಗಿ, ಕಾರ್ಪೊರೇಟ್ ಸಂವಹನ ಮುಖ್ಯಸ್ಥ ಟೋನಿ ಜೇಸುದಾಸನ್ ಮತ್ತು ಜೇಸುದಾಸನ್ ಅವರ ಪತ್ನಿ ಈ ಪಟ್ಟಿಯಲ್ಲಿ ಕಾಣಿಸಿಕೊಂಡಿರುವ ಕಂಪನಿಯ ಇತರ ಅಧಿಕಾರಿಗಳಾಗಿದ್ದಾರೆ ಎಂದು ವರದಿ ಹೇಳಿದೆ. ಅನಿಲ್ ಅಂಬಾನಿ ಅವರು ಅದೇ ಸಂಖ್ಯೆಯನ್ನು ಈಗಲೂ ಬಳಸುತ್ತಿದ್ದಾರೆಯೇ ಎಂಬುದು ಖಚಿತವಾಗಿಲ್ಲ ಎಂದು ವರದಿ ತಿಳಿಸಿದೆ.



ವೈದ್ಯಕೀಯ ಸುರಕ್ಷಾ ಕಿಟ್ ವಿತರಣೆ

ಕೋಣನಕುಂಟೆಯ ಬೀರೇಶ್ವರನಗರದಲ್ಲಿ ಇಂಟಕ್ ಘಟಕ ಹಾಗೂ ಸಿ.ಮುತ್ಯಾಲಮ್ಮ ಕರ್ನಾಟಕ ಕಟ್ಟಡ ಇತರೆ ಕಾರ್ಮಿಕರ ಸಂಘದ ಸಹಯೋಗದಲ್ಲಿ ಕಟ್ಟಡ ಮತ್ತು ಕೂಲಿ ಕಾರ್ಮಿಕರಿಗೆ ವೈದ್ಯಕೀಯ ಸುರಕ್ಷಾ ಕಿಟ್‌ಗಳನ್ನು ವಿತರಿಸಲಾಯಿತು. ಗೊಟ್ಟಿಗೆರೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಧರ್ ಲಕ್ಷ್ಮಣ್, ಮುಖಂಡರಾದ ಶಾಮಣ್ಣ ರೆಡ್ಡಿ, ಮುಗಿಲೇಶ್ವರ್, ಮಂಜುನಾಥ್, ಪುರುಷೋತ್ತಮ್, ಸಂಜಯ್ ಅಗರ್ವಾಲ್, ಟ್ರಾವೆಲ್ಸ್ ಚಂದ್ರಣ್ಣ ಹಾಗೂ ಇತರರು ಇದ್ದರು

ಬೈಕ್ ಟ್ಯಾಕ್ಸಿಗೆ ಮೂರು ಕಂಪನಿಗಳ ಆಸಕ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ತಿಂಗಳಿಂದಲೇ ಬೈಕ್ ಟ್ಯಾಕ್ಸಿಗೆ ಪರವಾನಗಿ ನೀಡಲು ಸಾರಿಗೆ ಇಲಾಖೆ ಸಜ್ಜಾಗುತ್ತಿರುವ ನಡುವೆ, ಬೈಕ್ ಟ್ಯಾಕ್ಸಿ ಸೇವೆ ಒದಗಿಸಲು ರ‍್ಯಾಪಿಡೋ ಸೇರಿ ಮೂರು ಕಂಪನಿಗಳು ಇದಕ್ಕೆ ಆಸಕ್ತಿ ತೋರಿಸಿವೆ.

ಬೈಕ್ ಮಾಲೀಕರಿಗೆ ಸ್ವಯಂ ಉದ್ಯೋಗದ ಜತೆಗೆ ಮೊದಲ ಮತ್ತು ಕೊನೆಯ ತಾಣಕ್ಕೂ ಸಾರಿಗೆ ಸೇವೆ ಒದಗಿಸುವ ಉದ್ದೇಶದಿಂದ ಸರ್ಕಾರ ಕಳೆದ ವಾರ ಬೈಕ್ ಟ್ಯಾಕ್ಸಿ ಯೋಜನೆ ಘೋಷಿಸಿದೆ. 5 ಕಿಲೋ ಮೀಟರ್ ಮತ್ತು 10 ಕಿಲೋ ಮೀಟರ್‌ಗೆ ಪ್ರತ್ಯೇಕ ದರ ನಿಗದಿ ಮಾಡಿ ಬಳಿಕ ಪರವಾನಗಿ ನೀಡಲು ಸಾರಿಗೆ ಇಲಾಖೆ ಆಲೋಚಿಸಿದೆ.

ಎರಡೂ ಹಂತದ ದರಗಳನ್ನು ನಿಗದಿಪಡಿಸುವ ಕೆಲಸ ನಡೆಯುತ್ತಿದೆ. ಸ್ಪರ್ಧಾತ್ಮಕ ರಿಯಾಯಿತಿ ದರ ನಿಗದಿ ಮಾಡಿಕೊಳ್ಳಲು ಅವಕಾಶ ಕಲ್ಪಿಸುವ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಸಾರ್ವಜನಿಕರ ಹಿತಾಸಕ್ತಿಯನ್ನು ಮೊದಲ ಆದ್ಯತೆಯಾಗಿ ಪರಿಗಣಿಸಿ ದರ ನಿಗದಿ ಮಾಡಲಾಗುವುದು ಎಂದು ಹಿರಿಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಸದ್ಯಕ್ಕೆ ರ‍್ಯಾಪಿಡೋ ಮತ್ತು ಬೌನ್ಸ್ ಕಂಪನಿಗಳು ಆಸಕ್ತಿ ವ್ಯಕ್ತಪಡಿಸಿವೆ. ಮತ್ತೊಂದು ಕಂಪನಿ ವಿವರ ಕೋರಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ನವೋದ್ಯಮ ಕಂಪನಿಗಳು ಮುಂದೆ ಬರುವ ನಿರೀಕ್ಷೆ ಇದೆ ಎಂದು ಮೂಲಗಳು ವಿಶ್ವಾಸ ವ್ಯಕ್ತಪಡಿಸಿವೆ.


ಈ ನಡುವೆ, ಬೈಕ್ ಟ್ಯಾಕ್ಸಿಗೆ ನೀಡಿರುವ ಅನುಮತಿಯನ್ನು ಆಟೋರಿಕ್ಷಾ ಮತ್ತು ಟ್ಯಾಕ್ಸಿ ಚಾಲಕರು ವಿರೋಧಿಸಿದ್ದಾರೆ. ಲಕ್ಷಾಂತರ ರೂಪಾಯಿ ಬಂಡವಾಳ ಹೂಡಿ ಜೀವನ ಸಾಗಿಸುತ್ತಿರುವ ಟ್ಯಾಕ್ಸಿ ಮತ್ತು ಆಟೋರಿಕ್ಷಾ ಚಾಲಕರಿಗೆ ಅನ್ಯಾಯವಾಗಲಿದೆ ಎಂದು ಹೇಳಿದ್ದಾರೆ.

‘ಲಕ್ಷಾಂತರ ಚಾಲಕರನ್ನು ಇಕ್ಕಟ್ಟಿಗೆ ಸಿಲುಕಿಸಲಾಗುತ್ತಿದೆ. ಬೈಕ್ ಟ್ಯಾಕ್ಸಿಗೆ ನೀಡಿರುವ ಅನುಮತಿಯನ್ನು ಸರ್ಕಾರ ಹಿಂದಕ್ಕೆ ಪಡೆಯಬೇಕು. ಇಲ್ಲದಿದ್ದರೆ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಲಾಗುವುದು’ ಎಂದು ಟ್ಯಾಕ್ಸಿ ಮಾಲೀಕರ ಸಂಘದ ಅಧ್ಯಕ್ಷ ತನ್ವೀರ್ ಪಾಷಾ ತಿಳಿಸಿದರು.

‘ಕಾಲೇಜುಗಳಲ್ಲಿ ಪ್ರವೇಶಾವಕಾಶ ಹೆಚ್ಚಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಈ ಬಾರಿ 6.5 ಲಕ್ಷ ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು, ರಾಜ್ಯದ ಪದವಿ ಕಾಲೇಜುಗಳಲ್ಲಿ ಪ್ರವೇಶಾತಿ ಅವಕಾಶ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು’ ಎಂದು ರಾಜ್ಯ ಸರ್ಕಾರದ ಶೈಕ್ಷಣಿಕ ಸಲಹೆಗಾರ ಪ್ರೊ. ಎಂ.ಆರ್. ದೊರೆಸ್ವಾಮಿ ಸಲಹೆ ನೀಡಿದ್ದಾರೆ.



ಪ್ರೊ.ಎಂ.ಆರ್. ದೊರೆಸ್ವಾಮಿ

‘ತೇರ್ಗಡೆಯಾಗಿರುವ ಎಲ್ಲ ವಿದ್ಯಾರ್ಥಿಗಳಿಗೆ ರಾಜ್ಯದಲ್ಲಿರುವ ಪದವಿ ಕಾಲೇಜುಗಳಲ್ಲಿ ಪ್ರವೇಶಾತಿ ನೀಡಲು ಸದ್ಯಕ್ಕೆ ಅವಕಾಶಗಳಿಲ್ಲ. ಈ ಶೈಕ್ಷಣಿಕ ವರ್ಷಕ್ಕೆ ಸೀಮಿತವಾಗಿರುವಂತೆ ರಾಜ್ಯದಲ್ಲಿನ ಎಲ್ಲ ಸ್ವಾಯತ್ತ, ಸಂಯೋಜಿತ ಕಾಲೇಜುಗಳಲ್ಲಿ ಪ್ರಸ್ತುತ ಲಭ್ಯವಿರುವ ಎಲ್ಲ ಪದವಿ ಕೋರ್ಸ್‌ಗಳ ಪ್ರವೇಶಾತಿಗಾಗಿ ತಲಾ ಒಂದು ಹೆಚ್ಚುವರಿ ವಿಭಾಗ (ಸೆಕ್ಷನ್) ಪ್ರಾರಂಭಿಸಲು ಅನುಮತಿ ಕೊಡಬಹುದಾಗಿದೆ’ ಎಂದು ಅವರು ಶಿಫಾರಸು ಮಾಡಿದ್ದಾರೆ.

ಈ ಕುರಿತು ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಿಗೆ ಸೂಕ್ತ ನಿರ್ದೇಶನ ನೀಡಬೇಕು ಎಂದೂ ಅವರು ಸಲಹೆ ಮಾಡಿದ್ದಾರೆ.

ಕೂಡ್ಲಿ ಶೃಂಗೇರಿ ಮಠದಲ್ಲಿ ಗುರುವಂದನಾ ಕಾರ್ಯಕ್ರಮ

‘ಜನರು ಆಧ್ಯಾತ್ಮದಲ್ಲಿ ತೊಡಗಿಕೊಳ್ಳಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಂಕರಾಚಾರ್ಯರು ಧರ್ಮ ಜಾಗೃತಿಗಾಗಿ ದೇಶದ ನಾಲ್ಕು ದಿಕ್ಕುಗಳಲ್ಲೂ ಪೀಠಗಳನ್ನು ಸ್ಥಾಪಿಸಿದರು. ನಾವು ಧರ್ಮವನ್ನು ರಕ್ಷಿಸಿದರೆ, ಅದು ನಮ್ಮನ್ನು ಕಾಪಾಡುತ್ತದೆ. ಹೀಗಾಗಿ ಎಲ್ಲರೂ ಆಧ್ಯಾತ್ಮದತ್ತ ತಮ್ಮನ್ನು ತೊಡಗಿಸಿಕೊಳ್ಳಬೇಕು’ ಎಂದು ಚಾಮರಾಜಪೇಟೆಯ ಕೂಡ್ಲಿ ಶೃಂಗೇರಿ ಮಠದ ನೂತನ ಪೀಠಾಧಿಪತಿ ವಿದ್ಯಾವಿಶ್ವೇಶ್ವರ ಭಾರತೀ ಸ್ವಾಮೀಜಿ ಹೇಳಿದರು.

ಮಠದಲ್ಲಿ ನಡೆದ ಗುರುವಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಅದ್ವೈತ ಸಿದ್ಧಾಂತದ ಪ್ರತಿಪಾದಕ ಶಂಕರ ಭಗವತ್ಪಾದರ ಸಂದೇಶಗಳು ಸಾರ್ವಕಾಲಿಕ ಸತ್ಯವಾಗಿವೆ. ಅವರು ಜನಸಾಮಾನ್ಯರಿಗೋಸ್ಕರ ಸ್ತೋತ್ರಗಳನ್ನು ಬರೆದು ಎಲ್ಲರನ್ನೂ ಭಕ್ತಿರಸದಲ್ಲಿ ತೇಲಿಸಿದರು’ ಎಂದರು.



ಗುರುವಂದನಾ ಕಾರ್ಯಕ್ರಮದಲ್ಲಿ ವಿದ್ಯಾವಿಶ್ವೇಶ್ವರ ಭಾರತೀ ಸ್ವಾಮೀಜಿ ಆಶೀರ್ವಚನ ನೀಡಿದರು. ಸಚ್ಚಿದಾನಂದ ಭಾರತೀ ಸ್ವಾಮೀಜಿ ಇದ್ದರು

ವಾರಾಣಸಿಯ ಸಾಂಗವೇದ ವಿದ್ಯಾಲಯದ ಪ್ರಧಾನ ಅಧ್ಯಾಪಕ ಗಣೇಶ ದ್ರಾವಿಡ ಶಾಸ್ತ್ರಿ, ‘ವೇದಗಳು ದೇಶದ ಆತ್ಮವಾಗಿವೆ. ಇವುಗಳಲ್ಲಿ ಪ್ರಪಂಚದ ಸರ್ವ ಜ್ಞಾನ ಅಡಕವಾಗಿವೆ. ಭಾರತೀ ಸ್ವಾಮೀಜಿ ಅವರು ಕಿರಿಯ ವಯಸ್ಸಿನಲ್ಲೇ ಸನ್ಯಾಸ ದೀಕ್ಷೆ ಪಡೆದಿದ್ದು, ಇನ್ನೂ 50 ವರ್ಷ ಮಠವನ್ನು ಮುನ್ನಡೆಸಲಿ’ ಎಂದು ಹಾರೈಸಿದರು.

ಮಠದ ಆಡಳಿತ ಮಂಡಳಿ ಅಧ್ಯಕ್ಷ ರವಿ ದೇಶಪಾಂಡೆ, ‘ಇದೇ 24ರಿಂದ ನೂತನ ಶ್ರೀಗಳು ಮಠದಲ್ಲಿ ಚಾತುರ್ಮಾಸ್ಯ ವ್ರತ ಕೈಗೊಳ್ಳಲಿದ್ದಾರೆ’ ಎಂದರು.

ಸಂಕೇಶ್ವರ ಕರವೀರ ಪೀಠದ ಸಚ್ಚಿದಾನಂದ ಭಾರತೀ ಸ್ವಾಮೀಜಿ, ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಸಚ್ಚಿದಾನಂದ ಮೂರ್ತಿ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ದೇವನಾಥನ್, ವೇದ ವಿದ್ವಾಂಸ ಭಾನುಪ್ರಕಾಶ ಶರ್ಮಾ ಇದ್ದರು.

ಯುವ ವೈದ್ಯನಿಗೆ ಅಬುಧಾಬಿಯಲ್ಲಿ ವಾರ್ಷಿಕ ₹ 1 ಕೋಟಿಯ ಉದ್ಯೋಗ

ಬೆಂಗಳೂರು: ರಾಜ್ಯದಲ್ಲಿ ಹೊಸದಾಗಿ ಆರಂಭಿಸಿರುವ ಅಂತರರಾಷ್ಟ್ರೀಯ ವಲಸೆ ಕೇಂದ್ರದ ಮೂಲಕ ರಾಜ್ಯದ ಯುವ ತಜ್ಞ ವೈದ್ಯರೊಬ್ಬರಿಗೆ ಅಬುಧಾಬಿಯಲ್ಲಿ ವರ್ಷಕ್ಕೆ 1 ಕೋಟಿ ಪ್ಯಾಕೇಜ್‌ನ ಉದ್ಯೋಗ ಸಿಕ್ಕಿದೆ.

ಯುಎಇಯಲ್ಲಿರುವ ಪ್ರತಿಷ್ಠಿತ ರೆಸ್ಪಾನ್ಸ್ ಪ್ಲಸ್ ಮೆಡಿಕಲ್ ಆಸ್ಪತ್ರೆ, ವಿಶೇಷ ತಜ್ಞ ವೈದ್ಯರ ಹುದ್ದೆಗೆ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿಯ ನಿವಾಸಿ ಶ್ವಾಸಕೋಶ ತಜ್ಞ ಗಂಗಿರೆಡ್ಡಿ ಅವರನ್ನು ನೇಮಿಸಿಕೊಂಡಿದೆ.

ಈ ಬಗ್ಗೆ ಮಾಹಿತಿ ನೀಡಿದ ಕೌಶಲಾಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ, ‘ಉದ್ಯೋಗಕ್ಕೆ ಸಂಬಂಧಿಸಿದ ಎಲ್ಲ ದಾಖಲೆ ಪತ್ರಗಳನ್ನು ಇಲಾಖೆಯ ಕಾರ್ಯದರ್ಶಿ ಸೆಲ್ವಕುಮಾರ್ ಅವರಿಂದ ಗಂಗಿರೆಡ್ಡಿ ಪಡೆದುಕೊಂಡಿದ್ದಾರೆ. ರೆಡ್ಡಿ ಅವರಿಂದ ವೀಸಾ, ವಿಮಾನ ಪ್ರಯಾಣ, ವಿಮೆ, ವಸತಿ ಇತ್ಯಾದಿಗಳ ಯಾವುದೇ ಸೇವಾ ಶುಲ್ಕ ಪಡೆಯದೆ ಎಲ್ಲ ಪ್ರಕ್ರಿಯೆ ಮುಗಿಸಿಕೊಡಲಾಗಿದೆ’ ಎಂದರು.



ಉದ್ಯೋಗಕ್ಕೆ ಸಂಬಂಧಿಸಿದ ದಾಖಲೆಗಳನ್ನು ಕೌಶಲಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಸೆಲ್ವಕುಮಾರ್ (ಮಧ್ಯದಲ್ಲಿ) ಅವರಿಂದ ಡಾ. ಗಂಗಿರೆಡ್ಡಿ ಪಡೆದುಕೊಂಡರು. ಕೌಶಲಾಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಶ್ವಿನ್ ಗೌಡ ಇದ್ದರು

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಸಚಿವ ಡಾ. ಕೆ. ಸುಧಾಕರ್ ಹೇಳಿಕೆ

'ಮಕ್ಕಳ ಪೋಷಕರಿಗೆ, ಕುಟುಂಬದವರಿಗೆ ಲಸಿಕೆ ನೀಡಲಾಗಿದೆ. ಇನ್ನೂ ಕೆಲವು ದಿನಗಳಲ್ಲಿ ಲಸಿಕೆ ಪಡೆದವರ ಸಂಖ್ಯೆ 3 ಕೋಟಿಗೆ ತಲುಪಲಿದೆ' ಎಂದರು.

'ಮಕ್ಕಳ ಸುರಕ್ಷತೆಗಾಗಿ ಶಾಲಾ ಸಿಬ್ಬಂದಿಗೆ ಲಸಿಕೆ'

ಬೆಂಗಳೂರು: 'ಶಾಲೆಗಳನ್ನು ಯಾವುದೋ ಒಂದು ದಿನ ಆರಂಭಿಸಲೇಬೇಕು. ಅದಕ್ಕೆ ಸಿದ್ಧತೆಯಾಗಿ ಶಾಲೆಗಳ ಸಿಬ್ಬಂದಿಗೆ ಆದ್ಯತೆಯಲ್ಲಿ ಕೋವಿಡ್ ಲಸಿಕೆ ನೀಡಲಾಗುವುದು' ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ. ಸುಧಾಕರ್ ತಿಳಿಸಿದರು.



ಸುದ್ದಿಗಾರರೊಂದಿಗೆ ಗುರುವಾರ ಮಾತನಾಡಿದ ಅವರು, 'ಮಕ್ಕಳು ಯಾವಾಗಲೂ ಆನ್‌ಲೈನ್ ತರಗತಿಯ ಮುಂದೆ ಕುಳಿತು ಕೊಳ್ಳಲು ಸಾಧ್ಯವಿಲ್ಲ. ಆನ್‌ಲೈನ್ ಮಕ್ಕಳ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುವ ಅಪಾಯವಿದೆ. ಆದ್ದರಿಂದ, ಎಲ್ಲವನ್ನೂ ಅಳೆದು ತೂಗಿ, ಪರಿಣಿತರ ಅಭಿಪ್ರಾಯ, ಸಲಹೆ ಪಡೆದು ಶಾಲೆಗಳನ್ನು ಆರಂಭಿಸುವ ಬಗ್ಗೆ ತೀರ್ಮಾನಿಸಲಾಗುವುದು' ಎಂದರು.

'ಶಾಲೆಗಳ ಸಿಬ್ಬಂದಿ ವರ್ಗವನ್ನು ವಿಶೇಷ ಗುಂಪಾಗಿ ಪರಿಗಣಿಸಿ ಆದ್ಯತೆಯಲ್ಲಿ ಲಸಿಕೆ ನೀಡಿಕೆ ಆರಂಭಿಸಲಾಗುವುದು' ಎಂದರು.

'ವೈದ್ಯಕೀಯ ಶಿಕ್ಷಣ ಕಾಲೇಜುಗಳನ್ನು ಆರಂಭಿಸಲು ಅವಕಾಶ ನೀಡಲಾಗಿದೆ. ಅಲ್ಲದೆ, ಉನ್ನತ ಶಿಕ್ಷಣದ ಕಾಲೇಜುಗಳನ್ನೂ ಆರಂಭಿಸಲು ತೀರ್ಮಾನಿಸಲಾಗಿದೆ. ಮುಖ್ಯಮಂತ್ರಿ ಜೊತೆ ಚರ್ಚಿಸಿ ಈ ಬಗ್ಗೆ ಅಂತಿಮವಾಗಿ ನಿರ್ಧರಿಸಲಾಗುವುದು' ಎಂದರು.

'ಪ್ರತಿದಿನ ರಾಜ್ಯದ ಒಟ್ಟು ಪ್ರಕರಣಗಳಲ್ಲಿ ಶೇ 5 ರಷ್ಟನ್ನು ಹೊಸ ವೈರಾಣು ಅಧ್ಯಯನಕ್ಕೆ ಒಳಪಡಿಸಿ ಪರೀಕ್ಷಿಸಲಾಗುತ್ತಿದೆ. ಈ ಮಾಹಿತಿಯನ್ನು ಐಸಿಎಂಆರ್ ಜೊತೆ ಹಂಚಿಕೊಳ್ಳಲಾಗುತ್ತಿದೆ. ವೈಜ್ಞಾನಿಕ ನೆಲೆಗಟ್ಟಿನಲ್ಲಿ ಮಾಹಿತಿ ಸಂಗ್ರಹಿಸಲಾಗುತ್ತಿದೆ' ಎಂದರು.

ನಾಡಪ್ರಭು ಕೆಂಪೇಗೌಡ ಬಡಾವಣೆಯ ಮಾದರಿ– ಮೂಲಸೌಕರ್ಯ ವಂಚಿತ ನಿವೇಶನದಾರರ ಪ್ರಶ್ನೆ

ಅರ್ಕಾವತಿ ಬಡಾವಣೆಗೆ ಏಕಿಲ್ಲ ತೆರಿಗೆ ವಿನಾಯಿತಿ?

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆಗೆ ಮೂಲಸೌಕರ್ಯ ಕಲ್ಪಿಸುವ ಕಾರ್ಯ ಇನ್ನೂ ಪೂರ್ಣಗೊಳ್ಳದ ಕಾರಣ ಇಲ್ಲಿನ ನಿವೇಶನದಾರರಿಗೆ ಆಸ್ತಿ ತೆರಿಗೆಯಿಂದ ವಿನಾಯಿತಿ ನೀಡುವುದಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ಭರವಸೆ ನೀಡಿದ್ದಾರೆ. ಇದರ ಬೆನ್ನಲ್ಲೇ ಅರ್ಕಾವತಿ ಬಡಾವಣೆಯ ನಿವೇಶನದಾರರೂ ತೆರಿಗೆ ವಿನಾಯಿತಿಗೆ ಬೇಡಿಕೆ ಇಟ್ಟಿದ್ದಾರೆ.

'ನಾಡಪ್ರಭು ಕೆಂಪೇಗೌಡ ಬಡಾವಣೆಯ ರೀತಿಯಲ್ಲೇ ನಮ್ಮ ಬಡಾವಣೆಗೂ ಈಗಲೂ ಸರಿಯಾದ ರಸ್ತೆ ಇಲ್ಲ, ಕುಡಿಯುವ ನೀರಿನ ಸೌಕರ್ಯ ಇಲ್ಲ. ಹಾಗಾಗಿ ಇಲ್ಲಿ ನಿವೇಶನ ಹಂಚಿಕೆಯಾಗಿರುವವರೂ ಮನೆ ನಿರ್ಮಿಸಿಕೊಳ್ಳುವ ಪರಿಸ್ಥಿತಿಯಲ್ಲಿಲ್ಲ. ಬಿಡಿಎ ಈ ಬಡಾವಣೆಯನ್ನು ನಿರ್ವಹಣೆಯೇ ಮಾಡದ ಮೇಲೆ ನಮ್ಮಿಂದ ಆಸ್ತಿ ತೆರಿಗೆ ಕಟ್ಟಿಸಿಕೊಳ್ಳುವುದು ಎಷ್ಟು ಸರಿ' ಎಂಬುದು ಅರ್ಕಾವತಿ ಬಡಾವಣೆಯ ನಿವೇಶನದಾರರ ಪ್ರಶ್ನೆ. 'ಕೆಂಪೇಗೌಡ ಬಡಾವಣೆಯ ನಿವೇಶನದಾರರಿಗೆ ತೆರಿಗೆಯಲ್ಲಿ ವಿನಾಯಿತಿ ನೀಡಿದ ಆಧಾರದಲ್ಲೇ ನಮಗೂ ವಿನಾಯಿತಿ ನೀಡಬೇಕು' ಎಂದು ಒತ್ತಾಯಿಸಿದ್ದಾರೆ.



ಅರ್ಕಾವತಿ ಬಡಾವಣೆಯ 20ನೇ ಬ್ಲಾಕ್ ಬಳಿ ನಿವೇಶನದಲ್ಲಿ ಕಟ್ಟಡ ತ್ಯಾಜ್ಯ ಸುರಿದಿರುವುದು

ಪ್ರಜಾವಾಣಿ ವಿಶೇಷ

ಅರ್ಕಾವತಿ ಬಡಾವಣೆಗೆ ಮೂಲಸೌಕರ್ಯ ಅಭಿವೃದ್ಧಿಗೆ ₹ 200 ಕೋಟಿ ಬಿಡುಗಡೆ ಮಾಡಿ ಎರಡು ವರ್ಷಗಳು ಕಳೆದಿವೆ. ಆದರೆ, ಮೂಲಸೌಕರ್ಯ ಕಲ್ಪಿಸುವ ಕಾರ್ಯ ಇನ್ನೂ ಪ್ರಗತಿ ಕಂಡಿಲ್ಲ ಎಂಬುದು ಇಲ್ಲಿನ ನಿವೇಶನದಾರರ ದೂರು.

'ಅರ್ಕಾವತಿ ಬಡಾವಣೆಯ ನಾಲ್ಕನೇ ಬ್ಲಾಕ್‌ನಲ್ಲಿ ನನಗೆ ನಿವೇಶನ ಹಂಚಿಕೆಯಾಗಿತ್ತು. ಡಿನೋಟಿಫಿಕೇಷನ್ ಕಾರಣಕ್ಕೆ ಆ ನಿವೇಶನವನ್ನು ಹಿಂಪಡೆದ ಬಿಡಿಎ ಥಣಿಸಂದ್ರ ಬಳಿ ಬದಲಿ ನಿವೇಶನವನ್ನು 2016ರಲ್ಲಿ ನೀಡಿದೆ. ಅದರ ನೋಂದಣಿಯೂ ಆಗಿದೆ. ಇದುವರೆಗೂ ನನ್ನ ನಿವೇಶನ ಎಲ್ಲಿದೆ ಎಂಬುದೇ ನನಗೆ ತಿಳಿದಿಲ್ಲ. ಬಡಾವಣೆಯ ಕೆಲವು ಬ್ಲಾಕ್‌ಗಳಲ್ಲಿ ನಿವೇಶನಗಳಿಗೆ ಇನ್ನೂ ಗುರುತಿನ ಸಂಖ್ಯೆ ಹಾಕಿಲ್ಲ. ಗಡಿ ಗುರುತುಗಳನ್ನೂ ಮಾಡಿಲ್ಲ. ಇಲ್ಲಿಗೆ ರಸ್ತೆ ಸಂಪರ್ಕ ಇಲ್ಲ. ಹೆಣ್ಣೂರು ಕ್ರಾಸ್ ಕಡೆಯಿಂದ ಮಣ್ಣಿನ ರಸ್ತೆ ಮಾತ್ರ ಇದೆ' ಎನ್ನುತ್ತಾರೆ ನಿವೇಶನದಾರ ಕೆ.ವಿ. ರಮೇಶ್.

ತೆರಿಗೆಯೂ ದುಬಾರಿ

'ಈ ಆರ್ಥಿಕ ವರ್ಷದಿಂದ ಬಿಡಿಎ ಆಸ್ತಿ ತೆರಿಗೆಯನ್ನೂ ಪರಿಷ್ಕರಿಸಿದೆ. ನಾನು ಕಳೆದ ವರ್ಷಕ್ಕಿಂತ ₹ 1,500 ಹೆಚ್ಚು ಮೊತ್ತವನ್ನು ಪಾವತಿಸಬೇಕಾಗಿದೆ. ಈ ಬಡಾವಣೆಯಲ್ಲಿ ನಿವೇಶನ ಹೊಂದಿರುವವರಲ್ಲಿ ಹೆಚ್ಚಿನವರು ಹಿರಿಯ ನಾಗರಿಕರು. ಅವರು ಯಾವ ಸೌಕರ್ಯವೂ ಇಲ್ಲದ ತಮ್ಮ ನಿವೇಶನಕ್ಕೆ ಇಷ್ಟೊಂದು ದುಬಾರಿ ತೆರಿಗೆ ಕಟ್ಟುವುದಾದರೂ ಹೇಗೆ' ಎಂದು ಕೆ.ವಿ.ರಮೇಶ್ ಪ್ರಶ್ನಿಸಿದರು.

'ಕೆಂಪೇಗೌಡ ಬಡಾವಣೆಯ ನಿವೇಶನದಾರರಿಗೆ ತೆರಿಗೆ ವಿನಾಯಿತಿ ಪಡೆಯಲು ಅರ್ಹರೆಂದಾದರೆ, ಈ ಸೌಲಭ್ಯವನ್ನೂ ನಮಗೂ ವಿಸ್ತರಿಸಬೇಕಲ್ಲವೇ' ಎಂದು ಅವರು ಪ್ರಶ್ನಿಸಿದರು.

'ಬಡಾವಣೆಯ 20ನೇ ಬ್ಲಾಕ್‌ನಲ್ಲಿ ನನಗೆ 30X40 ಚದರ ಅಡಿಯ ನಿವೇಶನ ಹಂಚಿಕೆ ಮಾಡಿದ್ದಾರೆ. ಸಾರಾಯಿಪಾಳ್ಯದ ಸಮೀಪದಲ್ಲಿರುವ ಈ ಪ್ರದೇಶದಲ್ಲಿರುವ ಈ ನಿವೇಶನವನ್ನು ನಿರ್ದಿಷ್ಟವಾಗಿ ಗುರುತಿಸಲು ಸಾಧ್ಯವೇ ಇಲ್ಲ. ಈ ಬ್ಲಾಕ್‌ನ ಕಚ್ಚಾ ರಸ್ತೆ ಮೇಲೆಯೇ ಕಟ್ಟಡ ತ್ಯಾಜ್ಯ ಸುರಿಸಿದ್ದಾರೆ. ಈಗ ಸಂಪರ್ಕವೂ ಸಾಧ್ಯವಾಗದು. ಬಿಡಿಎ ನಮ್ಮಿಂದ ತೆರಿಗೆ ಕಟ್ಟಿಸಿಕೊಳ್ಳುವುದು ನಿವೇಶನಗಳ ನಿರ್ವಹಣೆಗಾಗಿ. ಬಡಾವಣೆಯನ್ನು ಸಮರ್ಪಕವಾಗಿ ನಿರ್ವಹಣೆಯೇ ಮಾಡದ ಮೇಲೆ ನಾವು ತೆರಿಗೆಯನ್ನೇಕೆ ಕಟ್ಟಬೇಕು' ಎಂಬುದು ನಿವೇಶನದಾರ ವಿ.ನಾರಾಯಣ್ ಅವರ ವಾದ.

'ನನಗೆ 2006ರಲ್ಲೇ ನಿವೇಶನ ಹಂಚಿಕೆ ಆಗಿತ್ತು. ನನ್ನ ಗಮನಕ್ಕೆ ತಾರದೆಯೇ, ಕನಿಷ್ಠ ಒಂದು ನೋಟಿಸ್ ಕೂಡಾ ನೀಡದೆಯೇ ಆ ಹಂಚಿಕೆಯನ್ನು ರದ್ದುಪಡಿಸಿ ಬದಲಿ ನಿವೇಶನ ನೀಡಿದರು. 15 ವರ್ಷಗಳಿಂದ ತೆರಿಗೆಯನ್ನು ಚಾಚೂ ತಪ್ಪದೇ ಪಾವತಿಸುತ್ತಿದ್ದೇನೆ. ಇಷ್ಟು ವರ್ಷ ಕಾದ ಬಳಿಕವೂ ನನಗೆ ಸಂಪೂರ್ಣ ಸೌಕರ್ಯವಿರುವ ನಿವೇಶನವನ್ನು ಬಿಡಿಎ ಒದಗಿಸಿಲ್ಲ. ಹಾಗಾಗಿ ನಮ್ಮಿಂದ ತೆರಿಗೆ ವಸೂಲಿ ಮಾಡುವುದನ್ನಾದರೂ ಪ್ರಾಧಿಕಾರವು ನಿಲ್ಲಿಸಬೇಕು' ಎಂದು ಅವರು ಒತ್ತಾಯಿಸಿದರು.

'ನನಗೆ ಈಗ 75 ವರ್ಷ. ನನ್ನ ಆಯಸ್ಸಿನ ಐದನೇ ಒಂದು ಭಾಗ ಬಿಡಿಎ ನಿವೇಶನ ಪಡೆಯುವ ಓಡಾಟದಲ್ಲೇ ಕಳೆದಿದೆ. ಹೈಕೋರ್ಟ್ ಆದೇಶದ ಮೇರೆಗೆ ಬಿಡಿಎ ನನಗೆ ಕೊನೆಯದಾಗಿ 2018ರಲ್ಲಿ ನಿವೇಶನ ಹಂಚಿಕೆ ಮಾಡಿದೆ. ಆದರೆ, ತೆರಿಗೆಯನ್ನು 2006ರಿಂದಲೂ ಕಟ್ಟಿಸಿಕೊಳ್ಳಲಾಗುತ್ತಿದೆ. ನಿವೇಶನವಿರುವ ಜಾಗಕ್ಕೆ ಮೊನ್ನೆ ಹೋಗಿ ನೋಡಿದೆ. ಆ ಪ್ರದೇಶವು ಕುರುಚಲು ಕಾಡಿನಂತಾಗಿದೆ. ನಿವೇಶನಗಳು ಮೂಲಸೌಕರ್ಯಗಳಿಂದ ವಂಚಿತವಾಗಿರುವ ಬಗ್ಗೆ ಬಿಡಿಎ ಅಧ್ಯಕ್ಷ ಎಸ್.ಆರ್.ವಿಶ್ವನಾಥ್ ಅವರಿಗೆ 2021ರ ಜನವರಿಯಲ್ಲೇ ಮನವಿ ಪತ್ರವನ್ನೂ ನೀಡಿದ್ದೇವೆ. ಈಗಲೂ ಪರಿಸ್ಥಿತಿ ಸುಧಾರಿಸಿಲ್ಲ' ಎಂದು ನಿವೇಶನದಾರ ಪಿ. ಗೋಪಾಲಯ್ಯ ಬೇಸರ ತೋಡಿಕೊಂಡರು.

ರಾಜ್ಯ ಕೋವಿಡ್ ಅಂಕಿ–ಅಂಶ

28,89,994 ▲	ಒಟ್ಟು ಸೋಂಕಿತರು (28,88,341 ನಿನ್ನೆಯ ವಿವರ)
24,695 ▲	ಸಕ್ರಿಯ ಪ್ರಕರಣಗಳು
28,28,983 ▲	ಗುಣಮುಖರಾದವರು
36,293 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,653	▲
ಗುಣಮುಖ	2,572	▲
ಸಾವು	31	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,23,644 ಒಟ್ಟು ಸೋಂಕಿತರು ▲

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
8,748 ▼	11,99,078 ▲	15,818 ▲

ದಿನದ ಏರಿಕೆ

ಹೊಸ ಪ್ರಕರಣ	418 ▼
ಗುಣಮುಖ	1,162 ▲
ಸಾವು	3 ▼

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್: ಪ್ರಕರಣ ಏರಿಕೆ–ಸಾವು ಇಳಿಕೆ


ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಸತತ ಮೂರನೇ ದಿನವೂ ಏರಿಕೆಯ ಹಾದಿಯಲ್ಲಿಯೇ ಇವೆ. ಸೋಂಕಿತರ ಸಾವಿನ ಪ್ರಮಾಣ ತಗ್ಗಿದೆ.

ಹೊಸದಾಗಿ 1,653 ಮಂದಿಗೆ ಸೋಂಕು ತಗುಲಿರುವುದು ಗುರುವಾರ ದೃಢಪಟ್ಟಿದೆ. 31 ಸೋಂಕಿತರು ಸಾವಿಗೀಡಾಗಿದ್ದಾರೆ. ಕೋವಿಡ್ ದೃಢಪ್ರಮಾಣ ಮಾತ್ರ ಶೇ 1ರ ಆಸುಪಾಸಿನಲ್ಲಿಯೇ ಇದೆ.

2,572 ಮಂದಿ ಗುಣಮುಖರಾಗಿದ್ದಾರೆ. ಬುಧವಾರಕ್ಕೆ ಹೋಲಿಸಿದರೆ ಸೋಂಕು ಪರೀಕ್ಷೆಗಳು 12 ಸಾವಿರ (1.40 ಲಕ್ಷಕ್ಕೆ) ಕಡಿಮೆಯಾಗಿವೆ. ಹೊಸ ಪ್ರಕರಣಗಳು 16 ಹೆಚ್ಚಳವಾಗಿದ್ದು, ಸೋಂಕಿತರ ಸಾವು 5 ಕಡಿಮೆಯಾಗಿವೆ.

ಸೋಮವಾರ 1,229, ಮಂಗಳವಾರ 1,464 ಹೊಸ ಪ್ರಕರಣಗಳು ವರದಿಯಾಗಿದ್ದರೆ, ಬುಧವಾರ 1,639ಕ್ಕೆ ಏರಿಕೆಯಾಗಿತ್ತು. ಮಂಗಳವಾರ 30ರ ಆಸುಪಾಸಿಗೆ ಬಂದಿದ್ದ ಸೋಂಕಿರ ಸಾವಿನ ಸಂಖ್ಯೆ ಜುಲೈ 21ರಂದು 36ಕ್ಕೆ ಏರಿಕೆಯಾಗಿತ್ತು.



ಕೋವಿಡ್ ರೋಗಿಗಳ ಒಟ್ಟು ಸಂಖ್ಯೆ 28.89 ಲಕ್ಷಕ್ಕೆ ಹೆಚ್ಚಿದ್ದು, ಈ ಪೈಕಿ 28.28 ಲಕ್ಷ ಸೋಂಕಿತರು ಗುಣಮುಖರಾಗಿದ್ದಾರೆ. ಇದರೊಂದಿಗೆ ಸಕ್ರಿಯ ಪ್ರಕರಣಗಳ ಸಂಖ್ಯೆ 24,695ಕ್ಕೆ ಇಳಿಕೆಯಾಗಿದೆ. ರಾಜ್ಯದಲ್ಲಿ 36,293 ಮಂದಿ ಕೋವಿಡ್‌ನಿಂದ ಮೃತಪಟ್ಟಿದ್ದಾರೆ.

14 ಜಿಲ್ಲೆಗಳಲ್ಲಿ ಸಾವಿನ ಸಂಖ್ಯೆ ಶೂನ್ಯ: ಬೆಂಗಳೂರು ನಗರದಲ್ಲಿ ಹೊಸದಾಗಿ 418, ದಕ್ಷಿಣ ಕನ್ನಡ 229, ಮೈಸೂರು 134, ತುಮಕೂರು 104, ಕೊಡಗು 107 ಮಂದಿಯಲ್ಲಿ ಸೋಂಕು ದೃಢಪಟ್ಟಿದೆ. ಉಳಿದಂತೆ 14 ಜಿಲ್ಲೆಗಳಲ್ಲಿ ಸೋಂಕಿತರ ಸಂಖ್ಯೆ ಎರಡಂಕಿ ಹಾಗೂ 9 ಜಿಲ್ಲೆಗಳಲ್ಲಿ ಒಂದಂಕಿಗೆ ಇಳಿಕೆಯಾಗಿದೆ. ಬೀದರ್ ಮತ್ತು ಯಾದಗಿರಿಯಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

14 ಜಿಲ್ಲೆಗಳಲ್ಲಿ ಸಾವಿನ ಸಂಖ್ಯೆ ಶೂನ್ಯವಿದ್ದು, 18 ಜಿಲ್ಲೆಗಳಲ್ಲಿ ಬೆರಳೆಣಿಕೆಯಷ್ಟು ವರದಿಯಾಗಿದೆ. ಬೆಳಗಾವಿ ಮತ್ತು ಕೋಲಾರದಲ್ಲಿ ತಲಾ ನಾಲ್ಕು ಸೋಂಕಿತರು ಮೃತಪಟ್ಟಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಎಲ್ಲ ಶಿಕ್ಷಕರಿಗೆ ಲಸಿಕೆ: ಇಲಾಖೆ ಸೂಚನೆ

ರಾಜ್ಯದಲ್ಲಿನ ಎಲ್ಲ ಶಿಕ್ಷಕರು–ಬೋಧಕೇತರ ಸಿಬ್ಬಂದಿಗೆ ಲಸಿಕೆ ಹಾಕಿಸಲು ಕ್ರಮ ಕೈಗೊಳ್ಳಬೇಕು ಎಂದು ಆರೋಗ್ಯ ಇಲಾಖೆಯು ಶಿಕ್ಷಣ ಇಲಾಖೆಯ ಜಿಲ್ಲಾಮಟ್ಟದ ಅಧಿಕಾರಿಗಳಿಗೆ ಸೂಚನೆ ನೀಡಿದೆ.



ಜಿಲ್ಲಾಮಟ್ಟದ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಸರ್ಕಾರಿ, ಬಿಬಿಎಂಪಿ, ಮಹಾನಗರ ಪಾಲಿಕೆಗಳು ಮತ್ತು ಖಾಸಗಿ ಶಾಲೆಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಪಟ್ಟಿಯನ್ನು ಜಿಲ್ಲಾ ಆರೋಗ್ಯ ಇಲಾಖೆಗೆ ನೀಡಬೇಕು ಎಂದು ರಾಜ್ಯ ಲಸಿಕೆ ಅಭಿಯಾನದ ನಿರ್ದೇಶಕರು ಸೂಚಿಸಿದ್ದಾರೆ.

ಶಿಕ್ಷಕರು ಮತ್ತು ಸಿಬ್ಬಂದಿಯು ಕೆಲಸ ನಿರ್ವಹಿಸುವ ಸ್ಥಳಗಳಲ್ಲಿಯೇ ಲಸಿಕಾ ವಿತರಣೆ ಶಿಬಿರವನ್ನು ಆಯೋಜಿಸಬೇಕು. ಶಿಕ್ಷಣ ಇಲಾಖೆ ಅಧಿಕಾರಿಗಳು ಸ್ಥಳ ದಿನಾಂಕವನ್ನು ನಿಗದಿಪಡಿಸಬೇಕು. ಪ್ರತಿ ಶಾಲೆಯು ನೋಡಲ್ ಅಧಿಕಾರಿಯನ್ನು ನೇಮಿಸಿರಬೇಕು. ಅವರು ಆರೋಗ್ಯ ಇಲಾಖೆ ಅಧಿಕಾರಿಯೊಟ್ಟಿಗೆ ಕೆಲಸ ಮಾಡಬೇಕು. ಲಸಿಕೆ ದಾಸ್ತಾನು ಲಭ್ಯತೆ ಅನುಗುಣವಾಗಿ ಲಸಿಕೆ ನೀಡಲು ಜಿಲ್ಲಾ ಆರೋಗ್ಯಧಿಕಾರಿಗಳು ಕ್ರಮವಹಿಸಬೇಕು ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	19.31 ಕೋಟಿ ▲	3.12 ಕೋಟಿ
ಸಕ್ರಿಯ ಪ್ರಕರಣ	1.34 ಕೋಟಿ ▲	3.99 ಲಕ್ಷ ▲
ಗುಣಮುಖ	17.55 ಕೋಟಿ ▲	3.04 ಕೋಟಿ
ಸಾವು	41.47 ಲಕ್ಷ ▲	4.19 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	5.56 ಲಕ್ಷ ▲	34,787 ▼
ಗುಣಮುಖ	3.97 ಲಕ್ಷ ▲	38,305 ▼
ಸಾವು	8,640 ▲	477 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಬ್ರಿಟನ್	ಅಮೆರಿಕ	ಬ್ರೆಜಿಲ್
43,907 ▲	56,525 ▲	54,548 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರೆಜಿಲ್	ಬ್ರಿಟನ್
50.62 ▲	7.22 ▼	10.13 ▲

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

1.31 ಲಕ್ಷ ▲	ಮಹಾರಾಷ್ಟ್ರ
33,838 ▲	ತಮಿಳುನಾಡು
25,040 ▲	ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

62.45 ▲	ಮಹಾರಾಷ್ಟ್ರ
32.18 ▲	ಕೇರಳ
25.43 ▲	ತಮಿಳುನಾಡು

ಪ್ರಜಾವಾಣಿ ಗ್ರಾಫಿಕ್ಸ್

ಜೆಡಿಎಸ್ ಮುಖಂಡರ, ಪದಾಧಿಕಾರಿಗಳ ಸಭೆ

ಪ್ರಜಾವಾಣಿ ವಾರ್ತೆ

ಯಲಹಂಕ: ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿ ಸರ್ಕಾರ ಕಳೆದ ಎರಡು ವರ್ಷಗಳಿಂದ ಕೊರೊನಾ ನೆಪದಲ್ಲಿ ದೊಡ್ಡಮಟ್ಟದಲ್ಲಿ ಭ್ರಷ್ಟಾಚಾರದಲ್ಲಿ ತೊಡಗಿ ಹಣ ಲೂಟಿ ಮಾಡಿದೆ. ಈ ಸಂದರ್ಭದಲ್ಲಿ ಬಿಜೆಪಿ ನಾಯಕರು ಜನರಿಗೆ ಸಾಕಷ್ಟು ತೊಂದರೆ ನೀಡಿದ್ದಾರೆ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಟಿ.ಎ.ಶರವಣ ಆರೋಪಿಸಿದರು.

ಉಪನಗರದಲ್ಲಿ ಆಯೋಜಿಸಿದ್ದ ಯಲಹಂಕ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಪಕ್ಷದ ಮುಖಂಡರು ಮತ್ತು ಪದಾಧಿಕಾರಿಗಳ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, 'ಕೊರೊನಾ ಪರಿಸ್ಥಿತಿಯಲ್ಲಿ ಪೆಟ್ರೋಲ್, ಡೀಸೆಲ್, ಗ್ಯಾಸ್ ಸೇರಿದಂತೆ ಅಗತ್ಯವಸ್ತುಗಳ ಬೆಲೆ ಏರಿಕೆಯಿಂದ ಜನರು ತೀವ್ರಸಂಕಷ್ಟಕ್ಕೆ ಸಿಲುಕಿದ್ದಾರೆ. ಸಮಸ್ಯೆಗಳನ್ನು ಪರಿಹರಿಸಬೇಕಾದ ಬಿಜೆಪಿ ನಾಯಕರು, ಬೀದಿಬೀದಿಯಲ್ಲಿ ಕಿತ್ತಾಡುವುದರಲ್ಲೇ ಕಾಲಕಳೆಯುತ್ತಿದ್ದು, ಇಂತವರಿಂದ ಯಾವುದೇ ಅಭಿವೃದ್ಧಿ ಸಾಧ್ಯವಿಲ್ಲ' ಎಂದರು.

'ಬಿಜೆಪಿ ಸರ್ಕಾರದ ವೈಫಲ್ಯದಿಂದ ಬೇಸತ್ತಿರುವ ಜನರು ಬದಲಾವಣೆಯನ್ನು ಬಯಸಿದ್ದಾರೆ. ರಾಜ್ಯದಲ್ಲಿ 2023ಕ್ಕೆ ಜೆಡಿಎಸ್ ಪಕ್ಷ ಅಧಿಕಾರಕ್ಕೆ ಬರಲಿದ್ದು, ಆ ಮೂಲಕ ಮತ್ತೊಮ್ಮೆ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಲಿದ್ದಾರೆ' ಎಂದರು.

ವಿಧಾನಪರಿಷತ್ ಮಾಜಿ ಸದಸ್ಯ ಇ.ಕೃಷ್ಣಪ್ಪ, ಪಕ್ಷದ ಬೆಂಗಳೂರು ನಗರ ಜಿಲ್ಲಾ ಅಧ್ಯಕ್ಷ ಆರ್.ಪ್ರಕಾಶ್, ಮಹಿಳಾ ವಿಭಾಗದ ಅಧ್ಯಕ್ಷೆ ರುತ್ ಮನೋರಮ, ಯಲಹಂಕ ಕ್ಷೇತ್ರದ ಅಧ್ಯಕ್ಷೆ ಕವಿತಾರೆಡ್ಡಿ, ಮುಖಂಡರಾದ ಎ.ಎಂ. ಹನುಮಂತೇಗೌಡ ಇತರರು ಇದ್ದರು.

ಕೇರಳ: ಹೆಚ್ಚಿದ ಕೋವಿಡ್ ಪ್ರಕರಣ

ತಿರುವನಂತಪುರ: ಕೆಲವು ದಿನಗಳಿಂದ ಕೇರಳದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದು ಆತಂಕ ಮೂಡಿಸಿದೆ. ರಾಜ್ಯದಲ್ಲಿ 3ನೇ ಅಲೆ ಕಾಣಿಸಿಕೊಂಡಿದೆಯೇ ಅಥವಾ ಅವೈಜ್ಞಾನಿವಾಗಿ ಲಾಕ್‌ಡೌನ್ ಸಡಿಲಿಕೆ ಮಾಡಿದ್ದರಿಂದ ಪ್ರಕರಣಗಳು ಹೆಚ್ಚಾಗುತ್ತಿವೆಯೇ ಎನ್ನುವ ಪ್ರಶ್ನೆಗಳು ಉದ್ಭವವಾಗಿವೆ.

ಕಳೆದ 5 ದಿನಗಳಿಂದ ಪಾಸಿಟಿವಿಟಿ ದರ ಹೆಚ್ಚಾಗಿದ್ದು, ಗುರುವಾರ ಶೇಕಡ 12.38ರಷ್ಟು ದೃಢಪಟ್ಟಿದೆ.

ಕೋವಿಡ್ ಆಸ್ಪತ್ರೆಗಳಲ್ಲಿ ಇತರೆ ರೋಗಿಗಳ ಚಿಕಿತ್ಸೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಚಿಕಿತ್ಸೆಗಾಗಿ ಮೀಸಲಿಟ್ಟಿದ್ದ ಆಸ್ಪತ್ರೆಗಳಲ್ಲಿ ಇತರೆ ರೋಗಿಗಳಿಗೆ ಚಿಕಿತ್ಸೆ ಪುನರಾರಂಭಿಸುವಂತೆ ಆರೋಗ್ಯ ಇಲಾಖೆಯು ಸುತ್ತೋಲೆ ಹೊರಡಿಸಿದೆ.

ಕೋವಿಡ್ ಆಸ್ಪತ್ರೆಗಳಲ್ಲಿ ಅನ್ಯ ರೋಗಗಳಿಗೆ ಚಿಕಿತ್ಸೆ ನೀಡುವುದನ್ನು ಸ್ಥಗಿತಗೊಳಿಸಲಾಗಿತ್ತು. ಕೊರೊನಾ ಎರಡನೇ ಅಲೆಯ ಅಬ್ಬರ ತಗ್ಗಿದ್ದು, ಸೋಂಕು ಹಾಗೂ ಸಾವಿನ ಪ್ರಮಾಣ ಕಡಿಮೆಯಾಗುತ್ತಿದೆ. ಹೀಗಾಗಿ ಜಿಲ್ಲಾ, ತಾಲ್ಲೂಕು ಆಸ್ಪತ್ರೆಗಳು, ಸಮುದಾಯ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹೊರರೋಗಿಗಳಿಂದ ಪ್ರಾರಂಭಿಸಿ ಎಲ್ಲಾ ರೀತಿಯ ಚಿಕಿತ್ಸೆ ಹಾಗೂ ಶಸ್ತ್ರಚಿಕಿತ್ಸೆಗಳನ್ನು ಆರಂಭಿಸಬೇಕು. ಜತೆಗೆ ಕೋವಿಡ್ ಚಿಕಿತ್ಸೆಯನ್ನೂ ಮುಂದುವರಿಸಬೇಕು ಎಂದು ಇಲಾಖೆಯ ಆಯುಕ್ತ ಡಾ.ಕೆ.ವಿ. ತ್ರಿಲೋಕ್‌ಚಂದ್ರ ಸೂಚಿಸಿದ್ದಾರೆ.



ಕೆ.ವಿ. ತ್ರಿಲೋಕ್‌ಚಂದ್ರ

ಕೋವಿಡ್ ಆಸ್ಪತ್ರೆ ಎಂಬ ಕಾರಣ ನೀಡಿ, ರೋಗಿಗಳನ್ನು ಅನಗತ್ಯವಾಗಿ ಖಾಸಗಿ ಆಸ್ಪತ್ರೆಗಳಿಗೆ ಕಳುಹಿಸುವುದನ್ನೂ ನಿರ್ಬಂಧಿಸಲಾಗಿದೆ ಎಂದೂ ಅವರು ಹೇಳಿದ್ದಾರೆ.

ಕೋವಿಡ್ ಪೂರ್ವದಲ್ಲಿದ್ದಂತೆ, ಆಸ್ಪತ್ರೆಗಳಲ್ಲಿ ಕೊರೊನಾ ಸೋಂಕಿತರು ಮತ್ತು ಸಾಮಾನ್ಯ ರೋಗಿಗಳ ಬರುವಿಕೆ, ಹೋಗುವಿಕೆ, ಪ್ರಯೋಗಾಲಯ ಪರೀಕ್ಷೆ, ಆರೈಕೆ, ಚಿಕಿತ್ಸೆ ಮತ್ತು ಸಲಹಾ ಕಾರ್ಯಾಚರಣೆಗಳು ಪ್ರತ್ಯೇಕವಾಗಿರಬೇಕು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ನೆರೆ ರಾಜ್ಯಗಳಲ್ಲಿ ಕೋವಿಡ್ ಮತ್ತೆ ಏರಿಕೆಯಾಗಿರುವುದರಿಂದ ಸೋಂಕಿನ ಬಗ್ಗೆ ಮುಂಜಾಗ್ರತೆ ವಹಿಸುವುದರ ಜತೆಗೆ ಕೋವಿಡ್ ಆರೈಕೆ ಹಾಗೂ ಚಿಕಿತ್ಸಾ ವ್ಯವಸ್ಥೆಯನ್ನು ಮುಂದೆ ತಿಳಿಸುವವರೆಗೂ ಮಧ್ಯಮ ಹಂತದಲ್ಲಿ ಉಳಿಸಿಕೊಂಡಿರಬೇಕು. ಸೋಂಕು ವ್ಯಾಪಕವಾದ ಕೂಡಲೇ ಅಲ್ಪ ಸಮಯದಲ್ಲೇ ಆಸ್ಪತ್ರೆಗಳೆಲ್ಲ ಮತ್ತೆ ಕೋವಿಡ್ ಚಿಕಿತ್ಸೆಗೆ ಪೂರ್ಣಪ್ರಮಾಣದಲ್ಲಿ ಸಜ್ಜಾಗುವ ಸ್ಥಿತಿಯಲ್ಲಿರಬೇಕು ಎಂದೂ ತ್ರಿಲೋಕ್‌ಚಂದ್ರ ಹೇಳಿದ್ದಾರೆ.



ಪ್ರತಿಭಟನೆ

ಮೈಸೂರಿನ ಐತಿಹಾಸಿಕ ಮಹಾರಾಣಿ ಮಾದರಿ ಶಾಲೆ ಉಳಿಸಿ ಹಾಗೂ ವಿವೇಕ ಸ್ಮಾರಕ ನಿರ್ಮಿಸಬೇಕೆಂದು ಆಗ್ರಹಿಸಿ ಮಹಾರಾಣಿ ಮಾದರಿ ಶಾಲೆ (ಎನ್‌ಟಿಎಂಎಸ್) ಉಳಿಸಿ ಹೋರಾಟ ಒಕ್ಕೂಟದ ವತಿಯಿಂದ ಮೌರ್ಯ ವೃತ್ತದಲ್ಲಿ ಗುರುವಾರ ಪ್ರತಿಭಟನೆ ನಡೆಯಿತು. ಸಾಹಿತಿ ಬರಗೂರು ರಾಮಚಂದ್ರಪ್ಪ ಹಾಗೂ ವಿವಿಧ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ಕಾಲ ಬೆರಳಿನಿಂದಲೇ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆದ ವಿದ್ಯಾರ್ಥಿ!

ಆಳಂದ (ಕಲಬುರ್ಗಿ): ತಾಲ್ಲೂಕಿನ ಸಾವಳೇಶ್ವರ ಗ್ರಾಮದ ವಿಶ್ವಸನ್ಮತಿ ಪ್ರೌಢಶಾಲೆಯ ಪರೀಕ್ಷಾ ಕೇಂದ್ರದಲ್ಲಿ ಲಕ್ಷ್ಮಿಪುತ್ರ ಅಮೃತರಾವ ಮಾಡ್ಯಾಳೆ ಎಂಬ ಅಂಗವಿಕಲ ವಿದ್ಯಾರ್ಥಿ ಕಾಲಿನ ಬೆರಳುಗಳ ಮೂಲಕವೇ ಗುರುವಾರ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆದರು.

ಲಕ್ಷ್ಮಿಪುತ್ರ ಅವರ ಎರಡೂ ಕೈಗಳಲ್ಲಿ ಅಂಗೈ– ಬೆರಳುಗಳು ಇಲ್ಲ. ಆದರೂ ಯಾರ ನೆರವೂ ಪಡೆಯದೇ, ವಿದ್ಯಾರ್ಥಿ ತನ್ನ ಪರೀಕ್ಷೆ ಎದುರಿಸಿದರು. ಕಾಲ ಬೆರಳಿನಿಂದಲೇ ಪ್ರಶ್ನೆ ಪತ್ರಿಕೆಯ ಪುಟ ತಿರುವಿ, ಒಎಂಆರ್ ಶೀಟ್‌ನಲ್ಲಿ ಗುರುತು ಹಾಕಿದರು.

ನಂದಿಬೆಟ್ಟಕ್ಕೆ ರೋಪ್ ವೇ: ವಿರೋಧ

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ವಿಶ್ವ ಪ್ರಸಿದ್ಧ ನಂದಿಬೆಟ್ಟಕ್ಕೆ ರೋಪ್ ವೇ ನಿರ್ಮಿಸಲು ಸರ್ಕಾರ ಮುದ್ದಾಗಿದೆ. ರೋಪ್ ವೇ ಜೊತೆಗೆ ವಾಹನಗಳ ನಿಲುಗಡೆಗಾಗಿ ರೈತರ ಕೃಷಿ ಜಮೀನು ಸ್ವಾಧೀನ ಮಾಡುತ್ತಿರುವುದಕ್ಕೆ ತಾಲ್ಲೂಕಿನ ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಫಲವತ್ತಾದ ಕೃಷಿ ಜಮೀನಿಗೆ ಪ್ರಾಣ ಕೊಟ್ಟಾದರು ಸರಿ ಉಳಿಸಿಕೊಳ್ಳಲು ಹೋರಾಟ ಮಾಡುತ್ತೇವೆ' ಎಂದು ಭೂಮಿ ಕಳೆದುಕೊಳ್ಳುತ್ತಿರುವ ರೈತರಾದ ಮುನಿಯಪ್ಪ,ಮುನಿನಾರಾಯಣಪ್ಪ ಎಚ್ಚರಿಕೆ ನೀಡಿದ್ದಾರೆ.

ನಂದಿ ಬೆಟ್ಟಕ್ಕೆ ರೋಪ್ ವೇ ಕಲ್ಪಿಸಬೇಕೆಂಬುದು ಬಹುದಿನಗಳ ಕನಸು. ಈ ಕನಸಿಗೆ ಪ್ರವಾಸೋದ್ಯಮ ಸಚಿವ ಸಿ.ಪಿ.ಯೊಗೇಶ್ವರ್ ಜೀವ ನೀಡಿದ್ದಾರೆ. ಶೀಘ್ರದಲ್ಲಿ ಟೆಂಡರ್ ಕರೆದು ಕಾಮಾಗಾರಿಗೆ ಚಾಲನೆ ನೀಡಬೇಕೆಂದು ಆದೇಶಿಸಿದ್ದಾರೆ. ಜು. 23 ರಂದು ನಂದಿಗಿರಿಧಾಮಕ್ಕೆ ಭೇಟಿ ನೀಡುವ ಸಚಿವ ಯೊಗೇಶ್ವರ್ ರೋಪ್ ವೇ ನಿರ್ಮಾಣವಾಗುವ ಸ್ಥಳವನ್ನು ವಿಕ್ಷಣೆ ಮಾಡುತ್ತಿದ್ದಾರೆ.

ರೋಪ್ ವೇ ನಿರ್ಮಾಣವಾಗುವ ಸ್ಥಳದಲ್ಲೇ ಪ್ರವಾಸಿಗರ ವಾಹನಗ ನಿಲುಗಡೆಗೆ ಪಾರ್ಕಿಂಗ್ ನಿರ್ಮಾಣ ಸಹ ಮಾಡಲಾಗುತ್ತಿದೆ. ಪಾರ್ಕಿಂಗ್ ನಿರ್ಮಾಣಕ್ಕೆ ಒಟ್ಟು 11 ಎಕರೆ ರೈತರ ಜಮೀನು ಸ್ವಾಧೀನ ಮಾಡಲು ಉದ್ದೇಶಿಸಲಾಗಿದೆ.

ಆದರೆ, ಈ ಜಾಗ ಚಿಕ್ಕಬಳ್ಳಾಪುರ ಮತ್ತ ದೊಡ್ಡಬಳ್ಳಾಪುರ ಗಡಿಭಾಗದಲ್ಲಿ ಬರಲಿದೆ. ಚಿಕ್ಕಬಳ್ಳಾಪುರ ಜಿಲ್ಲೆಯ ಮಡುಕುಹೊಸಹಳ್ಳಿ ಗ್ರಾಮದ ಸರ್ವೇ ನಂಬರ್‌ಗಳಲ್ಲಿ 8 ಎಕರೆ, ದೊಡ್ಡಬಳ್ಳಾಪುರ ತಾಲ್ಲೂಕಿನ ಹೆಗ್ಗಡಿಹಳ್ಳಿ ಗ್ರಾಮದ ಸರ್ವೇ ನಂಬರ್‌ನಲ್ಲಿ 3.20 ಎಕರೆ ಭೂಮಿ ಕಾಯ್ದಿರಿಸಲಾಗಿದೆ. ಮಡುಕುಹೊಸಹಳ್ಳಿ ಗ್ರಾಮದ ಸರ್ವೇ ನಂಬರ್‌ಗಳಲ್ಲಿಯೇ ಇರುವ ಸರ್ಕಾರಿ ಗೋಮಾಳ ಜಮೀನನ್ನು ಪಾರ್ಕಿಂಗ್ ಸ್ಥಳಕ್ಕೆ ಬಳಸಿಕೊಳ್ಳಬೇಕು ಎನ್ನುವುದು ರೈತರ ಆಗ್ರಹವಾಗಿದೆ.



ಎಸ್.ವಿ.ಲೇಖನ ಅವರಿಗೆ ಹೊಯ್ಸಳ ಪದವಿ ಕಾಲೇಜಿನಲ್ಲಿ ಉಚಿತ ಶಿಕ್ಷಣಕ್ಕೆ ದಾಖಲಾತಿ ನೀಡಲಾಯಿತು. ಪ್ರಾಂಶುಪಾಲ ಗೌರಿಶಂಕರ್, ಉಪ ಪ್ರಾಂಶುಪಾಲ ಗೋಪಾಲ್ ಹಾಗೂ ಪೋಷಕರು ಇದ್ದಾರೆ.

ಹೊಯ್ಸಳ ಪಿಯು ಕಾಲೇಜು: 3 ವಿದ್ಯಾರ್ಥಿಗಳಿಗೆ 600 ಅಂಕ

ನೆಲಮಂಗಲ: 'ಪಿಯು ಪರೀಕ್ಷೆಯಲ್ಲಿ ಹೊಯ್ಸಳ ಪದವಿ ಪೂರ್ವ ಕಾಲೇಜಿನ ಮೂರು ವಿದ್ಯಾರ್ಥಿಗಳು 600ಕ್ಕೆ ಪೂರ್ಣ ಅಂಕ ಪಡೆದು, ಕಾಲೇಜಿಗೆ ಕೀರ್ತಿ ತಂದಿದ್ದಾರೆ.

'ವಿಜ್ಞಾನ ವಿಭಾಗದ ಕೆ.ಅನನ್ಯ, ಪ್ರಥಮ್ ಬಾಬು, ವಾಣಿಜ್ಯ ವಿಭಾಗದ ಎಸ್.ವಿ.ಲೇಖನ ಅವರು 600ಕ್ಕೆ 600 ಅಂಕ ಪಡೆದಿದ್ದಾರೆ. 160 ವಿದ್ಯಾರ್ಥಿಗಳು ಶೇ 90ಕ್ಕಿಂತ ಹೆಚ್ಚು ಹಾಗೂ 232 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ' ಎಂದು ಕಾಲೇಜಿನ ಪ್ರಾಂಶುಪಾಲ ಗೌರಿಶಂಕರ್ ತಿಳಿಸಿದರು.

'ಬಡ ಪ್ರತಿಭಾನ್ವಿತ ವಿದ್ಯಾರ್ಥಿಯಾಗಿರುವ ಎಸ್.ವಿ.ಲೇಖನ ಅವರಿಗೆ ತಮ್ಮದೇ ಶಿಕ್ಷಣ ಸಂಸ್ಥೆಯಲ್ಲಿ ಬಿ.ಕಾಂ ಪದವಿ ಶಿಕ್ಷಣವನ್ನು ಉಚಿತವಾಗಿನೀಡಲುಆಡಳಿತಮಂಡಳಿನಿರ್ಧರಿಸಿದೆ' ಎಂದು ಉಪ ಪ್ರಾಂಶುಪಾಲ ಗೋಪಾಲ್ ಹೇಳಿದರು.

ಬಿಜೆಪಿ ವಲಯದಲ್ಲಿ ರಾಜ್ಯ ರಾಜಕೀಯದ್ದೇ ಚರ್ಚೆ • ರಾಜಧಾನಿಗೆ ಹಲವು ಸಚಿವ ಆಕಾಂಕ್ಷಿಗಳ ದೌಡು

ಜೋಶಿ, ರವಿಗೆ ಶುಭಾಶಯಗಳ ಮಹಾಪೂರ!

• ಸಿದ್ದಯ್ಯ ಹಿರೇಮಠ

ನವದೆಹಲಿ: ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆಯ ಸಾಧ್ಯತೆ ದಟ್ಟವಾಗುತ್ತಿದ್ದಂತೆಯೇ ರಾಜಧಾನಿಯಲ್ಲಿನ ಬಿಜೆಪಿ ಪಾಳಯದಲ್ಲಿ ಹಾಗೂ ಪಕ್ಷದ ರಾಷ್ಟ್ರೀಯ ಕಚೇರಿಯಲ್ಲಿ ಗುರುವಾರವಿಡೀ ರಾಜ್ಯ ರಾಜಕೀಯ ಬೆಳವಣಿಗೆಯ ಚರ್ಚೆ ಜೋರಾಗಿಯೇ ನಡೆಯಿತು.

ಬದಲಾಗಲಿರುವ ಸನ್ನಿವೇಶದಲ್ಲಿ ಮಂತ್ರಿಗಿರಿ ಹಾಗೂ ಉಪ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷೆ ಹೊಂದಿರುವ ರಾಜ್ಯದ ಕೆಲವರು ದೆಹಲಿಗೆ ದೌಡಾಯಿಸಿ, ವರಿಷ್ಠರನ್ನು ರಹಸ್ಯವಾಗಿ ಭೇಟಿ ಮಾಡಿದ್ದಾರೆ.

'ರಾಜ್ಯದ ಮುಂದಿನ ಮುಖ್ಯಮಂತ್ರಿ ಯಾರಾಗಬಹುದು' ಎನ್ನುವ ಬಗ್ಗೆ ಸಂಸತ್‌ನ ಸೆಂಟ್ರಲ್ ಹಾಲ್‌ನಲ್ಲಿ ರಾಜ್ಯವೂ ಸೇರಿದಂತೆ ವಿವಿಧ ರಾಜ್ಯಗಳ ಬಿಜೆಪಿಯ ಸಂಸದರು ಚರ್ಚೆಯಲ್ಲಿ ತೊಡಗಿದ್ದರು. ವರಿಷ್ಠರು 'ಅಚ್ಚರಿಯ ಅಭ್ಯರ್ಥಿ'ಯನ್ನೇ ಆಯ್ಕೆ ಮಾಡುವ ಸಾಧ್ಯತೆಯೇ ಹೆಚ್ಚು ಎಂಬ ಮಾತುಗಳೇ ಕೇಳಿಬಂದವು ಎಂದು ಸಂಸದರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಅತ್ತ ಸಂಸತ್‌ನಲ್ಲಿ ಸಂಸದೀಯ ವ್ಯವಹಾರಗಳ ಖಾತೆ ಸಚಿವ ಪ್ರಲ್ಹಾದ ಜೋಶಿ ಅವರತ್ತ ಮಧ್ಯಾಹ್ನದಿಂದಲೇ ಸಹೋದ್ಯೋಗಿಗಳಿಂದ ಶುಭಾಶಯಗಳ ಮಹಾಪೂರ ಹರಿದುಬಂತು. ಕೇಂದ್ರದ ಅನೇಕ ಸಚಿವರು, ಬಿಜೆಪಿಯ ಸಂಸದರು ಶುಭ ಹಾರೈಸಿ ಕೈಕುಲುಕುತ್ತಿದ್ದುದು, 'ಅವರಿಗೆ ರಾಜ್ಯದಲ್ಲಿ ಪ್ರಮುಖ ಸ್ಥಾನ ದೊರೆಯಲಿದೆ' ಎಂಬ ಮುನ್ಸೂಚನೆಯನ್ನು ನೀಡುವಂತಿತ್ತು.

ಇತ್ತ ಬಿಜೆಪಿ ರಾಷ್ಟ್ರೀಯ ಕಚೇರಿಯಲ್ಲಿ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಅವರೂ ಗುರುವಾರವಿಡೀ ಅನೇಕರಿಂದ ಶುಭಾಶಯ ಸ್ವೀಕರಿಸುವುದರಲ್ಲೇ ತಲ್ಲೀನರಾಗಿದ್ದರು.

ಶಾಸಕ ಎಂ.ಪಿ. ರೇಣುಕಾಚಾರ್ಯ, ಮಾಜಿ ಶಾಸಕ ನೆ.ಲ. ನರೇಂದ್ರಬಾಬು, ಕೋಲಾರ ಸಂಸದ ಮುನಿಸ್ವಾಮಿ, ಕೇಂದ್ರ ಸಚಿವರಾಗಿರುವ ತಮಿಳುನಾಡು ಬಿಜೆಪಿ ಘಟಕದ ಮಾಜಿ ಅಧ್ಯಕ್ಷ ಡಿ.ಮುರುಗನ್ ಮತ್ತಿತರರು 'ಶುಭವಾಗಲಿ' ಎಂದು ಸಿ.ಟಿ. ರವಿ ಅವರನ್ನು ಹಾರೈಸಿದ್ದು ವಿಶೇಷವಾಗಿತ್ತು.


ಹೊನ್ನಾಳಿ ಶಾಸಕ ಎಂ.ಪಿ. ರೇಣುಕಾಚಾರ್ಯ ಹಾಗೂ ಕೋಲಾರ ಸಂಸದ ಮುನಿಸ್ವಾಮಿ ಅವರು ದೆಹಲಿಯಲ್ಲಿ ಗುರುವಾರ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಅವರನ್ನು ಭೇಟಿ ಮಾಡಿ ಚರ್ಚಿಸಿದರು

ಪಕ್ಷದ ತಮಿಳುನಾಡು ಉಸ್ತುವಾರಿಯಾಗಿರುವ ರವಿ ಅವರ ಕಚೇರಿಗೆ ಬಂದಿದ್ದ ರಾಮೇಶ್ವರದ ದೇವಸ್ಥಾನದ ಮೂವರು ಅರ್ಚಕರು, ಪೂಜೆ ನೆರವೇರಿಸಿ, ಮಂತ್ರ ಪಠಿಸುವ ಮೂಲಕ ಶುಭ ಹಾರೈಸಿ ಪ್ರಸಾದ ನೀಡಿ ತೆರಳಿದರು.

ಸ್ಥಳದಲ್ಲೇ ಇದ್ದ ಸಂಸದ ಮುನಿಸ್ವಾಮಿ, ಸಿ.ಟಿ. ರವಿ ಅವರು ನೀಡಿದ ಪ್ರಸಾದವನ್ನು ಸ್ವೀಕರಿಸಿ ಶುಭ ಕೋರಿದರಲ್ಲದೆ, ಕಾಲಿಗೆ ನಮಸ್ಕರಿಸಿದರು.

ವಾರಾಣಸಿಯಿಂದ ದೆಹಲಿಗೆ ಬಂದಿರುವ ಶಾಸಕ ಅರವಿಂದ ಬೆಲ್ಲದ್ ಅವರೂ ನಂತರ ರವಿ ಅವರ ಕಚೇರಿಗೆ ಬಂದು ಪ್ರಸಾದ ವಿತರಿಸಿ ಸ್ವಲ್ಪ ಹೊತ್ತು ಚರ್ಚೆ ನಡೆಸಿದರಲ್ಲದೆ, ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು.

ಏತನ್ಮಧ್ಯೆ, ಶಾಸಕ ಎಂ.ಪಿ. ರೇಣುಕಾಚಾರ್ಯ ಅವರು ಗುರುವಾರವೂ ಪಕ್ಷದ ಕೆಲವು ಮುಖಂಡರನ್ನು ಭೇಟಿ ಮಾಡಿದ್ದು, ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಅವರೊಂದಿಗೆ ಚರ್ಚೆ ನಡೆಸಿದರು.

ಸಮಾಜ ಕಲ್ಯಾಣ ಸಚಿವ ಬಿ.ಶ್ರೀರಾಮುಲು ಬುಧವಾರ ಸಂಜೆ ಬಿ.ಎಲ್. ಸಂತೋಷ್, ಅರುಣ್ ಸಿಂಗ್ ಸೇರಿದಂತೆ ಕೆಲವು ಮುಖಂಡರನ್ನು ಭೇಟಿಯಾಗಿ ರಾಜ್ಯಕ್ಕೆ ಮರಳಿದ್ದಾರೆ.

ಈ ಭೇಟಿಯ ವೇಳೆ ಅವರು ಉಪ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷೆ ವ್ಯಕ್ತಪಡಿಸಿರಬಹುದು ಎಂದು ತಿಳಿದುಬಂದಿದೆ.

'ಯಡಿಯೂರಪ್ಪ ಅವರಿಗೆ ಅನ್ಯಾಯ ಮಾಡುತ್ತಿಲ್ಲ'

ನವದೆಹಲಿ: 'ಯಡಿಯೂರಪ್ಪ ಅವರಿಗೆ ಪಕ್ಷ ಅನ್ಯಾಯ ಮಾಡುತ್ತಿಲ್ಲ. ಪಕ್ಷ ಇದುವರೆಗೆ ಅವರಿಗೆ ಎಲ್ಲ ಅಧಿಕಾರವನ್ನೂ ನೀಡಿದೆ. ಅವರೂ ದುಡಿದು, ಪಕ್ಷ ಬೆಳೆಸಿದ್ದಾರೆ' ಎಂದು ಸಿ.ಟಿ. ರವಿ ಹೇಳಿದರು.

'ಯಡಿಯೂರಪ್ಪ ಅವರ ನಿರ್ಗಮನ ಖಚಿತವೇ' ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಹಿರಿಯರಾದ ಯಡಿಯೂರಪ್ಪ ಅವರಿಗೆ ಮಹತ್ವದ ಹುದ್ದೆಗಳನ್ನು ನೀಡಿ ಗೌರವದಿಂದ ನಡೆಸಿಕೊಳ್ಳಲಾಗಿದೆ ಎಂದರು.

'ನಾನಂತೂ ಮುಖ್ಯಮಂತ್ರಿ ಸ್ಥಾನದ ಕನಸು ಕಂಡಿಲ್ಲ. ಹೊಸ ಕೋಟ್ ಹೊಲಿಸಿಕೊಂಡು ಕುಳಿತವನಲ್ಲ. ಪಕ್ಷದ ಸಾಮಾನ್ಯ ಕಾರ್ಯಕರ್ತನಾಗಿ ಕೆಲಸ ಮಾಡುವೆ' ಎಂದು ಅವರು ಹೇಳಿದರು.

ಪ್ರತಿಕ್ರಿಯೆ ನೀಡದ ಅರುಣ್ ಸಿಂಗ್

ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ಅವರು ಗುರುವಾರ ರಾಜ್ಯದ ರಾಜಕೀಯ ಬೆಳವಣಿಗೆಗಳ ಕುರಿತು ಯಾವುದೇ ಪ್ರತಿಕ್ರಿಯೆ ನೀಡಲು ನಿರಾಕರಿಸಿದರು.

'ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ರಾಜೀನಾಮೆ ನೀಡಲಿದ್ದಾರೆಯೇ', 'ಮುಂದಿನ ಮುಖ್ಯಮಂತ್ರಿ ಯಾರಾಗಲಿದ್ದಾರೆ' ಎಂಬ ಪತ್ರಕರ್ತರ ಪ್ರಶ್ನೆಗೆ ಅವರು ಉತ್ತರ ನೀಡಲಿಲ್ಲ.

ಸುದ್ದಿ 2 ನಿಮಿಷ

ತಂದೆ ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧ: ಬಿ.ವೈ. ರಾಘವೇಂದ್ರ

ಶಿವಮೊಗ್ಗ: ವಯಸ್ಸು ಅಧಿಕಾರ ನಡೆಸಲು ಮಾನದಂಡವಲ್ಲ. ಎಲ್.ಕೆ. ಅಡ್ವಾಣಿ ಸೇರಿ ಹಲವರು ವಿಭಿನ್ನ ಕಾರಣಗಳಿಗಾಗಿ ಹಿಂದೆ ಸರಿದಿದ್ದಾರೆ. ಹೈಕಮಾಂಡ್ ವಯಸ್ಸು ಲೆಕ್ಕಿಸದೇ ಯಡಿಯೂರಪ್ಪ ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡಿದೆ. ಅವರು ಪಕ್ಷ ನೀಡುವ ಸೂಚನೆ ಪಾಲಿಸುತ್ತಾರೆ ಎನ್ನುವ ಮೂಲಕ ಸಂಸದ ಬಿ.ವೈ. ರಾಘವೇಂದ್ರ ತಮ್ಮ ತಂದೆ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುವ ಸುಳಿವು ನೀಡಿದರು.

ಶಿಕಾರಿಪುರದಲ್ಲಿ ಅವರು ಗುರುವಾರ ಸುದ್ದಿಗಾರರ ಜತೆ ಮಾತನಾಡಿದರು.

ತಂದೆ ಹೋರಾಟದ ಮೂಲಕ ಅಧಿಕಾರಕ್ಕೆ ಬಂದವರು. ಯಾವಾಗಲೂ ಅಭಿವೃದ್ಧಿಯನ್ನೇ ಉಸಿರಾಗಿಸಿಕೊಂಡವರು. ಪಕ್ಷದ ಶಿಸ್ತಿನ ಸಿಪಾಯಿಯಂತೆ ಕರ್ತವ್ಯ ನಿರ್ವಹಿಸಿದ್ದಾರೆ. ಪಕ್ಷಕ್ಕೆ ಸದಾ ನಿಷ್ಠೆ ತೋರಿದ್ದಾರೆ. ಪಕ್ಷ ಎಲ್ಲವನ್ನೂ ನೀಡಿದೆ. ಅವರನ್ನು ಬೆಳೆಸಿ, ಸಂಸ್ಕಾರ ಕಲಿಸಿ, ಮಾರ್ಗದರ್ಶನ ಕೊಟ್ಟಿದೆ. ಹಾಗಾಗಿಯೇ ಅವರು ಇಷ್ಟು ವರ್ಷಗಳು ಜನಹಿತ ಕೆಲಸ ಮಾಡಿದ್ದಾರೆ ಎಂದು ವಿಶ್ಲೇಷಿಸಿದರು.

ಪಕ್ಷದ ಕಾರ್ಯಕರ್ತ ಎಂದಿಗೂ ಮಾಜಿ ಅಲ್ಲ: ತಂದೆಯವರು ಅಟಲ್ ಜೀ ಮಾತು ಸದಾ ಸ್ಮರಿಸುತ್ತಿದ್ದರು. ಯಾವುದೇ ಸ್ಥಾನ ಶಾಶ್ವತವಲ್ಲ. ಎಲ್ಲವೂ ಒಂದಲ್ಲ ಒಂದು ದಿನ ಮಾಜಿ ಆಗಲೇಬೇಕು. ಎಲ್ಲವೂ ಮಾಜಿ ಆಗಬಹುದು. ಆದರೆ, ಕಾರ್ಯಕರ್ತನ ಸ್ಥಾನ ಮಾಜಿ ಆಗುವುದಿಲ್ಲ ಎಂದು ಅವರು ಹೇಳುತ್ತಿದ್ದರು ಎಂದು ಸ್ಮರಿಸಿದರು.

ಅವರ ನಿರ್ಧಾರಕ್ಕೆ ಎಲ್ಲರೂ ಬದ್ಧ: 'ಎಲ್ಲಾ ನಿರ್ಧಾರವನ್ನೂ ಯೋಚಿಸಿಯೇ ತೆಗೆದುಕೊಳ್ಳುತ್ತಾರೆ. ರಾಜ್ಯದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರಲು ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದಾರೆ. ಅವರು ಅಧಿಕಾರಕ್ಕೆ ಅಂಟಿಕೊಂಡವರಲ್ಲ. ಪಕ್ಷಕ್ಕೆ ಲಕ್ಷಾಂತರ ಕಾರ್ಯಕರ್ತರನ್ನು ಸೆಳೆದವರು' ಎಂದರು.



'ಮಠಾಧೀಶರ ನಡೆ ಸರಿಯಲ್ಲ'

ನವದೆಹಲಿ: ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಬೆಂಬಲಿಸುತ್ತಿರುವ ಮಠಾಧೀಶರ ನಡೆ ಸರಿಯಲ್ಲ ಎಂದು ಮಾಜಿ ಸಚಿವ, ಕಾಂಗ್ರೆಸ್‌ನ ಬಸವರಾಜ ರಾಯರಡ್ಡಿ ಅಭಿಪ್ರಾಯಪಟ್ಟರು.

ಕರ್ನಾಟಕ ಭವನದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಅರಿಷಡ್ವರ್ಗಗಳನ್ನು ಜಯಿಸಿದ್ದಾರೆ ಎಂಬ ಕಾರಣಕ್ಕೆ ಮಠಾಧೀಶರಿಗೆ ಎಲ್ಲಾ ಸಮುದಾಯಗಳ ಜನ, ರಾಜಕೀಯ ಪಕ್ಷಗಳ ಮುಖಂಡರು, ಕಾರ್ಯಕರ್ತರು, ಭಕ್ತರು ಕಾಲಿಗೆ ಬೀಳುತ್ತಾರೆ. ಆದರೆ, ಮಠಾಧೀಶರು ನಿರ್ದಿಷ್ಟ ಪಕ್ಷದ ಮುಖಂಡರನ್ನು ಬೆಂಬಲಿಸುವುದು ಎಷ್ಟು ಸರಿ' ಎಂದು ಪ್ರಶ್ನಿಸಿದರು.

ಹಿರಿಯರ ನಡೆ ಸರಿಯಲ್ಲ: ಕಾಂಗ್ರೆಸ್‌ನ ಶಾಸಕರಾದ ಶಾಮನೂರು ಶಿವಶಂಕರಪ್ಪ ಹಾಗೂ ಎಂ.ಬಿ. ಪಾಟೀಲ ಅವರು 'ವೀರಶೈವ ಲಿಂಗಾಯತರು' ಎಂಬ ಕಾರಣದಿಂದ ಯಡಿಯೂರಪ್ಪ ಅವರಿಗೆ ಬಹಿರಂಗ ಬೆಂಬಲ ಘೋಷಿಸಿರುವುದು ಸರಿಯಲ್ಲ ಎಂದು ಅವರು ಅಭಿಪ್ರಾಯಪಟ್ಟರು.

'ಒಂದು ಪಕ್ಷದ ತತ್ವ, ಸಿದ್ಧಾಂತಕ್ಕೆ ಒಳಪಟ್ಟ ಈ ಶಾಸಕರು, ಸಿದ್ಧಾಂತವನ್ನು ಗಾಳಿಗೆ ತೂರಿದ, ಶಿಸ್ತೇ ಇಲ್ಲದ ಇನ್ನೊಂದು ಪಕ್ಷದ ಮುಖಂಡರ ಬೆಂಬಲಕ್ಕೆ ನಿಲ್ಲುವುದು ಎಷ್ಟು ಸೂಕ್ತ' ಎಂದು ರಾಯರಡ್ಡಿ ಪ್ರಶ್ನಿಸಿದರು.

ಸಂಕ್ಷಿಪ್ತ ಸುದ್ದಿ

'ಸಿ.ಎಂ ಹುದ್ದೆಗೆ ಕಾರಜೋಳ, ಜಿಗಜಿಣಗಿ ಪರಿಗಣಿಸಿ'


ಡಿ.ಜಿ.ಸಾಗರ್

ವಿಜಯಪುರ: ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ, ಸಂಸದ ರಮೇಶ ಜಿಗಜಿಣಗಿ ಅವರು ಸಮರ್ಥರಿದ್ದು, ಇವರಲ್ಲಿ ಯಾರನ್ನಾದರೂ ಮುಂದಿನ ಮುಖ್ಯಮಂತ್ರಿ ಹುದ್ದೆಗೆ ಬಿಜೆಪಿ ಪರಿಗಣಿಸಬೇಕು ಎಂದು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಡಾ.ಡಿ.ಜಿ.ಸಾಗರ್ ಆಗ್ರಹಿಸಿದರು.

ನಗರದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಅಸ್ಪೃಶ್ಯರು ಮುಖ್ಯಮಂತ್ರಿಯಾಗುವ ಅರ್ಹತೆ ಇದೆ. ಆದರೆ, ಎಲ್ಲ ಪಕ್ಷಗಳೂ ವಂಚಿಸುತ್ತಾ ಬಂದಿವೆ. ಇದರಲ್ಲಿ ಬಿಜೆಪಿ ಮುಂಚೂಣಿಯಲ್ಲಿದೆ ಎಂದು ಆರೋಪಿಸಿದರು.

ಸಮಾಜದ ಸ್ವಾಸ್ಥ್ಯ ಕಾಪಾಡಬೇಕಾದ, ಬಸವಣ್ಣನವರ ವಿಚಾರಧಾರೆಯನ್ನು ಪ್ರಚಾರ ಮಾಡಬೇಕಾಗಿದ್ದ ಮಠಾಧೀಶರು ರಾಜಕಾರಣಕ್ಕೆ ಇಳಿದು ಕೆಟ್ಟ ಸಂಪ್ರದಾಯ ಬೆಳೆಸುತ್ತಿದ್ದಾರೆ. ಜಾತಿ, ಜನಾಂಗದವರಿಗೆ ಅಧಿಕಾರ ಕೊಡಿಸುವುದು ಇವರ ಕೆಲಸವಲ್ಲ. ತಮ್ಮ ಗೌರವವನ್ನು ಕಳೆದುಕೊಳ್ಳುವ ಕೆಲಸ ಮಾಡಬಾರದು ಎಂದರು.

'ನಿರ್ಣಯ ಕೈಗೊಳ್ಳಲು ಬಿಎಸ್‌ವೈ ಸ್ವತಂತ್ರರು'


ಶಿವಮೂರ್ತಿ ಮುರುಘಾ ಶರಣರು

ಚಿತ್ರದುರ್ಗ: 'ನಿರ್ಣಯ ಕೈಗೊಳ್ಳಲು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸ್ವತಂತ್ರರು. ನಾವು ಯಾವುದೇ ಒತ್ತಡ ಹಾಕುವುದಿಲ್ಲ' ಎಂದು ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು ತಿಳಿಸಿದ್ದಾರೆ.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಉತ್ತಮ ಕೆಲಸ ಮಾಡಿದವರು ಕೆಟ್ಟ ಮಾತು ಕೇಳಲು ಸಿದ್ಧರಿರಬೇಕು. ಬಸವಣ್ಣನ ತತ್ವಕ್ಕೆ ಅನುಗುಣವಾಗಿ ನಡೆಯಬೇಕಿದೆ' ಎಂದು ಪ್ರತಿಕ್ರಿಯೆ ನೀಡಿದರು.

ಬಿಎಸ್‌ವೈಗೆ ಮತ್ತಷ್ಟು ಸ್ವಾಮೀಜಿಗಳ ಬೆಂಬಲ

ಕಲಬುರ್ಗಿ: ಬಿ.ಎಸ್. ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಹುದ್ದೆಯಿಂದ ಕೈಬಿಡಲಾಗುತ್ತಿದೆ ಎಂಬ ವದಂತಿಗಳ ಮಧ್ಯೆಯೇ ಅವರ ಪರವಾಗಿ ಕಲ್ಯಾಣ ಕರ್ನಾಟಕದ ಮತ್ತಷ್ಟು ಸ್ವಾಮೀಜಿಗಳು ಧ್ವನಿ ಎತ್ತಿದ್ದಾರೆ.

ಯಾದಗಿರಿ ಜಿಲ್ಲೆ ಅಬ್ಬೆತುಮಕೂರಿನ ಸಿದ್ಧ ಸಂಸ್ಥಾನ ಮಠದ ಪೀಠಾಧಿಪತಿ ಗಂಗಾಧರ ಸ್ವಾಮೀಜಿ, ಗುರುಮಠಕಲ್ ಖಾಸಾ ಮಠದ ಪೀಠಾಧಿಪತಿ ಶಾಂತವೀರ ಸ್ವಾಮೀಜಿ ಸೇರಿದಂತೆ ಯಾದಗಿರಿ ಜಿಲ್ಲೆಯ ಹಲವು ಸ್ವಾಮೀಜಿಗಳು ಗುರುವಾರ ಪತ್ರಿಕಾಗೋಷ್ಠಿ ನಡೆಸಿ, ಸಿ.ಎಂ. ಸ್ಥಾನಕ್ಕೆ ರಾಜೀನಾಮೆ ನೀಡಬಾರದು ಎಂದು ಒತ್ತಾಯಿಸಿದರು.

ರಾಯಚೂರು ಜಿಲ್ಲೆ ಮಾನ್ವಿ ತಾಲ್ಲೂಕಿನ ವಿವಿಧ ಮಠಾಧೀಶರು ಅಡವಿ ಅಮರೇಶ್ವರ ಮಠದ ಶಾಂತಮಲ್ಲ ಶಿವಾಚಾರ್ಯ ಸ್ವಾಮೀಜಿ ನೇತೃತ್ವದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಯಡಿಯೂರಪ್ಪ ಅವರನ್ನು ಕೆಳಗಿಳಿಸಿದರೆ ಬಿಜೆಪಿಗೆ ನಷ್ಟ ಖಚಿತ ಎಂದು ಎಚ್ಚರಿಸಿದರು.

ತಪ್ಪು ಸಂದೇಶ: ಮಠಾಧೀಶರು ರಾಜಕೀಯದಲ್ಲಿ ತೊಡಗುವುದರಿಂದ ಜನರಿಗೆ ತಪ್ಪು ಸಂದೇಶ ರವಾನೆಯಾಗುತ್ತದೆ ಎಂದು ಯಾದಗಿರಿ ಜಿಲ್ಲೆ ಗುರುಮಠಕಲ್‌ನ ಜೆಡಿಎಸ್ ಶಾಸಕ ನಾಗನಗೌಡ ಕಂದಕೂರ ಹೇಳಿದರು.

ಕೂಡಲಸಂಗಮದ ಬಸವ ಜಯಮೃತ್ಯುಂಜಯ ಸ್ವಾಮೀಜಿ ನಿಲುವು

'ಉ.ಕರ್ನಾಟಕದ ಲಿಂಗಾಯತ ನಾಯಕ ಸಿ.ಎಂ ಆಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಮುಖ್ಯಮಂತ್ರಿ ಬದಲಾವಣೆ ವಿಚಾರದಲ್ಲಿ ನಮ್ಮದು ತಟಸ್ಥ ನಿಲುವು. ಒಂದು ವೇಳೆ ಮುಖ್ಯಮಂತ್ರಿ ಬದಲಾವಣೆಗೆ ಹೈಕಮಾಂಡ್ ಸೂಚಿಸಿದರೆ, ಉತ್ತರ ಕರ್ನಾಟಕ ಭಾಗದಿಂದ ಲಿಂಗಾಯತ ಸಮುದಾಯದ ಹಾಗೂ ಭ್ರಷ್ಟನಲ್ಲದ ನಾಯಕನನ್ನು ಮುಖ್ಯಮಂತ್ರಿಯನ್ನಾಗಿ ಮಾಡಬೇಕು' ಎಂದು ಕೂಡಲಸಂಗಮದ ಪಂಚಮಸಾಲಿ ಗುರುಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಒತ್ತಾಯಿಸಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,'ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ ಒಬಿಸಿ (2ಎ) ಮೀಸಲಾತಿ ಕಲ್ಪಿಸುವುದಾಗಿ ಯಡಿಯೂರಪ್ಪ ಭರವಸೆ ನೀಡಿದ್ದರು. ಅವರು ಮುಖ್ಯಮಂತ್ರಿ ಸ್ಥಾನದಿಂದ ಇಳಿಯುವ ಮುನ್ನ ಭರವಸೆ ಈಡೇರಿಸಬೇಕು' ಎಂದು ಆಗ್ರಹಿಸಿದರು.

'ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ನೀಡಬೇಕು ಎಂದು ಆಗ್ರಹಿಸಿ ಬೃಹತ್ ಪಾದಯಾತ್ರೆ ನಡೆಸಿದ್ದೆವು. ಮುಂದಿನ ಆರು ತಿಂಗಳಿನಲ್ಲಿ ಮೀಸಲಾತಿ ಕಲ್ಪಿಸುವುದಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಭರವಸೆ ನೀಡಿದ್ದರಿಂದ ಪ್ರತಿಭಟನೆ ಕೈಬಿಡಲಾಯಿತು' ಎಂದರು.

'ಈಗ ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ವಿಚಾರ ಭುಗಿಲೆದ್ದಿದೆ. ಮುಖ್ಯಮಂತ್ರಿ ಬದಲಾದರೆ, ಮೀಸಲಾತಿ ಪ್ರಕ್ರಿಯೆ ಇನ್ನಷ್ಟು ವಿಳಂಬವಾಗಬಹುದು. ಹಾಗಾಗಿ, ಯಡಿಯೂರಪ್ಪ ಅವರು ತಮ್ಮ ಅವಧಿಯಲ್ಲೇ ಸಮುದಾಯಕ್ಕೆ ಮೀಸಲಾತಿ ಕಲ್ಪಿಸಬೇಕು. ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವ ಮುನ್ನ ವಿಶೇಷ ಸಚಿವ ಸಂಪುಟ ಸಭೆ ಕರೆದು ನಮ್ಮ ಬೇಡಿಕೆ ಈಡೇರಿಸಬೇಕು' ಎಂದೂ ಆಗ್ರಹಿಸಿದರು.

'ವಿವಿಧ ಮಠಾಧೀಶರು ಯಡಿಯೂರಪ್ಪ ಅವರನ್ನು ಈಗಾಗಲೇ ಭೇಟಿಯಾಗಿದ್ದಾರೆ. ಮಠಾಧೀಶರು ಹೈಕಮಾಂಡ್ ಅಲ್ಲ. ಮಠಾಧೀಶರು ಸರ್ಕಾರಕ್ಕೆ ಸಲಹೆ ನೀಡಬಹುದೇ ಹೊರತು, ಆಡಳಿತಾತ್ಮಕ ವಿಚಾರಗಳಲ್ಲಿ ಆಗ್ರಹ ಮಾಡುವುದು ಸರಿಯಲ್ಲ. ಈ ವಿಚಾರದಲ್ಲಿ ನಾನು ತಟಸ್ಥ' ಎಂದರು.

ಆಯೋಗಕ್ಕೆ ಮನವಿ: 'ಸಮುದಾಯವನ್ನು ಪ್ರವರ್ಗ 2ಎ ಪಟ್ಟಿಗೆ ಸೇರ್ಪಡೆ ಮಾಡುವ ಸಂಬಂಧ ಸರ್ಕಾರಕ್ಕೆ ಶೀಘ್ರವಾಗಿ ವರದಿ ಸಲ್ಲಿಸುವಂತೆ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷ ಕೆ.ಜಯಪ್ರಕಾಶ್ ಹೆಗ್ಡೆ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದ್ದೇವೆ. ಅವರು ಶೀಘ್ರವಾಗಿ ವರದಿ ಸಲ್ಲಿಸುವುದಾಗಿ ತಿಳಿಸಿದ್ದಾರೆ' ಎಂದು ಬಸವ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು.


ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷ ಕೆ.ಜಯಪ್ರಕಾಶ್ ಹೆಗ್ಡೆ ಅವರಿಗೆ ಬಸವ ಜಯಮೃತ್ಯುಂಜಯ ಸ್ವಾಮೀಜಿ ಮನವಿ ಸಲ್ಲಿಸಿದರು. ಲಿಂಗಾಯತ ಪಂಚಮಸಾಲಿ ಸಮುದಾಯದ ಮುಖಂಡರಾದ ಕರಿಯಪ್ಪ, ಮಲ್ಲೇಶ್, ಅಮರೇಶ್ ಕರಡಿ, ಬಿ.ಎಸ್.ಪಾಟೀಲ್, ಶಿವಕುಮಾರ್ ಮೇಟಿ, ಆಯೋಗದ ಅರುಣ್ ಕುಮಾರ್, ರಾಜಶೇಖರ್, ಕಲ್ಯಾಣ್ ಕುಮಾರ್ ಹಾಗೂ ಇತರರು ಇದ್ದರು –ಪ್ರಜಾವಾಣಿ ಚಿತ್ರ

ನಾಳೆ ರಾಜ್ಯ ಕಾರ್ಯಕಾರಿಣಿ ಸಭೆ

'ಜುಲೈ 24ರಂದು ಬೆಳಿಗ್ಗೆ 10 ಗಂಟೆಗೆ ಬೆಂಗಳೂರಿನ ಪರಾಗ್ ಹೋಟೆಲ್‌ನಲ್ಲಿ ಲಿಂಗಾಯತ ಪಂಚಮಸಾಲಿ ಮೀಸಲಾತಿ ಚಳವಳಿಗಾರರ ರಾಜ್ಯ ಕಾರ್ಯಕಾರಿಣಿ ಸಭೆ ಕರೆಯಲಾಗಿದೆ. ಮೀಸಲಾತಿ ಸಂಬಂಧ ಮುಂದಿನ ಚಳವಳಿ ಕುರಿತು ಸಭೆಯಲ್ಲಿ ಚರ್ಚಿಸಲಾಗುವುದು. ಸಭೆಯ ಮೂಲಕ ಸರ್ಕಾರದ ಮೇಲೆ ಒತ್ತಡ ತರಲಾಗುವುದು' ಎಂದು ಬಸವ ಜಯಮೃತ್ಯುಂಜಯ ಸ್ವಾಮೀಜಿ ತಿಳಿಸಿದರು.

ರಾಜೀನಾಮೆಗೆ ಸೈ: ಬಿಎಸ್‌ವೈ

ಒಂದನೇ ಪುಟದಿಂದ

'ದೇಶದಲ್ಲಿ 75 ವರ್ಷ ಮೀರಿದ ಯಾರಿಗೂ ಅಧಿಕಾರ ನೀಡಿಲ್ಲ. ಆದರೆ, ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಷಾ ಮತ್ತು ಪಕ್ಷದ ಅಧ್ಯಕ್ಷ ನಡ್ಡಾ ಅವರು ನನ್ನ ಕಾರ್ಯನಿರ್ವಹಣೆಯ ಬಗ್ಗೆ ತೃಪ್ತಿ ಇದ್ದ ಕಾರಣ, 75 ವರ್ಷದ ಬಳಿಕವೂ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಲು ಅವಕಾಶ ನೀಡಿದರು. ನನ್ನ ಬಗ್ಗೆ ಅವರಿಗಿರುವ ವಿಶೇಷ ಕಾಳಜಿಯೇ ಇದಕ್ಕೆ ಕಾರಣ' ಎಂದರು.

'ಈ ಎಲ್ಲ ಬೆಳವಣಿಗೆಗಳಿಂದ ಪಕ್ಷದ ಕಾರ್ಯಕರ್ತರು ಮತ್ತು ಅಭಿಮಾನಿಗಳು ಗೊಂದಲಕ್ಕೆ ಒಳಗಾಗಬಾರದು. ಮುಂದಿನ ದಿನಗಳಲ್ಲಿ ಪಕ್ಷವನ್ನು ಸಂಘಟಿಸಿ, ಅಧಿಕಾರಕ್ಕೆ ತರುವುದು ನನ್ನ ಗುರಿ. ಯಾರೂ ಕೂಡ ನನ್ನ ಪರವಾಗಿ ಹೇಳಿಕೆ ನೀಡುವುದು ಬೇಡ. ಪ್ರತಿಭಟನೆ ನಡೆಸುವುದು ಬೇಡ' ಎಂದು ತಿಳಿಸಿದರು.

'ಕಳೆದ ಎರಡು ಮೂರು ದಿನಗಳಿಂದ ನೂರಕ್ಕೂ ಹೆಚ್ಚು ಮಠಾಧೀಶರು ನನ್ನನ್ನು ಭೇಟಿ ಮಾಡಿ ಆಶೀರ್ವಾದ ಮಾಡಿದ್ದಾರೆ. ಇದನ್ನು ನನ್ನ ಜೀವನದಲ್ಲಿ ಮರೆಯಲು ಸಾಧ್ಯವಿಲ್ಲ. ಹಿಂದೆ ಈ ರೀತಿ ಯಾರಿಗೂ ಆಶೀರ್ವಾದ ನೀಡಿದ ಉದಾಹರಣೆ ಇಲ್ಲ. ಮುಂದೆಯೂ ಮಠಾಧೀಶರು ಸಹಕರಿಸಬೇಕು' ಎಂದು ಮನವಿ ಮಾಡಿದರು.

ರವಿ, ಸಂತೋಷ್, ನಿರಾಣಿ ಹೆಸರು ಮುನ್ನೆಲೆಗೆ

ಒಂದನೇ ಪುಟದಿಂದ

ಲಿಂಗಾಯರಿಗೆ ಕೊಡಲೇಬೇಕು ಎಂಬ ವಾದ ಬಲವಾದರೆ ಮುರುಗೇಶ ನಿರಾಣಿ, ಬಸವರಾಜ ಬೊಮ್ಮಾಯಿ, ಶಿವಕುಮಾರ ಉದಾಸಿ ಹೆಸರು ಪ್ರಧಾನವಾಗಿ ಚರ್ಚೆಯಲ್ಲಿದೆ ಎಂದೂ ಮೂಲಗಳು ಹೇಳಿವೆ.

ಆಗ, ಉಪಮುಖ್ಯಮಂತ್ರಿಗಳ ಸಂಖ್ಯೆ ಐದಕ್ಕೆ ಏರುವ ಸಾಧ್ಯತೆಯೂ ಇದೆ. 'ಎದುರಾಗಬಹುದಾದ ಎಲ್ಲ ಸವಾಲು, ಸಮಸ್ಯೆಗಳನ್ನು ನೀಗಿಸುವ ಧೈರ್ಯದ ಮೇಲೆಯೇ ಯಡಿಯೂರಪ್ಪ ಅವರನ್ನು ಕುರ್ಚಿಯಿಂದ ಇಳಿಸುವ ದೊಡ್ಡ ಸಾಹಸಕ್ಕೆ ಕೈಹಾಕಿರುವಾಗ, ಲಿಂಗಾಯತರಲ್ಲದೇ ಬೇರೆ ಸಮುದಾಯವರನ್ನು ಮುಖ್ಯಮಂತ್ರಿ ಮಾಡಿದರೆ ಏನಾಗುತ್ತದೆ ಎಂಬ ಲೆಕ್ಕಾಚಾರ ವರಿಷ್ಠರದ್ದಾಗಿದೆ. ಮುಖ್ಯಮಂತ್ರಿ ಸ್ಥಾನವೆಂಬುದು ಜಾತಿ ಅಥವಾ ಕುಟುಂಬದ ಸ್ವತ್ತಲ್ಲ. ಹಿಂದುತ್ವ–ರಾಷ್ಟ್ರವಾದದ ಸಿದ್ಧಾಂತದ ಮೇಲೆ ಪಕ್ಷ ಸಂಘಟನೆ ಕಟ್ಟುವಾಗ, ಆಯಕಟ್ಟಿನ ಹುದ್ದೆಯ ಆಯ್ಕೆ ವಿಷಯದಲ್ಲಿ ಜಾತಿ ನೋಡದೇ ಸಿದ್ಧಾಂತದ ಬಗೆಗಿನ ಬದ್ಧತೆ ನೋಡುವುದೇ ಹೆಚ್ಚು ಸಮಂಜಸ. ಕರ್ನಾಟಕದ ರಾಜಕಾರಣದಲ್ಲಿ ಹಾಸುಹೊಕ್ಕಾಗಿರುವ ಜಾತಿಕುಟುಂಬ ಆಧಾರಿತ 'ಪರಂಪರೆ'ಯನ್ನು ಒಡೆದು ಕಟ್ಟುವುದಕ್ಕೆ ಇದು ಸಕಾಲ ಎಂಬ ಚರ್ಚೆಯೂ ನಡೆದಿದೆ. ಹೀಗಾಗಿ, ಲಿಂಗಾಯತರಲ್ಲದವರಿಗೆ ಸಿಗುವ ಸಾಧ್ಯತೆಯೂ ಇದೆ' ಎಂದು ಆ ಪಕ್ಷದ ಮೂಲಗಳು ಹೇಳಿವೆ.

ಬಿಎಸ್‌ವೈ ಪಕ್ಷ ಕಟ್ಟುವಾಗ ಸ್ವಾಮಿಗಳು ಎಲ್ಲಿದ್ದರು?

'ಯಡಿಯೂರಪ್ಪ ನಾಲ್ಕು ಶಾಸಕರನ್ನು ಇಟ್ಟುಕೊಂಡು ಪಕ್ಷ ಕಟ್ಟುವಾಗ ಸ್ವಾಮೀಜಿಗಳು ಎಲ್ಲಿದ್ದರು? ನಿತ್ಯವೂ ರೈತರ ಜಪ ಮಾಡುತ್ತಲೇ ಯಡಿಯೂರಪ್ಪ ಪಕ್ಷ ಕಟ್ಟಿದರು. ರಾಜ್ಯದಲ್ಲಿ ಎಚ್.ಡಿ.ದೇವೇಗೌಡ ಬಿಟ್ಟರೆ, ಯಡಿಯೂರಪ್ಪ ಮಾತ್ರ ರೈತರ ಜಪ ಮಾಡಿದ್ದು' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಹೇಳಿದರು.

'ಮುಖ್ಯಮಂತ್ರಿ ವಿರುದ್ಧ ಮೊದಲ ಮಾತನಾಡಿದವರೇ ಲಿಂಗಾಯತ ಶಾಸಕರು. ಆಗ ಅವರನ್ನು ಕರೆಸಿ ಸ್ವಾಮೀಜಿಗಳು ಬುದ್ಧಿ ಮಾತು ಹೇಳಬಹುದಿತ್ತಲ್ಲ' ಎಂದು ಮಠಾಧೀಶರನ್ನು ಪ್ರಶ್ನಿಸಿದರು.

'ಯಡಿಯೂರಪ್ಪ ಅವರು ಸರಿಯಾದ ನಿರ್ಧಾರ ತೆಗೆದುಕೊಂಡಿದ್ದಾರೆ. ಅವರನ್ನು ಮುಖ್ಯಮಂತ್ರಿಯಾಗಿ ಮುಂದುವರೆಯಲು ಬಿಡುವುದಿಲ್ಲ ಎಂದು ಪಕ್ಷದಲ್ಲಿ ಯಾರೂ ಹೇಳಿಲ್ಲ' ಎಂದು ತಿಳಿಸಿದರು.

ಕ್ರೈಸ್ತ ಪಾದ್ರಿಗಳ ಬೆಂಬಲ

ಯಡಿಯೂರಪ್ಪ ಅವರಿಗೆ ವಿವಿಧ ಸಮುದಾಯಗಳ ಮಠಾಧೀಶರು ಮಾತ್ರವಲ್ಲದೆ, ಕ್ರೈಸ್ತ ಪಾದ್ರಿಗಳು ಮತ್ತು ಅಖಿಲ ಭಾರತ ಕ್ರೈಸ್ತ ಮಹಾಸಭಾದ ಸದಸ್ಯರೂ ಕೂಡ ಬೆಂಬಲ ವ್ಯಕ್ತಪಡಿಸಿದ್ದಾರೆ.

ಮುಂದಿನ ಅವಧಿಯವರೆಗೆ ಯಡಿಯೂರಪ್ಪ ಅವರನ್ನೇ ಮುಂದುವರಿಸಬೇಕು ಎಂದು ಮನವಿ ಪತ್ರವನ್ನು ಬಿಜೆಪಿಯ ರಾಷ್ಟ್ರೀಯ ವರಿಷ್ಠರಿಗೆ ಪತ್ರ ಕಳುಹಿಸುವುದಾಗಿ ಕ್ರೈಸ್ತ ಮುಖಂಡರ ನಿಯೋಗ ಹೇಳಿದೆ. ಮಾದಿಗ ಸಮುದಾಯದ ಆದಿಜಾಂಬವ ಮಠಾಧೀಶರು ಸೇರಿದಂತೆ ಹಲವು ಸ್ವಾಮೀಜಿಗಳು ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ಬೆಂಬಲ ಸೂಚಿಸಿದರು.

'ಭ್ರಷ್ಟರೇ ರಾಜಕೀಯ ಬಿಟ್ಟು ತೊಲಗಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭ್ರಷ್ಟರೇ ಪವಿತ್ರ ರಾಜಕೀಯ ಬಿಟ್ಟು ತೊಲಗಿ' ಎಂಬ ಅಭಿಯಾನವನ್ನು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದಿಂದ ಆಗಸ್ಟ್ 8 ರಿಂದ ಆರಂಭಿಸಲಾಗುತ್ತಿದೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಸಿ.ಎನ್. ದೀಪಕ್ ತಿಳಿಸಿದರು.

'ರಾಜ್ಯವ್ಯಾಪಿ ಒಂದು ತಿಂಗಳ ಕಾಲ ನಡೆಯಲಿರುವ ಅಭಿಯಾನವನ್ನು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದ ಈಸೂರಿನಿಂದ ಆರಂಭಿಸಲಾಗುತ್ತಿದೆ. ಅಂದು ಬೆಳಿಗ್ಗೆ 10.30ಕ್ಕೆ ಹೋರಾಟಗಾರ ಎಸ್.ಆರ್. ಹಿರೇಮಠ ಅವರು ಈಸೂರಿನಲ್ಲಿರುವ ಹುತಾತ್ಮರ ಸ್ಮಾರಕಕ್ಕೆ ಮಾಲಾರ್ಪಣೆ ಮಾಡುವ ಮೂಲಕ ಚಾಲನೆ ನೀಡಲಿದ್ದಾರೆ. ಹಿರಿಯ ಚಿಂತಕ ಡಿ.ಎಸ್. ನಾಗಭೂಷಣ ಭಾಗವಹಿಸಲಿದ್ದು, ಕೋವಿಡ್ ಕಾರಣದಿಂದ ಸರಳ ಮತ್ತು ಸಾಂಕೇತಿಕವಾಗಿ ಸಭೆ ನಡೆಸಲಾಗುವುದು' ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ರಾಜ್ಯದೆಲ್ಲೆಡೆ ನಡೆಯಲಿರುವ ಅಭಿಯಾನವು ಸೆಪ್ಟೆಂಬರ್ 8ರಂದು ತುಮಕೂರಿನಲ್ಲಿ ಸಮಾರೋಪಗೊಳ್ಳಲಿದೆ' ಎಂದು ವಿವರಿಸಿದರು.

'ಜಂಗಮ ಪ್ರೇಮಿ'ಯ ಬದಲಾವಣೆ ಬೇಡ

ಪ್ರಜಾವಾಣಿ ವಾರ್ತೆ

ವಿಜಯಪುರ: 'ಜಂಗಮ, ಸಾಧು, ಸಂತರ ಪ್ರೇಮಿಯಾಗಿರುವ ಯಡಿಯೂರಪ್ಪ ಅವರನ್ನು ಇನ್ನುಳಿದ ಅವಧಿಗೂ ಮುಖ್ಯಮಂತ್ರಿಯಾಗಿ ಮುಂದುವರಿಸಬೇಕು' ಎಂದು ವಿಜಯಪುರ–ಬಾಗಲಕೋಟೆ ಜಿಲ್ಲೆಯ 17ಕ್ಕೂ ಅಧಿಕ ವಿವಿಧ ಮಠಾಧೀಶರು ಬಿಜೆಪಿ ಹೈಕಮಾಂಡ್‌ಗೆ ಒಕ್ಕೊರಲಿನಿಂದ ಆಗ್ರಹಿಸಿದರು.

ಯಡಿಯೂರಪ್ಪ ಅವರಿಗೆ ಬೆಂಬಲ ಸೂಚಿಸಿ ನಗರದಲ್ಲಿ ಗುರುವಾರ ನಡೆದ ಮಠಾಧೀಶರ ಸಭೆ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬಬಲೇಶ್ವರದ ಡಾ.ಮಹಾದೇವ ಶಿವಾಚಾರ್ಯ ಸ್ವಾಮಿ, ಯಡಿಯೂರಪ್ಪನವರು ನಾಡಿನ ಎಲ್ಲ ಜಾತಿ, ಜನಾಂಗವನ್ನು ಒಟ್ಟಿಗೆ ಕರೆದುಕೊಂಡು ಹೋಗುತ್ತಿರುವ ಧೀಮಂತ ರಾಜಕಾರಣಿಯಾಗಿದ್ದಾರೆ. ಯಾವುದೇ ಕಾರಣಕ್ಕೂ ಅವರನ್ನು ಹುದ್ದೆಯಿಂದ ಕೆಳಗಿಳಿಸಬಾರದು. ಬಿಜೆಪಿ ವರಿಷ್ಠರು ನಮ್ಮ ಅಭಿಪ್ರಾಯಕ್ಕೆ ಬೆಲೆ ಕೊಡಬೇಕು ಎಂದು ಮನವಿ ಮಾಡಿದರು.

ಯಡಿಯೂರಪ್ಪನವರಿಗೆ ಬಿಜೆಪಿ ಶಾಸಕರು, ಸಚಿವರು ಬೆನ್ನೆಲುಬಾಗಿ ನಿಲ್ಲಬೇಕು. ಅಣ್ಣ–ತಮ್ಮರಾಗಿ ಒಗ್ಗಟ್ಟಿನಿಂದ ನಡೆಯಬೇಕು ಎಂದು ಮನಗೂಳಿ ಹಿರೇಮಠದ ಸಂಗನಬಸವ ಸ್ವಾಮೀಜಿ ಸಲಹೆ ನೀಡಿದರು.

'ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ನಾಡಿನ ಮಠಾಧೀಶರ ಮೇಲೆ ಅನಗತ್ಯ ಆರೋಪ ಮಾಡುವುದನ್ನು ನಿಲ್ಲಿಸಬೇಕು. ನಾವ್ಯಾರೂ ನಿಮಗೆ ಕೇಡು ಬಯಸಿಲ್ಲ. ನೀವೂ ಸಹ ಮಠಾಧೀಶರ ಬಗ್ಗೆ ಹಗುರವಾಗಿ ಮಾತನಾಡಬಾರದು' ಎಂದರು.


ಯಡಿಯೂರಪ್ಪ ಅವರನ್ನು ಗುರುವಾರ ಭೇಟಿಯಾದ ಮಾದಿಗ ಸಮುದಾಯದ ಆದಿಜಾಂಬವ ಮಠಾಧೀಶರು, ಮುಖ್ಯಮಂತ್ರಿಯಾಗಿ ಮುಂದುವರಿಯಿರಿ ಎಂದು ಹಾರೈಸಿದರು. ಅವಧಿಪೂರ್ಣಗೊಳಿಸಲು ಯಡಿಯೂರಪ್ಪನವರಿಗೆ ಅವಕಾಶ ನೀಡಬೇಕು ಎಂದೂ ಸ್ವಾಮೀಜಿಗಳು ಬಿಜೆಪಿ ವರಿಷ್ಠರನ್ನು ಆಗ್ರಹಿಸಿದರು. ಈ ಸಮಯದಲ್ಲಿ ಹಿರಿಯೂರು ಆದಿಜಾಂಬವ ಕೋಡಿಹಳ್ಳಿ ಬೃಹನ್ಮಠದ ಮಾರ್ಕಂಡಮುನಿ ಸ್ವಾಮೀಜಿ, ಷಡಕ್ಷರಮುನಿ ಸ್ವಾಮೀಜಿ, ಬ್ರಹ್ಮಾನಂದಮುನಿ ಸ್ವಾಮೀಜಿ, ಶಿವಮುನಿ ಸ್ವಾಮೀಜಿ ಇದ್ದರು.

ಕುತೂಹಲಕ್ಕೆ ಕಾರಣವಾದ 'ವಲಸಿಗ' ಸಚಿವರ ನಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡು ವರ್ಷದ ಹಿಂದೆ ಕಾಂಗ್ರೆಸ್, ಜೆಡಿಎಸ್‌ನಿಂದ ವಲಸೆ ಬಂದು, ಬಿಜೆಪಿ ಸೇರಿ ಸಚಿವರಾಗಿರುವ ಏಳು ಜನರು, ಒಂದು ಗುಂಪಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಅರ್ಧ ತಾಸಿಗೂ ಹೆಚ್ಚಿನ ಹೊತ್ತು ಚರ್ಚೆ ನಡೆಸಿರುವುದು ಗುರುವಾರ ಸಂಜೆ ಹೊತ್ತಿಗೆ ಚರ್ಚೆಗೆ ಕಾರಣವಾಯಿತು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಸಚಿವ ಸಂಪುಟ ಸಭೆಯ ಬಳಿಕ ಯಡಿಯೂರಪ್ಪ ತಮ್ಮ ಕೊಠಡಿಗೆ ತೆರಳಿದರು.

ಸಚಿವರಾದ ಎಸ್.ಟಿ. ಸೋಮಶೇಖರ್, ಡಾ.ಕೆ. ಸುಧಾಕರ್, ಬಿ.ಸಿ. ಪಾಟೀಲ, ಬೈರತಿ ಬಸವರಾಜ, ಶಿವರಾಂ ಹೆಬ್ಬಾರ್, ಕೆ. ಗೋಪಾಲಯ್ಯ ಅವರು, ಎಲ್ಲರಿಗೂ ಕಾಣಿಸುವಂತೆ ಪ್ರತಿಯೊಬ್ಬರೂ ತಮ್ಮ ಕೈಯಲ್ಲಿ ಪತ್ರವೊಂದನ್ನು ಹಿಡಿದು ಮುಖ್ಯಮಂತ್ರಿ ಕೊಠಡಿ ಕಡೆ ಒಂದು ಗುಂಪಾಗಿ ಧಾವಿಸಿದರು. ಸಚಿವ ಎಂ.ಟಿ.ಬಿ. ನಾಗರಾಜ್ ಕೂಡ ಸೇರಿಕೊಂಡರು.

ಗೃಹ ಸಚಿವ ಬಸವರಾಜ ಬೊಮ್ಮಾಯಿ ಹಾಗೂ ಕಂದಾಯ ಸಚಿವ ಆರ್. ಅಶೋಕ ಅವರು ಕೊಠಡಿಯೊಳಗೆ ಸೇರಿಸಿಕೊಂಡು ಚರ್ಚೆ ನಡೆಸಿದರು. 'ವಲಸಿಗ' ಗುಂಪಿನ ಸಚಿವರ ರಾಜೀನಾಮೆ ಕೊಡಿಸುವ ಮೂಲಕ ಯಡಿಯೂರಪ್ಪ ಪ್ರತ್ಯೇಕ ತಂತ್ರ ಹೆಣೆಯಲು ಮುಂದಾಗಿದ್ದಾರೆ ಎಂಬ ವದಂತಿಗಳು ಹರಿದಾಡಿದವು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸಚಿವ ಬಿ.ಸಿ. ಪಾಟೀಲ, ರಾಜೀನಾಮೆ ಕೊಡುವ ಬಗ್ಗೆ ಸುಳ್ಳು ಸುದ್ದಿ ಹಬ್ಬಿಸಲಾಗಿದೆ. ಅಂತಹದೇನೂ ಇಲ್ಲ ಎಂದರು.

ಸಚಿವ ಶಿವರಾಂ ಹೆಬ್ಬಾರ್, ಇಲಾಖೆ ಮತ್ತು ಕ್ಷೇತ್ರದ ಕೆಲಸದ ಬಗ್ಗೆ ಚರ್ಚಿಸಲು ಹೋಗಿದ್ದೇವು ಎಂದು ಹೇಳಿಕೊಂಡರು.

'ನಿಮ್ಮ ರಾಜೀನಾಮೆ ಪಡೆಯುವುದಾದರೆ ನಾನೂ ರಾಜೀನಾಮೆ ಕೊಡಲಿದ್ದೇನೆ ಎಂದು ಯಡಿಯೂರಪ್ಪ ಅವರಿಗೆ ತಿಳಿಸಿದ್ದೇನೆ' ಎಂದು ಎಂ.ಟಿ.ಬಿ. ನಾಗರಾಜ್ ಹೇಳಿದರು.

ಭವಿಷ್ಯದ ಬಗ್ಗೆ ಚರ್ಚೆ: ಯಡಿಯೂರಪ್ಪ ಅವರನ್ನು ಕುರ್ಚಿಯಿಂದ ಇಳಿಸಿ, ಹೊಸಬರು ಮುಖ್ಯಮಂತ್ರಿಯಾದರೆ ಆ ಸರ್ಕಾರದಲ್ಲಿ ತಮ್ಮ ಭವಿಷ್ಯವೇನು ಎಂಬುದು ವಲಸಿಗ ಸಚಿವರ ಆತಂಕವಾಗಿದೆ. ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬರಲು ಕಾರಣರಾದ ತಮ್ಮನ್ನು ಕೈಬಿಡದಂತೆ ಹಾಗೂ ಬಿಜೆಪಿಯಲ್ಲಿ ತಮಗೆ ಸೂಕ್ತ ಭವಿಷ್ಯ ಕಲ್ಪಿಸುವಂತೆ ಯಡಿಯೂರಪ್ಪ ಅವರಿಗೆ ಮನವರಿಕೆ ಮಾಡಿಕೊಡುವುದಷ್ಟೇ ಸಚಿವರ ಉದ್ದೇಶವಾಗಿತ್ತು ಎಂದು ಅವರ ಆಪ್ತ ಮೂಲಗಳು ಹೇಳಿವೆ.

ಬಿಜೆಪಿ, ಆರ್‌ಎಸ್‌ಎಸ್ ನಿಲುವಿಗೆ ಪಂಚಾಕ್ಷರಿ ಸ್ವಾಮೀಜಿ ಆಕ್ಷೇಪ

ಚುನಾವಣೆಗೆ ಬೇಕು; ಈಗ ಬೇಡವೇ?

ಪ್ರಜಾವಾಣಿ ವಾರ್ತೆ

ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): 'ಚುನಾವಣೆ ಸಂದರ್ಭದಲ್ಲಿ ಹೂವು, ಹಣ್ಣು ತೆಗೆದುಕೊಂಡು ಮಠಗಳಿಗೆ ಭೇಟಿ ನೀಡುತ್ತಾರೆ. ನಿಮ್ಮ ಸಮಾಜದ ಮತಗಳನ್ನು ಬಿಜೆಪಿಗೇ ಹಾಕಿಸುವಂತೆ ಕೇಳಿಕೊಳ್ಳುತ್ತಾರೆ. ಆದರೆ, ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿಸುವ ವಿಷಯದಲ್ಲಿ ನಾವು ಬೇಡವೇ? ಸ್ವಾಮೀಜಿಗಳು ರಾಜಕೀಯದಲ್ಲಿ ಭಾಗವಹಿಸಬಾರದು ಎಂದೇಕೆ ಹೇಳುತ್ತಾರೆ' ಎಂದು ತಾಲ್ಲೂಕಿನ ನಿಚ್ಚಣಕಿ ಗುರುಮಡಿವಾಳೇಶ್ವರ ಮಠದ ಪಂಚಾಕ್ಷರಿ ಸ್ವಾಮೀಜಿ ಖಾರವಾಗಿ ಪ್ರಶ್ನಿಸಿದರು.

ಇಲ್ಲಿನ ರಾಜಗುರು ಸಂಸ್ಥಾನ ಕಲ್ಮಠದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಬೇರೆ ಸಮಾಜದವರು ದುಡಿಯಬೇಕು. ಆದರೆ, ಅಧಿಕಾರ ತಾವು ಹೇಳಿದಂತೆ ನಡೆಯಬೇಕು ಎಂಬ ನಿಲುವು ಆರ್‌ಎಸ್‌ಎಸ್‌ಗೆ ಇದೆ. ಯಡಿಯೂರಪ್ಪ ಅವರ ವಿಷಯದಲ್ಲಿ ಆರ್‌ಎಸ್‌ಎಸ್ ಮತ್ತು ಬಿಜೆಪಿ ಹೈಕಮಾಂಡ್ ತಮ್ಮ ನಿಲುವು ಬದಲಿಸಿಕೊಳ್ಳಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಬಿಜೆಪಿ ತಕ್ಕ ಶಿಕ್ಷೆ ಅನುಭವಿಸುತ್ತದೆ. ನಮ್ಮ ಮನವಿ ತಿರಸ್ಕರಿಸಿದರೆ ಕಾಂಗ್ರೆಸ್ ಪರ ಪ್ರಚಾರ ಮಾಡಲೂ ನಾವು ಹಿಂಜರಿಯುವುದಿಲ್ಲ' ಎಂದು ಎಚ್ಚರಿಕೆ ನೀಡಿದರು.

'ಯಡಿಯೂರಪ್ಪ ಬದಲಾವಣೆ ವಿರುದ್ಧ ನಾವೂ ಮಾತನಾಡುತ್ತೇವೆ. ಕಡ್ಡಿ ಒಯ್ದು ಗುಡ್ಡ ಹಾಗೂ ಗುಡ್ಡ ಒಯ್ದು ಕಡ್ಡಿ ಮಾಡುವುದನ್ನು ಅವರೇ (ಬಿಜೆಪಿ, ಆರ್‌ಎಸ್‌ಎಸ್) ಮಾಡುತ್ತಾರೆ. ಚುನಾವಣೆ ವೇಳೆ ಸುತ್ತೂರು ಮಠಕ್ಕೆ ಹೋಗಿ ಯಾರು ಕೂರುತ್ತಾರೆ?' ಎಂದು ಕೇಳಿದರು.

'ಯಡಿಯೂರಪ್ಪ ಅಧಿಕಾರ ಹಿಡಿದಾಗಿನಿಂದ ವಿಧಿ ಬೆನ್ನತ್ತಿ ಕಾಡಿದಂತೆ ಸ್ವಪಕ್ಷೀಯರೆ ಕಾಡುತ್ತಿದ್ದಾರೆ. ಇದನ್ನು ಬಿಡಬೇಕು. ಆರ್‌ಎಸ್‌ಎಸ್ ಹಾಗೂ ಬಿಜೆಪಿ ತಪ್ಪು ತಿದ್ದಿಕೊಳ್ಳಬೇಕು. ಇಲ್ಲದಿದ್ದರೆ ಅವರ ದಾರಿ ಅವರಿಗೆ; ನಮ್ಮ ದಾರಿ ನಮಗೆ' ಎಂದು ಎಚ್ಚರಿಕೆ ನೀಡಿದರು.

ಕಲ್ಮಠದ ಮಡಿವಾಳ ರಾಜಯೋಗೀಂದ್ರ ಸ್ವಾಮೀಜಿ, 'ಯಡಿಯೂರಪ್ಪ ಅವರು ನಾಡಿನಾದ್ಯಂತ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ. ಅವರು ಅಧಿಕಾರದ ಅವಧಿ ಪೂರೈಸುವಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ ನಮ್ಮ (ಸ್ವಾಮೀಜಿಗಳ) ನಿಲುವನ್ನು ಕಾದು ನೋಡಿ' ಎಂದರು.

ಮುರಗೋಡ ಹೊಸೂರು ಗಂಗಾಧರೇಶ್ವರ ಸ್ವಾಮೀಜಿ, ದೇಗಾಂವ ಮಡಿವಾಳೇಶ್ವರ ಮಠದ ವೀರೇಶ್ವರ ಸ್ವಾಮೀಜಿ, ದೇವರಶೀಗಿಹಳ್ಳಿಯ ವೀರೇಶ ದೇವರು, ದೇಮಟ್ಟಿಯ ಗುರುಸಿದ್ಧಯ್ಯ ಸ್ವಾಮೀಜಿ, ಬುಡರಕಟ್ಟಿಯ ಮೃತ್ಯುಂಜಯ ಸ್ವಾಮೀಜಿ, ವಿಜಯ ಮಹಾಂತ ದೇವರು, ಮುಖಂಡರಾದ ಗಂಗಣ್ಣ ಕರಿಕಟ್ಟಿ, ಬಿ.ಡಿ. ಪಾಟೀಲ ಇದ್ದರು.

'ಮಠಾಧೀಶರ ಮಧ್ಯಪ್ರವೇಶ: ಬಿಜೆಪಿಯೇ ನಿರ್ಧರಿಸಲಿ'

ರಾಮನಗರ: ಕೆಲವು ಸ್ವಾಮೀಜಿಗಳು ಯಡಿಯೂರಪ್ಪ ಪರವಾಗಿ ಮಾತನಾಡಿರುವುದು ರಾಜಕೀಯವಾಗಿ ಹೊಸ ಬೆಳವಣಿಗೆ. ಈ ಬಗ್ಗೆ ಬಿಜೆಪಿಯವರೇ ನಿರ್ಧರಿಸಬೇಕು ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಚನ್ನಪಟ್ಟಣದಲ್ಲಿ ಗುರುವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು 'ಯಡಿಯೂರಪ್ಪ ಅವರ ಎರಡು ವರ್ಷದ ಸಾಧನೆ ಬಗ್ಗೆ ಅಂಕ ಕೊಡಲು ನಾನು ಲೆಕ್ಚರರ್ ಅಲ್ಲ. ಅವರನ್ನು ಮುಖ್ಯಮಂತ್ರಿಯಾಗಿ ಉಳಿಸಿಕೊಳ್ಳುವ ಇಲ್ಲವೇ ಕೈಬಿಡುವ ಬಗ್ಗೆ ಬಿಜೆಪಿ ವರಿಷ್ಠರು ನಿರ್ಧರಿಸುತ್ತಾರೆ. ಇದರಲ್ಲಿ ನಮಗೆ ಯಾವ ಲಾಭವೂ ಬೇಡ' ಎಂದರು.

ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಲಿಂಗಾಯತ ಸಮುದಾಯದವರ ಆಯ್ಕೆ ವಿಚಾರ ಕುರಿತು ಪ್ರತಿಕ್ರಿಯಿಸಿ 'ಈ ಬಗ್ಗೆ ನನಗೆ ಮಾಹಿತಿ ಇಲ್ಲ. ಆದರೆ ಈಚೆಗೆ ರಾಷ್ಟ್ರೀಯ ಪಕ್ಷಗಳಲ್ಲಿ ಸಮುದಾಯಗಳ ಹೆಸರಲ್ಲಿ ಮತದಾರರನ್ನು ಸೆಳೆಯುವ ಪ್ರಯತ್ನ ನಡೆದಿದೆ' ಎಂದರು.

ಕಾಂಗ್ರೆಸ್‌ನಿಂದ 'ರಾಜಭವನ ಚಲೋ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೂರವಾಣಿ ಕದ್ದಾಲಿಕೆ ಪ್ರಕರಣ ಖಂಡಿಸಿ ಗುರುವಾರ 'ರಾಜಭವನ ಚಲೋ' ಹಮ್ಮಿಕೊಂಡಿದ್ದ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೇರಿದಂತೆ ಕಾಂಗ್ರೆಸ್‌ನ ಹಲವು ಮುಖಂಡರು ಮತ್ತು ಕಾರ್ಯಕರ್ತರನ್ನು ಅರ್ಧದಲ್ಲೇ ತಡೆದ ಪೊಲೀಸರು, ಅವರನ್ನು ವಶಕ್ಕೆ ಪಡೆದರು.

ವಿಧಾನಸೌಧದಲ್ಲಿರುವ ಶಾಸಕಾಂಗ ಪಕ್ಷದ ಕಚೇರಿಯಲ್ಲಿ ಸಭೆ ನಡೆಸಿದ ಬಳಿಕ ಸಿದ್ದರಾಮಯ್ಯ ನೇತೃತ್ವದಲ್ಲಿ ಗಾಂಧಿ ಪ್ರತಿಮೆ ಬಳಿ ಕೆಲಹೊತ್ತು ಧರಣಿ ನಡೆಸಿದ ಮುಖಂಡರು, ಬಳಿಕ ಪಾದ ಯಾತ್ರೆಯಲ್ಲಿ ರಾಜಭವನದ ಕಡೆ ಹೊರಟರು. ಪ್ರತಿಭಟನಕಾರರು ತಿಮ್ಮಯ್ಯ ವೃತ್ತದ ಬಳಿಗೆ ತಲುಪುತ್ತಿದ್ದಂತೆ ಪೊಲೀಸರು ತಡೆದರು.

ಈ ವೇಳೆ ಸುದ್ದಿಗಾರರ ಜೊತೆ ಮಾತನಾಡಿದ ಸಿದ್ದರಾಮಯ್ಯ, 'ದೂರವಾಣಿ ಕದ್ದಾಲಿಕೆ ಪ್ರಕರಣವನ್ನು ಸುಪ್ರೀಂ ಕೋರ್ಟ್‌ನ ಹಾಲಿ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ನಡೆಸಬೇಕು' ಎಂದು ಆಗ್ರಹಿಸಿದರು.

'ಬಿಜೆಪಿಯವರು ಸಮ್ಮಿಶ್ರ ಸರ್ಕಾರ ಪತನಗೊಳಿಸಿದ ವೇಳೆ ನನ್ನ ಆಪ್ತ ಸಹಾಯಕನ ದೂರವಾಣಿ ಕರೆಗಳನ್ನು ಕದ್ದಾಲಿಸಿದ್ದಾರೆ. ಎಐಸಿಸಿ ವರಿಷ್ಠರಾದ ರಾಹುಲ್ ಗಾಂಧಿ, ಜೆಡಿಎಸ್ ವರಿಷ್ಠ ದೇವೇಗೌಡ, ಎಚ್.ಡಿ.ಕುಮಾರಸ್ವಾಮಿ, ಅವರ ಆಪ್ತ ಸಹಾಯಕ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ವಿವಿಧ ನ್ಯಾಯಾಧೀಶರ ದೂರವಾಣಿಯನ್ನೂ ಕದ್ದಾಲಿಸಲಾಗಿದೆ' ಎಂದು ದೂರಿದರು.

'ಪೆಗಾಸಸ್' ಎಂಬ ಬಿಜೆಪಿ ನಿಗದಿಪಡಿಸಿ ಕದ್ದಾಲಿಕೆ ನೂರಾರು ಕೋಟಿ ಖರ್ಚು ಮಾಡಲಾಗಿದೆ. ಪ್ರಧಾನಿ ನರೇಂದ್ರ ಮೋದಿಯವರೇ ಈ ಪ್ರಕರಣದಲ್ಲಿ ನೇರವಾಗಿ ಭಾಗಿಯಾಗಿದ್ದಾರೆ. ಸಂಸತ್ತಿನ ಉಭಯ ಸದನಗಳಲ್ಲಿ ಈ ವಿಚಾರ ಪ್ರಸ್ತಾಪಿಸಲು ಕಾಂಗ್ರೆಸ್ ಪಕ್ಷದ ವರಿಷ್ಠರು ತೀರ್ಮಾನಿಸಿದ್ದಾರೆ' ಎಂದರು.

ಪ್ರತಿಭಟನೆಯಲ್ಲಿ ಕಾಂಗ್ರೆಸ್ ಕಾರ್ಯಾಧ್ಯಕ್ಷರಾದ ರಾಮಲಿಂಗಾರೆಡ್ಡಿ, ಸಲೀಂ ಅಹ್ಮದ್, ಶಾಸಕ ರಮೇಶ್ ಕುಮಾರ್, ಕೆ.ಜೆ. ಜಾರ್ಜ್, ಎಚ್.ಕೆ. ಪಾಟೀಲ, ಶಿವಾನಂದ ಪಾಟೀಲ, ಕೃಷ್ಣ ಬೈರೇಗೌಡ, ಪ್ರಿಯಾಂಕ್ ಖರ್ಗೆ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ, ಹಿರಿಯ ಮುಖಂಡರಾದ ಅಲ್ಲಂ ವೀರಭದ್ರಪ್ಪ ಇದ್ದರು.



'ರಾಜಭವನ ಚಲೋ' ನಡೆಸಿದ ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರನ್ನು ಪೊಲೀಸರು ತಡೆದರು –ಪ್ರಜಾವಾಣಿ ಚಿತ್ರ

ಪುಸ್ತಕ ಬಹುಮಾನಕ್ಕೆ 'ವರ್ಣಾಯಣ' ಆಯ್ಕೆ

ಬೆಂಗಳೂರು: ಕರ್ನಾಟಕ ಲಲಿತಕಲಾ ಅಕಾಡೆಮಿ ನೀಡುವ 2019-20ನೇ ಸಾಲಿನ 'ಪುಸ್ತಕ ಬಹುಮಾನ'ಕ್ಕೆ ಲೇಖಕ, ಗದಗಿನ ಡಿ.ಎ.ಉಪಾಧ್ಯ ಅವರ 'ವರ್ಣಾಯಣ' ಪುಸ್ತಕ ಆಯ್ಕೆ ಆಗಿದೆ.

'ಪ್ರಶಸ್ತಿಯು ₹25 ಸಾವಿರ ನಗದು ಮತ್ತು ಪುರಸ್ಕಾರ ಒಳಗೊಂಡಿದೆ' ಎಂದು ಅಕಾಡೆಮಿ ಅಧ್ಯಕ್ಷ ಡಿ. ಮಹೇಂದ್ರ ಅವರು ತಿಳಿಸಿದ್ದಾರೆ.

ಆಸ್ಕರ್ ಆರೋಗ್ಯ ಯಥಾಸ್ಥಿತಿ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ಯೇನೆಪೋಯ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿರುವ ರಾಜ್ಯಸಭಾ ಸದಸ್ಯ ಆಸ್ಕರ್ ಫರ್ನಾಂಡಿಸ್ ಅವರ ಆರೋಗ್ಯ ಗಂಭೀರ ಸ್ಥಿತಿಯಲ್ಲೇ ಮುಂದುವರಿದಿದೆ. ಈ ನಡುವೆ ಅವರಿಗೆ ಗುರುವಾರ ಡಯಾಲಿಸಿಸ್ ಮಾಡಲಾಗಿದೆ.

ಭಾನುವಾರ ಮನೆಯಲ್ಲಿ ಯೋಗ ಮಾಡುತ್ತಿದ್ದ ವೇಳೆ ಅವರು ಬಿದ್ದು ತಲೆಯಲ್ಲಿ ಪೆಟ್ಟಾಗಿದ್ದು, ಆಸ್ಪತ್ರೆಗೆ ದಾಖಲಾಗಿದ್ದರು. ಮಿದುಳಿನಲ್ಲಿ ರಕ್ತಸ್ರಾವ ಆಗಿದ್ದರಿಂದ ಸೋಮವಾರ ಪ್ರಜ್ಞೆ ಕಳೆದುಕೊಂಡಿದ್ದರು. ಬುಧವಾರ ದೇಹದಲ್ಲಿ ಕೊಂಚ ಚಲನೆ ಕಂಡುಬಂದಿತ್ತು. ಆದರೆ, ಪ್ರಜ್ಞಾಹೀನ ಸ್ಥಿತಿ ಮುಂದುವರಿದಿದೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ.

'ಕಿಡ್ನಿ ವೈಫಲ್ಯದ ಕಾರಣ ವಾರಕ್ಕೆ ಮೂರು ಬಾರಿ ಡಯಾಲಿಸಿಸ್‌ಗೆ ಒಳಗಾಗುತ್ತಿದ್ದ ಅವರಿಗೆ, ನಿಗದಿಯಂತೆ ಗುರುವಾರ ಡಯಾಲಿಸಿಸ್ ಮಾಡಲಾಗಿದೆ. ಅವರ ಆರೋಗ್ಯ ಸುಧಾರಣೆ ಗಮನಿಸಿ, ವೈದ್ಯರು ಶಸ್ತ್ರಚಿಕಿತ್ಸೆ ನಡೆಸುವ ತೀರ್ಮಾನ ಕೈಗೊಳ್ಳಲಿದ್ದಾರೆ' ಎಂದು ಸ್ಪಷ್ಟಪಡಿಸಿವೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕಾರ್ಯಾಧ್ಯಕ್ಷ ಸಲೀಂ ಅಹ್ಮದ್, ಪ್ರತಿಪಕ್ಷದ ನಾಯಕರಾದ ಸಿದ್ದರಾಮಯ್ಯ, ಎಸ್.ಆರ್.ಪಾಟೀಲ ಅವರು ಗುರುವಾರ ಆಸ್ಪತ್ರೆಗೆ ಭೇಟಿ ನೀಡಿದರು. ಬ್ಲಾಸಂ ಫರ್ನಾಂಡಿಸ್ ಹಾಗೂ ವೈದ್ಯರೊಂದಿಗೆ ಚರ್ಚೆ ನಡೆಸಿದರು.

ಮರಕ್ಕೆ ಕಾರು ಡಿಕ್ಕಿ: ಇಬ್ಬರು ರೈತ ಮುಖಂಡರ ಸಾವು

ಚಿಕ್ಕಮಗಳೂರು: ನಗರದ ರಾಮನಹಳ್ಳಿ ಮುಖ್ಯರಸ್ತೆ ಬದಿಯ ಮರಕ್ಕೆ ಗುರುವಾರ ಕಾರು ಡಿಕ್ಕಿ ಹೊಡೆದು, ಕಾರಿನಲ್ಲಿದ್ದ ರೈತ ಸಂಘದ ಇಬ್ಬರು ಮುಖಂಡರು ಮೃತಪಟ್ಟಿದ್ದು, ಮತ್ತೊಬ್ಬರು ಗಾಯಗೊಂಡಿದ್ದಾರೆ.



ರಾಮಸ್ವಾಮಿ



ಎಂ.ರಾಮು

ಈ ಮೂವರು ಧಾರವಾಡ ಜಿಲ್ಲೆಯ ನವಲಗುಂದದಲ್ಲಿ ನಡೆದ ಹುತಾತ್ಮರ ದಿನದಲ್ಲಿ ಪಾಲ್ಗೊಂಡು ಅಲ್ಲಿಂದ ಊರಿಗೆ ವಾಪಸಾಗುವಾಗ ಅವಘಡ ಸಂಭವಿಸಿದೆ. ರಾಜ್ಯ ರೈತ ಸಂಘದ ಉಪಾಧ್ಯಕ್ಷ, ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಅರೇಹಳ್ಳಿಯ ರಾಮಸ್ವಾಮಿ (72) ಸ್ಥಳದಲ್ಲೇ ಮೃತಪಟ್ಟಿದ್ದಾರೆ. ರಾಜ್ಯ ರೈತ ಸಂಘದ ಕಾರ್ಯಾಧ್ಯಕ್ಷ, ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಎಚ್.ಮೊಗೇನಹಳ್ಳಿಯ ಎಂ.ರಾಮು (65) ಅವರು ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ.

ನಿಧನ ವಾರ್ತೆ

ವಿಠ್ಠಪ್ಪ ಗೋರಂಟ್ಲಿ



ಕೊಪ್ಪಳ: ಹಿರಿಯ ಸಾಹಿತಿ, ಪತ್ರಕರ್ತ ವಿಠ್ಠಪ್ಪ ಗೋರಂಟ್ಲಿ (75) ಗುರುವಾರ ರಾತ್ರಿ ಇಲ್ಲಿಯ ಭಾಗ್ಯನಗರದ ತಮ್ಮ ನಿವಾಸದಲ್ಲಿ ಹೃದಯಾಘಾತದಿಂದ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ.

ಲಂಕೇಶ ಪತ್ರಿಕೆಯ ವರದಿಗಾರರಾಗಿದ್ದ ಅವರು, ಜನಪರ ಚಳವಳಿಯಲ್ಲಿ ತೊಡಗಿಸಿಕೊಂಡಿದ್ದರು. ಕವನ, ಕಥಾ ಸಂಕಲನ, ಪ್ರಬಂಧ, ನಾಟಕಗಳನ್ನು ರಚಿಸಿದ್ದರು. ಮೃತರ ಅಂತ್ಯಕ್ರಿಯೆ ಶುಕ್ರವಾರ (ಜುಲೈ 23) ಮಧ್ಯಾಹ್ನ 1ಕ್ಕೆ ಭಾಗ್ಯನಗರದಲ್ಲಿ ಸ್ಮಶಾನದಲ್ಲಿ ನಡೆಯಲಿದೆ.



ಸುಭಾಷಿತ

ನಾವು ಪರಿಹಾರದ ಭಾಗವಾಗಿ ಇರದಿದ್ದರೆ, ನಾವೇ ಒಂದು ಸಮಸ್ಯೆ ಆಗಿರುತ್ತೇವೆ.

-ಶಿವ್ ಖೇರಾ

ಒಲಿಂಪಿಕ್ ಜ್ಯೋತಿ ಪ್ರಜ್ವಲಿಸಲಿ ಜಗತ್ತಿಗೆ ಹೊಸ ಸ್ಫೂರ್ತಿ ಸಿಗಲಿ

ಕ್ರೀಡೆ ಮನುಕುಲಕ್ಕೆ ನೀಡಿದ ಬಹುದೊಡ್ಡ ಸಾಂಸ್ಕೃತಿಕ ಕಾಣಿಕೆಯೇ ಒಲಿಂಪಿಕ್ ಕ್ರೀಡೆ. ಭ್ರಾತೃತ್ವ ಹಾಗೂ ಸೌಹಾರ್ದದ ಸಂದೇಶ ಸಾರುವ ಕ್ರೀಡೆಗಳು ಮನುಕುಲದ ವಿಕಾಸದಲ್ಲಿ ಅತಿ ಮಹತ್ವದ ಪಾತ್ರ ವಹಿಸಿವೆ. ಕೊರೊನಾ ಪಿಡುಗಿನ ನಡುವೆ ಭರವಸೆಯ ಹೊಸ ಬೆಳಕು ತುಂಬಲು ಟೋಕಿಯೊದಲ್ಲಿ ಈಗ ಒಲಿಂಪಿಕ್ ಜ್ಯೋತಿ ಪ್ರಜ್ವಲಿಸಲಿದೆ. ಜೀವಹಾನಿ ಹಾಗೂ ಆರ್ಥಿಕ ಹಿಂಜರಿತದಿಂದ ನೊಂದಿರುವ ಜನಮನಕ್ಕೆ ನವೋಲ್ಲಾಸ ತುಂಬುವ ವೇದಿಕೆಯಾಗುವ ನಿರೀಕ್ಷೆ ಮೂಡಿಸಿರುವ ಕೂಟ ಇದು. ಆಧುನಿಕ ಒಲಿಂಪಿಕ್‌ನ 125 ವರ್ಷಗಳ ಇತಿಹಾಸದಲ್ಲಿ ಇಲ್ಲಿಯವರೆಗೆ ನಡೆದ ಎಲ್ಲ ಕೂಟಗಳಿಗಿಂತಲೂ ಇದು ವಿಭಿನ್ನ. ಏಕೆಂದರೆ ಕೋವಿಡ್ ಭೀತಿಯ ನೆರಳಲ್ಲಿ ನಡೆಯುತ್ತಿರುವ ಕೂಟದಲ್ಲಿ ಪದಕ ಗೆಲ್ಲುವುದರೊಂದಿಗೆ ಸಾಧನೆಯ ಜೊತೆಗೆ ಜೀವ ಸುರಕ್ಷಾ ವಲಯದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಸ್ಪರ್ಧಿಸುವುದು ಕೂಡ ಮಹತ್ವದ್ದು. ಆದ್ದರಿಂದ ಕೂಟದಲ್ಲಿ ಭಾಗವಹಿಸಿ ಸುರಕ್ಷಿತವಾಗಿ ಮನೆಗೆ ಮರಳುವವರೇ ಚಾಂಪಿಯನ್ ಎಂಬ ವಾತಾವರಣ ಈಗ ಇದೆ. ಕ್ರೀಡಾಂಗಣಗಳಲ್ಲಿ ಪ್ರೇಕ್ಷಕರ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ಖಾಲಿ ಕ್ರೀಡಾಂಗಣದಲ್ಲಿ ಚಪ್ಪಾಳೆಗಳ ಸದ್ದಿಲ್ಲದ ನೀರವ ವಾತಾವರಣದಲ್ಲಿ ತಮ್ಮ ಸಾಮರ್ಥ್ಯ ಮೆರೆಯುವ ಸವಾಲು ಕ್ರೀಡಾಪಟುಗಳ ಮುಂದಿದೆ.



ಕ್ರೀಡಾಜ್ಯೋತಿಯು ಕೊರೊನಾ ಬಿಕ್ಕಟ್ಟಿನ ಕತ್ತಲನ್ನು ದೂರ ಸರಿಸಿ, ಮನುಕುಲಕ್ಕೆ ನವಚೈತನ್ಯ ತುಂಬಲಿ

ಆತಿಥೇಯ ಜಪಾನ್‌ನಲ್ಲಿ ಕೊರೊನಾ ಸೋಂಕಿನ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿವೆ. 206 ದೇಶಗಳ ಹನ್ನೊಂದು ಸಾವಿರಕ್ಕೂ ಹೆಚ್ಚು ಕ್ರೀಡಾಪಟುಗಳು ಸೇರುವ ತಾಣದಲ್ಲೂ ಸೋಂಕು ಹರಡುವ ಅಪಾಯ ಇದ್ದೇ ಇದೆ. ಕ್ರೀಡಾಗ್ರಾಮದಲ್ಲಿ ಕೋವಿಡ್ ಪ್ರಕರಣಗಳು ಈಗಾಗಲೇ ವರದಿಯಾಗಿವೆ. ಕೂಟವನ್ನು ಮುಂದೂಡಲು ಒತ್ತಾಯ ಬಂದರೂ ಸುರಕ್ಷಿತವಾಗಿ ಆಯೋಜಿಸುವುದಾಗಿ ಅಂತರ ರಾಷ್ಟ್ರೀಯ ಒಲಿಂಪಿಕ್ ಕೌನ್ಸಿಲ್ (ಐಒಸಿ) ಮತ್ತು ಜಪಾನ್ ಸರ್ಕಾರ ಗಟ್ಟಿಯಾಗಿ ನಿಂತಿವೆ. ಕೂಟದ ಆಯೋಜನೆ ಹಿಂದಿರುವ ರಾಜಕೀಯ ಮತ್ತು ಆರ್ಥಿಕ ಕಾರಣಗಳೂ ಗಮನಾರ್ಹವಾದುವು. 2020ರಲ್ಲಿಯೇ ಕೂಟವನ್ನು ಆಯೋಜನೆ ಮಾಡಲು ₹89 ಸಾವಿರ ಕೋಟಿ ವೆಚ್ಚದಲ್ಲಿ ಜಪಾನ್ ಸಿದ್ಧತೆಗಳನ್ನು ಮಾಡಿಕೊಂಡಿತ್ತು. ಆದರೆ ಆರೋಗ್ಯ ತುರ್ತು ಪರಿಸ್ಥಿತಿಯ ಹಿನ್ನೆಲೆಯಲ್ಲಿ ಕೂಟವನ್ನು ಒಂದು ವರ್ಷ ಮುಂದೂಡುವ ನಿರ್ಣಯವನ್ನು ಐಒಸಿ ಕೈಗೊಂಡಿತ್ತು. ಇದರಿಂದ ಸುಮಾರು ಹತ್ತು ಸಾವಿರ ಕೋಟಿ ರೂಪಾಯಿಯಷ್ಟು ನಷ್ಟವೂ ಆಗಿರುವ ಅಂದಾಜಿದೆ. ಆದರೆ, 1948ರಿಂದ 2016ರವರೆಗೆ ಎಲ್ಲ ಕೂಟಗಳೂ ಯಶಸ್ವಿಯಾಗಿ ನಡೆದಿವೆ. ಟೋಕಿಯೊ ಒಲಿಂಪಿಕ್ ಕೂಟವನ್ನು ಆ ಸಾಲಿಗೆ ಸೇರಿಸುವ ಛಲ ಆಯೋಜಕರದ್ದು. ಕೋವಿಡ್ ಭೀತಿಯನ್ನು ಶಮನ ಮಾಡಿ ಮನುಕುಲದ ಆತ್ಮವಿಶ್ವಾಸವನ್ನು ವೃದ್ಧಿಸಲು ಈ ಒಲಿಂಪಿಕ್ಸ್ ಸಹಕಾರಿಯಾಗಲಿದೆ ಎಂದು ಪ್ರತಿಪಾದಿಸುವ ವರ್ಗವೂ ಇದೆ. ಈಚೆಗಷ್ಟೇ ನಡೆದ ಯುರೊ ಕಪ್ ಫುಟ್‌ಬಾಲ್, ಕೊಪಾ ಅಮೆರಿಕ ಫುಟ್‌ಬಾಲ್ ಟೂರ್ನಿಗಳ ಯಶಸ್ಸು ಕೂಡ ಒಲಿಂಪಿಕ್ ಆಯೋಜನೆಗೆ ಹುರುಪು ತುಂಬಿರುವುದು ಸುಳ್ಳಲ್ಲ. ಒಲಿಂಪಿಕ್ಸ್‌ನಲ್ಲಿ ಭಾಗವಹಿಸಲೆಂದೇ ಹಲವು ವರ್ಷಗಳಿಂದ ಶ್ರಮಿಸುತ್ತಿರುವ ಕ್ರೀಡಾಪಟುಗಳಿಗೆ ಇದು ಕನಸು ನನಸಾಗುವ ಕಾಲ.

ಕ್ರೀಡೆಯಲ್ಲಿ ಇನ್ನೂ ಬಹಳಷ್ಟು ಸಾಧನೆ ಮಾಡಬೇಕಿರುವ ಭಾರತಕ್ಕೂ ಇದು ಪ್ರತಿಷ್ಠೆಯ ಕಣ. 120 ಕ್ರೀಡಾಪಟುಗಳು ರಾಷ್ಟ್ರದ ಕೋಟ್ಯಂತರ ಕ್ರೀಡಾಪ್ರೇಮಿಗಳ ನಿರೀಕ್ಷೆ ಹೊತ್ತು ಟೋಕಿಯೊಗೆ ತೆರಳಿದ್ದಾರೆ. ಮೂವರು ಮಕ್ಕಳ ತಾಯಿ, ಬಾಕ್ಸರ್ ಮೇರಿ ಕೋಮ್ ಮತ್ತು ಪುರುಷರ ಹಾಕಿ ತಂಡದ ನಾಯಕ ಮನ್‌ಪ್ರೀತ್ ಸಿಂಗ್ ಇಂದು ರಾತ್ರಿ (ಜುಲೈ 23) ನಡೆಯಲಿರುವ ಉದ್ಘಾಟನೆ ಸಮಾರಂಭದ ಪಥಸಂಚಲನದಲ್ಲಿ ತ್ರಿವರ್ಣ ಧ್ವಜ ಹಿಡಿದು ತಂಡವನ್ನು ಮುನ್ನಡೆಸಲಿದ್ದಾರೆ. ವಿವಿಧ ಕ್ರೀಡೆಗಳಲ್ಲಿ ಪದಕಗಳನ್ನು ಜಯಿಸುವ ಭರವಸೆಯನ್ನು ಕ್ರೀಡಾಪಟುಗಳು ಮೂಡಿಸಿದ್ದಾರೆ. ರಿಯೊ ಡಿ ಜನೈರೊ ಕೂಟದಲ್ಲಿ ಮಹಿಳೆಯರ ಬ್ಯಾಡ್ಮಿಂಟನ್ ಸಿಂಗಲ್ಸ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದ ಪಿ.ವಿ. ಸಿಂಧು ಈ ಬಾರಿ ಚಿನ್ನದ ಹೊಳಪು ಮೂಡಿಸುವ ಛಲದಲ್ಲಿದ್ದಾರೆ. ಇದೇ ಮೊದಲ ಬಾರಿಗೆ ಭಾರತದ ಇಬ್ಬರು ಈಜುಪಟುಗಳು ‘ಎ’ ಅರ್ಹತೆ ಗಳಿಸಿ ಒಲಿಂಪಿಕ್ಸ್‌ಗೆ ಆಯ್ಕೆಯಾಗಿದ್ದಾರೆ. ಅವರಲ್ಲಿ ಒಬ್ಬರು ಕರ್ನಾಟಕದ ಶ್ರೀಹರಿ ನಟರಾಜ್ ಎಂಬುದು ನಮಗೆ ಹೆಮ್ಮೆಯ ಸಂಗತಿ. 40 ವರ್ಷಗಳಿಂದ ಹಾಕಿ ತಂಡವು ಎದುರಿಸುತ್ತಿರುವ ಪದಕದ ಬರ ಈ ಬಾರಿ ಕೊನೆಗೊಳ್ಳುವುದೆಂಬ ಆಶಾಭಾವ ಇದೆ. ಟ್ರ್ಯಾಕ್ ಮತ್ತು ಫೀಲ್ಡ್ ವಿಭಾಗದಲ್ಲಿ ಚೊಚ್ಚಲ ಪದಕ ಈ ಬಾರಿಯಾದರೂ ಒಲಿಯುವುದೇ? ಭಾರತದಲ್ಲಿ ಕ್ರೀಡಾಭಿವೃದ್ಧಿಗೆ ಸರ್ಕಾರವು ಜಾರಿಗೆ ತಂದಿರುವ ಯೋಜನೆಗಳ ಮೌಲ್ಯಮಾಪನಕ್ಕೂ ಈ ಕೂಟ ವೇದಿಕೆಯಾಗಲಿದೆ. ಇದೆಲ್ಲದರ ಆಚೆಗೆ ಜಮೈಕಾದ ದಾಖಲೆವೀರ, ಓಟಗಾರ ಉಸೇನ್ ಬೋಲ್ಟ್, ಈಜುಕೊಳದ ‘ಚಿನ್ನದ ಮೀನು’ ಮೈಕೆಲ್ ಫೆಲ್ಪ್ಸ್ ಅವರ ದಾಖಲೆಗಳನ್ನು ಸರಿಗಟ್ಟುವ ವೀರರು ಹುಟ್ಟಿಬರುವರೇ ಎಂಬ ಕುತೂಹಲವೂ ಈಗ ಗರಿಗೆದರಿದೆ. ‘ವೇಗವಾಗಿ ಉನ್ನತಿಗೇರೋಣ, ಜೊತೆಗೂಡಿ ಸದೃಢರಾಗೋಣ’ ಎಂಬ ಒಲಿಂಪಿಕ್ ಆಶಯ ಸಾಕಾರಗೊಳ್ಳುವ ಸಮಯ ಬಂದಿದೆ. ಆಗಸ್ಟ್ 8ರವರೆಗೆ ಕ್ರೀಡಾಲೋಕದ ಹತ್ತಾರು ರೋಚಕ ಕಥೆಗಳು ಟೋಕಿಯೊದ ಅಂಗಳದಿಂದ ಮೂಡಿಬರಲಿವೆ. ಕ್ರೀಡಾಜ್ಯೋತಿಯ ಪ್ರಭೆಯಲ್ಲಿ ಮನುಕುಲಕ್ಕೆ ಹೊಸದೊಂದು ದಿಸೆ ದೊರೆತು, ಸ್ಫೂರ್ತಿದಾಯಕ ಕಥೆಗಳು ಹುಟ್ಟಿ ಜನಪದವಾಗಲಿ ಎಂಬ ಹಾರೈಕೆ ಕ್ರೀಡಾಪ್ರಿಯರದ್ದಾಗಿದೆ.

ದಿನದ ಟ್ವೀಟ್

ಪರೀಕ್ಷೆ ರದ್ದುಪಡಿಸಿ



#WakeUpCBSE ರೆಗ್ಯುಲರ್ ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ರದ್ದುಗೊಳಿಸಿರುವಾಗ, ಖಾಸಗಿಯಾಗಿ ನೋಂದಾಯಿಸಿಕೊಂಡ ಅಭ್ಯರ್ಥಿಗಳಿಗೆ ಮಾತ್ರ ಪರೀಕ್ಷೆ ನಡೆಸುತ್ತಿರುವುದೇಕೆ? ಇವರಿಗಾಗಿ ಮಾನದಂಡಗಳನ್ನು ಸಿಬಿಎಸ್‌ಇ ಕಂಡುಕೊಳ್ಳಲಿಲ್ಲವೇಕೆ? ಪರಿಸ್ಥಿತಿ ಸರಿಯಿಲ್ಲ. ಪ್ರೈವೇಟ್ ಸ್ಟೂಡೆಂಟ್ಸ್‌ಗಾಗಿ ನಡೆಸಲು ಉದ್ದೇಶಿಸಿರುವ ಪರೀಕ್ಷೆಯನ್ನೂ ರದ್ದುಪಡಿಸಿ.

ಲಲಿತ್ ಗಂಗ್ವಾರ್, ಎಂಜಿನಿಯರಿಂಗ್ ವಿದ್ಯಾರ್ಥಿ

ಕಿಡಿನುಡಿ



ಸಂವಿಧಾನದಲ್ಲಿ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗವು ಪ್ರಮುಖ ಅಂಗಗಳಾದರೂ, ಜನತೆಯೆದುರು ಸತ್ಯ ಹೊರಗಿಡುವ ಪತ್ರಿಕಾ ರಂಗವನ್ನು ನಾಲ್ಕನೇ ಅಂಗ ಎಂದು ಕರೆಯಲಾಗುತ್ತದೆ. ಅದರ ಜೊತೆಗೆ ಈಗ ರಾಜಕಾರಣಿಗಳು ಸ್ವಾಮೀಜಿಗಳಿಗೆ ಹಾಕುವ ‘ಸಾಷ್ಟಾಂಗ’ವೂ ಸೇರಿದೆ. ‘ಸಾಷ್ಟಾಂಗ’ ಹಾಕುವ ಮೂಲಕ ಅಧಿಕಾರ ಉಳಿಸಿಕೊಳ್ಳುವ ಪರಿಪಾಟ ನಡೆದಿದೆ.

ಬಸವರಾಜ ರಾಯರಡ್ಡಿ, ಕಾಂಗ್ರೆಸ್ ಮುಖಂಡ

25 ವರ್ಷಗಳ ಹಿಂದೆ

ಮಂಗಳವಾರ, 23-7-1996

- **ಅಧಿಕ ಹೊರೆ ಇಲ್ಲ: ಗ್ರಾಮೀಣಾಭಿವೃದ್ಧಿಗೆ ಒತ್ತು**

ನವದೆಹಲಿ, ಜುಲೈ 23– ಕೃಷಿ, ಗ್ರಾಮೀಣಾಭಿವೃದ್ಧಿ, ಬಡತನ ನಿವಾರಣೆಗೆ ವಿಶೇಷ ಒತ್ತು, ಹೊಸ ನೇರ ತೆರಿಗೆಯಿಂದ ಮುಕ್ತ, ಹಿಂದಿನ ಸರ್ಕಾರದ ಆರ್ಥಿಕ ಸುಧಾರಣೆಗೆ ಬೆಂಬಲ, ವೇತನದಾರರಿಗೆ ಆದಾಯ ತೆರಿಗೆಯಲ್ಲಿ ಅಲ್ಪ ರಿಯಾಯಿತಿ, ಉದ್ಯಮ ಕ್ಷೇತ್ರಕ್ಕೆ ಶೇ 54ರಷ್ಟು ಸರ್‌ಚಾರ್ಜ್ ಇಳಿತ, ಸಣ್ಣ ಉದ್ಯಮಗಳಿಗೆ ರಿಯಾಯಿತಿ ನೀಡುವ ಸಂಯುಕ್ತ ರಂಗ ಸರ್ಕಾರದ 1996–97ರ ಚೊಚ್ಚಲ ಬಜೆಟ್ ಅನ್ನು ಹಣಕಾಸು ಸಚಿವ ಪಿ. ಚಿದಂಬರಂ ಇಂದು ಮಂಡಿಸಿದರು.

ಭಾರಿ ಪ್ರಮಾಣದ ತೆರಿಗೆ ರಿಯಾಯಿತಿ, ಸಬ್ಸಿಡಿಯಿಂದ ಪ್ರಸಕ್ತ ಹಣಕಾಸು ವರ್ಷದಲ್ಲಿ ರೂ. 6,924 ಕೋಟಿ ಕೊರತೆ ಬೀಳಲಿದೆಯಾದರೂ ಹಣಕಾಸಿನ ನಿರ್ವಹಣೆಗೆ ಹಣಕಾಸು ಸಚಿವರು ಕಸ್ಟಮ್ಸ್ ಸುಂಕದಿಂದ ರೂ. 950 ಕೋಟಿ ಮತ್ತು ಎಕ್ಸೈಜ್ ತೆರಿಗೆಯಿಂದ 650 ಕೋಟಿ ಸಂಗ್ರಹಿಸುವ ಗುರಿಯನ್ನು ಪ್ರಕಟಿಸಿದ್ದಾರೆ.

ಅರವತ್ತು ಸಾವಿರದವರೆಗೆ ಆದಾಯ ಹೊಂದಿರುವ ವೇತನದಾರರಿಗೆ ತೆರಿಗೆ ರಿಯಾಯಿತಿಯ ಮಿತಿಯನ್ನು ಶೇ 20ರಿಂದ ಶೇ 19ಕ್ಕೆ ಇಳಿಸಲಾಗಿದೆ. ಆದರೆ ಆದಾಯ ತೆರಿಗೆ ಮಿತಿಯಲ್ಲಿ ಬದಲಾವಣೆ ಇರುವುದಿಲ್ಲ. ಅಲೋಪಥಿ ಔಷಧಗಳ ಬೆಲೆ ಅಲ್ಪ ಪ್ರಮಾಣದಲ್ಲಿ ಇಳಿಯಲಿದೆ. ಅದೇ ರೀತಿ ಹೆಚ್ಚು ಬಳಕೆ ಮಾಡುವ ಖಾದ್ಯ ತೈಲ, ಟೂತ್ ಪೇಸ್ಟ್, ಡಿಟರ್ಜೆಂಟ್ ಮತ್ತು ಕೆಲವು ಗ್ಲಾಸ್‌ವೇರ್‌ಗಳಿಗೆ ತೆರಿಗೆಯಲ್ಲಿ ಇಳಿತ, ಕಲರ್ ಟಿ.ವಿ, ಕಂಪ್ಯೂಟರ್, ಸೆಲ್ಯುಲರ್ ಫೋನ್‌ಗಳು, ಪೇಜರ್‌ಗಳಿಗೆ ಕಸ್ಟಮ್ಸ್ ತೆರಿಗೆಯಲ್ಲಿ ಇಳಿಕೆಯಾಗಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 23-7-1971

- **‘ರಾಜ್ಯ ಆಡಳಿತ ಕಾಂಗ್ರೆಸ್‌ನಲ್ಲಿ ಇನ್ನು ಭಿನ್ನಾಭಿಪ್ರಾಯಕ್ಕೆ ಅವಕಾಶ ಕೊಡುವುದಿಲ್ಲ’**

ಬೆಂಗಳೂರು, ಜುಲೈ 23– ಇನ್ನು ಮುಂದೆ ರಾಜ್ಯದ ಆಡಳಿತ ಕಾಂಗ್ರೆಸ್‌ನಲ್ಲಿ ಭಿನ್ನಾಭಿಪ್ರಾಯಗಳಿಗೆ ಅವಕಾಶ ಕೊಡುವುದಿಲ್ಲವೆಂದು ಆಡಳಿತ ಕಾಂಗ್ರೆಸ್‌ನ ನಾಯಕರಲ್ಲಿ ಒಬ್ಬರಾದ ಎಚ್. ಸಿದ್ಧವೀರಪ್ಪ ಇಂದು ಇಲ್ಲಿ ಭರವಸೆ ನೀಡಿದರು. ಇದ್ದ ಭಿನ್ನಾಭಿಪ್ರಾಯಗಳನ್ನೂ ಮರೆತಿದ್ದೇವೆ. ಮುಂದೆ ಯಾವ ಭಿನ್ನಾಭಿಪ್ರಾಯಗಳಿಗೂ ಅವಕಾಶ ಕೊಡುವುದಿಲ್ಲ. ಈ ಮಾತನ್ನು ನಾವಿಬ್ಬರೂ (ದೇವರಾಜ ಅರಸು ಮತ್ತೊಬ್ಬರು) ಹೈಕಮಾಂಡ್‌ಗೆ ತಿಳಿಸಿದ್ದೇವೆ ಎಂದು ಅವರು ತಿಳಿಸಿದರು.

ಪ್ರದೇಶ ಕಾಂಗ್ರೆಸ್ ಸಮಿತಿ, ಕಾರ್ಯಕಾರಿ ಸಮಿತಿ ಹಾಗೂ ಚುನಾವಣೆ ಸಮಿತಿಗಳ ನೇಮಕ ಸಂಬಂಧದಲ್ಲಿ ಹೈಕಮಾಂಡಿನ ಸದಸ್ಯರೊಡನೆ ಮಾತುಕತೆ ನಡೆಸಲು ದೆಹಲಿಗೆ ತೆರಳಿದ್ದ ಶ್ರೀಯುತರು ಇಂದು ನಗರಕ್ಕೆ ಹಿಂದಿರುಗಿದರು. ಪ್ರದೇಶ ಸಮಿತಿ ಅಧ್ಯಕ್ಷ ದೇವರಾಜ ಅರಸು ಅವರು ಶನಿವಾರ ನಗರಕ್ಕೆ ಹಿಂದಿರುಗುವರು.

ಆರ್ಥಿಕತೆಯ ಮಗ್ಗುಲು ಬದಲಿಸುವ ಉದ್ದೇಶದ ಶಿಕ್ಷಣ ನೀತಿಯ ಸಾಧಕ–ಬಾಧಕ

ಶಿಕ್ಷಣ, ಆರ್ಥಿಕತೆ, ಸಮುದಾಯದ ಜವಾಬ್ದಾರಿ



ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ಶಿಕ್ಷಣವು ಆರ್ಥಿಕತೆಯನ್ನು ಬದಲಿಸಬಲ್ಲುದು. ನಿರ್ದಿಷ್ಟ ಪದವಿ ಪಡೆದು ನಿರ್ದಿಷ್ಟ ಉದ್ಯೋಗಕ್ಕೆ ಸೇರಿ ಅದರಲ್ಲೇ ಜೀವನ ಕಳೆದು ನಿವೃತ್ತಿ ಪಡೆಯುವುದು ಒಂದು ಮಾದರಿಯ ಔದ್ಯೋಗಿಕ ಸ್ವರೂಪ. ಬಹುಮಟ್ಟಿಗೆ ಇದು ಮಾರ್ಕ್ಸ್‌ವಾದಿ ದೃಷ್ಟಿಕೋನದ ಬೇರೆ ಬೇರೆ ಆಯಾಮಗಳಿಂದ ಪ್ರಭಾವಿತವಾದ ಆರ್ಥಿಕ ರಚನೆಯಾಗಿದೆ. ಇದನ್ನು ಒಂದು ಮಾದರಿಯಾಗಿರಿಸಿಕೊಂಡು ಖಾಸಗಿ ಘಟಕಗಳ ಆರ್ಥಿಕತೆ ನಡೆಯುತ್ತಾ ಬಂದಿದೆ.

2020ರ ರಾಷ್ಟ್ರೀಯ ಶಿಕ್ಷಣ ನೀತಿಯ ಉನ್ನತ ಶಿಕ್ಷಣದ ಪರಿಕಲ್ಪನೆಗಳು ಆರ್ಥಿಕತೆಯ ಸ್ವರೂಪದಲ್ಲೇ ಬದಲಾವಣೆ ಉಂಟು ಮಾಡುವ ರೂಪದ್ದಾಗಿವೆ. 5 ವರ್ಷ ಒಂದು ಕ್ಷೇತ್ರದ ಉದ್ಯೋಗ, 10 ವರ್ಷ ಮತ್ತೊಂದು ಕ್ಷೇತ್ರದ ಉದ್ಯೋಗ, ಇನ್ನೊಂದು ನಾಲ್ಕು ವರ್ಷ ಮತ್ತೊಂದು ಕ್ಷೇತ್ರ ಹೀಗೆ ಚಲಿಸಲು ಬೇಕಾದ ಬಹುಶಿಸ್ತೀಯ ಕಲಿಕೆಗೆ 2020ರ ನೀತಿಯಲ್ಲಿ ಆದ್ಯತೆ ಇದೆ. ಆರ್ಥಿಕತೆ ಈ ಮಾದರಿಯಲ್ಲಿ ರಚನೆಯಾದಾಗ ಕೆಲಸ ಮಾಡುವಾಗ ಆದಾಯ ಜಾಸ್ತಿ ಬರುತ್ತದೆ. ನಡುವೆ ಒಂದೆರಡು ವರ್ಷ ಕೆಲಸ ಇಲ್ಲದೆ ನಿರಾಳವಾಗಿದ್ದು ಮತ್ತೆ ಬೇರೊಂದು ಕೆಲಸಕ್ಕೆ ಸೇರುವ ಸ್ವಾತಂತ್ರ್ಯವೆಲ್ಲ ಇರುತ್ತದೆ. ಆದರೆ ಉದ್ಯೋಗ ಸ್ಥಿರತೆ ಕಡಿಮೆಯಾಗುತ್ತದೆ.

ಬಹುಶಿಸ್ತೀಯ ಅಧ್ಯಯನದ ಉದ್ದೇಶವು ಸ್ವಾಭಾವಿಕವಾಗಿ ಹಲವು ಕ್ಷೇತ್ರಗಳಲ್ಲಿ ತೊಡಗಿಕೊಳ್ಳುವಿಕೆಗೆ ಪೂರಕವಾಗಿರುತ್ತದೆ. ಶಿಕ್ಷಣ ಮತ್ತು ಉದ್ಯೋಗದ ನಡುವೆ ಸಂಬಂಧಗಳು ಏರ್ಪಡುತ್ತವೆ. ಬದಲಾಗಿರುವ ಆರ್ಥಿಕತೆಯಲ್ಲಿ ಖಾಸಗಿ ಘಟಕಗಳಿಗೆ ಮಹತ್ವ ಜಾಸ್ತಿ ಇರುವುದರಿಂದ ಈ ಘಟಕಗಳು ಕ್ಷೇತ್ರ ಪರಿಣತಿಗೆ ಮಹತ್ವವನ್ನು ಕೊಡುತ್ತವೆ. ಆಗ ಸಾಮಾನ್ಯ ಶಿಕ್ಷಣಕ್ಕೆ ಉದ್ಯೋಗವನ್ನು ಒದಗಿಸುವ ಶಕ್ತಿ ಇರುವುದಿಲ್ಲ.


ಸಾಮಾನ್ಯ ಶಿಕ್ಷಣಕ್ಕೂ ಹಳೆಯ ಮಾದರಿಯ ಆರ್ಥಿಕತೆಗೂ ಸಂಬಂಧವಿದೆ. ಸಾಮಾನ್ಯ ಶಿಕ್ಷಣವೆಂದರೆ ಎಲ್ಲದರ ಬಗ್ಗೆಯೂ ಇರುವ ಸಾಮಾನ್ಯ ಜ್ಞಾನ. ಸರ್ಕಾರಿ ಉದ್ಯೋಗಗಳಲ್ಲಿ ಈ ಮಾದರಿಗೆ ಪ್ರಾಮುಖ್ಯತೆ ಇದೆ. ಶಿಕ್ಷಕರು, ಎಂಜಿನಿಯರುಗಳು, ವೈದ್ಯರುಗಳಂತಹ ಕೆಲವು ಉದ್ಯೋಗಗಳನ್ನು ಬಿಟ್ಟರೆ, ಉಳಿದಂತೆ ಸರ್ಕಾರಿ ಉದ್ಯೋಗಗಳಲ್ಲಿ ಕೆಲಸವನ್ನು ಹೇಗೆ ಮಾಡಬೇಕು ಎನ್ನುವ ವೃತ್ತಿ ತರಬೇತಿಯು ಅಧಿಕೃತ ಅಥವಾ ಅನಧಿಕೃತ ರೀತಿಯಲ್ಲಿ ಉದ್ಯೋಗಕ್ಕೆ ಸೇರಿದ ಮೇಲೆ ಸಿಗುತ್ತದೆ. ಸೇರ್ಪಡೆಗೊಳ್ಳಲು ಸಾಮಾನ್ಯ ಶಿಕ್ಷಣದ ಅರ್ಹತೆ ಮಾನದಂಡವಾಗಿರುತ್ತದೆ.

ಈ ಪದ್ಧತಿಯ ಅನುಕೂಲ ಎಂದರೆ ಶಿಕ್ಷಣವು ಸರಳವಾಗಿರುತ್ತದೆ. ಬಿ.ಎ., ಬಿ.ಎಸ್ಸಿ., ಬಿ.ಕಾಂ. ಎಂಬ ಸಾಂಪ್ರದಾಯಿಕ ಕಲಿಕಾ ಪದ್ಧತಿ ಬಹಳ ಸರಳವಾದದ್ದು. ಅದರಲ್ಲೂ ಬಿ.ಎ. ಎಂದರೆ ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ- ಹೀಗೆ ಕೆಲವೇ ವಿಷಯಗಳ ಕಲಿಕೆಯಲ್ಲಿ ಪದವಿ ಪಡೆಯುವುದು ಸರಳ ವಿಧಾನವಾಗಿದೆ. ಕೆಲಸ ಮಾಡುವ ಸ್ಥಳದಲ್ಲೇ ಕೆಲಸವನ್ನು ಕಲಿಯುವುದರಿಂದ ಶಿಕ್ಷಣಕ್ಕೂ ಕೆಲಸಕ್ಕೂ ಸಂಬಂಧ ಇರುವುದಿಲ್ಲ. ಆದರೆ, ಕೆಲಸದ ಸ್ಥಳದಲ್ಲಿಯೇ ಕೆಲಸವನ್ನು ಕಲಿಯುವುದು ವಾಸ್ತವದಲ್ಲಿ ಉದ್ಯೋಗಿಯನ್ನು ಹೆಚ್ಚು ಯಶಸ್ವಿಗೊಳಿಸುವ ವಿಧಾನವಾಗಿದೆ. ಜನರ ಬಹು ವ್ಯಕ್ತಿತ್ವಗಳೊಂದಿಗೆ ಹೇಗೆ ವ್ಯವಹರಿಸಬೇಕು ಎಂಬ ವ್ಯವಹಾರ ಜ್ಞಾನವು ಕ್ಷೇತ್ರದಲ್ಲೇ ಸಿಗುತ್ತದೆ.

ಈ ಪದ್ಧತಿಯ ಬದಲಿಗೆ ಶೈಕ್ಷಣಿಕ ವ್ಯವಸ್ಥೆಯೇ ವಿವಿಧ ರಂಗಗಳ ಕೌಶಲಗಳ ಕಲಿಕೆಯನ್ನೂ ಮಾಡಿಸಿದಾಗ ಕಲಿಕೆಗೂ ಉದ್ಯೋಗಕ್ಕೂ ಸಂಬಂಧ ಇರುತ್ತದೆ. ಆದರೆ, ಜನರಲ್ಲಿ ಬಹುರೂಪಿ ವ್ಯಕ್ತಿತ್ವಗಳಿರುತ್ತವೆ. ಆ ವ್ಯಕ್ತಿತ್ವಗಳಿಗೆ ಅನುಗುಣವಾಗಿ ವ್ಯವಸ್ಥಿತ ಕಲಿಕಾ ಸಂಸ್ಥೆಯಲ್ಲಿ ಎಷ್ಟು ಕಲಿತರೂ ಅದು ಅಪರಿಪೂರ್ಣವೇ ಆಗಿರುತ್ತದೆ. ಕೆಲಸಕ್ಕೆ ತೊಡಗಿದಾಗ ಬರುವ ಅನುಭವಗಳೇ ನಿಜವಾದ ಅರ್ಥದಲ್ಲಿ ಕಲಿಕೆಯಾಗಿರುತ್ತದೆ. ಆದ್ದರಿಂದ ಬಹುಶಿಸ್ತೀಯ ಕಲಿಕೆಗಳ ಶಿಕ್ಷಣ ವ್ಯವಸ್ಥೆಯು ಕೊನೆಗೂ ಪರಿಪೂರ್ಣತೆಯನ್ನು ಕಲಿಕೆಯಿಂದ ಹೊರಗೇ ಇಟ್ಟಿರುತ್ತದೆ.

ಆದರೆ ಬಹುಶಿಸ್ತೀಯ ಕಲಿಕೆಗಳ ಶಿಕ್ಷಣ ವ್ಯವಸ್ಥೆಯು ಖಾಸಗಿ ಘಟಕಗಳಿಗೆ ಅನುಕೂಲಕಾರಿಯಾಗಿರುತ್ತದೆ. ಏಕೆಂದರೆ ಖಾಸಗಿ ಘಟಕಗಳ ಮೇಲೆ ಸರ್ಕಾರದ ಒಡೆತನ ಇರುವುದಿಲ್ಲ. ತನಗೆ ಬೇಕಾದ ರೀತಿಯ ಔದ್ಯೋಗಿಕ ಪರಿಸರವನ್ನು ನಿರ್ಮಿಸಲು ಖಾಸಗಿ ಘಟಕಕ್ಕೆ ಸಾಧ್ಯವಾಗುತ್ತದೆ. ಅಂತಹ ಪರಿಸರದಲ್ಲಿ ಉದ್ಯೋಗಿ ತನ್ನ ಕೆಲಸವನ್ನು ತಾನು ಮಾಡಿದರಾಯಿತು. ಇನ್ನೊಬ್ಬನ ಕೆಲಸವನ್ನೂ ತಾನೇ ಮಾಡಬೇಕಾದ ಅನಿವಾರ್ಯ ಇರುವುದಿಲ್ಲ. ಈ ಸ್ವರೂಪದ ನಿರ್ವಹಣಾ ವ್ಯವಸ್ಥೆಗೆ ಅನುಕೂಲಕಾರಿಯಾದ ಶಿಕ್ಷಣವು 2002ರಿಂದಲೂ ರೂಪಿಸಲ್ಪಡುತ್ತಾ ಬಂದಿದೆ. ಈಗ ಅದು ಹೆಚ್ಚು ಸ್ಪಷ್ಟವಾಗಿದೆ.

ಖಾಸಗಿ ಘಟಕಗಳಾದ ಮಾತ್ರಕ್ಕೆ ಕಡಿಮೆ ವೇತನ ಎಂಬ ಪ್ರಶ್ನೆ ಬರುವುದಿಲ್ಲ. ಪ್ರಶ್ನೆ ಬರುವುದು ಪ್ರತಿಭೆಯದ್ದು. ಖಾಸಗಿ ಘಟಕಗಳಲ್ಲಿ ಪರಿಣತರು ಪ್ರತಿಭಾವಂತರಾಗಿದ್ದಷ್ಟೂ ಬೇಡಿಕೆ ಜಾಸ್ತಿ ಇರುತ್ತದೆ. ಸರ್ಕಾರಿ ಘಟಕಗಳಲ್ಲೂ ಪ್ರತಿಭೆಗೇ ಮಹತ್ವ ಇರುವುದು. ಆದರೆ ಅಲ್ಲಿ ಸಾರ್ವಜನಿಕ ಉತ್ತರದಾಯಿತ್ವ ಇರುವುದರಿಂದ ಖಾಸಗಿ ಘಟಕಕ್ಕಿರುವ ನಿಖರ ಪರಿಶ್ರಮ ಮತ್ತು ಪ್ರತಿಭೆಯ ಮಾನದಂಡವು ಅದೇ ರೀತಿಯಲ್ಲಿ ಇರುವುದಿಲ್ಲ. ತಾನು ಪದವಿಯಲ್ಲಿ ಒಳ್ಳೆಯ ಅಂಕಗಳನ್ನು ಪಡೆದಿದ್ದೇನೆ ಎನ್ನುವುದು ಸಾಲುವುದಿಲ್ಲ. ಅಂಕಗಳು ಸೂಚಿಸುವ ಪ್ರತಿಭೆಯು ಕಾರ್ಯ ನಿರ್ವಹಣೆಯಲ್ಲಿ ಕಾಣಬೇಕಾಗುತ್ತದೆ.




ಪ್ರತಿಭೆಯ ವಿಚಾರ ಬಂದ ತಕ್ಷಣ ಶೋಷಿತ ಸಮುದಾಯಗಳಿಗೆ ತೊಂದರೆಯೇ ಆಗುತ್ತದೆ ಎಂಬ ಸ್ಥಾಪಿತ ಭಯದ ಅಗತ್ಯ ಇಲ್ಲ. ಶೋಷಿತ ಸಮುದಾಯಗಳ ಬಳಿಯೂ ಕೌಶಲಗಳಿವೆ. ಆ ಕೌಶಲಗಳಲ್ಲಿಯೂ ಪ್ರತಿಭಾವಂತರಾಗಿ ಬೆಳೆಯಲು ಅವಕಾಶವಿದೆ. ಆಗ ಹೆಚ್ಚು ಬಹುರೂಪಿ ಸರಕು ಮತ್ತು ಸೇವೆಗಳು ಮಾರುಕಟ್ಟೆಗೆ ಬರುತ್ತವೆ. ಆದರೆ ಶಿಕ್ಷಣ ಮತ್ತು ಆರ್ಥಿಕತೆಯನ್ನು ಆ ರೀತಿಯಲ್ಲಿ ಸಂಯೋಜಿಸಲು ಏನು ಮಾಡಬೇಕು ಎನ್ನುವುದು ವರ್ತಮಾನದ ಸವಾಲಾಗಿದೆ. ಬಹುಶಃ ಈ ಕ್ಷಣಕ್ಕೆ ಇದಕ್ಕೆ ಸೂಕ್ತವಾದ ಮಾದರಿ ದೊರೆಯಲಾರದು. ಗಾಂಧಿವಾದಿ ಧರ್ಮಪಾಲ್ ಅವರು ‘ಬ್ಯೂಟಿಫುಲ್ ಟ್ರೀ’ ಕೃತಿಯಲ್ಲಿ ಕೊಡುವ ಬ್ರಿಟಿಷ್ ಪೂರ್ವಕಾಲದ ಭಾರತೀಯ ಶಾಲಾ ಪದ್ಧತಿಗಳ ಯುಗ ಕಳೆದ ಮೇಲೆ ಶಿಕ್ಷಣದ ಪರಿಕಲ್ಪನೆಯು ಎರಡು ಶತಮಾನಗಳ ಸ್ಥಾಪಿತ ಕಲ್ಪನೆಯೊಂದನ್ನು ಹುಟ್ಟುಹಾಕಿದೆ. ಗಣಿತದಲ್ಲಿ ಅಂಕಗಳನ್ನು ಪಡೆದವನು ಬುದ್ಧಿವಂತ; ಚೆನ್ನಾಗಿ ಜೇನುಕೃಷಿ ಮಾಡಬಲ್ಲವನು ಬುದ್ಧಿವಂತನಲ್ಲ, ಅವನ ಆ ಕೌಶಲವು ಔಪಚಾರಿಕ ಶಿಕ್ಷಣವು ಕೊಡುವ ಅಂಕಗಳಿಗೆ ಪರಿಗಣನೆ ಇಲ್ಲ ಎನ್ನುವುದು ಸದ್ಯದ ಚಿಂತನೆ. ಆದರೆ ಬದಲಾಗಲಿರುವ ಆರ್ಥಿಕ ರಚನೆಗಳು ಇವೆಲ್ಲವನ್ನೂ ಶಿಕ್ಷಣದ ವ್ಯಾಪ್ತಿಗೆ ತರಬೇಕಾದ ಸ್ಥಿತಿಯನ್ನು ಬಹುದೂರದಲ್ಲಿ ಹೊಂದಿವೆ. ಆಗ ಈ ರೀತಿಯ ಶಿಕ್ಷಣಕ್ಕೊಂದು ಮಾದರಿ ಸಿಗಲಿದೆ. ಆಗ ಸ್ವ ಉದ್ಯೋಗಗಳು ಜಾಸ್ತಿಯಾಗುತ್ತವೆ. ಅಂತೂ ಸರ್ಕಾರದ ಪಾಲುದಾರಿಕೆ ಗಣನೀಯವಾಗಿ ಹೊರಟು ಹೋಗುತ್ತದೆ.

ಆರ್ಥಿಕತೆಯಲ್ಲಿ ಸರ್ಕಾರದ ಪಾಲುದಾರಿಕೆ ಏನಿದ್ದರೂ ತಾತ್ಕಾಲಿಕ ಪರಿಹಾರವಾಗಿಯಷ್ಟೆ ಇರುತ್ತದೆ. ಇತಿಹಾಸವನ್ನು ನೋಡಿದರೆ ಪ್ರಭುತ್ವವೇ ಸಮಗ್ರವಾಗಿ ಆರ್ಥಿಕತೆಯಲ್ಲಿ ಪ್ರಧಾನ ಪಾತ್ರಧಾರಿಯಾಗಿ ಇದ್ದ ಅವಧಿ ತೀರಾ ಕಡಿಮೆಯೇ ಆಗಿದೆ. ಸಾರ್ವಕಾಲಿಕವಾಗಿ ಪ್ರಭುತ್ವಕ್ಕೆ ಆರ್ಥಿಕತೆಯ ಹೊಣೆ ಬಲು ಭಾರವಾಗುತ್ತದೆ. ಆದ್ದರಿಂದ ಸರ್ಕಾರವು ಆರ್ಥಿಕತೆಯಿಂದ ಕಳಚಿಕೊಳ್ಳುತ್ತಾ ಹೋಗುವುದು ಸಹಜ ಪ್ರಕ್ರಿಯೆಯಾಗಿದೆ.

ಆದರೆ ಈ ಪ್ರಕ್ರಿಯೆಯನ್ನು ಜನಸಮುದಾಯಗಳು ಹೇಗೆ ಸ್ವೀಕರಿಸುತ್ತವೆ ಎಂಬ ಆಧಾರದಲ್ಲಿ ನಾವು ಗೆಲ್ಲುತ್ತೇವೆಯೋ ಸೋಲುತ್ತೇವೆಯೋ ಎನ್ನುವುದು ನಿರ್ಧಾರವಾಗುತ್ತದೆ. ಜನಸಮುದಾಯಗಳು ಉದ್ಯಮಶೀಲತೆ ರೂಢಿಸಿಕೊಂಡಾಗ ಶಿಕ್ಷಣವನ್ನು ಸಮುದಾಯಗಳ ಹಿತಾಸಕ್ತಿಗನುಗುಣವಾಗಿ ರೂಪಿಸಲು ಆಗುತ್ತದೆ. ಸಮುದಾಯಗಳು ಆರ್ಥಿಕತೆಯನ್ನು ಸರ್ಕಾರದ ಜವಾಬ್ದಾರಿಯಾಗಿ ಅಥವಾ ತಮಗೆ ಅನುಕೂಲ ಮಾಡಿಕೊಡುವುದು ಉಳ್ಳವರ ಜವಾಬ್ದಾರಿ ಎಂಬ ಹಳಹಳಿಕೆಯ ಕ್ರಮದಲ್ಲೇ ಉಳಿದುಕೊಂಡರೆ ಆಗ ಶಿಕ್ಷಣವು ಬೃಹತ್ ಕಂಪನಿಗಳಿಗೆ ಅನುಕೂಲವಾಗುವ ವಿನ್ಯಾಸದಲ್ಲಿ ಸಂಘಟಿಸಲ್ಪಟ್ಟು ಸಮುದಾಯಗಳಿಗೆ ಸೋಲಾಗುತ್ತದೆ. ತಾವೇ ಜವಾಬ್ದಾರಿಯನ್ನು ತೆಗೆದುಕೊಂಡು ಉದ್ಯಮ ಸಾಹಸದ ಪ್ರವೃತ್ತಿಯನ್ನು ತೋರಿಸದೇ ಇರುವುದು ಭಾರತದ ಸಮುದಾಯಗಳ ಸಾಮಾನ್ಯ ಲಕ್ಷಣವಾದ್ದರಿಂದ ಸೋಲುವ ಸಂಭವನೀಯತೆ ಜಾಸ್ತಿ ಇದೆ. ಆದ್ದರಿಂದ ಈ ಕುರಿತು ವ್ಯಾಪಕವಾಗಿ ಸಮಾಜದಲ್ಲಿ ಅರಿವು ಮೂಡಿಸುವ ಚಿಂತನೆಗಳು ಮತ್ತು ಚರ್ಚೆಗಳು ನಡೆಯಬೇಕಾಗಿದೆ.

ಚುರುಮುರಿ



ಪುಡುಂಗು ಪುರಾಣ!

• ಬಿ.ಎನ್. ಮಲ್ಲೇಶ್

‘ಗುರೂ, ಈ ಪುಡುಂಗು ಅಂದ್ರೆ ಏನು? ಮೊನ್ನೆ ಸಿನಿಮಾ ಸ್ಟಾರ್ ದರ್ಶನ್ನು ಅದ್ಯಾರಿಗೋ ‘ಅವ್ನೇನು ದೊಡ್ಡ ಪುಡುಂಗಾ?’ ಅಂತ ಕ್ಲಾಸ್ ತಗಂಡಿದ್ರಪ್ಪ... ಏನು ಹಂಗಂದ್ರೆ?’ ತೆಪರೇಸಿಯನ್ನು ದುಬ್ಬೀರ ಕೇಳಿದ.

ದುಬ್ಬೀರನ ಪ್ರಶ್ನೆಗೆ ನಕ್ಕ ಗುಡ್ಡೆ ‘ನಂಗೆ ಗುಂಡು ಗೊತ್ತಪ, ಇದ್ಯಾವುದಿದು ಡುಂಗು, ಪುಡುಂಗು?’ ಎಂದ.

‘ಲೇಯ್ ಅದು ಪುಡಾಂಗ್ ಅಂತ ಕಣಲೆ... ಡುಂಗು, ಗುಂಡು ಅಲ್ಲ’ ತೆಪರೇಸಿ ತಿದ್ದಿದ.

‘ಸರಿ ಹಂಗಂದ್ರೆ ಏನು?’ ಗುಡ್ಡೆ ಕೊಕ್ಕೆ.

‘ಅಂದ್ರೆ ನೀನ್ಯಾವ ದೊಡ್ಡ ಪೋತಪ್ಪನಾಯಕ ಅಂತ ಅರ್ಥ...’

‘ಸರಿ ಪೋತಪ್ಪನಾಯಕ ಅಂದ್ರೆ ಏನು?’

‘ಒಳ್ಳೆ ತಲೆನೋವಲೆ ನೀನು, ಅಂದ್ರೆ ನೀನ್ಯಾವ ದೊಡ್ಡ ಪೋತ್ಲಾಂಡಿ ಅಂತ...’

‘ಅದೇ ಕಣಲೆ, ಪೋತ್ಲಾಂಡಿ ಅಂದ್ರೆ ಏನು?’

‘ಥು... ಏನ್ ಕಾಡ್ತಿಯಲೆ, ಕೆಲವಕ್ಕೆ ಇಂಥದೇ ಅರ್ಥ ಅಂತ ಇರಲ್ಲ, ಅದರ ಧ್ವನಿ ತಿಳ್ಕಾಬೇಕು. ಅಂದ್ರೆ ನೀನೇನ್ ದೊಡ್ಡ ಇವನಾ? ಮಹಾನಾ? ಎಲ್ರುನ್ನು ಮೀರಿಸಿದೋನಾ ಅಂತ...’ ತೆಪರೇಸಿಗೂ ಹೇಳಲು ಬರದೆ ತಡವರಿಸಿದ.

‘ಹೋಗ್ಲಿ ಬಿಡ್ರಲೆ, ನಿಮಗೆ ಹೇಳಾಕೆ ಬರಲ್ಲ, ನಮಗೆ ಅರ್ಥ ಆಗಲ್ಲ. ಈಗ ದೇಶದ್ದು, ರಾಜ್ಯದ್ದು ಸುದ್ದಿ ಏನು ಅದ್ನಾರ ಹೇಳ್ರಿ...’ ಪರಮೇಶಿ ಮಾತು ಬದಲಿಸಿದ.

‘ಸುದ್ದಿ ಏನಪ ಅಂದ್ರೆ, ಸೆಂಟ್ರಲ್ಲಲ್ಲಿ ಪೆಗಾಸಿಸ್ಸು, ರಾಜ್ಯದಲ್ಲಿ ಯಗಾಸಿಸ್ಸು...’ ಗುಡ್ಡೆ ವಿಚಿತ್ರವಾಗಿ ಹೇಳಿ ನಗಾಡಿದ.

‘ಲೇಯ್, ಏನಲೆ ಹಂಗಂದ್ರೆ? ಅರ್ಥ ಆಗಂಗೆ ಬೊಗಳು’ ದುಬ್ಬೀರ ರೇಗಿದ.

‘ನೋಡ್ರಪ, ಪೆಗಾಸಿಸ್ ಅಂದ್ರೆ ಫೋನ್ ಕದ್ದಾಲಿಕೆ ಗದ್ದಲ, ಗೂಢಚಾರಿಕೆ...’

‘ಸರಿ, ಯಗಾಸಿಸ್ ಅಂದ್ರೆ?’

‘ಯಡ್ಯೂರಪ್ಪನೋರ ಕುರ್ಚಿ ಗದ್ದಲ!’

ಗುಡ್ಡೆ ಮಾತಿಗೆ ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಆಕೆಯ ಕರ್ತವ್ಯಪರತೆಗೆ ಅಂಜುವುದೇಕೆ?

ಹೆಣ್ಣುಮಕ್ಕಳ ಕುರಿತ ಚುಚ್ಚುಮಾತುಗಳಲ್ಲಿ ಅಡಗಿರುವುದು ಅವರ ಸಾಮರ್ಥ್ಯದ ಬಗೆಗಿನ ಭಯಮಿಶ್ರಿತ ಅಸೂಯೆ ಹಾಗೂ ಕೈಲಾಗದ ಅಸಹಾಯಕತೆ

• ನಳಿನಿ ಟಿ. ಭೀಮಪ್ಪ


ಮೊನ್ನೆ ಸ್ಕೂಟಿಯಲ್ಲಿ ಬರುವಾಗ ದಾರಿಯಲ್ಲಿ ಮಹಿಳಾ ಟ್ರಾಫಿಕ್ ಪೊಲೀಸ್ ಒಬ್ಬರು ಗಾಡಿಯನ್ನು ನಿಲ್ಲಿಸಲು ಸೂಚಿಸಿದರು. ನನ್ನ ಜೊತೆ ಮತ್ತಿಬ್ಬರು ಪುರುಷರ ಗಾಡಿಗಳನ್ನೂ ನಿಲ್ಲಿಸಲಾಯಿತು. ‘ಎಮಿಶನ್ ಟೆಸ್ಟ್ ಸರ್ಟಿಫಿಕೇಟ್ ತೋರಿಸಿ’ ಎಂದು ಆಕೆ ಕೇಳಿದರು. ಅವರಲ್ಲೊಬ್ಬರು ‘ಮೇಡಮ್, ಇಲ್ಲೇ ಸಣ್ಣ ಕೆಲಸಕ್ಕೆ ಬಂದಿದ್ದೆವು. ನಾವು ಬರೀ ಕಾರ್‌ನಲ್ಲಿಯೇ ಅಡ್ಡಾಡುವುದು, ಹಾಗಾಗಿ ಮಾಡಿಸಿಲ್ಲ’ ಎಂದು ಏನೇನೋ ಸಬೂಬು ಹೇಳತೊಡಗಿದರು. ಆಕೆ ಯಾವುದಕ್ಕೂ ಸೊಪ್ಪು ಹಾಕದೆ, ‘ಐನೂರು ರೂಪಾಯಿ ದಂಡ ಕಟ್ಟಲೇಬೇಕು’ ಎಂದಾಗ, ‘ನಮಗೆ ಆರ್‌ಟಿಒದಲ್ಲಿ ಅವರು ಗೊತ್ತು, ಇವರು ಗೊತ್ತು, ದೊಡ್ಡ ಕಾಲೇಜಿನ ಉಪನ್ಯಾಸಕ ನಾನು’ ಅಂತೆಲ್ಲ ಸಮಜಾಯಿಷಿ ನೀಡತೊಡಗಿದರು.

‘ಅದ್ಯಾರು ಗೊತ್ತಿದ್ದಾರೋ ಫೋನ್ ಮಾಡಿ’ ಎಂದು ಆಕೆ ಹೇಳಿದಾಗ, ಯಾರಿಗೋ ಡಯಲ್ ಮಾಡಿ ವಿಷಯ ತಿಳಿಸಿ, ಆಕೆಯ ಕೈಗೆ ಫೋನ್ ಕೊಟ್ಟು ‘ಮಾತನಾಡಿ ಮೇಡಮ್’ ಎಂದರು. ಆಕೆ ಮಾತನಾಡುವಾಗ ಮುಖ ಸಣ್ಣದು ಮಾಡಿಕೊಂಡು ‘ಎಸ್ ಸರ್, ಎಸ್ ಸರ್’ ಎನ್ನುವುದನ್ನು ಗಮನಿಸಿದೆ. ಫೋನ್ ಇವರ ಕೈಗೆ ವಾಪಸ್ ಕೊಟ್ಟು ಉದಾಸೀನದಿಂದ ‘ತಾವು ಹೋಗಬಹುದು’ ಎಂದರಾಕೆ. ತನ್ನ ಕರ್ತವ್ಯ ಸರಿಯಾಗಿ ನಿರ್ವಹಿಸಿದ್ದೇನೆಂಬ ಆತ್ಮವಿಶ್ವಾಸ, ಹೆಮ್ಮೆ ಆಕೆಯ ಮುಖದಲ್ಲಿ ಕಂಡುಬರುತ್ತಿತ್ತು. ಇವರಿಬ್ಬರ ಮುಖದಲ್ಲಿ ಆಕೆಯನ್ನು ಮಣಿಸಿದ ರೀತಿಗೆ ವ್ಯಂಗ್ಯ ನಗು ಜೊತೆಗೆ ದಂಡ ಕಟ್ಟುವುದನ್ನು ತಪ್ಪಿಸಿಕೊಂಡೆವು ಎನ್ನುವ ಉಡಾಫೆಯ ಮನೋಭಾವ ನೋಡುಗರಿಗೆ ಸಹ್ಯವೆನಿಸುತ್ತಿರಲಿಲ್ಲ.

ನಾನೂ ಸರ್ಟಿಫಿಕೇಟ್ ಇಲ್ಲದ ಕಾರಣ ಮತ್ತೊಬ್ಬರ ಜೊತೆಗೆ ದಂಡ ಕಟ್ಟಿ ಅಲ್ಲೇ ಮುಂದಿದ್ದ ತರಕಾರಿ ಅಂಗಡಿಗೆ ಹೋದೆ. ಅಲ್ಲಿ ಅವರಿಬ್ಬರೂ ಇದ್ದರು. ‘ಏನು ಮಾರಾಯ, ಈ ಲೇಡೀಸ್ ಹತ್ರ ಸಿಕ್ಕಿ ಹಾಕ್ಕೊಂಡರೆ ತುಂಬಾ ಕಷ್ಟ ನೋಡು. ಜೆಂಟ್ಸ್ ಆದರೆ ಒಂಚೂರು ಕೈಬೆಚ್ಚಗೆ ಮಾಡಿಯೋ ಹೇಗಾದರೂ ಏನಾದರೂ ಹೇಳಿಯೋ ಪಾರಾಗಬಹುದು. ಆದರೆ ಈ ಹೆಣ್ಣುಮಕ್ಕಳಿದ್ದರೆ ತುಂಬಾ ಕಿರಿಕಿರಿ ಮಾಡ್ತಾರೆ, ಯಾವುದಕ್ಕೂ ಬಗ್ಗುವುದೇ ಇಲ್ಲ ಅಂತಾರೆ. ದೊಡ್ಡ ಆರ್‌ಟಿಒ ಆಫೀಸರ್ ಕಡೆಯಿಂದಲೇ ಫೋನ್ ಮಾಡಿಸಿದೆ ನೋಡು, ಸುಮ್ಮನೆ ತಣ್ಣಗಾಗಿಬಿಟ್ಟಳು’ ಎಂದು ನಗಾಡುತ್ತಿದ್ದರು.

ಅರೆ! ಆಕೆ ತನ್ನ ಪಾಲಿನ ಕರ್ತವ್ಯ ನಿರ್ವಹಿಸಿದ್ದೂ ಇವರ ಕಣ್ಣಿಗೆ ಘನಘೋರ ಅಪರಾಧ. ಅದೇ ಲಂಚಕ್ಕೆ ಕೈಯೊಡ್ಡಿದ್ದರೆ ಮತ್ತೊಂದು ರೀತಿಯಲ್ಲಿ ಚುಚ್ಚುತ್ತಿರಲಿಲ್ಲವೇ ಇವರು? ಆಕೆ ಪ್ರಾಮಾಣಿಕವಾಗಿ, ನಿಷ್ಠೆಯಿಂದ ಮಾಡಿದ ಕೆಲಸಕ್ಕೆ ಕಿಂಚಿತ್ತು ಬೆಲೆಯನ್ನೂ ಕೊಡದೆ, ಆಕೆ ಹೆಣ್ಣು, ತಮ್ಮ ಅಧಿಕಾರದ ಪ್ರಭಾವದಿಂದ ಅವಳನ್ನು ಹತ್ತಿಕ್ಕಿದೆವು ಎನ್ನುವ ಅಹಂಕಾರದ ಮನಃಸ್ಥಿತಿಯೇ ಅವರಿಬ್ಬರಲ್ಲಿ ಹೆಚ್ಚು ಎದ್ದು ಕಾಣುತ್ತಿತ್ತು.

ಎಷ್ಟೋ ಸಲ ರೈಲ್ವೆಯಲ್ಲಿ ಟಿಕೆಟ್ ಚೆಕಿಂಗ್‌ಗೆ ಬರುವ ಅಧಿಕಾರಿ ಮಹಿಳೆಯಾಗಿದ್ದರೆ, ಟಿಕೆಟ್ ಕೊಳ್ಳದೆ ಪ್ರಯಾಣಿಸುವವರ ಗಂಟಲಲ್ಲಿ ಮುಳ್ಳು ಸಿಕ್ಕಿಹಾಕಿಕೊಂಡ ಹಾಗಾಗುತ್ತದೆ. ಏಕೆಂದರೆ ಅವರನ್ನು ಯಾಮಾರಿಸುವುದು ಅಷ್ಟು ಸುಲಭವಲ್ಲ ಎಂಬ ಅರಿವು ಬಹುತೇಕರಿಗೆ ಇರುತ್ತದೆ. ಕಿರಣ್ ಬೇಡಿಯವರಿಗಿಂತ ಮಾದರಿ ಬೇಕೆ? ತಾನು ಕರ್ತವ್ಯದಲ್ಲಿದ್ದಾಗ ತಪ್ಪು ಮಾಡಿದ ದೊಡ್ಡ ರಾಜಕಾರಣಿಗೇ ದಂಡ ಹಾಕಿ, ಕಾನೂನಿನ ಮುಂದೆ ಎಲ್ಲರೂ ಒಂದೇ ಎನ್ನುವುದನ್ನು ತೋರಿಸಿಕೊಟ್ಟ ದಿಟ್ಟ ಮಹಿಳೆ. ಹಾಗೆಯೇ ಶಾಲೆಗಳಿರಲಿ, ಬ್ಯಾಂಕುಗಳಿರಲಿ, ಪತ್ರಿಕೋದ್ಯಮ, ಐ.ಟಿ ಕ್ಷೇತ್ರವೇ ಇರಲಿ ಪ್ರತಿಯೊಂದರಲ್ಲಿಯೂ ಹೆಚ್ಚಿನ ಹೆಣ್ಣುಮಕ್ಕಳು ಅತ್ಯಂತ ಶಿಸ್ತು, ಬದ್ಧತೆಯಿಂದ ಕೆಲಸ ಮಾಡುತ್ತಾ ತಮ್ಮ ಛಾಪನ್ನು ಮೂಡಿಸುತ್ತಿದ್ದಾರೆ. ಆದರೆ ಸಹಿಸದ ಜನ ಮಾತ್ರ ಆಕೆಯನ್ನು ಯಾವ ರೀತಿಯಲ್ಲಿ ಕೆಳಗಿಳಿಸಿ ತಮಾಷೆ ನೋಡಲಿ ಎಂದು ಕಾಯುತ್ತಿರುತ್ತಾರೆ.



ಮಹಿಳಾ ಉದ್ಯೋಗಿಗಳಿರುವ ಪ್ರತಿಯೊಂದು ಕ್ಷೇತ್ರದಲ್ಲಿಯೂ ಹೆಚ್ಚು ಕಡಿಮೆ ಇದೇ ಮನಃಸ್ಥಿತಿ ಹಾಗೂ ಪರಿಸ್ಥಿತಿ. ಆಕೆ ಅತ್ಯಂತ ಕರ್ತವ್ಯಪರತೆಯಿಂದ ಕೆಲಸ ಮಾಡಿದರೂ ಆಡಿಕೊಳ್ಳುವ ವಿಕೃತ ಮನಸ್ಸಿನವರೇ ಹೆಚ್ಚು. ಇನ್ನು ಕೆಲಸದಲ್ಲಿ ಅಕಸ್ಮಾತ್ ತಪ್ಪುಗಳಾಗಿಬಿಟ್ಟರೆ ‘ಈ ಹೆಂಗಸರಿಗೆ ವಹಿಸಿದರೆ ಹೀಗೇ ಆಗೋದು’ ಎನ್ನುವ ವ್ಯಂಗ್ಯದ ಬಾಣಗಳು ತೂರಿ ಬರುತ್ತಿರುತ್ತವೆ.

ಉನ್ನತ ಹುದ್ದೆಗೆ ಸ್ವಂತ ಪರಿಶ್ರಮದಿಂದಲೇ ಮೇಲೇರಿದರೂ ‘ಹೆಂಗಸರು ಹೇಗಾದರೂ ಗಿಟ್ಟಿಸಿಕೊಂಡುಬಿಡುತ್ತಾರೆ’ ಎನ್ನುವ ಅಸಹ್ಯಕರ ಮಾತುಗಳು ಸಿದ್ಧವಾಗಿರುತ್ತವೆ. ಇಲ್ಲಿ ‘ಹೇಗಾದರೂ’ ಎನ್ನುವುದು, ಮೂದಲಿಸುವವರ ಕೀಳು ಮನಃಸ್ಥಿತಿಗೆ ಸಾಕ್ಷಿಯಾಗಿ ನಿಲ್ಲುತ್ತದೆ. ಆದರೆ ಆಡುವವರು ಏನು ಆಡಿಕೊಂಡರೂ ಕೆಲಸ ಮಾಡುವವರಿಗೆ ಬೆಲೆ, ಗೌರವ ಯಾವತ್ತೂ ಇದ್ದೇ ಇರುತ್ತದೆ. ಹೊಟ್ಟೆಕಿಚ್ಚಿನವರ ಇಂತಹ ಚುಚ್ಚುಮಾತುಗಳಲ್ಲಿ ಅಡಗಿರುವುದು ಹೆಣ್ಣಿನ ಸಾಮರ್ಥ್ಯದ ಬಗೆಗಿನ ಒಂದು ರೀತಿಯ ಭಯಮಿಶ್ರಿತ ಅಸೂಯೆ ಹಾಗೂ ಕೈಲಾಗದ ಅಸಹಾಯಕತೆ. ತಮ್ಮ ಪಾಲಿನ ಕರ್ತವ್ಯವನ್ನು ಯಾವ ಅಂಜಿಕೆ, ಅಳುಕೂ ಇಲ್ಲದೆ ಅಚ್ಚುಕಟ್ಟಾಗಿ ನಿರ್ವಹಿಸುತ್ತಿರುವ ಹೆಣ್ಣುಮಕ್ಕಳ ಬಗ್ಗೆ ನಿಜವಾಗಿಯೂ ಹೆಮ್ಮೆಯೆನಿಸುತ್ತದೆ.

ವಾಚಕರ ವಾಣಿ

ಏರಿದ ಅಂಕ: ಬೇಕಾಗಿದೆ ಸ್ಪಷ್ಟನೆ

ಈ ಬಾರಿಯ ಪಿಯು ಫಲಿತಾಂಶ ನೋಡಿದರೆ ಯಾಕೋ ಸ್ವಲ್ಪ ಮಟ್ಟಿನ ಗೊಂದಲ ಉಂಟಾಗುತ್ತದೆ. 2,239 ವಿದ್ಯಾರ್ಥಿಗಳು 600ಕ್ಕೆ 600 ಅಂಕ ಪಡೆದಿದ್ದಾರೆ. ಹಿಂದೆ ಒಬ್ಬರೋ ಇಬ್ಬರೋ ಈ ತರಹ ಅಂಕ ತೆಗೆಯುತ್ತಿದ್ದರು. ಉನ್ನತ ಶ್ರೇಣಿ ಹಾಗೂ ಪ್ರಥಮ ಶ್ರೇಣಿ ತೆಗೆದವರ ಸಂಖ್ಯೆಯೂ ಸಿಕ್ಕಾಪಟ್ಟೆ ಏರಿದೆ. ಹಾಗಾದರೆ ಇದರ ಅರ್ಥ ಏನು? ಬುದ್ಧಿವಂತರ ಸಂಖ್ಯೆಯಲ್ಲಿ ಏರಿಕೆ ಆಗಿದೆ ಅಂತಲೋ ಅಥವಾ ಇದು ಕೊರೊನಾ ಕೊಡುಗೆ ಅಂತಲೋ ಎಂಬುದನ್ನು ತಿಳಿಯಬೇಕಾಗಿದೆ ನಾವು.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

ಹಾರ, ತುರಾಯಿಯಿಂದ ನಿಷ್ಠುರ ಕ್ರಮಕ್ಕೆ ಅಡ್ಡಿ

ಕೊಲೆ ಪ್ರಕರಣದಲ್ಲಿ ಜಾಮೀನು ಪಡೆದ ರಾಜಕಾರಣಿಯೊಬ್ಬರ ಪುತ್ರನ ಮದುವೆ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಕಾರಣಕ್ಕಾಗಿ ಕೊಪ್ಪಳ ಜಿಲ್ಲೆಯ ಡಿವೈಎಸ್ಪಿ, ಸಿಪಿಐ ಹಾಗೂ ಪಿಎಸ್‌ಐ ಅವರನ್ನು ಕಡ್ಡಾಯ ರಜೆಯ ಮೇಲೆ ಕಳುಹಿಸಲಾಗಿದೆ. ಕೆಲ ದಿನಗಳ ಹಿಂದೆ ಲಾಕ್‌ಡೌನ್ ನಿಯಮ ಉಲ್ಲಂಘಿಸಿ ಠಾಣೆಯಲ್ಲಿ ಹುಟ್ಟುಹಬ್ಬ ಆಚರಿಸಿಕೊಂಡ ಸಂಬಂಧ ಹೊಸಕೋಟೆಯ ಸಬ್‌ಇನ್‌ಸ್ಪೆಕ್ಟರ್ ಮೇಲೂ ಶಿಸ್ತುಕ್ರಮ ಜರುಗಿಸಲಾಗಿದೆ. ಪೊಲೀಸ್ ಅಧಿಕಾರಿಗಳು ವರ್ಗಾವಣೆಗೊಂಡು ನೂತನ ಠಾಣೆ, ವೃತ್ತ, ಜಿಲ್ಲೆಗಳಿಗೆ ಬಂದಾಗ ಹೂವಿನ ಹಾರ, ತುರಾಯಿಯೊಂದಿಗೆ ಸ್ವಾಗತ ಕೋರುವವರಿಗೂ ಬರವಿಲ್ಲ. ಎಲ್ಲ ಹಿನ್ನೆಲೆಯುಳ್ಳವರೂ ಸ್ವಾಗತ ಕೋರುತ್ತಾರೆ. ಈ ರೀತಿ ಮಾಡಿದಾಗ ಅವರ ಮೇಲೆ ಅಂತಹ ಅಧಿಕಾರಿಗಳು ತಮ್ಮ ಅಧಿಕಾರಾವಧಿಯಲ್ಲಿ ನಿಷ್ಠುರವಾಗಿ ಕ್ರಮ ತೆಗೆದುಕೊಳ್ಳಲು ಸಾಧ್ಯವೇ ಎಂಬ ಪ್ರಶ್ನೆ ಮೂಡುತ್ತದೆ.

ಪೊಲೀಸ್ ಮಹಾನಿರ್ದೇಶಕರು ಇತ್ತ ಗಮನಹರಿಸಿ, ವರ್ಗಾವಣೆಗೊಂಡು ಬರುವ ಪೊಲೀಸ್ ಅಧಿಕಾರಿಗಳಿಗೆ ಠಾಣೆ, ಪೊಲೀಸ್ ಕಚೇರಿಗಳಲ್ಲಿ ಸ್ವಾಗತ ಕೋರಲು ಬರುವವರಿಗೆ ಅವಕಾಶ ನೀಡದಂತೆ ಆದೇಶಿಸಬೇಕಾಗಿದೆ.

ಲಕ್ಷ್ಮೀಕಾಂತರಾಜು ಎಂ.ಜಿ., ಮಠಗ್ರಾಮ, ಗುಬ್ಬಿ

ಆರೋಗ್ಯ ಸೇವೆಯ ಮಹತ್ವ ಅರಿಯಲಿ

ಶುಲ್ಕ ರಿಯಾಯಿತಿ ಪಡೆದು ಎಂಬಿಬಿಎಸ್ ಪದವಿ ಮುಗಿಸಿದ ವೈದ್ಯರು ಗ್ರಾಮೀಣ ಸೇವೆ ಮಾಡುವುದು ಕಡ್ಡಾಯ. ಅದಕ್ಕೆ ವಿನಾಯಿತಿ ಕೋರಿ ಕೋರ್ಟ್ ಮೆಟ್ಟಿಲು ಹತ್ತಿದ್ದು ಸರಿಯಲ್ಲ. ಕೋರ್ಟ್ ಕೂಡಾ ವಿನಾಯಿತಿ ನಿರಾಕರಿಸಿ, ಸೂಕ್ತ ಅಭಿಪ್ರಾಯ ವ್ಯಕ್ತಪಡಿಸಿದೆ (ಪ್ರ.ವಾ., ಜುಲೈ 22). ಈಗತಾನೆ ವೈದ್ಯ ವೃತ್ತಿ ಆರಂಭಿಸುವ ಯುವ ವೈದ್ಯರು ಗ್ರಾಮೀಣ ಪ್ರದೇಶಗಳಲ್ಲಿ ಇರುವ ಆರೋಗ್ಯ ವ್ಯವಸ್ಥೆಯನ್ನು ಸ್ವತಃ ನೋಡಬೇಕಾಗುತ್ತದೆ. ಹಳ್ಳಿಯ ಜನರಿಗೆ ಸೂಕ್ತ ವೈದ್ಯಕೀಯ ಚಿಕಿತ್ಸೆ ಎಷ್ಟು ಅನಿವಾರ್ಯವಾಗಿರುತ್ತದೆ ಎಂಬುದನ್ನು ಅರಿಯಬೇಕಾಗುತ್ತದೆ. ವೃತ್ತಿಯ ಆರಂಭದಲ್ಲಿ ಬಡಜನರ ಸೇವೆ ಮಾಡಬೇಕಾದುದು ಅತ್ಯವಶ್ಯಕ.

ಸಮಾಜದ ಸ್ವಾಸ್ಥ್ಯ ಕಾಪಾಡುವ ದಿಸೆಯಲ್ಲಿ ಯುವ ವೈದ್ಯರ ಪಾತ್ರ ಅತ್ಯಂತ ಮುಖ್ಯವಾದುದು. ಹಳ್ಳಿಯಿಂದಲೇ ವೃತ್ತಿಜೀವನ ಪ್ರಾರಂಭಿಸಿದರೆ ಮುಂದಿನ ದಿನಗಳಲ್ಲಿ ತಮ್ಮ ವೈದ್ಯಕೀಯ ವೃತ್ತಿಗೆ ಭದ್ರ ಅಡಿಪಾಯ ಸಿಗುತ್ತದೆ. ಉಚಿತ ಮತ್ತು ಸುಸ್ಥಿರ ಆರೋಗ್ಯ ಸೇವೆ ಎಲ್ಲರಿಗೂ ಲಭ್ಯವಾದರೆ ದೇಶ ಸುಭಿಕ್ಷ ಆಗುತ್ತದೆ ಎಂಬುದನ್ನು ಯುವ ವೈದ್ಯರು ಅರಿಯಬೇಕಿದೆ.

ವಿ.ತಿಪ್ಪೇಸ್ವಾಮಿ, ಹಿರಿಯೂರು

ತೃತೀಯ ಲಿಂಗಿಗಳಿಗೆ ಮೀಸಲಾತಿ: ಮಾದರಿ ನಡೆ

ಖಾಲಿ ಇರುವ ಸರ್ಕಾರಿ ಹುದ್ದೆಗಳಲ್ಲಿ ತೃತೀಯ ಲಿಂಗಿಗಳಿಗೆ ಶೇ 1ರಷ್ಟು ಹುದ್ದೆ ಕಾಯ್ದಿರಿಸಲು 1977ರ ಕರ್ನಾಟಕ ನಾಗರಿಕ ಸೇವೆಗಳ ನಿಯಮಾವಳಿಗೆ ತಿದ್ದುಪಡಿ ತರಲು ಉದ್ದೇಶಿಸಲಾಗಿದೆ ಎಂದು ರಾಜ್ಯ ಸರ್ಕಾರವು ಹೈಕೋರ್ಟ್‌ಗೆ ಮಾಹಿತಿ ನೀಡಿದೆ (ಪ್ರ.ವಾ., ಜೂನ್ 20). ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರಿಗೂ ಬದುಕುವ ಹಕ್ಕಿದೆ. ಲಿಂಗವನ್ನು ಆಧರಿಸಿದ ತಾರತಮ್ಯವನ್ನು ಸಮರ್ಥಿಸಲಾಗುವುದಿಲ್ಲ. ತೃತೀಯ ಲಿಂಗಿಗಳಿಗೆ ಸರ್ಕಾರಿ ಉದ್ಯೋಗಗಳಲ್ಲಿ ಮೀಸಲಾತಿ ಕಲ್ಪಿಸುವುದು ಅವರಿಗೆ ಸಾಮಾಜಿಕ ನ್ಯಾಯ ಒದಗಿಸುವ ದಿಸೆಯಲ್ಲಿ ಒಂದು ಪ್ರಮುಖ ಹೆಜ್ಜೆ. ಲಿಂಗಪರಿವರ್ತಿತರು ಸಾಮಾನ್ಯವಾಗಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದವರಾದ್ದರಿಂದ, ಮೀಸಲಾತಿಯೆಂಬ ಪ್ರಾತಿನಿಧ್ಯದ ಮೂಲಕ ಸಾರ್ವಜನಿಕರ ಮಧ್ಯೆ ಗೌರವಾನ್ವಿತ ಬದುಕನ್ನು ಕಟ್ಟಿಕೊಳ್ಳುವ ಅವಕಾಶವನ್ನು ಅವರಿಗೆ ಕಲ್ಪಿಸಿದಂತಾಗುತ್ತದೆ.

ಪ್ರಕೃತಿಯ ತೀರ್ಪನ್ನು ನಾವು ಪ್ರಶ್ನಿಸಲು ಸಾಧ್ಯವಿಲ್ಲ. ಆದರೆ ಪ್ರತಿಯೊಬ್ಬರ ಗೌರವಯುತ ಜೀವನಕ್ಕೆ ಅವಕಾಶ ಒದಗಿಸುವುದು ನಮ್ಮ ಜವಾಬ್ದಾರಿ. ರಾಜ್ಯ ಸರ್ಕಾರದ ಈ ಕ್ರಮ ನಿಜಕ್ಕೂ ಶ್ಲಾಘನೀಯ ಮತ್ತು ಇನ್ನುಳಿದ ರಾಜ್ಯಗಳಿಗೂ ಅನುಕರಣೀಯವಾದುದು.

ಪ್ರವೀಣ ನಾಗಪ್ಪ ಯಲವಿಗಿ, ಹಾವೇರಿ

ಸನ್ಮಾರ್ಗ ತೋರಲಿ, ಘನತೆ ಉಳಿಯಲಿ

ರಾಜ್ಯದ ರಾಜಕೀಯ ಬೆಳವಣಿಗೆಯಲ್ಲಿ ಮಠಾಧೀಶರು ಕೈ ಜೋಡಿಸಿರುವುದು ನಾಡಿನ ದುರಂತವೇ ಸರಿ. ಮುಖ್ಯಮಂತ್ರಿ ಸ್ಥಾನದಿಂದ ಬಿ.ಎಸ್.ಯಡಿಯೂರಪ್ಪ ಅವರನ್ನು ಇಳಿಸಬಾರದು ಎಂದು ಐವತ್ತಕ್ಕೂ ಹೆಚ್ಚು ಮಠಾಧೀಶರು ಒಗ್ಗಟ್ಟು ಪ್ರದರ್ಶಿಸುತ್ತಿದ್ದಾರೆ. ಇದೇ ಮಠಾಧೀಶರು, ಜನಸಾಮಾನ್ಯರಿಗೆ ಆಗುತ್ತಿರುವ ನೂರಾರು ಸಮಸ್ಯೆಗಳಿಗೆ ಪರಿಹಾರ ಒದಗಿಸಿ ಎಂದು ಯಾವತ್ತೂ ಈ ಪರಿಯಾಗಿ ಒಗ್ಗಟ್ಟು ಪ್ರದರ್ಶಿಸಿರಲಿಲ್ಲ!

ಒಂದು ಮಠದ ಪೀಠಾಧಿಪತಿಯಾಗಿ ಮಠಾಧೀಶರು ಜಾತಿಭೇದ ಮರೆತು, ಮಠಗಳಿಗೆ ಬರುವ ಲಕ್ಷಾಂತರ ಜನರಿಗೆ ಸನ್ಮಾರ್ಗವನ್ನು ತೋರಿಸಬೇಕಾಗುತ್ತದೆ. ಅಂತಹವರು ವ್ಯಕ್ತಿಯೊಬ್ಬರ ಪರವಾಗಿ ಬಹಿರಂಗವಾಗಿ ಹೇಳಿಕೆ ನೀಡಿ, ರಾಜಕಾರಣ ಮಾಡುತ್ತಿರುವುದು ಸರಿಯಲ್ಲ. ಸನ್ಮಾರ್ಗವನ್ನು ತೋರಬೇಕಾದ ಗುರುಗಳು ಇನ್ನಾದರೂ ರಾಜಕಾರಣದ ಉಸಾಬರಿ ಬಿಟ್ಟು, ಸಮಾಜದಲ್ಲಿನ ಕೊಳಕುಗಳನ್ನು ತೊಲಗಿಸುವ ಕೆಲಸದಲ್ಲಿ ತೊಡಗಲಿ. ಆ ಮೂಲಕ ಘನತೆ ಉಳಿಸಿಕೊಳ್ಳಲಿ.

ರಾಜು ಬಿ. ಲಕ್ಕಂಪುರ, ಜಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಬೇಹುಗಾರಿಕೆಯ ಜಾಡು ಹಿಡಿದು ಜಾಗತಿಕ ಮಟ್ಟದಲ್ಲಿ ನಡೆದ ತನಿಖೆ ಸದ್ಯದ ಬಹುಚರ್ಚಿತ ವಿಷಯ. ಪ್ಯಾರಿಸ್ ಮೂಲದ ಲಾಭರಹಿತ ಸಂಘಟನೆ 'ಫಾರ್‌ಬಿಡನ್ ಸ್ಟೋರೀಸ್' ಮತ್ತು ಮಾನವ ಹಕ್ಕುಗಳ ಸಂಘಟನೆಯಾದ 'ಅಮ್ನೆಸ್ಟಿ ಇಂಟರ್‌ನ್ಯಾಷನಲ್' ಸೇರಿ ನಡೆಸಿದ ತನಿಖೆಯ ಅಂಶಗಳು ಬಯಲಾಗಿವೆ. ತಮ್ಮ ದೇಶದ ರಾಜಕಾರಣಿಗಳು, ಪತ್ರಕರ್ತರು, ಸಾಮಾಜಿಕ ಕಾರ್ಯಕರ್ತರ ಮೇಲೆ ಆಯಾ ದೇಶಗಳ ಸರ್ಕಾರಗಳು ಬೇಹುಗಾರಿಕೆ ನಡೆಸಿವೆ ಎಂದು ವರದಿ ಅಭಿಪ್ರಾಯಪಟ್ಟಿದೆ. ಬೇಹುಗಾರಿಕೆಗೆ ಅತ್ಯಾಧುನಿಕ ತಂತ್ರಜ್ಞಾನ ಬಳಕೆಯಾಗಿದೆ. ಅದುವೇ 'ಪೆಗಾಸಸ್' ಎಂಬ ಕುತಂತ್ರಾಂಶ.

ಈ ಮೊದಲೂ ಗೂಢಚರ್ಯೆ

ಭಾರತೀಯರ ಮೇಲೆ ಈ ಹಿಂದೆಯೂ ಪೆಗಾಸಸ್ ಮೂಲಕ ಗೂಢಚರ್ಯೆ ನಡೆದಿತ್ತು. 'ವಾಟ್ಸ್‌ಆ್ಯಪ್ ಮೂಲಕ ಭಾರತೀಯರ ಫೋನ್‌ಗಳಿಗೆ ಪೆಗಾಸಸ್ ತಂತ್ರಾಂಶವನ್ನು ಸೇರಿಸಲಾಗಿದೆ. ಆ ಮೂಲಕ ಗೂಢಚರ್ಯೆ ನಡೆಸಲಾಗಿದೆ' ಎಂದು ವಾಟ್ಸ್‌ಆ್ಯಪ್ ವರದಿ ನೀಡಿತ್ತು. ಇದಕ್ಕೆ ಸಂಬಂಧಿಸಿದಂತೆ ವಿಸ್ತೃತ ವರದಿ ನೀಡುವಂತೆ ಕಂಪ್ಯೂಟರ್ ಎಮರ್ಜೆನ್ಸಿ ರೆಸ್ಪಾನ್ಸ್ ಟೀಂ (ಸಿಇಆರ್‌ಟಿ) ವಾಟ್ಸ್‌ಆ್ಯಪ್‌ಗೆ ಸೂಚನೆ ನೀಡಿತ್ತು. 121 ಭಾರತೀಯರ ಮೇಲೆ ಪೆಗಾಸಸ್ ಮೂಲಕ ಗೂಢಚರ್ಯೆ ನಡೆಸಲು ಯತ್ನಿಸಲಾಗಿದೆ. ಆದರೆ 20 ಜನರ ಮೇಲೆ ಪೆಗಾಸಸ್ ಮೂಲಕ ಯಶಸ್ವಿಯಾಗಿ ಗೂಢಚರ್ಯೆ ನಡೆಸಲಾಗಿದೆ ಎಂದು ವಾಟ್ಸ್‌ಆ್ಯಪ್ ವರದಿ ನೀಡಿತ್ತು. ಈ ಬಗ್ಗೆ ಹೆಚ್ಚಿನ ಮಾಹಿತಿ ನೀಡುವಂತೆ ವೆಂಕಟೇಶ್ ನಾಯಕ್ ಎಂಬವರು ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವಾಲಯಕ್ಕೆ ಆರ್‌ಟಿಐ ಅರ್ಜಿ ಸಲ್ಲಿಸಿದ್ದರು. ವಾಟ್ಸ್‌ಆ್ಯಪ್ ನೀಡಿರುವ ವರದಿಯ ಅಂಶಗಳನ್ನು ಸಚಿವಾಲಯವು ಆರ್‌ಟಿಐ ಅರ್ಜಿಯಲ್ಲಿ ಉತ್ತರಿಸಿತ್ತು.

ಪೆಗಾಸಸ್ ಕಣ್ಗಾವಲು ಕೋಟೆ ಬಯಲು

ಭಯೋತ್ಪಾದಕರು ಹಾಗೂ ಕ್ರಿಮಿನಲ್‌ಗಳ ಜಾತಕ ಬಯಲು ಮಾಡಲು ಇಸ್ರೇಲ್ ದೇಶದ ಖಾಸಗಿ ಭದ್ರತಾ ಸಂಸ್ಥೆ ಎನ್‌ಎಸ್‌ಒ ಗ್ರೂಪ್ ತಯಾರಿಸಿದ ಪೆಗಾಸಸ್ ಕುತಂತ್ರಾಂಶವು ವಿವಿಧ ಸರ್ಕಾರಗಳ ಅಧಿಕೃತ ಗೂಢಚರ್ಯೆ ಸಾಧನವಾಗಿ ಬಳಕೆಯಾಗಿದೆ ಎಂದು ವರದಿ ಆರೋಪಿಸಿದೆ. ಸರ್ಕಾರಗಳಿಗೆ ಮಾತ್ರ ಈ ತಂತ್ರಾಂಶವನ್ನು ಎನ್‌ಎಸ್‌ಒ ಗ್ರೂಪ್ ಮಾರಾಟ ಮಾಡುತ್ತದೆ. ಆದರೆ ತನ್ನ ಗ್ರಾಹಕರು ಯಾರು ಎಂದು ಎನ್‌ಎಸ್‌ಒ ಬಹಿರಂಗಪಡಿಸಿಲ್ಲ.

ಜಗತ್ತಿನ 10 ದೇಶಗಳ, 17 ಮಾಧ್ಯಮ ಸಂಸ್ಥೆಗಳಿಗೆ ಸೇರಿದ 80ಕ್ಕೂ ಹೆಚ್ಚು ಪತ್ರಕರ್ತರು ಜತೆಯಾಗಿ ಪ್ರಾಜೆಕ್ಟ್ ಪೆಗಾಸಸ್ ತನಿಖೆ ನಡೆಸಿದ್ದಾರೆ. ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಸಂಸ್ಥೆಯು ಯೋಜನೆಯ ಭಾಗವಾಗಿದ್ದು, ತಾಂತ್ರಿಕ ನೆರವು ನೀಡಿದೆ. ಫಾರ್‌ಬಿಡನ್ ಸ್ಟೋರೀಸ್ ಸಂಸ್ಥೆಯು ಸಂಯೋಜನೆ ಕೆಲಸ ಮಾಡಿದೆ. ಅಮ್ನೆಸ್ಟಿಯ ತಾಂತ್ರಿಕ ಪ್ರಯೋಗಾಲಯವು 67 ಫೋನ್‌ಗಳ ವಿಧಿವಿಜ್ಞಾನ ಪರೀಕ್ಷೆ ನಡೆಸಿದೆ. ಅವುಗಳಲ್ಲಿ 37 ಫೋನ್‌ಗಳು ಪೆಗಾಸಸ್‌ನಿಂದ ಹ್ಯಾಕ್ ಆಗಿರುವುದು ದೃಢಪಟ್ಟಿದೆ.

'ಪೆಗಾಸಸ್ ಪ್ರಾಜೆಕ್ಟ್' ಪ್ರಕಾರ, ಜಗತ್ತಿನ 200ಕ್ಕೂ ಹೆಚ್ಚು ಪತ್ರಕರ್ತರು ಬೇಹುಗಾರಿಕೆಗೆ ಒಳಗಾಗಿದ್ದಾರೆ. 50,000ಕ್ಕೂ ಹೆಚ್ಚು ಫೋನ್ ಸಂಖ್ಯೆಗಳು ಗೂಢಚರ್ಯೆ ಪಟ್ಟಿಯಲ್ಲಿವೆ ಎಂದು ವರದಿ ತಿಳಿಸಿದೆ. ಬಹರೇನ್, ಮೊರಾಕ್ಕೊ, ಸೌದಿ ಅರೇಬಿಯಾ, ಭಾರತ, ಮೆಕ್ಸಿಕೊ, ಹಂಗರಿ, ಅಜರ್‌ಬೈಜಾನ್, ಟೋಗೊ, ರುವಾಂಡ ದೇಶಗಳಲ್ಲಿ ಕುತಂತ್ರಾಂಶದ ಕುರುಹು ಕಾಣಿಸಿದೆ.

ಬಾಯಿ ಬಿಡದ ಎನ್‌ಎಸ್‌ಒ: ಪ್ರತಿಕ್ರಿಯೆ ನೀಡುವಂತೆ ಎನ್‌ಎಸ್‌ಜಿ ಸಂಸ್ಥೆಗೆ ಫಾರ್‌ಬಿಡನ್ ಸ್ಟೋರೀಸ್ ಹಾಗೂ ಅಮ್ನೆಸ್ಟಿ ಮನವಿ ಮಾಡಿದ್ದವು. ಆದರೆ ಅದು ಸರ್ಕಾರಿ ಗ್ರಾಹಕರ ಗುರುತನ್ನು ಖಚಿತಪಡಿಸಿಯೂ ಇಲ್ಲ, ನಿರಾಕರಿಸಿಯೂ ಇಲ್ಲ. ಪೆಗಾಸಸ್ ಗ್ರಾಹಕರಾಗಿರುವ ದೇಶಗಳನ್ನು ಸಂಪರ್ಕಿಸಲಾಯಿತು. ಕೆಲವು ದೇಶಗಳು ಪ್ರತಿಕ್ರಿಯಿಸಲು ಕೊಟ್ಟಿದ್ದ ಗಡುವನ್ನು ಮೀರುವ ಮೂಲಕ ಪ್ರಶ್ನೆಗಳಿಗೆ ಉತ್ತರಿಸಲು ವಿಫಲವಾಗಿವೆ. ಇನ್ನೂ ಕೆಲವು ಎನ್‌ಎಸ್‌ಒ ಗ್ರೂಪ್‌ನ ಗ್ರಾಹಕರು ಎಂಬುದನ್ನು ನಿರಾಕರಿಸಿವೆ.

ಸೋರಿಕೆಯಾದ ಪಟ್ಟಿ ಎಲ್ಲಿಂದ ಬಂತು ಎಂಬುದು ಸ್ಪಷ್ಟವಾಗಿಲ್ಲ ಅಥವಾ ಎಷ್ಟು ಫೋನ್‌ಗಳನ್ನು ನಿಜವಾಗಿ ಹ್ಯಾಕ್ ಮಾಡಲಾಗಿದೆ ಎಂಬ ಬಗ್ಗೆಯೂ ಸ್ಪಷ್ಟತೆ ಇಲ್ಲ ಎಂದಿರುವ ಎನ್‌ಎಸ್‌ಒ, ತನ್ನ ಮೇಲಿನ ಆರೋಪವನ್ನು ನಿರಾಕರಿಸಿದೆ. ಆದಾಗ್ಯೂ, ಎಲ್ಲ ತನಿಖೆ ಮುಂದುವರಿಸಿ, ಸೂಕ್ತ ಕ್ರಮ ತೆಗೆದುಕೊಳ್ಳುವ ಭರವಸೆ ನೀಡಿದೆ.

ಪರಿಣಾಮಗಳು: ಮೊಬೈಲ್ ಸಂಖ್ಯೆಗಳ ದುರುಪಯೋಗ ವ್ಯಾಪಕವಾಗಿ ಆಗಿದೆ ಎಂದು ವರದಿ ತೋರಿಸಿದೆ. ಪತ್ರಕರ್ತರ ಜೀವನ, ಅವರ ಕುಟುಂಬಗಳು ಮತ್ತು ಸಹವರ್ತಿಗಳ ಜೀವವನ್ನು ಅಪಾಯಕ್ಕೆ ನೂಕಲಾಗಿದೆ. 'ಪತ್ರಿಕಾ ಸ್ವಾತಂತ್ರ್ಯ ಹಾಳು ಮಾಡುವುದು ಮತ್ತು ಸರ್ಕಾರದ ಟೀಕಾಕಾರ ಮಾಧ್ಯಮಗಳ ಬಾಯಿ ಮುಚ್ಚಿಸುವುದು ಈ ಬೇಹುಗಾರಿಕೆ ಹಿಂದಿನ ಉದ್ದೇಶ' ಎಂದು ಅಮ್ನೆಸ್ಟಿ ಪ್ರಧಾನ ಕಾರ್ಯದರ್ಶಿ ಆಗ್ನೆಸ್ ಕ್ಯಾಲಮಾರ್ಡ್ ಹೇಳಿದ್ದಾರೆ.

ತನಿಖೆಗೆ ಫ್ರಾನ್ಸ್ ಆದೇಶ: ಪೆಗಾಸಸ್ ವರದಿ ಪ್ರಕಟವಾದ 24 ಗಂಟೆಗಳಲ್ಲಿ ಕ್ರಮಕ್ಕೆ ಮುಂದಾಗಿರುವ ಫ್ರಾನ್ಸ್, ಈ ಕುರಿತು ತನಿಖೆಗೆ ಆದೇಶಿಸಿದೆ. ಫ್ರಾನ್ಸ್ ಅಧ್ಯಕ್ಷ ಇಮ್ಯಾನುವೆಲ್ ಮ್ಯಾಕ್ರನ್ ಅವರ ಮೊಬೈಲ್ ಸಂಖ್ಯೆಯೂ ಗೂಢಚರ್ಯೆ ಪಟ್ಟಿಯಲ್ಲಿರುವುದರಿಂದ ಅವರು ವಿವರವಾದ ತನಿಖೆಗೆ ಆದೇಶ ನೀಡಿದ್ದಾರೆ ಎಂದು ತಿಳಿದುಬಂದಿದೆ.

ಬೇಹುಗಾರಿಕೆ ಅಪರಾಧ: ತಜ್ಞರ ಪ್ರಕಾರ, ಭಾರತದಲ್ಲಿ ಬೇಹುಗಾರಿಕೆ ನಡೆಸುವುದು ಕಾನೂನುಬಾಹಿರ. ಕಂಪ್ಯೂಟರ್ ಬಳಕೆದಾರರ ಅಥವಾ ಮಾಲೀಕರ ಅನುಮತಿಯಿಲ್ಲದೆ ಅದನ್ನು ಅನಧಿಕೃತವಾಗಿ ಬಳಸುವುದು ಅಥವಾ ಮೋಸದಿಂದ ಗೂಢಚರ್ಯೆ ನಡೆಸುವುದು ಮಾಹಿತಿ ತಂತ್ರಜ್ಞಾನ ಕಾಯ್ದೆ 2000ರ ಅಡಿಯಲ್ಲಿ ಅಪರಾಧ. ಇದೇ ಕಾಯ್ದೆಯ ಸೆಕ್ಷನ್ 66ರ ಪ್ರಕಾರ, ಕಂಪ್ಯೂಟರ್ ಅಥವಾ ಮೊಬೈಲ್‌ಗೆ ಕುತಂತ್ರಾಂಶ ಸೇರಿಸುವುದು ಸೈಬರ್ ಅಪರಾಧವಾಗಿದೆ.

'ಸರ್ಕಾರದ ಮೇಲೆ ಅನುಮಾನ'



ಪೆಗಾಸಸ್ ತಂತ್ರಾಂಶದ ಮೂಲಕ ದೇಶದ ನಾಗರಿಕರ ವಿರುದ್ಧ ಗೂಢಚರ್ಯೆ ನಡೆಸುವುದು ಸರಿಯಲ್ಲ. ಭಯೋತ್ಪಾದನೆ ಮಟ್ಟ ಹಾಕಲು ಮತ್ತು ದೇಶದ ಭದ್ರತೆ ದೃಷ್ಟಿಯಿಂದ ಮಾತ್ರ ಈ ರೀತಿಯ ಗೂಢಚರ್ಯ ಮಾಡಲು ಕಾನೂನಿನಲ್ಲಿ ಅವಕಾಶ ಇದೆ. ಆದರೆ, ಅದು ವಿಶೇಷ ಸಂದರ್ಭಗಳಲ್ಲಿ ಮಾತ್ರ. ಅದಕ್ಕೆ ಅಗತ್ಯ ಪೂರ್ವಾನುಮತಿ ಮತ್ತು ನಿಯಮಿತ ಪ್ರಕ್ರಿಯೆಗಳನ್ನು ಅನುಸರಿಸಬೇಕಾಗುತ್ತದೆ. ವಿರೋಧ ಪಕ್ಷದವರು, ನ್ಯಾಯಮೂರ್ತಿಗಳು, ಮಾಧ್ಯಮ ಪ್ರತಿನಿಧಿಗಳ ದೂರವಾಣಿ ಕರೆಗಳನ್ನು ಕದ್ದಾಲಿಸಲಾಗಿದೆ ಎಂಬ ವರದಿಗಳು ಪ್ರಕಟವಾಗುತ್ತಿವೆ. ಆದರೆ, ಕೇಂದ್ರ ಸರ್ಕಾರ ಯಾವುದೇ ಗೂಢಚರ್ಯ ನಡೆಸಿಲ್ಲ ಎಂದು ಹೇಳುತ್ತಿದೆ. ಹಾಗಿದ್ದರೆ, ಪೆಗಾಸಸ್ ತಂತ್ರಾಂಶವನ್ನು ಇಸ್ರೇಲ್ ಕಂಪನಿಯಿಂದ ಸರ್ಕಾರ ಖರೀದಿಸಿಲ್ಲವೇ, ರಕ್ಷಣಾ ಟ್ರೇಡ್ ಪರವಾನಗಿ ಹೊಂದಿದವರು ಖರೀದಿಸಿದ್ದಾರೆಯೇ ಮತ್ತು ಅದನ್ನು ಬಳಸಲಾಗಿದೆಯೇ ಎಂಬ ಮೂರು ಪ್ರಶ್ನೆಗಳಿಗೆ ಸರ್ಕಾರ ಉತ್ತರ ಕೊಡಬೇಕಾಗುತ್ತದೆ. ಒಂದು ವೇಳೆ ವಿದೇಶಿ ಶಕ್ತಿಗಳು ಈ ಕೆಲಸ ಮಾಡಿದ್ದರೆ, ಅದನ್ನೂ ಕಂಡು ಹಿಡಿಯಬೇಕಾಗುತ್ತದೆ. ಕರ್ನಾಟಕದಲ್ಲಿ ಸಮ್ಮಿಶ್ರ ಸರ್ಕಾರ ಉರುಳಿಸಲು, ಪಶ್ಚಿಮ ಬಂಗಾಲದಲ್ಲಿ ಮಮತಾ ಬ್ಯಾನರ್ಜಿ ವಿರುದ್ಧ ಗೂಢಚರ್ಯೆ ಮಾಡುವ ಉದ್ದೇಶ ವಿದೇಶಿ ಶಕ್ತಿಗಳಿಗೆ ಇರಲು ಸಾಧ್ಯವಿಲ್ಲ. ಹೀಗಾಗಿ, ಕೇಂದ್ರ ಸರ್ಕಾರದ ಮೇಲೆ ಅನುಮಾನ ಮೂಡುತ್ತಿದೆ. ಸ್ವತಂತ್ರ ನ್ಯಾಯಾಂಗ ತನಿಖೆ ನಡೆಸುವ ಮೂಲಕ ದೇಶದ ನಾಗರಿಕರಲ್ಲಿರುವ ಅನುಮಾನ ಪರಿಹರಿಸಬೇಕು.

ಎಚ್.ಎನ್. ನಾಗಮೋಹನದಾಸ್, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ

ಗೂಢಚರ್ಯೆ ವಿಧಾನ ಹೇಗೆ?

ಅಂತರ್ಜಾಲಕ್ಕೆ ಸಂಪರ್ಕಿತವಾದ ಯಾವುದೇ ವಿದ್ಯುನ್ಮಾನ ಸಾಧನದೊಳಕ್ಕೆ ನುಸುಳುವ ಸಾಮರ್ಥ್ಯವನ್ನು ಪೆಗಾಸಸ್ ಕುತಂತ್ರಾಂಶವು ಹೊಂದಿದೆ. ಪೆಗಾಸಸ್‌ನ ಕೆಲವು ಆವೃತ್ತಿಗಳು ಯಾವುದೇ ಸಂದೇಶ ಅಥವಾ ಲಿಂಕ್ ಅನ್ನು ತೆರೆಯದೇ ಇದ್ದರೂ ಮೊಬೈಲ್ ಫೋನ್‌ನಲ್ಲಿ ಸೇರಿಕೊಳ್ಳುವ ಶಕ್ತಿ ಹೊಂದಿವೆ ಎಂದು ಹೇಳಲಾಗುತ್ತಿದೆ. ವಿದ್ಯುನ್ಮಾನ ಸಾಧನಗಳು ಕಳೆದು ಹೋದರೆ ಪತ್ತೆ ಮಾಡವುದಕ್ಕೆ ಇರುವ ಆ್ಯಪ್‌ಗಳ ರೂಪದಲ್ಲಿ ಈ ಕುತಂತ್ರಾಂಶವು ವೇಷ ಮರೆಸಿಕೊಳ್ಳುತ್ತದೆ. ಉಪಯುಕ್ತ ಆ್ಯಪ್‌ಗಳು ಎಂದು ತಮ್ಮನ್ನು ಬಿಂಬಿಸಿಕೊಳ್ಳುತ್ತವೆ. ಮೊಬೈಲ್ ಅಥವಾ ಇತರ ಸಾಧನದೊಳಕ್ಕೆ ಸೇರಿಕೊಳ್ಳುವ ಪೆಗಾಸಸ್, ತನಗೆ ಬೇಕಾದ ಎಲ್ಲ ದತ್ತಾಂಶಗಳನ್ನೂ ಪಡೆದುಕೊಳ್ಳುತ್ತದೆ. ಕ್ಯಾಮೆರಾ ಮತ್ತು ಮೈಕ್ರೊಫೋನ್ ಅನ್ನು ಚಾಲನೆಗೊಳಿಸುತ್ತದೆ. ದೃಶ್ಯಗಳು ಮತ್ತು ಧ್ವನಿಯನ್ನು ಸೆರೆಹಿಡಿಯುತ್ತದೆ. ಫೋನ್‌ನಲ್ಲಿರುವ ಸಂಪರ್ಕ ಸಂಖ್ಯೆಗಳು, ಎಸ್‌ಎಂಎಸ್‌ಗಳು, ಇ ಮೇಲ್ ಮುಂತಾದ ಎಲ್ಲ ದತ್ತಾಂಶಗಳನ್ನು ತನ್ನನ್ನು ನಿಯಂತ್ರಿಸುವವರಿಗೆ ರವಾನಿಸುತ್ತದೆ.

ನಾಯಕರ ಸುತ್ತ ಕಣ್ಣು

ಕರ್ನಾಟಕದಲ್ಲಿ ಅಸ್ತಿತ್ವದಲ್ಲಿದ್ದ ಜೆಡಿಎಸ್-ಕಾಂಗ್ರೆಸ್ ಮೈತ್ರಿ ಸರ್ಕಾರ ಪತನದ ಸಂದರ್ಭದಲ್ಲಿ (2019ರ ಜುಲೈ) ರಾಜ್ಯದ ಹಲವು ನಾಯಕರ ಮೊಬೈಲ್‌ಗಳ ಮೇಲೆಯೂ ಕಣ್ಗಾವಲು ನಡೆಸಲಾಗಿದೆ ಎಂದು 'ದಿ ವೈರ್' ವರದಿ ಮಾಡಿದೆ. ಮಾಜಿ ಮುಖ್ಯಮಂತ್ರಿ ಮತ್ತು ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಅವರ ಆಪ್ತ ಕಾರ್ಯದರ್ಶಿ ವೆಂಕಟೇಶ್ ಅವರ ಮೊಬೈಲ್ ಮೂಲಕ ಕಣ್ಗಾವಲು ನಡೆಸಲಾಗಿದೆ ಎಂದು ವರದಿಯಲ್ಲಿ ವಿವರ ಇದೆ. ಸಿದ್ದರಾಮಯ್ಯ ಅವರು ಸ್ವಂತ ಮೊಬೈಲ್ ಬಳಸುತ್ತಿಲ್ಲ ಎಂಬುದು ಇದಕ್ಕೆ ಕಾರಣ ಎನ್ನಲಾಗಿದೆ.

ಆದರೆ, ಪ್ರಮುಖ ನಾಯಕರ ಸಂಪರ್ಕದಲ್ಲಿರುವವರ ಮೊಬೈಲ್ ಮೇಲೆ ನಿಗಾ ಇರಿಸುವುದನ್ನು ಗೂಢಚರ್ಯೆ ನಡೆಸಿದವರು ಒಂದು ತಂತ್ರವಾಗಿ ಬಳಸಿದ್ದಾರೆ ಎಂದು ಹೇಳುವುದಕ್ಕೆ ಬೇಕಾದಷ್ಟು ಪುರಾವೆಗಳು 'ದಿ ವೈರ್'ನಲ್ಲಿ ಪ್ರಕಟವಾದ ವರದಿಗಳಲ್ಲಿ ಇವೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತ್ತು ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರ ಸೋದರಳಿಯ ಅಭಿಷೇಕ್ ಬ್ಯಾನರ್ಜಿ ಅವರ ದೂರವಾಣಿ ಸಂಖ್ಯೆಗಳು ಪೆಗಾಸಸ್ ಗೂಢಚರ್ಯೆ ಪ್ರಕರಣದಲ್ಲಿ ಪತ್ತೆ ಆಗಿವೆ. ಗೂಢಚರ್ಯೆಗೆ ಒಳಗಾದರು ಎನ್ನಲಾದ ವಿಪಕ್ಷಗಳ ಪ್ರಮುಖ ನಾಯಕರಲ್ಲಿ ಇವರಿಬ್ಬರು ಮಾತ್ರ ಇದ್ದಾರೆ. ಆದರೆ, ನಾಯಕರ ಸಂಪರ್ಕದಲ್ಲಿರುವವರ ಮೊಬೈಲ್ ಮೂಲಕವೇ ನಾಯಕರ ಮೇಲೆ ನಿಗಾ ಇರಿಸಲಾಗಿದೆ ಎಂಬ ವಿಶ್ಲೇಷಣೆ ಇದೆ. ಅಲಂಕಾರ್ ಸವಾಯ್ ಮತ್ತು ಸಚಿನ್ ರಾವ್ ಅವರ ಮೊಬೈಲ್ ಮೇಲೆ ಕಣ್ಗಾವಲು ನಡೆಸಿರಬಹುದು ಎಂದು ವರದಿಗಳು ಹೇಳುತ್ತಿವೆ. ಇವರಿಬ್ಬರೂ ರಾಜಕೀಯ ಕ್ಷೇತ್ರದವರಲ್ಲ, ಸಾರ್ವಜನಿಕ ಜೀವನದಲ್ಲಿ ಇರುವವರೂ ಅಲ್ಲ. ಆದರೆ, ರಾಹುಲ್ ಅವರ ಆಪ್ತರು ಎಂಬುದು ಇವರೂ ಗುರಿಯಾಗಲು ಕಾರಣ ಎನ್ನಲಾಗಿದೆ. ಬೇರೆ ನಾಯಕರಿಗೂ ಇದೇ ಮಾದರಿ ಅನ್ವಯಿಸಿರುವ ಸಾಧ್ಯತೆ ಇದೆ.

ಸರ್ಕಾರದ ವಿರೋಧಿಗಳೇ ಗುರಿಯೇ?

ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ಸರ್ಕಾರದ ವಿರೋಧಿಗಳನ್ನೇ ಪೆಗಾಸಸ್ ಗೂಢಚರ್ಯೆಯ ಗುರಿ ಮಾಡಿಕೊಳ್ಳಲಾಗಿದೆ ಎಂದು ಪ್ರಾಜೆಕ್ಟ್ ಪೆಗಾಸಸ್ ಹೇಳಿದೆ ಎಂದು 'ದಿ ವೈರ್' ಪೋರ್ಟಲ್ ವರದಿ ಮಾಡಿದೆ. ಪ್ರಾಜೆಕ್ಟ್ ಪೆಗಾಸಸ್ ಬಿಡುಗಡೆ ಮಾಡಿರುವ ದತ್ತಾಂಶದಲ್ಲಿ 300 ಭಾರತೀಯರ ಫೋನ್ ಸಂಖ್ಯೆ ಇದೆ. ಅದರಲ್ಲಿ 115 ಜನರ ಹೆಸರನ್ನು ದಿ ವೈರ್ ಸರಣಿ ವರದಿಗಳ ಮೂಲಕ ಬಹಿರಂಗಪಡಿಸಿದೆ.


ರಾಜಕಾರಣಿಗಳು

ರಾಹುಲ್ ಗಾಂಧಿ: 2018-19ರ ಅವಧಿಯಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ರಾಹುಲ್ ಗಾಂಧಿ ಅವರ ಫೋನ್ ಸಂಖ್ಯೆ ಈ ಪಟ್ಟಿಯಲ್ಲಿ ಇದೆ. ಜತೆಗೆ ರಾಹುಲ್ ಅವರ ಆಪ್ತರಾದ ಅಲಂಕಾರ್ ಸವಾಯಿ ಮತ್ತು ಸಚಿನ್ ರಾವ್ ಅವರ ಹೆಸರೂ ಈ ಪಟ್ಟಿಯಲ್ಲಿದೆ. ಈ ಮೂವರ ಫೋನ್‌ಗಳ ವಿಧಿವಿಜ್ಞಾನ ಪರೀಕ್ಷೆ ನಡೆದಿಲ್ಲವಾದ ಕಾರಣ, ಪೆಗಾಸಸ್ ಅನ್ನು ಅದರಲ್ಲಿ ಅಳವಡಿಸಲಾಗಿದೆಯೇ ಎಂಬುದು ದೃಢಪಟ್ಟಿಲ್ಲ.

ಪ್ರಶಾಂತ್ ಕಿಶೋರ್: ಚುನಾವಣಾ ತಂತ್ರ ನಿಪುಣರಾದ ಪ್ರಶಾಂತ್ ಕಿಶೋರ್ ಅವರ ಫೋನ್ ಸಂಖ್ಯೆ ಈ ಪಟ್ಟಿಯಲ್ಲಿದೆ. ಅವರ ಫೋನ್‌ನಲ್ಲಿ ಪೆಗಾಸಸ್ ಅನ್ನು ಯಶಸ್ವಿಯಾಗಿ ಅಳವಡಿಸಿ, ಗೂಢಚರ್ಯೆ ನಡೆಸಿರುವುದು ವಿಧಿವಿಜ್ಞಾನ ಪರೀಕ್ಷೆಯಲ್ಲಿ ದೃಢಪಟ್ಟಿದೆ. 2019ರಿಂದ 2021ರ ಅವಧಿಯಲ್ಲಿ ಅವರ ಮೇಲೆ ಗೂಢಚರ್ಯೆ ನಡೆಸಲಾಗಿದೆ. ಬಿಜೆಪಿ ವಿರೋಧಿಗಳಿಗೆ ಚುನಾವಣಾ ಕಾರ್ಯತಂತ್ರ ನಿಪುಣರಾಗಿ ಕಾರ್ಯನಿರ್ವಹಿಸಿದ ಅವಧಿಯಲ್ಲಿ ಅವರ ಮೇಲೆ ಗೂಢಚರ್ಯೆ ನಡೆದಿದೆ.

ಅಭಿಷೇಕ್ ಬ್ಯಾನರ್ಜಿ: ಟಿಎಂಸಿ ಸಂಸದ ಮತ್ತು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಸೋದರಳಿಯ ಅಭಿಷೇಕ್ ಅವರ ಫೋನ್ ಸಂಖ್ಯೆ ಈ ಪಟ್ಟಿಯಲ್ಲಿದೆ.

ಕೇಂದ್ರ ಸಚಿವರಾದ ಅಶ್ವಿನಿ ವೈಷ್ಣವ್, ಪ್ರಹ್ಲಾದ್ ಸಿಂಗ್ ಪಟೇಲ್ ಅವರ ಫೋನ್ ಸಂಖ್ಯೆ ಮತ್ತು ಅವರ ಕುಟುಂಬದವರ ಫೋನ್ ಸಂಖ್ಯೆ, ಸ್ಮೃತಿ ಇರಾನಿ ಅವರ ಆಪ್ತ ಸಹಾಯಕನ ಫೋನ್ ಸಂಖ್ಯೆ, ವಸುಂಧರಾ ರಾಜೆ ಅವರ ಆಪ್ತ ಕಾರ್ಯದರ್ಶಿಯ ಫೋನ್ ಸಂಖ್ಯೆ ಈ ಪಟ್ಟಿಯಲ್ಲಿದೆ. ವಿಶ್ವ ಹಿಂದೂ ಪರಿಷತ್‌ನ ಮಾಜಿ ಅಧ್ಯಕ್ಷ ಪ್ರವೀಣ್ ತೊಗಾಡಿಯಾ ಅವರ ಫೋನ್ ಸಂಖ್ಯೆಯೂ ಈ ಪಟ್ಟಿಯಲ್ಲಿದೆ.



ರಾಜ್ಯದ ನಾಯಕರು

ಮಾಜಿ ಪ್ರಧಾನಿ ಮತ್ತು ಜೆಡಿಎಸ್ ಅಧ್ಯಕ್ಷ ಎಚ್.ಡಿ.ದೇವೇಗೌಡ ಅವರ ಭದ್ರತಾ ಸಿಬ್ಬಂದಿ ಮಂಜುನಾಥ ಮುದ್ದೇಗೌಡ ಅವರ ಫೋನ್ ಸಂಖ್ಯೆ ಈ ಪಟ್ಟಿಯಲ್ಲಿದೆ. ಜೆಡಿಎಸ್-ಕಾಂಗ್ರೆಸ್ ಮೈತ್ರಿ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಎಚ್.ಡಿ.ಕುಮಾರಸ್ವಾಮಿ ಅವರ ಆಪ್ತ ಕಾರ್ಯದರ್ಶಿ ಸತೀಶ್, ಅದೇ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾಗಿದ್ದ ಕಾಂಗ್ರೆಸ್‌ನ ಜಿ.ಪರಮೇಶ್ವರ ಅವರ ಫೋನ್ ಸಂಖ್ಯೆಗಳು ಈ ಪಟ್ಟಿಯಲ್ಲಿವೆ.

ಎಲ್ಗರ್ ಪರಿಷತ್ ಆರೋಪಿಗಳು...

2018ರ ಜನವರಿಯಲ್ಲಿ ಭೀಮಾ ಕೋರೆಗಾಂವ್ ಹಿಂಸಾಚಾರಕ್ಕೆ ಎಲ್ಗರ್ ಪರಿಷತ್‌ನಲ್ಲಿ ಸಂಚು ರೂಪಿಸಿದ ಮತ್ತು ಕೇಂದ್ರ ಸರ್ಕಾರವನ್ನು ಉರುಳಿಸಲು ಸಂಚು ರೂಪಿಸಿದ ಆರೋಪದಲ್ಲಿ ಬಂಧನದಲ್ಲಿರುವ ಅಥವಾ ಜಾಮೀನಿನ ಮೇಲೆ ಬಿಡುಗಡೆಯಾಗಿರುವ 14 ಸಾಮಾಜಿಕ ಕಾರ್ಯಕರ್ತರು ಮತ್ತು ಅವರ ಆಪ್ತರ ಫೋನ್ ಸಂಖ್ಯೆಗಳು ಈ ಪಟ್ಟಿಯಲ್ಲಿವೆ. ಅಲ್ಲದೆ, ಇನ್ನೂ 25 ಸಾಮಾಜಿಕ ಕಾರ್ಯಕರ್ತರ ಫೋನ್ ಸಂಖ್ಯೆಗಳು ಈ ಪಟ್ಟಿಯಲ್ಲಿ ಇವೆ.

ಪತ್ರಕರ್ತರು

ಹೆಸರು	ಸಂಸ್ಥೆ	ಕೆಲಸದ ವಿವರ	ಹ್ಯಾಕಿಂಗ್ ವಿವರ
ಎಂ.ಕೆ.ವೇಣು	ದಿ ವೈರ್	ಸಂಸ್ಥಾಪಕ ಸಂಪಾದಕ	ಹ್ಯಾಕ್ ಆಗಿದೆ
ಸುಶಾಂತ್ ಸಿಂಗ್	ಇಂಡಿಯನ್ ಎಕ್ಸ್‌ಪ್ರೆಸ್‌ನ ಮಾಜಿ ಪತ್ರಕರ್ತ	ರಾಷ್ಟ್ರೀಯ ಭದ್ರತೆ, ರಫೇಲ್ ಒಪ್ಪಂದದ ಬಗ್ಗೆ ವರದಿ	ಹ್ಯಾಕ್ ಆಗಿದೆ
ಸಿದ್ಧಾರ್ಥ್ ವರದರಾಜನ್	ದಿ ವೈರ್	ಸಂಸ್ಥಾಪಕ ಸಂಪಾದಕ	ಹ್ಯಾಕ್ ಆಗಿದೆ
ಪರಂಜಾಯ್ ಗುಹಾ ತಕೂರ್ತಾ	ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ	ರಾಜಕೀಯ	ಹ್ಯಾಕ್ ಆಗಿದೆ
ಎಸ್.ಎನ್.ಎಂ.ಅಬ್ದಿ	ಔಟ್‌ಲುಕ್ ಮಾಜಿ ವರದಿಗಾರ	ರಾಜಕೀಯ-ಆರ್ಥಿಕತೆ	ಹ್ಯಾಕ್ ಆಗಿದೆ
ವಿಜೇತಾ ಸಿಂಗ್	ದಿ ಹಿಂದೂ	ಕೇಂದ್ರ ಗೃಹ ಸಚಿವಾಲಯದ ವಿಶೇಷ ವರದಿಗಾರ್ತಿ	ಹ್ಯಾಕ್ ಯತ್ನ ದೃಢಪಟ್ಟಿದೆ

ಮೇಲೆ ಹೆಸರಿಸಲಾದ 6 ಜನರೂ ಸೇರಿ ದೇಶದ ಒಟ್ಟು 40 ಪತ್ರಕರ್ತರ ಫೋನ್ ಸಂಖ್ಯೆಗಳು ಈ ಪಟ್ಟಿಯಲ್ಲಿವೆ. ಇವರಲ್ಲಿ ಕೆಲವರ ಫೋನ್‌ಗಳನ್ನು ಹ್ಯಾಕ್ ಮಾಡಲು ನಡೆಸಿದ ಯತ್ನಗಳು ದೃಢಪಟ್ಟಿವೆ. ದೇಶದ ರಾಷ್ಟ್ರೀಯ ಭದ್ರತೆ, ರಕ್ಷಣಾ ಸಚಿವಾಲಯ, ಗೃಹ ಸಚಿವಾಲಯಗಳಿಗೆ ಸಂಬಂಧಿಸಿದ ವರದಿಗಳನ್ನು ಬರೆಯುವ ಪತ್ರಕರ್ತರ ಫೋನ್ ಸಂಖ್ಯೆಗಳು ಈ ಪಟ್ಟಿಯಲ್ಲಿವೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಮಗನ ಉದ್ಯಮಗಳ ಬಗ್ಗೆ ಸರಣಿ ವರದಿಗಳನ್ನು ಬರೆದಿದ್ದ ಪತ್ರಕರ್ತೆಯ ಫೋನ್ ಸಂಖ್ಯೆಯೂ ಈ ಪಟ್ಟಿಯಲ್ಲಿದೆ.

ಅಶೋಕ್ ಲವಾಸಾ

ನಿವೃತ್ತ ಚುನಾವಣಾ ಆಯುಕ್ತರಾದ ಅಶೋಕ್ ಲವಾಸಾ ಅವರ ಹೆಸರೂ ಈ ಪಟ್ಟಿಯಲ್ಲಿದೆ. 2019ರ ಚುನಾವಣಾ ಪ್ರಚಾರದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರು ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ ಎಂಬ ದೂರಿನ ಪರಿಶೀಲನೆ ನಡೆಸಿದ್ದ ಚುನಾವಣಾ ಆಯುಕ್ತರ ಸಮಿತಿಯಲ್ಲಿ ಅಶೋಕ್ ಇದ್ದರು. ಮೂರು ಸದಸ್ಯರ ಈ ಸಮಿತಿಯಲ್ಲಿ ಇಬ್ಬರು, 'ಯಾವುದೇ ನಿಯಮ ಉಲ್ಲಂಘನೆಯಾಗಿಲ್ಲ' ಎಂದು ತೀರ್ಪು ನೀಡಿದ್ದರು. ಅಶೋಕ್ ಅವರು, 'ನೀತಿ ಸಂಹಿತೆ ಉಲ್ಲಂಘಿಸಲಾಗಿದೆ' ಎಂದು ಭಿನ್ನಮತದ ತೀರ್ಪು ನೀಡಿದ್ದರು.

ಆಧಾರ: ಪಿಟಿಐ, ಬಿಬಿಸಿ, ವಾಷಿಂಗ್ಟನ್ ಪೋಸ್ಟ್, ಅಮ್ನೆಸ್ಟಿ ಇಂಟರ್‌ನ್ಯಾಷನಲ್

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಜುಲೈ 21ರಂದು ನಡೆದ ಈದ್ ಹಬ್ಬದಲ್ಲಿ ಭಾರತದ ರಸ್ತೆಗಳಲ್ಲಿ ರಕ್ತ ಹರಿದಿದೆ' ಎಂಬ ಒಕ್ಕಣೆ ಇರುವ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಪ್ರಾಣಿಗಳನ್ನು ವಧೆ ಮಾಡಿದ್ದರಿಂದ ರಕ್ತವು ರಸ್ತೆವರೆಗೆ ಹರಿದು, ಪ್ರವಾಹ ಸೃಷ್ಟಿಸಿದೆ ಎಂದು ಉಲ್ಲೇಖಿಸಲಾಗಿದೆ. ಹಲವರು ಈ ಚಿತ್ರವನ್ನು ಫೇಸ್‌ಬುಕ್ ಹಾಗೂ ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ.



'ಈದ್ ಹಬ್ಬದ ದಿನ ಪ್ರಾಣಿವಧೆ ನಡೆದಿದ್ದರೂ, ರಸ್ತೆಗೆ ಬರುವಷ್ಟು ರಕ್ತ ಹರಿದಿಲ್ಲ, ಮೇಲಾಗಿ ಈ ಚಿತ್ರವು ಭಾರತದ್ದಲ್ಲ' ಎಂದು ಇಂಡಿಯಾ ಟುಡೇ ಫ್ಯಾಕ್ಟ್ ಚೆಕ್ ವರದಿ ಮಾಡಿದೆ. 2016ರಲ್ಲಿ ಬಾಂಗ್ಲಾದೇಶದಲ್ಲಿ ಪ್ರವಾಹ ಉಂಟಾಗಿತ್ತು. ಪ್ರವಾಹದ ನೀರಿನ ಜೊತೆ ವಧೆ ಮಾಡಲಾದ ಪ್ರಾಣಿಗಳ ರಕ್ತವೂ ಬೆರೆತಿದ್ದರಿಂದ ನೀರು ಕೆಂಪಾಗಿ ಗೋಚರಿಸಿದೆ ಎಂದು ಬಿಬಿಸಿ, ಗಾರ್ಡಿಯನ್ ಮೊದಲಾದ ಪತ್ರಿಕೆಗಳು ಅಂದು ವರದಿ ಮಾಡಿದ್ದವು.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಪರೀಕ್ಷೆಯ ಕ್ಷಣ

ಕಂಡ ಭೀಕರವಾದ ಕನಸಿನಿಂದ ಗಾಬರಿಯಾದ ಮಾದ್ರಿದೇವಿ ಬೋಧಿಸತ್ವನ ಪರ್ಣಕುಟಿಗೆ ಬಂದು ಬಾಗಿಲು ತಟ್ಟಿದಳು. ಆತ, 'ಯಾರು ಈ ವೇಳೆಯಲ್ಲಿ ಬಂದದ್ದು?' ಎಂದು ಕೇಳಿದ. 'ಸ್ವಾಮಿ, ನಾನು ಮಾದ್ರಿ ಬಂದಿದ್ದೇನೆ' ಎಂದಳಾಕೆ. ಆತ ಧೃಡವಾಗಿ ಕೇಳಿದ, 'ಭದ್ರೆ, ನಾವು ಮೊದಲೇ ತೀರ್ಮಾನ ಮಾಡಿಕೊಂಡಿರಲಿಲ್ಲವೇ? ತೀರ್ಮಾನವನ್ನು ಉಲ್ಲಂಘಿಸಿ ಬರಬಾರದಿತ್ತಲ್ಲವೇ?' ಆಕೆ, 'ಸ್ವಾಮಿ, ನಾನು ತಮ್ಮಲ್ಲಿಗೆ ಕಾಮರಾಗದಿಂದ ಬಂದಿಲ್ಲ. ನನಗೊಂದು ಭಯಂಕರವಾದ ಕನಸು ಬಿದ್ದಿದೆ. ಅದರ ತಳಮಳವನ್ನು ತಡೆಯಲಾಗುತ್ತಿಲ್ಲ. ಆ ಕನಸಿನ ಅರ್ಥವನ್ನು ತಮ್ಮಿಂದ ತಿಳಿಯಲೆಂದು ಬಂದೆ' ಎಂದಳು. ಆತ ಪರ್ಣಕುಟಿಯಿಂದ ಹೊರಗೆ ಬಂದು ಕುಳಿತು, 'ಆಯ್ತು, ನಿನ್ನ ಕನಸನ್ನು ಹೇಳು' ಎಂದು ನುಡಿದ. ಆಕೆ ತನ್ನ ಕನಸನ್ನು ಕಂಡಂತೆ ವಿಸ್ತಾರವಾಗಿ ಹೇಳಿದಳು. ಆಗ ವೆಸ್ಸಂತರ ಬೋಧಿಸತ್ವ ಕಣ್ಣುಮುಚ್ಚಿ ಕನಸನ್ನು ಧ್ಯಾನಿಸಿದ. ಅವನಿಗೆ ಮುಂದಾಗುವುದು ಗೋಚರವಾಯಿತು. ಈಗ ನನ್ನ ದಾನದ ನಿಜವಾದ ಪರೀಕ್ಷೆಯಾಗಲಿದೆ. ನಾಳೆ ಒಬ್ಬ ಯಾಚಕ ಬಂದು ನನ್ನ ಮಕ್ಕಳನ್ನು ದಾನವಾಗಿ ಬೇಡುತ್ತಾನೆ. ಅದಕ್ಕೆ ನಾನು ಇಲ್ಲವೆನ್ನುವುದು ಅಸಾಧ್ಯ. ಆಗಲಿ ಬಂದದ್ದನ್ನು ಎದುರಿಸಲೇಬೇಕು ಎಂದುಕೊಂಡು ಮಾದ್ರಿಯನ್ನು ಸಮಾಧಾನ ಪಡಿಸಿದ. 'ಭದ್ರೆ, ಬಹುಶಃ ನೀನು ಮಲಗುವ ಭಂಗಿ ಸರಿಯಾಗಿರಲಿಕ್ಕಿಲ್ಲ ಅಥವಾ ಮಲಗುವಾಗ ಮಾಡಿದ ಊಟ ಪಚನವಾಗಿರಲಾರದು. ಅದಕ್ಕಾಗಿ ಇಂತಹ ಕನಸುಗಳು ಬೀಳುತ್ತವೆ. ನಿನಗೆ ಯಾವ ಭಯವೂ ಬೇಡ. ನೀನು ಈಗ ಹೋಗಿ ಮಲಗಿಕೊ' ಎಂದು ಹೇಳಿದಾಗ ಆಕೆ ಸ್ವಲ್ಪ ಸಮಾಧಾನದಿಂದ ಹೊರಟಳು.

ಮರುದಿನ ಬೆಳಿಗ್ಗೆ ಬೇಗನೇ ಎದ್ದು ಬೆಳಗಿನ ಕೃತ್ಯಗಳನ್ನು ಮುಗಿಸಿ ತನ್ನ ಇಬ್ಬರೂ ಮಕ್ಕಳನ್ನು ಹತ್ತಿರಕ್ಕೆ ಕರೆದು ತೊಡೆಯ ಮೇಲೆ ಕೂರಿಸಿಕೊಂಡಳು. ಅವರನ್ನು ಮುದ್ದಾಡಿ, 'ಮಕ್ಕಳೇ ನಿನ್ನೆ ರಾತ್ರಿ ನಾನೊಂದು ಕೆಟ್ಟ ಕನಸನ್ನು ಕಂಡೆ. ಏನಾಗುತ್ತದೋ ತಿಳಿದಿಲ್ಲ. ಮಕ್ಕಳೇ, ನಾನು ಹಣ್ಣು ಹಂಪಲಗಳನ್ನು ತರಲು ಹೋದಾಗ ನೀವು ತುಂಬ ಜಾಗ್ರತರಾಗಿರಿ. ನಿಮ್ಮ ತಂದೆಯ ಬಳಿಯೇ ಇರಿ. ಯಾವ ಅಪಾಯವೂ ಆಗದಂತೆ ನೋಡಿಕೊಳ್ಳಿ' ಎಂದು ಹೇಳಿ, ವೆಸ್ಸಂತರನಿಗೆ ಮಕ್ಕಳನ್ನು ಒಪ್ಪಿಸಿ ಫಲಮೂಲಗಳನ್ನು ತರಲು ಕಾಡಿಗೆ ಹೋದಳು.

ಅವಳು ಹೊರಗೆ ಹೋಗುವುದನ್ನೇ ದೂರ ನಿಂತು ನೋಡುತ್ತಿದ್ದ ಬ್ರಾಹ್ಮಣ, ತಾನಿದ್ದ ಪುಟ್ಟ ಪರ್ವತದಿಂದಿಳಿದು, ಕಾಲುದಾರಿಯಲ್ಲಿ ನಡೆದು ಪರ್ಣಕುಟಿಗಳ ಕಡೆಗೆ ಬಂದ. ಅವನು ಬರುವ ಹೊತ್ತಿಗೆ ವೆಸ್ಸಂತರ ಬೋಧಿಸತ್ವ ಪರ್ಣಕುಟಿಯ ಹೊರಗೆ ಕಲ್ಲಿನ ಪೀಠದ ಮೇಲೆ ಚಿನ್ನದ ಪುತ್ಥಳಿಯಂತೆ ಧ್ಯಾನಸ್ಥನಾಗಿ ಕುಳಿತಿದ್ದ. ಯಾವಾಗ ಯಾಚಕ ಬಂದಾನು ಎಂಬ ನಿರೀಕ್ಷೆಯಲ್ಲಿದ್ದ. ಅವನ ಮಕ್ಕಳಿಬ್ಬರೂ ಅವನ ಸುತ್ತಮುತ್ತಲೇ ಆಡುತ್ತಿದ್ದರು. ಒಂದಷ್ಟು ಸಮಯದ ನಂತರ ಮುದುಕ ಬ್ರಾಹ್ಮಣ ಬರುವುದು ದೂರದಿಂದ ಕಂಡಿತು. ಕಳೆದ ಏಳು ತಿಂಗಳಿನಿಂದ ತಾನು ಬಿಟ್ಟಿದ್ದ ದಾನದ ಪ್ರತಿಜ್ಞೆಯ ಪರೀಕ್ಷೆಯಾಗುತ್ತದೆ ಎನ್ನಿಸಿತು ವೆಸ್ಸಂತರನಿಗೆ.

ದಿನ ಭವಿಷ್ಯ

ಶುಕ್ರವಾರ ಜುಲೈ 23, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಗ್ರೀಷ್ಮ ಋತು ಆಷಾಢ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಪುಷ್ಯ ಚತುರ್ದಶಿ ಗಂ. 9-16 (ಬೆ. 9-52) ಶುಕ್ರವಾರ ನಿತ್ಯ ನಕ್ಷತ್ರ ಪೂರ್ವಾಷಾಢ ಗಂ. 21-9 (ಹ. 2-37) ವೈಧೃತಿ ನಾಮ ಯೋಗ ಗಂ. 10-5 ವಣಿಜ ಕರಣ ಗಂ. 9-16 ವಿಷ ಗಂ. 40-41 ಅಮೃತ ಗಂ. 10-19 ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 : ಸೂರ್ಯೋದಯ: 6-06 ಸೂರ್ಯಾಸ್ತ: 6-45 ಅದೃಷ್ಟ ಸಂಖ್ಯೆ 6, 8

ಮೇಷ: ವ್ಯವಹಾರಸ್ಥರಿಗೆ ಉತ್ತಮ ಫಲ ದೊರಕಲಿದೆ. ವೃತ್ತಿಯಲ್ಲಿ ಬದಲಾವಣೆ ಸಾಧ್ಯತೆ. ನೆರೆಹೊರೆಯವರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದು ಸೂಕ್ತವಾಗಲಿದೆ. ಕುಟುಂಬದಲ್ಲಿ ವೈಮನಸ್ಸು ಉಂಟಾಗುವ ಸಾಧ್ಯತೆ.

ವೃಷಭ: ರಾಜಕೀಯ ಕ್ಷೇತ್ರದಲ್ಲಿರುವವರಿಗೆ ಬಿಡುವಿಲ್ಲದ ಕೆಲಸ ಎದುರಾಗಲಿದೆ. ಸಹೋದರರಿಂದ ಸಹಕಾರ ದೊರಕಲಿದೆ. ಮಧುಮೇಹದಂತಹ ರೋಗ ಬಾಧೆ ಹೆಚ್ಚಾಗುವ ಸಾಧ್ಯತೆ. ವಿದೇಶ ಪ್ರಯಾಣ ಸಾಧ್ಯತೆ.

ಮಿಥುನ: ದೀರ್ಘಕಾಲದಿಂದ ಪೀಡಿಸುತ್ತಿದ್ದ ಅನಾರೋಗ್ಯದಿಂದ ಮುಕ್ತಿ ದೊರಕುವ ಸಾಧ್ಯತೆ. ಅಮೂಲ್ಯ ವಸ್ತುಗಳನ್ನು ಪಡೆದುಕೊಳ್ಳಲಿದ್ದೀರಿ. ವ್ಯವಹಾರ ಉತ್ತಮಗೊಳ್ಳುವ ಲಕ್ಷಣಗಳು ಕಂಡುಬರುವುದು.

ಕರ್ಕಾಟಕ: ಹಿತಶತ್ರುಗಳ ವಿಚಾರದಲ್ಲಿ ಜಾಗೃತೆ ವಹಿಸುವುದು ಅವಶ್ಯಕ. ಆರೋಗ್ಯದಲ್ಲಿ ಸ್ವಲ್ಪ ಮಟ್ಟಿನ ವ್ಯತ್ಯಯ ಸಾಧ್ಯತೆ. ವ್ಯವಹಾರದಲ್ಲಿ ಎಚ್ಚರಿಕೆಯ ನಡೆ ಅಗತ್ಯ. ವಾಹನ ಚಾಲಕರಿಗೆ ತೊಂದರೆ ಎದುರಾಗುವ ಸಾಧ್ಯತೆ ಇದೆ.

ಸಿಂಹ: ಬಟ್ಟೆ, ಹತ್ತಿ ವ್ಯಾಪಾರಿಗಳಿಗೆ ವಿಶೇಷ ಲಾಭ ಸಾಧ್ಯತೆ. ಉದ್ಯೋಗಸ್ಥರಿಗೆ ಮೇಲಧಿಕಾರಿಗಳಿಂದ ಪ್ರಶಂಸೆ ಲಭ್ಯವಾಗಲಿದೆ. ಸ್ವಯಂ ಉದ್ಯೋಗಿಗಳಿಗೆ ಯಶಸ್ಸು. ತಾಯಿಯ ಆರೋಗ್ಯದಲ್ಲಿ ಏರುಪೇರಾದೀತು.

ಕನ್ಯಾ: ಗೃಹೋಪಯೋಗಿ ವಸ್ತುಗಳನ್ನು ಖರೀದಿಸುವ ಸಾಧ್ಯತೆ ಕಂಡುಬರುತ್ತಿದೆ. ವ್ಯಾಪಾರದಲ್ಲಿ ಹೆಚ್ಚು ಆಸಕ್ತಿ ವಹಿಸುವುದು ಅವಶ್ಯ. ಹಿರಿಯರ ಮಾತುಗಳಿಗೆ ಮನ್ನಣೆ ನೀಡಿ ಉತ್ತಮ ಫಲ ಪ್ರಾಪ್ತಿ. ಸಂತೃಪ್ತಿದಾಯಕ ದಾಂಪತ್ಯ ಜೀವನ.

ತುಲಾ: ಪ್ರಿಯ ವ್ಯಕ್ತಿಗಳೆಂದು ನಂಬಿ ವಿಚಾರಗಳನ್ನು ಹಂಚಿಕೊಳ್ಳುವುದು ಸೂಕ್ತವಾಗಲಾರದು. ಬಂಧುಗಳ ನಡುವಿನ ಭಿನ್ನಾಭಿಪ್ರಾಯಗಳು ದೂರವಾಗಿ ಒಮ್ಮತ ಮೂಡಲಿದೆ. ಸಂತೃಪ್ತ ದಾಂಪತ್ಯ ಜೀವನ ಅನುಭವಿಸಲಿದ್ದೀರಿ.

ವೃಶ್ಚಿಕ: ವೃತ್ತಿಯಲ್ಲಿ ವರ್ಗಾವಣೆ ಸಾಧ್ಯತೆ. ಸಾಲಕ್ಕಾಗಿ ಜಾಮೀನು ನೀಡದಿರುವುದು ಒಳ್ಳೆಯದು. ನಿರುದ್ಯೋಗಿಗಳಿಗೆ ಉದ್ಯೋಗ ಪ್ರಾಪ್ತವಾಗುವ ಸಾಧ್ಯತೆ. ಆಧ್ಯಾತ್ಮಿಕ ಸಲಹೆಯಿಂದಾಗಿ ಜೀವನದಲ್ಲಿ ಹೊಸ ತಿರುವು.

ಧನು: ಮಕ್ಕಳ ವಿದ್ಯಾಭ್ಯಾಸದ ಕಡೆ ಹೆಚ್ಚು ಗಮನ ಹರಿಸುವುದು ಸೂಕ್ತ. ವ್ಯವಹಾರದಲ್ಲಿ ಹೆಚ್ಚಿನ ಜಾಗರೂಕತೆ ವಹಿಸಿರಿ. ನ್ಯಾಯಾಲಯದಲ್ಲಿರುವ ಕಟ್ಟಳೆಗಳು ವಿಳಂಬವಾಗುವ ಸಾಧ್ಯತೆ. ಅಮೂಲ್ಯ ವಸ್ತುಗಳನ್ನು ಸಂಗ್ರಹಿಸುವಿರಿ.

ಮಕರ: ದೈನಂದಿನ ಕೆಲಸ ಕಾರ್ಯಗಳಲ್ಲಿ ಉತ್ಸಾಹ ಮತ್ತು ಗಣನೀಯ ಸಾಧನೆ. ದೂರದ ಪ್ರಯಾಣ ಸಾಧ್ಯತೆ. ಮಕ್ಕಳ ಬಗ್ಗೆ ವಿಶೇಷ ಗಮನ ಅಗತ್ಯ. ವಸ್ತ್ರಾಭರಣಗಳನ್ನು ಖರೀದಿ. ಕಲಾವಿದರಿಗೆ ಉತ್ತಮ ಪ್ರೋತ್ಸಾಹ ದೊರಕಲಿದೆ.

ಕುಂಭ: ವಿದ್ಯುತ್ ಉಪಕರಣಗಳನ್ನು ಬಳಸುವಾಗ ಬಹಳ ಎಚ್ಚರಿಕೆ ವಹಿಸುವುದು ಅವಶ್ಯ. ಮಹಿಳೆಯರು ಶುಭ ಸಮಾರಂಭಗಳಲ್ಲಿ ಭಾಗವಹಿಸುವ ಸಾಧ್ಯತೆ. ಮಿತ್ರರಿಂದ ಧನ ಲಾಭ. ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಪ್ರಗತಿ ಕಾಣುವಿರಿ.

ಮೀನ: ಆರೋಗ್ಯದ ಕಡೆಗೆ ಹೆಚ್ಚು ಗಮನ ಅಗತ್ಯ. ಬಂಧುಗಳೊಡನೆ ಆಕಸ್ಮಿಕ ಪ್ರಯಾಣ ಸಾಧ್ಯತೆ. ಪ್ರಾಪ್ತ ವಯಸ್ಕರಿಗೆ ವಿವಾಹ ಯೋಗ ಕೂಡಬರಲಿದೆ. ಆಸ್ತಿ ವಿವಾದಕ್ಕಾಗಿ ನ್ಯಾಯಾಲಯದ ಮೊರೆ ಹೋಗುವ ಸಾಧ್ಯತೆ.

ನಿಮ್ಮ ಜನ್ಮದಿನ 23-ಜುಲೈ ಇಂದು ಅತ್ಯಂತ ಶುಭದಾಯಕ. ಕೆಲಸ ಕಾರ್ಯಗಳು ಸರಾಗವಾಗಿ ಸಾಗಿ ನೆಮ್ಮದಿಯ ಬದುಕಿನತ್ತ ನಿಮ್ಮ ಪಯಣ. ಕೃಷಿಕರಿಗೆ ಅನುಕೂಲ. ಧಾರಾಳ ಮನಸ್ಸಿನವರಾದರೂ, ಬೇರೆಯವರಿಗೆ ಸಹಾಯ ಮಾಡುವಲ್ಲಿ ಸಾರಾಸಾರ ತೂಗಿ ನೋಡುವ ಸ್ವಭಾವದವರು. ಮಹಿಳೆಯರಿಗೆ ವರ್ಷವಿಡೀ ಸಂತಸದ ದಿನವಾಗಲಿದೆ.


ಪದಬಂಧ 4666 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕೊನೆಗೆ ಪದವಿಟ್ಟರೆ ಮೋಕ್ಷ! (5)
4.ಕಟಕಟೆಯಲ್ಲಿರುವವನಿಗೆ ದೊರೆತ ಕೃಪಾದೃಷ್ಟಿ (3)
5.ಏನೂ ಗತಿಯಿರದ ಅಸಹಾಯಕ ಸ್ಥಿತಿ (3)
7.ಸರ ನೀಡಿದವನ ಸಲ್ಲಾಪ (3)
9.ಒಳ್ಳೆಯ ಸಹವಾಸ (3)
10.ಇದೊಂದು ಬಗೆಯ ಮಸಾಲೆ ಕಾಳು (3)
13.ಸುಜ್ಞಾನನ ಹತ್ತಿರವಿರುವ ಒಳ್ಳೆಮಂದಿ (3)
15.ವಲೀಮುಖ ನೋಡುತ್ತಿರುವ ಹುತ್ತ (3)
17.ನೀರ ಮೇಲಿನ ಗುಳ್ಳೆ (3)
18.ಬೆಂಗಳೂರಿನಲ್ಲಿರುವ ಭವ್ಯ ಸರ್ಕಾರಿ ಕಟ್ಟಡ (5)

ಮೇಲಿಂದ ಕೆಳಕ್ಕೆ

1.ಹದಿನೈದು ದಿನಗಳ ಅವಧಿ (2)
2.ಸರ ಕೇಳಿದ್ದಕ್ಕೆ ಈ ದ್ವೇಷವೇ? (3)
3.ಇಂಪಾದ ಸ್ವರ (2)
4.ಕಲ್ಲಿಗೆ ತಾಕುತ್ತಿರುವ ದೊಡ್ಡ ಅಲೆ (3)
6.ಎಳ್ಳಿನಿಂದ ಹುಟ್ಟಿದುದು (3)
7.ಮಧುರ ಸ್ವಪ್ನ (5)
8.ಜೊತೆಯಲ್ಲಿ ಬಾಳುವುದು (5)
11.ಹಿಂದೂ ಸಂವತ್ಸರದಲ್ಲಿ ಮೊದಲನೆಯದು (3)
12.ಪ್ರತಿಪಾದನೆ ಮಾಡುವಾಗಿನ ತಪ್ಪು (3)
14.ದಿವಾನನ ಜೊತೆಯಿರುವ ಆಳು (3)
16.ಈತ ಕವಿತೆ ರಚನೆಗಾರ (2)
17.ನವಗ್ರಹಗಳಲ್ಲಿ ಇದೊಂದು (2)



4665ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಆತ್ಮಪ್ರಶಂಸೆ 6.ಕರುಳು 7.ಕೆರಸಿ 8.ಹವನ 10.ರಿಕ್ತಹಸ್ತ 11.ವೀರಗಾಥೆ 12.ಪರವಶ 13.ರಕ್ಷಾಪತ್ರ 14.ಲವಣ 16.ಕಲಭ 18.ದಾಸ್ತಾನು 20.ವಸತಿಗೃಹ

ಮೇಲಿಂದ ಕೆಳಕ್ಕೆ: 1.ಮೂಕ 2.ಆಳು 3.ಪ್ರಭಾವ 4.ಸೆಕೆ 5.ಮಸಿ 8.ಹಸ್ತಕೌಶಲ 9.ನವೀಕರಣ 15.ವರ್ಧಂತಿ 16.ಕತ್ತೆ 17.ಭವ 18.ದಾಹ 19.ನುಚ್ಚು

ಸುಡೊಕು 5052

	4				1		2	
8		7		3				9
		5			9		8	3
	6					3		8
	7	4	1	8	3			
3						5		1
	8		3		4		1	5
		1		9		8		4
4	3		5			2		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5051 ಸುಡೊಕು

8	3	1	6	7	2	5	4	9
6	9	2	5	4	1	8	7	3
5	4	7	3	8	9	2	1	6
4	7	8	9	6	5	3	2	1
3	6	9	2	1	8	4	5	7
2	1	5	4	3	7	9	6	8
1	5	6	8	2	3	7	9	4
7	2	3	1	9	4	6	8	5
9	8	4	7	5	6	1	3	2



ವಿಜಯಪುರ ಜಿಲ್ಲೆಯ ಆಲಮಟ್ಟಿ ಜಲಾಶಯದ 26 ಗೇಟ್ ಗಳ ಪೈಕಿ 24 ಗೇಟ್ ಗಳು ಹಾಗೂ ಕೆಪಿಸಿಎಲ್ ಮೂಲಕ 1.30 ಲಕ್ಷ ಕ್ಯುಸೆಕ್ ನೀರನ್ನು ಗುರುವಾರ ಹೊರಬಿಡಲಾಗಿದೆ ಪ್ರಜಾವಾಣಿ ಚಿತ್ರ: ಚಂದ್ರಶೇಖರ ಕೋಳೇಕರ



ಸತತ ಮಳೆಯಿಂದಾಗಿ ಬೆಳಗಾವಿ ತಾಲ್ಲೂಕಿನ ವಂಟಮೂರಿ ಘಾಟ್ ಬಳಿ ಪುಣೆ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯು ಜಲಾವೃತವಾಗಿ ಕಾರೊಂದು ಮುಳುಗಿದೆ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	102.40	16,214	2,357
ಹಾರಂಗಿ	2,859	2,855.56	10,378	10,621
ಕಬಿನಿ	2,284.00	2,281.12	17,000	15,000
ಹೇಮಾವತಿ	2,922	2,908.32	10,786	300
ಲಿಂಗನಮಕ್ಕಿ	1,819	1,796.60	45,458	-
ಸೂಪಾ (ಮೀ)	564	543.40	26,002	489
ಮಾಣಿ	594.36	578.26	6,513	-
ತುಂಗಭದ್ರಾ	1,633	1,621.44	40,862	3,472
ಮಲಪ್ರಭಾ	2,079.5	2,066.10	1,317	194
ಘಟಪ್ರಭಾ	2,175	2,151.36	17,467	134
ಭದ್ರಾ	186	167.11	15,668	796
ಆಲಮಟ್ಟಿ (ಮೀ)	519.6	517.81	66,936	65,328
ನಾರಾಯಣಪುರ (ಮೀ)	492.25	491.33	1,15,000	1,34,980

* ನೆಲಮಟ್ಟದಿಂದ

ಜನಜೀವನ ಅಸ್ತವ್ಯಸ್ತ: ಮತ್ತೆ ಉಕ್ಕೇರಿದ ಗಂಗಾವಳಿ: ಅರಬೈಲ್‌ನಲ್ಲಿ ಗುಡ್ಡ ಕುಸಿತ • ಶಾಲಾ ಕಟ್ಟಡ ಕುಸಿತ

ಹೆಚ್ಚಿದ ಮಳೆಯ ಆರ್ಭಟ: ಪ್ರವಾಹ ಭೀತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧಾರವಾಡ, ಬೆಳಗಾವಿ, ಉತ್ತರ ಕನ್ನಡ ಜಿಲ್ಲೆ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಗುರುವಾರ ದಿನವಿಡೀ ಮಳೆಯಾಗಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ. ಜಲಾಶಯಗಳಲ್ಲಿ ನೀರಿನ ಮಟ್ಟ ಹೆಚ್ಚಾಗಿದೆ

ಬುಧವಾರ ಸಂಜೆ ಗಾಳಿ ಸಹಿತ ಸುರಿದ ಮಳೆಗೆ ಉತ್ತರ ಕನ್ನಡ ಜಿಲ್ಲೆಯ ಜೊಯಿಡಾ ತಾಲ್ಲೂಕಿನ ಕುಂಬಾರವಾಡ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಕಟ್ಟಡ ಹಾಗೂ ಮುಂಡಗೋಡ ತಾಲ್ಲೂಕಿನ ಹನುಮಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಚಾವಣಿ ಕುಸಿದಿವೆ. ಧಾರವಾಡ ತಾಲ್ಲೂಕಿನ ಮುರಕಟ್ಟಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯ ಕೊಠಡಿ ಗೋಡೆ ಕುಸಿದಿದೆ.

ಬೆಳಗಾವಿ ನಗರವೂ ಸೇರಿದಂತೆ ಜಿಲ್ಲೆಯಾದ್ಯಂತ ಜಿಟಿಜಿಟಿ ಮಳೆ ಮುಂದುವರಿದಿದ್ದು, ನೆರೆಯ ಮಹಾರಾಷ್ಟ್ರದ ಘಟ್ಟ ಪ್ರದೇಶ ಮತ್ತು ಚಿಕ್ಕೋಡಿ ತಾಲ್ಲೂಕಿನ ನದಿ ಜಲಾನಯನ ಪ್ರದೇಶಗಳಲ್ಲಿ 24 ಗಂಟೆಗಳಲ್ಲಿ ಮಳೆಯ ಆರ್ಭಟ ಹೆಚ್ಚಿದೆ. ಕೃಷ್ಣಾ ಮತ್ತು ಉಪನದಿಗಳ ಹರಿವಿನಲ್ಲಿ ನಿರಂತರ ಏರಿಕೆ ದಾಖಲಾಗುತ್ತಿದೆ. ರಾಜಾಪುರ ಬ್ಯಾರೇಜ್‌ನಿಂದ 58ಸಾವಿರ ಕ್ಯುಸೆಕ್ ಮತ್ತು ದೂಧ್‌ಗಂಗಾ ನದಿಯಿಂದ 19,768 ಕ್ಯುಸೆಕ್ ಸೇರಿ 77,768 ಕ್ಯುಸೆಕ್ ನೀರು ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಬಳಿ ಕೃಷ್ಣಾ ನದಿಗೆ ಸೇರುತ್ತಿದೆ.

ಚಿಕ್ಕೋಡಿ ಮತ್ತು ನಿಪ್ಪಾಣಿ ತಾಲ್ಲೂಕುಗಳ ವ್ಯಾಪ್ತಿಯಲ್ಲಿ 6 ಕೆಳಮಟ್ಟದ ಕಿರು ಸೇತುವೆಗಳು ಜಲಾವೃತ ಸ್ಥಿತಿಯಲ್ಲಿಯೇ ಇವೆ. ಗುರುವಾರ ವೇದಗಂಗಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಅಕ್ಕೋಳ-ಸಿದ್ನಾಳ ಕಿರು ಸೇತುವೆ ಮುಳುಗಡೆಯಾಗಿದೆ. ಮಹಾರಾಷ್ಟ್ರದಲ್ಲಿ ಮಳೆ ಮುಂದುವರಿದಿದ್ದು, ಕೃಷ್ಣಾ ನದಿಗೆ ಬಂದು ಸೇರುವ ನೀರಿನ ಪ್ರಮಾಣ ಹೆಚ್ಚಾಗಿದ್ದು ನದಿ ತೀರದಲ್ಲಿ ಪ್ರವಾಹದ ಭೀತಿ ಉಂಟಾಗಿದೆ.

ಧಾರವಾಡ ಜಿಲ್ಲೆಯ ಅಳ್ನಾವರ ತಾಲ್ಲೂಕಿನ ಕಂಬಾರಗಣವಿ ಕಿರು ಸೇತುವೆ ಮತ್ತೆ ಜಲಾವೃತಗೊಂಡಿದೆ.

ಉತ್ತರ ಕನ್ನಡ ಜಿಲ್ಲೆಯ ಮಲೆನಾಡಿನಲ್ಲಿ ಬುಧವಾರ ರಾತ್ರಿಯಿಂದ ಜೋರಾಗಿ ಮಳೆಯಾಗುತ್ತಿದೆ. ಪಾಂಡರಿ ಹಾಗೂ ಕಾನೇರಿ ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ.

ಕಾಳಿ ನದಿಯಲ್ಲಿ ಒಳಹರಿವು ಹೆಚ್ಚಾಗಿರುವ ಕಾರಣ ಕದ್ರಾ ಜಲಾಶಯ ಭರ್ತಿಯಾಗಿದೆ. ಎಂಟು ಕ್ರಸ್ಟ್‌ಗೇಟ್‌ಗಳನ್ನು ತೆರೆದು ನದಿಗೆ 40 ಸಾವಿರ ಕ್ಯುಸೆಕ್ ನೀರನ್ನು ನದಿಗೆ ಹರಿಸಲಾಯಿತು. ಪ್ರವಾಹ ಪರಿಸ್ಥಿತಿ ತಲೆದೋರಿದ್ದು, ಲೇಬರ್ ಕಾಲೊನಿಯ 45 ಕುಟುಂಬಗಳನ್ನು ಕದ್ರಾ ಕೆ.ಪಿ.ಸಿ ಶಾಲೆಗೆ ಸ್ಥಳಾಂತರಿಸಲಾಗಿದೆ. ಅಂಕೋಲಾ ತಾಲ್ಲೂಕಿನ ಗುಳ್ಳಾಪುರ, ಶೇವ್ಕಾರ ಭಾಗದಲ್ಲಿ ಗಂಗಾವಳಿ ನದಿ ಅಬ್ಬರಿಸುತ್ತಿದ್ದು, ಸಮೀಪದ ತೋಟಗಳು ಜಲಾವೃತವಾಗಿವೆ. ಸಮೀಪದ ಸೇತುವೆಯ ಮಟ್ಟದಲ್ಲಿ ನೀರು ಹರಿಯುತ್ತಿದ್ದು, ಪ್ರವಾಹದ ಆತಂಕ ಎದುರಾಗಿದೆ. ಅಂಕೋಲಾ ತಾಲ್ಲೂಕಿನ ಸುಂಕಸಾಳದಲ್ಲಿ ರಾಷ್ಟ್ರೀಯ ಹೆದ್ದಾರಿ 63 ಜಲಾವೃತವಾಗಿದ್ದು, ವಾಹನ ಸಂಚಾರ ಸ್ಥಗಿತವಾಗಿದೆ. ಯಲ್ಲಾಪುರ ತಾಲ್ಲೂಕಿನ ಅರಬೈಲ್‌ನಲ್ಲಿ ರಾಷ್ಟ್ರೀಯ ಹೆದ್ದಾರಿ 63ರ ಮೇಲೆ ಅಪಾರ ಪ್ರಮಾಣದಲ್ಲಿ ಗುಡ್ಡದ ಮಣ್ಣು ಕುಸಿದಿದೆ.

ಇದರಿಂದ ಯಲ್ಲಾಪುರ– ಅಂಕೋಲಾ ನಡುವೆ ಹೆದ್ದಾರಿ ಮೂಲಕ ಸಂಪರ್ಕ ಕಡಿತವಾಗಿದೆ. ಹೊನ್ನಾವರದಲ್ಲಿ ಗಾಳಿ, ಮಳೆಗೆ ಐದು ಮನೆಗಳಿಗೆ ಹಾನಿಯಾಗಿದೆ. ಗುಂಡಬಾಳ, ಬಡಗಣಿ ನದಿಗಳು, ಭಾಸ್ಕೇರಿ ಹಳ್ಳ ತುಂಬಿ ಹರಿಯುತ್ತಿದ್ದು, ದಂಡೆಗಳಲ್ಲಿ ಆತಂಕದ ಸ್ಥಿತಿಯಿದೆ.

ಚಂದ್ರಂಪಳ್ಳಿ ಜಲಾಶಯ ಬಹುತೇಕ ಭರ್ತಿ: ಕಲಬುರ್ಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನಲ್ಲಿ ಹೆಚ್ಚು ಮಳೆಯಾಗಿದ್ದು, ಚಂದ್ರಂಪಳ್ಳಿ ಜಲಾಶಯ ಬಹುತೇಕ ಭರ್ತಿಯಾಗಿದೆ. ಭಾಲ್ಕಿ ತಾಲ್ಲೂಕಿನ ಹೊನ್ನಾಳಿ ಸೇತುವೆ ಮೇಲೆ ನೀರು ಹರಿಯುತ್ತಿದ್ದು, ಸಂಚಾರ ಸ್ಥಗಿತಗೊಂಡಿದೆ.

ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಹೆಚ್ಚಿನ ಮಳೆಯಾದ ಕಾರಣ, ನಾರಾಯಣಪುರದ ಬಸವಸಾಗರ ಜಲಾಶಯಕ್ಕೆ ಹೆಚ್ಚು ನೀರು ಹರಿದುಬರುತ್ತಿದೆ. 1.34 ಲಕ್ಷ ಕ್ಯುಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ. ಕಲ್ಯಾಣ ಕರ್ನಾಟಕದ ಬಹುಪಾಲು ಕಡೆ ತೊಗರಿ, ಹೆಸರು, ಉದ್ದು, ಸೋಯಾ ಹೊಲಗಳಲ್ಲಿ ನೀರು ನಿಂತಿದ್ದು, ಬೆಳೆ ಹಾನಿಯ ಆತಂಕ ಎದುರಾಗಿದೆ.

ಕಾಫಿನಾಡಿನಲ್ಲಿ ಧಾರಾಕಾರ ಮಳೆ: ಚಿಕ್ಕಮಗಳೂರು ಜಿಲ್ಲೆಯಲ್ಲಿ ಗುರುವಾರ ಮಳೆಯ ಅಬ್ಬರ ಹೆಚ್ಚಾಗಿತ್ತು. ಹಲವೆಡೆ ಮರಗಳು, ವಿದ್ಯುತ್ ಕಂಬಗಳು ನೆಲಕ್ಕೆ ಉರುಳಿದ್ದು, ಮನೆಗಳಿಗೆ ಹಾನಿಯಾಗಿದೆ.

ಅಬ್ಬುಗೂಡಿಗೆ ಬಳಿ ಕಿರು ಸೇತುವೆ ಕುಸಿದು, ಅಬ್ಬುಗೂಡಿಗೆ- ಕಲ್ಲುಗೋಡು ಸಂಪರ್ಕ ಕಡಿತಗೊಂಡಿದೆ. ಅಜ್ಜಂಪುರ ತಾಲ್ಲೂಕಿನ ಅತ್ತಿಘಟ್ಟೆನಲ್ಲಿ 10 ವಿದ್ಯುತ್ ಕಂಬಗಳು ನೆಲಕ್ಕುರುಳಿವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಮನೆ ಪೂರ್ಣ, ಮೂರು ಮನೆಗಳು ಭಾಗಶಃ ಹಾನಿಯಾಗಿವೆ. ಸೋಮೇಶ್ವರ, ಉಚ್ಚಿಲ ಭಾಗದಲ್ಲಿ ಕಡಲ್ಕೊರೆತ ತೀವ್ರವಾಗಿದೆ. ಉಚ್ಚಿಲ-ಬೆಟ್ಟಂಪಾಡಿ ರಸ್ತೆಗೆ ಹಾನಿಯಾಗಿದೆ. ಕುಂದಾಪುರ ತಾಲ್ಲೂಕಿನ ಉಪ್ಪಿನಕುದ್ರು ಗ್ರಾಮದಲ್ಲಿ ಎರಡು ಮನೆಗಳಿಗೆ ಭಾಗಶಃ ಹಾನಿಯಾಗಿದೆ.

ಕೊಚ್ಚಿ ಹೋದ ಸೇತುವೆ: ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ಕೊಂಡಜ್ಜಿ ಗ್ರಾಮದಲ್ಲಿ ಕೊಂಡಜ್ಜಿ-ಕಕ್ಕರಗೊಳ್ಳ ಸಂಪರ್ಕ ಸೇತುವೆಯೇ ಕೊಚ್ಚಿ ಹೋಗಿದೆ.

ಶಿವಮೊಗ್ಗ ನಗರದಲ್ಲಿ ಬೆಳಿಗ್ಗೆಯಿಂದ ಬಿಡುವು ನೀಡದೆ ಮಳೆ ಸುರಿದಿದ್ದು, ಕಳೆದ 24 ಗಂಟೆ ಅವಧಿಯಲ್ಲಿ ಜಿಲ್ಲೆಯಾದ್ಯಂತ ಸರಾಸರಿ 48.29 ಮಿ.ಮೀ ಮಳೆಯಾಗಿದೆ. ಹಿನ್ನೀರು ಭಾಗದಲ್ಲಿ ಹೆಚ್ಚು ಮಳೆಯಾಗುತ್ತಿರುವುದರಿಂದ ಜಲಾಶಯಗಳ ಒಳಹರಿವು ಹೆಚ್ಚಾಗಿದೆ.



ಉತ್ತರ ಕನ್ನಡ ಜಿಲ್ಲೆ ಜೊಯಿಡಾ ತಾಲ್ಲೂಕಿನ ಕುಂಬಾರವಾಡ ಗ್ರಾಮದ ಕಿರವತ್ತಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ, ಬಳಕೆ ಇಲ್ಲದ ಕಟ್ಟಡ ಕುಸಿದಿದೆ

ಕರಾವಳಿ ಜಿಲ್ಲೆಗಳಲ್ಲಿ 'ರೆಡ್ ಅಲರ್ಟ್'

ಕರಾವಳಿ ಭಾಗದ ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಜು.27ರವರೆಗೆ ಧಾರಾಕಾರ ಮಳೆಯಾಗುವ ಮುನ್ಸೂಚನೆ ಇದೆ. ಈ ಜಿಲ್ಲೆಗಳಲ್ಲಿ ಜು.23ರಂದು 'ರೆಡ್ ಅಲರ್ಟ್' ಘೋಷಿಸಲಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕರಾವಳಿಯಲ್ಲಿ ಗಂಟೆಗೆ 50ರಿಂದ 60 ಕಿ.ಮೀ ವೇಗದಲ್ಲಿ ಗಾಳಿ ಬೀಸುತ್ತಿದ್ದು, 4.4 ಮೀಟರ್‌ಗಳಷ್ಟು ಎತ್ತರದ ಅಲೆಗಳು ಏಳುವ ಸಾಧ್ಯತೆ ಇರುವುದರಿಂದ ಮೀನುಗಾರರು ಇದೇ 26ರವರೆಗೆ ಸಮುದ್ರಕ್ಕೆ ಇಳಿಯಬಾರದು ಎಂದು ಇಲಾಖೆ ಎಚ್ಚರಿಸಿದೆ.

ಮುಂಗಾರು ಬಿರುಸುಗೊಂಡಿರುವುದರಿಂದ ಶಿವಮೊಗ್ಗ, ಹಾಸನ, ಕೊಡಗು, ಚಿಕ್ಕಮಗಳೂರು, ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲೂ ಗುಡುಗು, ಸಿಡಿಲು ಸಹಿತ ವ್ಯಾಪಕ ಮಳೆಯಾಗುವ ಸೂಚನೆ ಇರುವುದರಿಂದ 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ. ಬೀದರ್, ಹಾವೇರಿ, ಕಲಬುರ್ಗಿ, ಯಾದಗಿರಿ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ನೀಡಿರುವುದಾಗಿ ತಿಳಿಸಿದೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ https://bit.ly/3eKsWta

ಹೆದ್ದಾರಿ ಕುಸಿತ: ಶಿರಾಡಿ ಘಾಟ್ ಬಂದ್



ಸಕಲೇಶಪುರ ತಾಲ್ಲೂಕಿನ ದೋಣಿಗಾಲ್ ಬಳಿಯ ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಭೂಕುಸಿತ ಉಂಟಾಗಿದೆ ಪ್ರಜಾವಾಣಿ ಚಿತ್ರ/ಜಾನೇಕೆರೆ ಆರ್.ಪರಮೇಶ್


ಹಾಸನ: ಜಿಲ್ಲೆಯಲ್ಲಿ ಧಾರಾಕಾರ ಮಳೆಯಾಗಿದ್ದು, ಸಕಲೇಶಪುರ ತಾಲ್ಲೂಕಿನ ದೋಣಿಗಾಲ್ ಬಳಿಯ ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಭೂಕುಸಿತ ಉಂಟಾಗಿದೆ. ಹೀಗಾಗಿ, ಶಿರಾಡಿ ಘಾಟ್ ರಸ್ತೆಯನ್ನು ನಾಲ್ಕು ದಿನ ಬಂದ್ ಮಾಡಲಾಗಿದೆ.

ಲಘು ವಾಹನಗಳಿಗೆ ಬಿಸ್ಲೆ ಘಾಟ್ ಮತ್ತು ಭಾರಿವಾಹನಗಳನ್ನು ತಾತ್ಕಾಲಿಕವಾಗಿ ಹಾನುಬಾಳು, ಮೂಡಿಗೆರೆ, ಚಾರ್ಮಾಡಿ ಘಾಟ್ ಹಾಗೂ ಮಡಿಕೇರಿ–ಪುತ್ತೂರು ಮಾರ್ಗದಲ್ಲಿ ಸಂಚರಿಸಲು ವ್ಯವಸ್ಥೆ ಮಾಡಲಾಗಿದೆ. ವಾಹನಗಳು ಸಂಚರಿಸಿದರೆ ರಸ್ತೆ ಮತ್ತಷ್ಟು ಕುಸಿಯುವ ಆತಂಕ ಎದುರಾಗಿದೆ.

ಕೊಡಗು ಜಿಲ್ಲೆಯಾದ್ಯಂತ ಧಾರಾಕಾರ ಮಳೆಯಾಗುತ್ತಿದ್ದು, ಕಾವೇರಿ ನದಿ ಮತ್ತೆ ಮೈದುಂಬಿ ಹರಿಯುತ್ತಿದೆ. ಹಾರಂಗಿ ಜಲಾಶಯದ ಒಳಹರಿವು ಏರಿಕೆಯಾಗಿದೆ. ಬಲಮುರಿಯ ಕಿರುಸೇತುವೆ ಮೇಲೆ ಕಾವೇರಿ ನದಿಯ ನೀರು ಹರಿಯುತ್ತಿದ್ದು, ಸಂಪರ್ಕ ಕಡಿತವಾಗಿದೆ.

ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲ್ಲೂಕಿನ ಬೆಟ್ಟದಪುರದ ಹೇಮಾ ಎಂಬುವರ ಮನೆ ಚಾವಣಿ ಬುಧವಾರ ರಾತ್ರಿ ಕುಸಿದಿದೆ. ಮನೆಯಲ್ಲಿದ್ದವರು ಅಪಾಯದಿಂದ ಪಾರಾಗಿದ್ದಾರೆ.

ಪ್ರಜಾವಾಣಿ ಜಲ ಸಿರಿ



- ಮುಂಗಾರು ಮಳೆ ಹನಿಗೂಡಿದರೆ ಜಲಪಾತಗಳಿಗೆ ಎಲ್ಲಿಲ್ಲದ ಸಿರಿ, ಸಂಭ್ರಮ
- ರಾಜ್ಯದ ಹಲವು ಜಲಪಾತಗಳ ವೈಭವ, ಅಲ್ಲಿನ ಸೌಲಭ್ಯಗಳ ಬಗ್ಗೆ 'ಪ್ರಜಾವಾಣಿ'ಯ 'ಜಲ ಸಿರಿ'ಯಲ್ಲಿ ನೋಡಿ, ತಿಳಿಯಿರಿ...

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ https://bit.ly/3y15e3j

ಅತಿ ಹೆಚ್ಚು ಮಳೆಯಾದ ಸ್ಥಳಗಳು	(ಸೆಂ.ಮೀ.ಗಳಲ್ಲಿ)
ಖಾನಾಪುರ	18
ಹೊಸನಗರದಲ್ಲಿ	14.7
ಶಾಂತಳ್ಳಿ	17.5
ಸೋಮವಾರಪೇಟೆ	11
ಭಾಗಮಂಡಲ	10.5
ಶುಕ್ರವಾರಸಂತೆ	13
ಹೆತ್ತೂರು	12.5
ಮಾರನಹಳ್ಳಿ	12.5
ಹೊಸೂರು	12.5
ಯಸಳೂರು	12
ಸಕಲೇಶಪುರ	10
ಹೊಸ್ಕೆರೆ	15.5
ಕಮ್ಮರಡಿ	12.7
ಕಿಗ್ಗಾ	10.5
ಕೆರೆಕಟ್ಟೆ	10.2
ಇಂದಬೆಟ್ಟು	10.4

ಮಹಾರಾಷ್ಟ್ರದಲ್ಲಿ ಮಳೆ: ಗ್ರಾಮಗಳು ಜಲಾವೃತ

ಠಾಣೆ/ಪಾಲ್ಘರ್ (ಪಿಟಿಐ): 'ಮುಂಬೈಗೆ ಹೊಂದಿಕೊಂಡಿರುವ ಠಾಣೆ ಮತ್ತು ಪಾಲ್ಘರ್ ಜಿಲ್ಲೆಗಳಲ್ಲಿ ಬುಧವಾರ ರಾತ್ರಿ ಮತ್ತು ಗುರುವಾರ ಬೆಳಿಗ್ಗೆ ಭಾರಿ ಮಳೆ ಸುರಿದಿದೆ. ಇದರಿಂದಾಗಿ ಹಲವು ಪ್ರದೇಶಗಳಲ್ಲಿ ಪ್ರವಾಹ ಉಂಟಾಗಿದೆ.

ರೈಲ್ವೆ ಹಳಿಗಳ ಮೇಲೆ ಬಂಡೆ ಉರುಳಿದ್ದರಿಂದ ರೈಲು ಸೇವೆಯಲ್ಲಿ ವ್ಯತ್ಯಯ ಉಂಟಾಗಿದೆ. ಕೆಲವು ಗ್ರಾಮಗಳು ಜಲಾವೃತವಾಗಿವೆ. ಎನ್‌ಡಿಆರ್‌ಎಫ್ ತಂಡಗಳು ಇಲ್ಲಿ ಸಿಲುಕಿದ್ದ ನೂರಾರು ಜನರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಕಸಾರ ಬಳಿಯ ಉಂಬ್ರೇಲಿ ನಿಲ್ದಾಣದಲ್ಲಿನ ಪ್ಲಾಟ್‌ಫಾರ್ಮ್‌ವರೆಗೆ ನೀರು ತುಂಬಿಕೊಂಡಿದೆ. ಘಾಟ್ ಬಳಿಯ ರೈಲ್ವೆ ಹಳಿಗಳ ಮೇಲೆ ಬಂಡೆಗಳು ಉರುಳಿವೆ. ಇದರಿಂದಾಗಿ ರೈಲು ಸೇವೆಯನ್ನು ಸ್ಥಗಿತಗೊಳಿಸಲಾಗಿದೆ. ಬಂಡೆಗಳನ್ನು ತೆರವುಗೊಳಿಸುವ ಕಾರ್ಯ ನಡೆಯುತ್ತಿದೆ' ಎಂದು ಜಿಲ್ಲಾ ಅಧಿಕಾರಿಗಳು ತಿಳಿಸಿದರು.

ಮುಂಬೈ ವರದಿ: 'ಮುಂಬೈ ಮತ್ತು ಅದರ ಸುತ್ತಮುತ್ತ ಭಾರಿ ಮಳೆಯಾಗಿದ್ದು, ಕಸಾರ ಘಾಟ್ ಬಳಿಯ ರೈಲ್ವೆ ಹಳಿಗಳಲ್ಲಿ ನೀರು ತುಂಬಿದೆ. ಕೆಲವೆಡೆ ಕಲ್ಲು–ಮಣ್ಣು ಕುಸಿತ ಸಂಭವಿಸಿದೆ. ಇದರಿಂದಾಗಿ ಸ್ಥಳೀಯ ಮತ್ತು ದೂರದ ಪ್ರಯಾಣದ ರೈಲು ಸೇವೆಯಲ್ಲಿ ವ್ಯತ್ಯಯ ಉಂಟಾಗಿದೆ' ಎಂದು ಅಧಿಕಾರಿಗಳು ಗುರುವಾರ ತಿಳಿಸಿದರು.

'ಹಲವು ಸ್ಥಳಗಳಲ್ಲಿ ದೂರದ ಪ್ರಯಾಣದ ರೈಲು ಸೇವೆಯನ್ನು ಸ್ಥಗಿತಗೊಳಿಸಲಾಗಿದೆ. ಈ ರೈಲುಗಳಲ್ಲಿ ತೆರಳಬೇಕಾಗಿದ್ದ ಪ್ರಯಾಣಿಕರಿಗಾಗಿ ವಿಶೇಷ ಬಸ್ಸಿನ ವ್ಯವಸ್ಥೆ ಕಲ್ಪಿಸಲಾಗಿದೆ' ಎಂದು ಅವರು ಹೇಳಿದರು.



ಡಿಡಿಪಿಐ ಎನ್.ಎಚ್.ನಾಗೂರ ನೇತೃತ್ವದ ಅಧಿಕಾರಿಗಳ ತಂಡ ಗುರುವಾರ ಬೈಂದೂರು ತಾಲ್ಲೂಕಿನ ಕುರುದ್ವೀಪಕ್ಕೆ ತೆರಳಿ ಇಬ್ಬರು ವಿದ್ಯಾರ್ಥಿನಿಯರನ್ನು ದೋಣಿಯ ಸಹಾಯದಿಂದ ಪರೀಕ್ಷಾ ಕೇಂದ್ರಕ್ಕೆ ಕರೆತಂದರು.

ದೋಣಿಯಲ್ಲಿ ವಿದ್ಯಾರ್ಥಿನಿಯರನ್ನು ಕರೆತಂದ ಡಿಡಿಪಿಐ

ಉಡುಪಿ: ಮಳೆಯ ಕಾರಣಕ್ಕೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಿಂದ ವಂಚಿತರಾಗಬಾರದು ಎಂಬ ಉದ್ದೇಶದಿಂದ ಡಿಡಿಪಿಐ ಎನ್.ಎಚ್. ನಾಗೂರ ನೇತೃತ್ವದ ಅಧಿಕಾರಿಗಳ ತಂಡ ಗುರುವಾರ ಬೈಂದೂರು ತಾಲ್ಲೂಕಿನ ಕುರುದ್ವೀಪಕ್ಕೆ ತೆರಳಿ ಅಲ್ಲಿದ್ದ ಇಬ್ಬರು ವಿದ್ಯಾರ್ಥಿನಿಯರನ್ನು ದೋಣಿಯ ಸಹಾಯದಿಂದ ಪರೀಕ್ಷಾ ಕೇಂದ್ರಕ್ಕೆ ಕರೆತಂದರು.

ಮರವಂತೆ ಸಮೀಪದ ಕುರುದ್ವೀಪ ಜಲಾವೃತಗೊಂಡು ಸಾರಿಗೆ ಸಂಪರ್ಕ ಕಳೆದುಕೊಂಡಿತ್ತು. ನೆರೆಯ ನಡುವೆಯೇ ದ್ವೀಪದಲ್ಲಿದ್ದ ಶಿಲ್ಪಾ ಹಾಗೂ ಸಂಜನಾ ಎಂಬ ವಿದ್ಯಾರ್ಥಿನಿಯರು ಜುಲೈ 19 ರಂದು ದೋಣಿಯಲ್ಲಿ ಬಂದು ಪರೀಕ್ಷೆ ಬರೆದಿದ್ದರು. ಈ ವಿಚಾರ ತಿಳಿದ ಡಿಡಿಪಿಐ ಗುರುವಾರ ಬೆಳಿಗ್ಗೆ ಬೈಂದೂರು ತಹಶೀಲ್ದಾರ್ ಹಾಗೂ ಬಿಇಒ ಜೊತೆ ದ್ವೀಪಕ್ಕೆ ತೆರಳಿ ವಿದ್ಯಾರ್ಥಿನಿಯರಿಗೆ ಧೈರ್ಯ ತುಂಬಿದರು. ದೋಣಿಯಲ್ಲಿ ದಡಕ್ಕೆ ಕರೆತಂದು ಅಲ್ಲಿಂದ ಇಲಾಖೆಯ ವಾಹನದಲ್ಲಿ ಪರೀಕ್ಷಾ ಕೇಂದ್ರಕ್ಕೆ ಕರೆದೊಯ್ದರು.

'ವಿದ್ಯಾರ್ಥಿನಿಯರು ಸಕಾಲಕ್ಕೆ ಪರೀಕ್ಷಾ ಕೇಂದ್ರ ತಲುಪಿ ಪರೀಕ್ಷೆ ಬರೆದಿದ್ದಾರೆ. ನೆರೆ ಬಂದರೂ ಪರೀಕ್ಷೆ ಬರೆಯಬೇಕು ಎಂಬ ಅವರ ಉತ್ಸಾಹ ಕಂಡು ಸಂತೋಷವಾಯಿತು' ಎಂದು ಡಿಡಿಪಿಐ ಎನ್.ಎಚ್. ನಾಗೂರ ತಿಳಿಸಿದರು.

'ಎಸ್ಸೆಸ್ಸೆಲ್ಸಿ ಪಾಸಾದ ಎಲ್ಲರಿಗೂ ಪಿಯುಸಿ ಪ್ರವೇಶ ಲಭ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈ ಬಾರಿ 10ನೇ ತರಗತಿಯ ಎಲ್ಲ ವಿದ್ಯಾರ್ಥಿಗಳು ಉತ್ತೀರ್ಣರಾಗುತ್ತಿರುವುದರಿಂದ ಪಿಯುಸಿ ಸೇರಬಯಸುವ ಎಲ್ಲರಿಗೂ ಪ್ರವೇಶಾವಕಾಶ ಕಲ್ಪಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ತಿಳಿಸಿದರು.

ಎಸ್ಸೆಸ್ಸೆಲ್ಸಿ ಭಾಷಾ ವಿಷಯಗಳಿಗೆ ಗುರುವಾರ ನಡೆದ ಪರೀಕ್ಷೆಯ ಬಳಿಕ ಮಾತನಾಡಿದ ಅವರು, 'ರಾಜ್ಯದಲ್ಲಿ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪಿಯುಸಿ ಕಾಲೇಜುಗಳಲ್ಲಿ ಒಟ್ಟು 12 ಲಕ್ಷ ಸೀಟುಗಳಿವೆ. ಜಿಲ್ಲಾವಾರು ಅಂಕಿಅಂಶಗಳನ್ನು ಸಂಗ್ರಹಿಸಿದ್ದು, ಅದಕ್ಕಾಗಿ ಅಧಿಕಾರಿಗಳ ಸಮನ್ವಯ ವ್ಯವಸ್ಥೆ ರೂಪಿಸಲಾಗುತ್ತಿದೆ. ಯಾವುದೇ ಸಂಸ್ಥೆಗಳು ಸೀಟು ಹೆಚ್ಚಳದ ಪ್ರಸ್ತಾವನೆ ಸಲ್ಲಿಸಿದರೆ, ಆ ಬೇಡಿಕೆಯನ್ನು ಪುರಸ್ಕರಿಸಲಾಗುವುದು' ಎಂದರು.


> ಎಸ್ಸೆಸ್ಸೆಲ್ಸಿ ಪರೀಕ್ಷೆಗಳು ಯಾವುದೇ ವಿಘ್ನಗಳಿಲ್ಲದೇ ಯಶಸ್ವಿಯಾಗಿ ನಡೆದಿದೆ. ಆಗಸ್ಟ್ 10ರ ವೇಳೆಗೆ ಫಲಿತಾಂಶ ಪ್ರಕಟಿಸಲಾಗುವುದು
>
> **ಎಸ್. ಸುರೇಶ್‌ಕುಮಾರ್**, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ

'ಅನಾರೋಗ್ಯ ಕಾರಣಗಳಿಂದ ವಿಶೇಷ ಕೊಠಡಿಗಳಲ್ಲಿ 152 ವಿದ್ಯಾರ್ಥಿಗಳು ಭಾಷಾ ವಿಷಯಗಳ ಪರೀಕ್ಷೆ ಬರೆದರು. 10,693 ವಲಸೆ ವಿದ್ಯಾರ್ಥಿಗಳು ತಮಗೆ ಸಮೀಪದ ಪರೀಕ್ಷಾ ಕೇಂದ್ರಗಳನ್ನು ಆರಿಸಿಕೊಂಡಿದ್ದರು. 2,870 ವಿದ್ಯಾರ್ಥಿಗಳು ವಸತಿ ನಿಲಯಗಳಲ್ಲಿದ್ದು ಪರೀಕ್ಷೆಗೆ ಹಾಜರಾದರು. ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ಪರೀಕ್ಷಾ ಕೇಂದ್ರಗಳಿಗೆ ಕೇರಳ ಮತ್ತು ಮಹಾರಾಷ್ಟ್ರ, ಆಂಧ್ರಪ್ರದೇಶ, ಗೋವಾ ರಾಜ್ಯಗಳಿಂದ ಒಟ್ಟು 706 ಮಕ್ಕಳು ಬಂದು ಪರೀಕ್ಷೆ ಬರೆದಿದ್ದಾರೆ. ಅವರಿಗೆ ಗಡಿ ಪ್ರದೇಶದಿಂದ ವಾಹನಗಳ ವ್ಯವಸ್ಥೆ ಮಾಡಲಾಗಿತ್ತು. ನಾಲ್ಕು ಅಭ್ಯರ್ಥಿಗಳು ಗೈರು ಹಾಜರಾಗಿದ್ದರು' ಎಂದರು.

'ಮೂಳೆ ಸವೆತ ರೋಗದಿಂದ ಬಳಲುತ್ತಿರುವ ವಿದ್ಯಾರ್ಥಿನಿಯೊಬ್ಬಳು ಬೆಂಗಳೂರಿನ ಕಾವೇರಿಪುರದ ಆರ್.ಎ.ಎಸ್ ಕಾನ್ವೆಂಟ್ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆದಿದ್ದಾಳೆ. ಮೊದಲ ಪರೀಕ್ಷೆ ಬರೆದು ಕಡಿಮೆ ಅಂಕಗಳು ಬರಬಹುದೆಂಬ ಭೀತಿಯಿಂದ ಅಜ್ಜಿಗೆ ತಂದಿದ್ದ ಮಾತ್ರೆಗಳನ್ನು ನುಂಗಿ ಆತ್ಮಹತ್ಯೆಗೆ ಯತ್ನಿಸಿದ್ದ ಶಿವಮೊಗ್ಗ ಜಿಲ್ಲೆಯ ಕೆಂಚನಾಲಾ ಗ್ರಾಮದ ವಿದ್ಯಾರ್ಥಿನಿ ಗುರುವಾರದ ಪರೀಕ್ಷೆಗೆ ಹಾಜರಾಗಿದ್ದಾಳೆ. ಶಿರಸಿ ತಾಲ್ಲೂಕಿನಲ್ಲಿ ಬಸ್ ಸೌಲಭ್ಯವಿಲ್ಲದ ಗ್ರಾಮಗಳ ಮಕ್ಕಳಿಗಾಗಿ ಶಿರಸಿಯ ಮಾರಿಕಾಂಬ ಆಟೋ ಚಾಲಕರ ಮತ್ತು ಮಾಲೀಕರ ಸಂಘದಿಂದ 25 ಆಟೊ ಮತ್ತು 3 ವ್ಯಾನ್‌ಗಳ ಉಚಿತ ವ್ಯವಸ್ಥೆ ಮಾಡಿ 109 ವಿದ್ಯಾರ್ಥಿಗಳನ್ನು ಕರೆತಂದು ಮತ್ತು ಮನೆಗೆ ವಾಪಸ್ ಕಳಿಸಿ ಔದಾರ್ಯ ತೋರಿದ್ದಾರೆ' ಎಂದೂ ಸಚಿವರು ವಿವರಿಸಿದರು.

ತಂದೆಯ ಆತ್ಮಹತ್ಯೆ: ಆಘಾತದ ನಡುವೆಯೂ ಪರೀಕ್ಷೆ ಬರೆದ ವಿದ್ಯಾರ್ಥಿನಿ

ಕೆಂಭಾವಿ (ಯಾದಗಿರಿ): ಸಾಲದ ಕಾರಣಕ್ಕೆ ತಂದೆ ಕಾಲುವೆಗೆ ಹಾರಿ ಸಾವಿಗೀಡಾದ ದುಃಖದ ನಡುವೆಯೂ ವಿದ್ಯಾರ್ಥಿನಿ ಬಿಂದು ದೇಶಪಾಂಡೆ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆದಿದ್ದಾರೆ.



ಬಿಂದು

ನಗನೂರ ಗ್ರಾಮದ ರೈತ ನಿರ್ಮಲರೆಡ್ಡಿ ದೇಶಪಾಂಡೆ (38) ಅವರು ಸಾಲದ ಕಾರಣಕ್ಕೆ ಬುಧವಾರ ಸಂಜೆ ನಾರಾಯಣಪುರ ಎಡದಂಡೆ ಕಾಲುವೆಗೆ ಹಾರಿದ್ದರು. ಇದನ್ನು ನೋಡಿದ್ದ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಅವರ ಶೋಧ ಕಾರ್ಯ ನಡೆದಿತ್ತು.


ಈ ದುಃಖದ ನಡುವೆಯೂ ಗುರುವಾರ ಬೆಳಿಗ್ಗೆ ಬಿಂದು ಕೆಂಭಾವಿ ಪಟ್ಟಣದ ವಿದ್ಯಾಲಕ್ಷ್ಮಿ ಶಾಲೆಯ ಪರೀಕ್ಷಾ ಕೇಂದ್ರಕ್ಕೆ ತೆರಳಿ ಪರೀಕ್ಷೆ ಬರೆದರು. ಪರೀಕ್ಷೆ ಮುಗಿಯುವ ವೇಳೆಗೆ ಕಾಲುವೆಯಲ್ಲಿ ತಂದೆಯ ಮೃತದೇಹ ಪತ್ತೆಯಾಗಿತ್ತು.

'ನಗನೂರ ಪ್ರಗತಿ ಕೃಷ್ಣಾ ಗ್ರಾಮೀಣ ಬ್ಯಾಂಕ್‌ನಲ್ಲಿ ₹ 70 ಸಾವಿರ, ಕೆಂಭಾವಿ ಎಸ್‌ಬಿಐನಲ್ಲಿ ₹ 1.50 ಲಕ್ಷ ಹಾಗೂ ಕೈಸಾಲ ಮಾಡಿಕೊಂಡಿದ್ದರು' ಎಂದು ಕೆಂಭಾವಿ ಪೊಲೀಸ್ ಠಾಣೆಯ ಪಿಎಸ್‌ಐ ಗಜಾನಂದ ಬಿರಾದಾರ ತಿಳಿಸಿದ್ದಾರೆ. ಈ ಕುರಿತು ಪ್ರಕರಣ ದಾಖಲಾಗಿದೆ.

ವಸತಿ ಯೋಜನೆಗೆ ₹8,000 ಕೋಟಿ ವೆಚ್ಚ • ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ

ಎರಡು ವರ್ಷದಲ್ಲಿ 5 ಲಕ್ಷ ಮನೆ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ



ಬಸವರಾಜ ಬೊಮ್ಮಾಯಿ

ಬೆಂಗಳೂರು: ರಾಜ್ಯದ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಮುಂದಿನ ಎರಡು ವರ್ಷಗಳಲ್ಲಿ ₹8,000 ಕೋಟಿ ವೆಚ್ಚದಲ್ಲಿ 5 ಲಕ್ಷ ಮನೆಗಳನ್ನು ನಿರ್ಮಿಸಲು ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ತೆಗೆದುಕೊಂಡಿದೆ.

ಸಚಿವ ಸಂಪುಟ ಸಭೆಯ ಬಳಿಕ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಬಸವರಾಜ ಬೊಮ್ಮಾಯಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಗ್ರಾಮಾಂತರ ಪ್ರದೇಶದಲ್ಲಿ 4 ಲಕ್ಷ ಮತ್ತು ನಗರ ಪ್ರದೇಶದಲ್ಲಿ 1 ಲಕ್ಷ ಮನೆಗಳನ್ನು ವಿವಿಧ ಯೋಜನೆಗಳಡಿ ನಿರ್ಮಿಸಲಾಗುವುದು. ಇದಲ್ಲದೆ, ಬೆಂಗಳೂರಿನಲ್ಲಿ 1 ಲಕ್ಷ ಬಹುಮಹಡಿ ಫ್ಲಾಟ್‌ಗಳ ನಿರ್ಮಾಣಕ್ಕೆ ಪೂರ್ವಭಾವಿಯಾಗಿ ಅಲ್ಲಿ ಮೂಲಸೌಕರ್ಯವನ್ನು ಕಲ್ಪಿಸಲು ₹500 ಕೋಟಿ ಬಿಡುಗಡೆಗೆ ಅನುಮೋದನೆ ನೀಡಲಾಗಿದೆ ಎಂದರು.

ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಕೇಂದ್ರ ಸರ್ಕಾರದ ಹುದ್ದೆಗಳು ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶಕ್ಕಾಗಿ ಶೇ 10 ರಷ್ಟು ಮೀಸಲಾತಿ ಸೌಲಭ್ಯ ಒದಗಿಸುವ ಸಂಬಂಧ ಪರಿಷ್ಕೃತ ಆದೇಶ ಹೊರಡಿಸಲು ಒಪ್ಪಿಗೆ ನೀಡಲಾಗಿದೆ. ಇದರಲ್ಲಿ ಎಲ್ಲ ಅರ್ಹ ಜಾತಿಗಳನ್ನೂ ಪಟ್ಟಿಗೆ ಸೇರಿಸಲು ಒಪ್ಪಿಗೆ ನೀಡಲಾಗಿದೆ. ವಾರ್ಷಿಕ ಆದಾಯ ₹ 8 ಲಕ್ಷ ಗಳಿಗೂ ಕಡಿಮೆ ಇರುವ ಕುಟುಂಬಗಳಿಗೆ ಇದು ಅನ್ವಯವಾಗುತ್ತದೆ. ಆದಾಯ ಮತ್ತು ಸ್ವತ್ತು ಪ್ರಮಾಣ ಪತ್ರ ಒದಗಿಸಲು ಪರಿಷ್ಕೃತ ಆದೇಶ ನೆರವಾಗಲಿದೆ ಎಂದು ಹೇಳಿದರು.

ನಿಯೋಜನೆ ಮೇಲೆ ವಿವಿಧ ಇಲಾಖೆಗಳಿಗೆ ಹೋಗಿರುವ 43 ತಹಶೀಲ್ದಾರ್‌ಗಳನ್ನು ಮಾತ್ರ ಇಲಾಖೆಗೆ ಕರೆಸಿಕೊಳ್ಳಲು ಕಂದಾಯ ಇಲಾಖೆಗೆ ಅನುಮತಿ ನೀಡಲಾಗಿದೆ ಎಂದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ನಗರಾಭಿವೃದ್ಧಿ ಇಲಾಖೆಗಳ ಯೋಜನೆಗಳ ಖರ್ಚು ವೆಚ್ಚಗಳ ಮೇಲ್ವಿಚಾರಣೆ ನೋಡಿಕೊಳ್ಳಲು ಪ್ರತ್ಯೇಕ ಪ್ರಾಧಿಕಾರಗಳನ್ನು ರಚಿಸಲು ತೀರ್ಮಾನಿಸಲಾಗಿದೆ. ಖರ್ಚು ವೆಚ್ಚಗಳ ಆಡಿಟ್ ಅನ್ನು ಲೆಕ್ಕಪತ್ರ ಇಲಾಖೆಯೇ ಮಾಡಲಿದೆ ಎಂದು ಬೊಮ್ಮಾಯಿ ವಿವರಿಸಿದರು.

- ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕಿನ ಧರ್ಮಪುರ ಮತ್ತು ಪ್ರದೇಶಗಳಿಗೆ ಕುಡಿಯುವ ನೀರು ಪೂರೈಕೆಗೆ ವೇದಾವತಿ ನದಿಯಿಂದ ಕೆರೆಗಳನ್ನು ತುಂಬಿಸುವ ₹90 ಕೋಟಿ ಮೊತ್ತದ ಕಾಮಗಾರಿಗೆ ಒಪ್ಪಿಗೆ ನೀಡಲಾಗಿದೆ.
- ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲ್ಲೂಕು ಬೇಡರೆಡ್ಡಿಹಳ್ಳಿಯಲ್ಲಿ ₹10.56 ಕೋಟಿ ವೆಚ್ಚದಲ್ಲಿ ಪರಿಶಿಷ್ಟ ವರ್ಗದ ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಯ ನಿರ್ಮಾಣಕ್ಕೆ ಒಪ್ಪಿಗೆ.
- ಹುಬ್ಬಳ್ಳಿ– ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಗೆ ಬರುವ ಗಬ್ಬೂರು ಹಾಗೂ ಅಯೋಧ್ಯ ಗ್ರಾಮಗಳಲ್ಲಿ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕವನ್ನು ಸ್ಥಾಪಿಸಲು 14 ಎಕರೆ ಜಮೀನು ನೀಡಲು ಒಪ್ಪಿಗೆ. ಎನ್‌ಟಿಪಿಸಿಯ ವಿದ್ಯುತ್ ವ್ಯಾಪಾರ್ ನಿಗಮ್ ಲಿಮಿಟೆಡ್‌ಗೆ 30 ವರ್ಷಗಳ ಅವಧಿಗೆ ಉಚಿತವಾಗಿ ಲೀಸ್ ಆಧಾರದಲ್ಲಿ ಗುತ್ತಿಗೆ ನೀಡಲಾಗುವುದು.
- ಬೆಂಗಳೂರು ಜಲಮಂಡಳಿಯ ಕೋರಮಂಗಲ ಮತ್ತು ಚೆಲ್ಲಘಟ್ಟ ಕಣಿವೆಯಲ್ಲಿರುವ 2.48 ಕೋಟಿ ಲೀಟರ್ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ಉನ್ನತೀಕರಿಸುವ ₹718 ಕೋಟಿಗಳ ವಿಸ್ತೃತ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ.
- ಕೊಪ್ಪಳ ಜಿಲ್ಲೆ ಹಿರೇಹಳ್ಳ ಯೋಜನೆಯ ₹507 ಕೋಟಿಗಳ ಪರಿಷ್ಕೃತ ಅಂದಾಜು ಮೊತ್ತಕ್ಕೆ ಘಟನೋತ್ತರ ಅನುಮೋದನೆ.
- ಬೆಳಗಾವಿ ಜಿಲ್ಲೆ ರಾಮದುರ್ಗ ತಾಲ್ಲೂಕಿನ ಪ್ರವಾಹ ಪೀಡಿತ ಹಂಪಿಹೊಳಿ ಗ್ರಾಮದಲ್ಲಿ ಮಲಪ್ರಭಾ ನದಿಗೆ ತಡೆಗೋಡೆ ನಿರ್ಮಾಣ ಕಾಮಗಾರಿಗೆ ₹126 ಕೋಟಿ ನೀಡಲು ಒಪ್ಪಿಗೆ

ಶಿವಮೊಗ್ಗಕ್ಕೆ ಕೊಡುಗೆ

ಶಿವಮೊಗ್ಗದಲ್ಲಿ ಆಯುಷ್ ವಿಶ್ವವಿದ್ಯಾಲಯ ಸ್ಥಾಪನೆಯ ವಿಧೇಯಕಕ್ಕೆ ಒಪ್ಪಿಗೆ, ಕ್ಯಾನ್ಸರ್ ಕೇಂದ್ರ ಸ್ಥಾಪನೆಗೆ ₹50 ಕೋಟಿ ನೀಡಲು ಒಪ್ಪಿಗೆ ನೀಡಲಾಗಿದೆ. ಅಲ್ಲದೇ, ಶಿವಮೊಗ್ಗ ತಾಲ್ಲೂಕಿನಲ್ಲಿ ಖಾಸಗಿ ಸಂಸ್ಥೆಯೊಂದಕ್ಕೆ ಗೋಶಾಲೆ ನಿರ್ಮಾಣಕ್ಕೆ 9.3 ಎಕರೆ ಜಮೀನು ನೀಡಲು ಮತ್ತು ಅಕ್ರಮವಾಗಿ ನಿರ್ಮಿಸಿದ್ದ ಅಟಲ್ ಬಡಾವಣೆಯನ್ನು ಸಕ್ರಮಗೊಳಿಸಲು ತೀರ್ಮಾನಿಸಲಾಗಿದೆ.

₹770 ಕೋಟಿ ವೆಚ್ಚದಲ್ಲಿ ಕೃಷಿ ತಂತ್ರಜ್ಞಾನ ಆವಿಷ್ಕಾರ ಕೇಂದ್ರಗಳು

ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳಲ್ಲಿ ₹770 ಕೋಟಿ ವೆಚ್ಚದಲ್ಲಿ ಅತ್ಯಾಧುನಿಕ ಕೃಷಿ ತಂತ್ರಜ್ಞಾನ ಆವಿಷ್ಕಾರ ಮತ್ತು ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ ಎಂದು ಸಚಿವ ಬೊಮ್ಮಾಯಿ ಹೇಳಿದರು.

ಇದರ ಅನುಷ್ಠಾನದ ಸಂಪೂರ್ಣ ಹೊಣೆಗಾರಿಕೆ ಹೆಕ್ಸಾಗನ್ ಮ್ಯಾನ್ಯುಫ್ಯಾಕ್ಚರಿಂಗ್ ಇಂಟೆಲಿಜೆನ್ಸ್ ಇಂಡಿಯಾ ಕಂಪನಿಯದು. ಪ್ರತಿಯೊಂದು ಕೇಂದ್ರಕ್ಕೆ ₹110 ಕೋಟಿ ಹೂಡಿಕೆ ಮಾಡಲಾಗುವುದು ಎಂದು ಹೇಳಿದರು.

ಒಟ್ಟು ಏಳು ಕೃಷಿ ವಿಶ್ವವಿದ್ಯಾಲಯಗಳಲ್ಲಿ ಈ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಇಲ್ಲಿ ಡ್ರೋನ್ ಲ್ಯಾಬ್, ಅಗ್ರಿ ಲ್ಯಾಬ್ ಸೇರಿ ಕೃಷಿಗೆ ಸಂಬಂಧಿಸಿದಂತೆ ವೈವಿಧ್ಯ ಆವಿಷ್ಕಾರ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಬೊಮ್ಮಾಯಿ ತಿಳಿಸಿದರು.

ಅಲ್ಲದೆ, ಮಣ್ಣಿನಲ್ಲಿ ಸಾವಯವ ಇಂಗಾಲ ಹೆಚ್ಚಿಸುವ ಅಭಿಯಾನ ಯೋಜನೆ ಐದು ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ. ಇದಕ್ಕೆ ₹75 ಕೋಟಿ ನಿಗದಿ ಮಾಡಲಾಗಿದೆ ಎಂದರು.

ಸರ್ಕಾರಿ ನೌಕರರಿಗೆ ಆರೋಗ್ಯ ಸಂಜೀವಿನಿ

ರಾಜ್ಯ ಸರ್ಕಾರಿ ನೌಕರರಿಗೆ ಖಾಸಗಿ ಆಸ್ಪತ್ರೆಗಳಲ್ಲಿ ನಗದು ರಹಿತ ಚಿಕಿತ್ಸೆ ನೀಡುವ ಯೋಜನೆಗೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. ಇದರಿಂದ ಸರ್ಕಾರಿ ನೌಕರರು ಮತ್ತು ಅವರ ಅವಲಂಬಿತ ಕುಟುಂಬಗಳ ಸದಸ್ಯರೂ ಸೇರಿ ಒಟ್ಟು 25 ಲಕ್ಷ ಸದಸ್ಯರಿಗೆ ಇದರ ಪ್ರಯೋಜನ ಸಿಗಲಿದೆ. ಇದಕ್ಕಾಗಿ ರಾಜ್ಯ ಸರ್ಕಾರ ವರ್ಷಕ್ಕೆ ₹250 ಕೋಟಿ ನೀಡಲಿದೆ ಎಂದು ಬೊಮ್ಮಾಯಿ ಹೇಳಿದರು.

₹45 ಲಕ್ಷ ಮೌಲ್ಯದವರೆಗಿನ ಫ್ಲಾಟ್ ನೋಂದಣಿ ಶುಲ್ಕ ಶೇ 3ಕ್ಕೆ ಇಳಿಕೆ

ಅಪಾರ್ಟ್‌ಮೆಂಟ್ ಗಳಲ್ಲಿ ₹35 ರಿಂದ ₹45 ಲಕ್ಷ ಮೌಲ್ಯದ ಫ್ಲಾಟ್‌ಗಳ ನೋಂದಣಿ ವೇಳೆ ಪಾವತಿಸಬೇಕಾದ ನೋಂದಣಿ ಮತ್ತು ಮುದ್ರಾಂಕ ಶುಲ್ಕವನ್ನು ಶೇ 5 ರಿಂದ 3 ಕ್ಕೆ ಇಳಿಸುವ ಪ್ರಸ್ತಾವನೆಗೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಈ ದರ ಇಳಿಸಿ, ಮಧ್ಯಮ ವರ್ಗದವರಿಗೆ ಅನುಕೂಲ ಮಾಡಿಕೊಡುವ ಬಗ್ಗೆ ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿತ್ತು. ಈಗ ಸರ್ಕಾರ ನಿರ್ಧಾರ ಕೈಗೊಂಡಿದೆ.

'ಮಾರ್ಗಸೂಚಿ ದರವನ್ನು ಇಳಿಸಬೇಕು ಎಂಬ ಸಲಹೆ ಬಂದಿದ್ದು, ಅದನ್ನು ಪರಿಶೀಲನಾ ಸಮಿತಿಗೆ ಒಪ್ಪಿಸಲಾಗಿದೆ' ಎಂದು ಸಚಿವ ಬೊಮ್ಮಾಯಿ ಹೇಳಿದರು.

ವಸ್ತ್ರಸಂಹಿತೆ ಸಭ್ಯತೆಯ ಎಲ್ಲೆ ಮೀರದಿರಲಿ

ಬೆಂಗಳೂರು: ಶಿಕ್ಷಕಿಯರು ಗೌರವಾರ್ಹವಾದ ಉಡುಗೆ ಧರಿಸಿ ಪಾಠ ಮಾಡಿದರೆ ಸಾಕು. ಯಾವುದೇ ಮತ, ಧರ್ಮ, ಪಂಥ ಆಚಾರ ವಿಚಾರಕ್ಕೆ ಇದನ್ನು ತಾಳೆ ಹಾಕಬಾರದು ಎಂಬುದು 'ಪ್ರಜಾವಾಣಿ ಫೇಸ್‌ಬುಕ್ ಲೈವ್' ಸಂವಾದದಲ್ಲಿ ಚರ್ಚೆಯಾಯಿತು.

ಮಕ್ಕಳಿಗೆ ಬೋಧಿಸುವ ಶಿಕ್ಷಕಿಯರು ಅವರಿಗೆ ಮಾರ್ಗದರ್ಶಕಿಯರೂ ಆಗಿರುತ್ತಾರೆ. ಹಾಗಾಗಿ, ಮಕ್ಕಳು ಶಿಕ್ಷಕಿಯರನ್ನು ನೋಡಿ ಕಲಿಯುವುದು ಇದೆ. ಈ ಹಿನ್ನೆಲೆಯಲ್ಲಿ ಶಿಕ್ಷಕಿಯರು ಸಭ್ಯತೆಯ ಎಲ್ಲೆ ಮೀರಿ ಉಡುಗೆ ಧರಿಸದಿರುವುದು ಸೂಕ್ತ ಅನ್ನುವ ಅಭಿಪ್ರಾಯ ಅತಿಥಿಗಳಿಂದ ಕೇಳಿಬಂತು.

'ಶಿಕ್ಷಕಿಯರಿಗೆ ವಸ್ತ್ರಸಂಹಿತೆ ಬೇಕೆ? ಎಂಬುದರ ಕುರಿತು 'ಪ್ರಜಾವಾಣಿ' ಗುರುವಾರ ಆಯೋಜಿಸಿದ್ದ ಈ ಸಂವಾದದಲ್ಲಿ ಅತಿಥಿಗಳು ಹಂಚಿಕೊಂಡ ಅಭಿಪ್ರಾಯಗಳ ಸಂಕ್ಷಿಪ್ತ ರೂಪ ಇಲ್ಲಿದೆ.

ಪ್ರಜಾವಾಣಿ ಸಂವಾದ

ವಸ್ತ್ರಸಂಹಿತೆಗೆ ಪುರುಷ–ಮಹಿಳೆ ತಾರತಮ್ಯ ಬೇಡ



ಹಿಂದಿನಿಂದಲೂ ಒಪ್ಪಿತವಾದದ್ದು ನಡೆದುಕೊಂಡು ಬಂದಿರಬೇಕಾದರೆ ಅದನ್ನು ಮತ್ತೆ ಚರ್ಚಿಸುವ ಅಗತ್ಯವಿದೆಯೇ? ನೇರವಾಗಿ ಸ್ಪಷ್ಟವಾಗಿ ಹೇಳುವುದಾದರೆ ಶಿಕ್ಷಕರು ಹೇಗೆ ಪಾಠ ಮಾಡುತ್ತಾರೆ. ಅವರ ಪಾಠ ಎಷ್ಟರಮಟ್ಟಿಗೆ ತಲುಪುತ್ತದೆ ಅನ್ನೋದಷ್ಟೇ ಮುಖ್ಯ ಹೊರತು ಅವರು ಧರಿಸುವ ಉಡುಪು ಅಲ್ಲ.

ಆದರೆ, ಪುಟ್ಟ ಮಕ್ಕಳು, ಹದಿಹರೆಯದವರು ಇದ್ದಾಗ ಶಿಸ್ತಿನ ಕಾರಣಕ್ಕಾಗಿ ಸಮವಸ್ತ್ರ ರೂಪಿಸುವುದು ಉಚಿತ. ವಸ್ತ್ರಸಂಹಿತೆ ರೂಪಿಸುವಾಗ ಪುರುಷ-ಮಹಿಳೆ ಅನ್ನುವ ತಾರತಮ್ಯ ಬೇಡ. ಸಭ್ಯತೆ ಎಂದು ಏನನ್ನು ಪರಿಗಣಿಸಲಾಗಿದೆಯೋ ಅಂಥ ಉಡುಪು ಧರಿಸಿದರೆ ಸಾಕು. ಯಾವುದೇ ಮತ, ಧರ್ಮ, ಪಂಥ ಆಚಾರ ವಿಚಾರಕ್ಕೆ ಇದನ್ನು ತಾಳೆ ಹಾಕಬಾರದು. ಯಾವುದೇ ಶಿಕ್ಷಣ ಸಂಸ್ಥೆಗೆ ಒಂದು ಧೋರಣೆ ಇರುತ್ತದೆ. ಅದನ್ನು ಅನುಸರಿಸಲು ತನ್ನ ಸಿಬ್ಬಂದಿಗೆ ವಸ್ತ್ರಸಂಹಿತೆ ರೂಪಿಸಿದರೆ ಅದನ್ನು ಒಪ್ಪೋಣ. ಹಾಗಂತ ಅದು ಆದೇಶವಾಗಬಾರದು. ಮುಖ್ಯವಾಗಿ ಶಿಕ್ಷಣದ ಕಡೆಗೆ ಮಕ್ಕಳನ್ನು ಸೆಳೆಯುವ ಕೆಲಸ ಮಾಡಬೇಕು.

–**ಅಪರ್ಣಾ ವಸ್ತಾರೆ,** ನಟಿ, ನಿರೂಪಕಿ

ಮಕ್ಕಳಿಗೆ ಪರಿಚಿತ ಉಡುಪು ವಸ್ತ್ರಸಂಹಿತೆಯಾದರೆ ತಪ್ಪಿಲ್ಲ



'ಮಗು ಮನೆಯಲ್ಲಿ ಬೆಳೆದಿರುವ ಸಹಜ ವಾತಾವರಣವನ್ನೇ ಶಾಲೆಗಳಲ್ಲೂ ಕೊಡಿ' ಎಂದು ಎನ್‌ಇಪಿ 2020 ಒತ್ತಿ ಹೇಳಿದೆ. 'ಆಟಿಕೆಗಳು, ಶಿಕ್ಷಣಕ್ಕೆ ಬಳಸುವ ಸಾಧನಗಳು (ಟೀಚಿಂಗ್ ಟೂಲ್ಸ್) ಸ್ಥಳೀಯ ಸಂಸ್ಕೃತಿಯನ್ನು ಪ್ರತಿನಿಧಿಸುವಂತಿರಬೇಕು' ಎಂದೂ ತಿಳಿಸಿದೆ. 2017ರ ಸರ್ವೆ ಪ್ರಕಾರ ಗ್ರಾಮೀಣ ಮಹಿಳೆಯರು ಶೇ 85ರಷ್ಟು, ನಗರಗಳಲ್ಲಿ ಶೇ 75ರಷ್ಟು ಮಹಿಳೆಯರು ಸೀರೆ ಉಡುತ್ತಾರೆ. ಯಾವುದೇ ಹವಾಮಾನ, ವಾತಾವರಣಕ್ಕೆ ಒಗ್ಗುವ ಉಡುಪು ಸೀರೆ. ಹಾಗಾಗಿ, ಮಕ್ಕಳಿಗೆ ಪರಿಚಿತವಾಗಿರುವ ಉಡುಪು ಸೀರೆ ಆಗಿರುವುದರಿಂದ ಶಿಕ್ಷಕರಿಗೆ ಸೀರೆಯ ವಸ್ತ್ರಸಂಹಿತೆ ನೀಡಲಾಗಿದೆ.

ಐದು ಸಾವಿರ ವರ್ಷಗಳಿಂದ ಸೀರೆ ಬದುಕಿದೆ ಎಂದರೆ ಅದು ಬಲವಂತವಾಗಿ ಹೇರಿರುವ ಸಂಪ್ರದಾಯವಲ್ಲ. ಅದು ಆರಾಮದಾಯಕ ಆಗಿದ್ದರಿಂದಲೇ ಜನಪ್ರಿಯತೆ ಗಳಿಸಿರಬಹುದು. ವಸ್ತ್ರಸಂಹಿತೆಯನ್ನು ಡಿಕ್ಟೇಟ್ ಮಾಡುವುದು ಸಮಾಜ. ಹಾಗಂತ ಸೀರೆ ಉಟ್ಟುಕೊಳ್ಳಲು ಶಾಸನ ಬರೆಯಬೇಕು ಅಂತಲ್ಲ. ಕಲಿಕೆ ತಾಯಿಂದ ಮಾತ್ರ ಸಾಧ್ಯವಾಗುವಂಥದ್ದು. ಹಾಗಾಗಿ, ತಾಯಿ ಧರಿಸುವ ಉಡುಪನ್ನು ಶಿಕ್ಷಕಿಯರೂ ಧರಿಸಿದಾಗ ಮಕ್ಕಳಿಗೆ ಮನೆಯ ವಾತಾವರಣ ದೊರೆತು ಬೇಗ ಕಲಿಯುತ್ತಾರೆ. ಮೈಕಾಣದಂತೆ ಸೀರೆ ಉಡುವುದನ್ನೂ ಕೆಲವು ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಕಿಯರಿಗೆ ತರಬೇತಿ ಅವಧಿಯಲ್ಲಿ ಕಲಿಸಲಾಗಿರುತ್ತದೆ.

ಧರಿಸುವ ವಸ್ತ್ರ ಗಾಂಭೀರ್ಯತೆ ಮತ್ತು ಶಿಸ್ತನ್ನು ಸೂಚಿಸುತ್ತದೆ. ನಮ್ಮ ಸಂಸ್ಕೃತಿ, ದೇಶದ ಪರಂಪರೆಯನ್ನು ಮುನ್ನಡೆಸಿಕೊಂಡು ಹೋಗುವ ಜವಾಬ್ದಾರಿ ಶಿಕ್ಷಕರ ಮೇಲಿದೆ.

ಕರುಣಾ ಕೆ. ಸಿಂಹ, ಪ್ರಾಧ್ಯಾಪಕಿ, ಶಿಕ್ಷಣ ಸಂಶೋಧಕಿ

ಶಿಕ್ಷಕರ ವ್ಯಕ್ತಿತ್ವ ಮುಖ್ಯ, ವಸ್ತ್ರವಲ್ಲ...



ಶಿಕ್ಷಕರು ಧರಿಸುವ ಉಡುಪಿಗಿಂತ ಅವರ ವ್ಯಕ್ತಿತ್ವವೇ ಪರಿಣಾಮ ಬೀರುತ್ತದೆ ಎಂಬುದು ಸಮೀಕ್ಷೆಯೊಂದರಿಂದ ತಿಳಿದು ಬಂದಿದೆ. 2017ರಲ್ಲಿ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ಕಳಿಸಿದ್ದ ಅಧಿಸೂಚನೆಯಲ್ಲಿ ಪ್ರತಿ ಪ್ರಾಧ್ಯಾಪಕರಿಗೆ ಡ್ರೆಸ್ ಕೋಡ್ ಮತ್ತು ನೇಮ್ ಪ್ಲೇಟ್ ಹಾಕಬೇಕು. ವಿದ್ಯಾರ್ಥಿಗಳ ಅಭಿಪ್ರಾಯ ಕೇಳಿ ಪ್ರಾಂಶುಪಾಲರು ವರದಿ ಕಳಿಸಬೇಕು ಎಂದು ಸೂಚಿಸಲಾಗಿತ್ತು. ಆದರೆ, ಇದಕ್ಕೆ ವಿರೋಧ ವ್ಯಕ್ತವಾಗಿದ್ದರಿಂದ ಕೈಬಿಡಲಾಯಿತು.

ಸೀರೆ ಉಟ್ಟರೆ ಮೈ ಕಾಣುತ್ತೆ ಅನ್ನುವ ಕಾರಣಕ್ಕಾಗಿಯೇ ನನಗೆ ಗೊತ್ತಿರುವ ಎಷ್ಟೋ ಹೆಣ್ಣುಮಕ್ಕಳು ಬಿ.ಇಡಿ ಮಾಡಲೇ ಇಲ್ಲ. ಥ್ರೋಬಾಲ್, ವಾಲಿಬಾಲ್ ಆಟ ಸೀರೆಯಲ್ಲಿ ಆಡಲು ಸಾಧ್ಯವೇ? ಕೊನೆಯದಾಗಿ ಇದು ದೇಶದ ಸಂಸ್ಕೃತಿ ಕಡೆಗೆ ವಿಷಯಾಂತರವಾಗುತ್ತೆ. ಸಂಸ್ಕೃತಿಯನ್ನು ಸೀರೆಯಲ್ಲಿ ಮಾತ್ರ ಗುರುತಿಸಲು ಸಾಧ್ಯವೇ?

ಶಿಕ್ಷಕರಲ್ಲಿ ಗುಂಪುಗಾರಿಕೆ ಬರಬಾರದು ಅನ್ನುವ ಕಾರಣಕ್ಕಾಗಿ ವಸ್ತ್ರಸಂಹಿತೆ ರೂಪಿಸುವುದು ಅಗತ್ಯ. ಯಾವುದೇ ಡ್ರೆಸ್ ಕೋಡ್ ಆದರೆ, ಅದು ಸಭ್ಯತೆಯ ಎಲ್ಲೆ ಮೀರದಿರಲಿ ಅನ್ನುವ ಎಚ್ಚರಿಕೆ ಇರಬೇಕು. ಒಬ್ಬರಿಗೆ ಸಭ್ಯತೆ ಅಂತ ಕಾಣಿಸಿದ್ದು ಮತ್ತೊಬ್ಬರಿಗೆ ಸಭ್ಯತೆ ಅನ್ನಿಸದಿರಬಹುದು.

ಝೂಹರಾ ಅಬ್ಬಾಸ್, ಪ್ರಿನ್ಸಿಪಾಲ್, ಶಿಕ್ಷಣ ತಜ್ಞೆ

ಚರ್ಚೆ ಬಿಟ್ಟು ಶಿಕ್ಷಣದ ಕಡೆಗೆ ಗಮನ ಕೊಡಿ



ದೇಶ ಅಂದರೆ ಬರೀ ಸಂಸ್ಕೃತಿ ಅಲ್ಲ. ದೇಶ ಅಂದರೆ ಜನರು. ಮಕ್ಕಳಿಗೆ ಬೇಕಿರುವುದು ಗುಣಮಟ್ಟದ ಶಿಕ್ಷಣವೇ ಹೊರತು ಶಿಕ್ಷಕರು ಧರಿಸುವ ಉಡುಪು ಅಲ್ಲ. ಈಗ ಕಾಲ ಬದಲಾಗಿದೆ. ರಾಕೆಟ್ ಉಡಾಯಿಸುವುದರಿಂದ ಹಿಡಿದು ಸೇನೆಯ ತನಕ ಹಲವು ಕ್ಷೇತ್ರಗಳಲ್ಲಿ ಹೆಣ್ಣುಮಕ್ಕಳು ಸರಿಸಮಾನವಾಗಿ ಹೆಜ್ಜೆ ಹಾಕುತ್ತಿದ್ದಾರೆ. ಆದರೆ ನಾವಿನ್ನೂ ಇಲ್ಲಿ ಚೂಡಿದಾರ್, ಸೀರೆ ಅನ್ನುವ ಚರ್ಚೆಯಲ್ಲಿದ್ದೇವೆ.

ಈಗಿನ ಶಿಕ್ಷಕಿಯರು ಮಕ್ಕಳಿಗೆ ಆಟದೊಂದಿಗೆ ಪಾಠ ಹೇಳಿಕೊಡಬೇಕು. ಸೀರೆ ಉಟ್ಟರೆ ಇವೆಲ್ಲ ಮಾಡಲು ಸಾಧ್ಯವೇ? ಶಿಕ್ಷಕರು ಪಂಚೆ ಕಟ್ಟಿಕೊಂಡು ಪಾಠ ಮಾಡಲಾಗುವುದೇ? ಸಮಾಜದ ಅಭಿವೃದ್ಧಿ ಕಡೆಗೆ ಆಲೋಚಿಸುವ ಬದಲು ಜನರ ದಿಕ್ಕು ತಪ್ಪಿಸುವ ಸಲುವಾಗಿ ಇಂಥ ಚರ್ಚೆಗಳನ್ನು ಹುಟ್ಟು ಹಾಕಲಾಗುತ್ತಿದೆ. ವಸ್ತ್ರಸಂಹಿತೆ ದೊಡ್ಡ ಪ್ರಶ್ನೆಯಲ್ಲ. ಸಂಸ್ಥೆಯವರು ತಮಗೆ ಬೇಕಾದ ಉಡುಪು ನಿಯಮ ರೂಪಿಸಿ ಕೆಲಸ ಮಾಡಬೇಕು ಅಷ್ಟೇ. ಆರೋಗ್ಯ, ಶಿಕ್ಷಣದ ಮೂಲಸೌಕರ್ಯಗಳು ಚರ್ಚೆಯಾಗಬೇಕು. ಶಿಕ್ಷಕ ಅಥವಾ ಶಿಕ್ಷಕಿಯರಿಗೆ ಅನುಕೂಲವಾಗುವಂಥ ಉಡುಪು ಧರಿಸಲು ಅವಕಾಶ ಕೊಡಬೇಕು.

ಸೀರೆ ಅನ್ನುವಂಥದ್ದು ಬಹುತೇಕ ಹೆಣ್ಣುಮಕ್ಕಳಿಗೆ ಕಂಫರ್ಟ್ ಅಲ್ಲ. ಸೀರೆಗಿಂತ ಚೂಡಿದಾರ್, ಪ್ಯಾಂಟು ಶರ್ಟು, ಕೋಟ್ ಬಹುತೇಕ ಹೆಣ್ಣುಮಕ್ಕಳಿಗೆ ಆರಾಮದಾಯಕ ಅನ್ನುವುದನ್ನು ಅನುಭವದಿಂದ ಕಂಡುಕೊಂಡಿರುವೆ.

-**ವಿ. ಗೀತಾ,** ರಾಜ್ಯ ಉಪಾಧ್ಯಕ್ಷೆ, ಜನವಾದಿ ಮಹಿಳಾ ಸಂಘಟನೆ

ವಿಡಿಯೊಗಾಗಿ: https://www.facebook.com/prajavani.net/videos/533106057874690/

'ಡೆಲ್ಟಾ ರೂಪಾಂತರ ತಳಿ ಪ್ರಭಾವ ಕಡಿಮೆಯಾಗಿಲ್ಲ'

ನವದೆಹಲಿ (ಪಿಟಿಐ): ಡೆಲ್ಟಾ ರೂಪಾಂತರ ತಳಿ ಪ್ರಭಾವ ಕಡಿಮೆಯಾಗಿಲ್ಲ. ದೇಶದಲ್ಲಿ ಪತ್ತೆಯಾಗುತ್ತಿರುವ ಹೊಸ ಪ್ರಕರಣಗಳಲ್ಲಿ ಈ ತಳಿ ಇರುವುದು ಕಂಡು ಬಂದಿದೆ ಎಂದು 'ಇಂಡಿಯನ್ ಸಾರ್ಸ್‌ಕೋವ್-2 ಜೆನೊಮಿಕ್ಸ್ ಕಾನ್ಸೋರ್ಟಿಯಮ್' (ಐಎನ್‌ಎಸ್‌ಎಸಿಒಜಿ) ತಿಳಿಸಿದೆ.

ಇತರ ರೂಪಾಂತರ ತಳಿಗಳ ಪ್ರಕರಣಗಳು ಕಡಿಮೆಯಾಗುತ್ತಿವೆ. ಆದರೆ, ಡೆಲ್ಟಾ ತಳಿಯ ಪ್ರಾಬಲ್ಯ ಇನ್ನೂ ಮುಂದುವರಿದಿದೆ. ದಕ್ಷಿಣ ಏಷ್ಯಾ ಸೇರಿದಂತೆಹಲವುರಾಷ್ಟ್ರಗಳಲ್ಲಿಪತ್ತೆಯಾಗಿರುವ ಹೊಸ ಪ್ರಕರಣಗಳಲ್ಲಿ ಈ ರೂಪಾಂತರ ತಳಿ ಪತ್ತೆಯಾಗಿದ್ದು, ವೇಗವಾಗಿ ಹಬ್ಬುತ್ತಿದೆ ಎಂದು ಎಚ್ಚರಿಸಿದೆ.

ಅತಿ ಹೆಚ್ಚು ಲಸಿಕೆ ಪಡೆದ ಜನರು ಇರುವ ಪ್ರದೇಶಗಳಲ್ಲಿ ಮತ್ತು ವ್ಯವಸ್ಥಿತವಾದ ಉತ್ತಮ ಸಾರ್ವಜನಿಕ ಆರೋಗ್ಯ ಸೌಲಭ್ಯಗಳನ್ನು ಹೊಂದಿರುವ ದೇಶಗಳಲ್ಲಿ ಈ ತಳಿಯ ನಿಯಂತ್ರಣವಾಗುತ್ತಿದೆ ಎಂದು ವಿವರಿಸಿದೆ.

ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ (ಐಸಿಎಂಆರ್) ನಡೆಸಿದ ಅಧ್ಯಯನದ ಅನ್ವಯ ಲಸಿಕೆ ಪಡೆದವರ ಮೇಲೆ ಡೆಲ್ಟಾ ತಳಿಯು ಕಡಿಮೆ ಪರಿಣಾಮ ಬೀರಿದ್ದು, ಶೇಕಡ 9.8ರಷ್ಟು ಪ್ರಕರಣಗಳಲ್ಲಿ ಮಾತ್ರ ಆಸ್ಪತ್ರೆಗೆ ದಾಖಲಾಗಿದ್ದಾರೆ. ಮರಣ ಪ್ರಮಾಣವು ಶೇಕಡ 0.4ರಷ್ಟು ಮಾತ್ರ ಇದೆ ಎಂದು ಐಎನ್‌ಎಸ್‌ಎಸಿಒಜಿ ತಿಳಿಸಿದೆ.

ಶೇ 75ರಷ್ಟು ಮಾದರಿಗಳಲ್ಲಿ ಹೊಸ ತಳಿ

ವಿಶ್ವಸಂಸ್ಥೆ/ಜಿನಿವಾ (ಪಿಟಿಐ): ಭಾರತ, ಚೀನಾ, ರಷ್ಯಾ, ಇಸ್ರೇಲ್ ಮತ್ತು ಬ್ರಿಟನ್ ಸೇರಿದಂತೆ ಹಲವು ರಾಷ್ಟ್ರಗಳಲ್ಲಿ ಕಳೆದ ನಾಲ್ಕು ವಾರಗಳಲ್ಲಿ ಸಂಗ್ರಹಿಸಿರುವ ಮಾದರಿಗಳಲ್ಲಿ ಶೇಕಡ 75ರಷ್ಟು ಡೆಲ್ಟಾ ತಳಿ ಪತ್ತೆಯಾಗಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ತಿಳಿಸಿದೆ.

ಲಸಿಕಾ ಅಭಿಯಾನ ವ್ಯಾಪಕವಾಗಿ ನಡೆಯುತ್ತಿದ್ದರೂ ಹಲವು ರಾಷ್ಟ್ರಗಳಲ್ಲಿ ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿವೆ. ಇಂಡೊನೇಷ್ಯಾ, ಬ್ರಿಟನ್, ಬ್ರೆಜಿಲ್, ಭಾರತ ಮತ್ತು ಅಮೆರಿಕದಲ್ಲಿ ಕಳೆದ ವಾರ ಅತಿ ಹೆಚ್ಚು ಕೋವಿಡ್–19 ಪ್ರಕರಣಗಳು ಪತ್ತೆಯಾಗಿವೆ ಎಂದು ಅದು ತಿಳಿಸಿದೆ.

'ರೋಗ ನಿರೋಧಕ ಶಕ್ತಿ ಕುಂದಿಸುವ ಡೆಲ್ಟಾ'

ಲಂಡನ್: ಡೆಲ್ಟಾ ರೂಪಾಂತರ ತಳಿಯ ವಿರುದ್ಧ ಲಸಿಕೆಯು ರಕ್ಷಣೆ ಒದಗಿಸುತ್ತದೆ. ಆದರೆ, ಈ ತಳಿಯು ರೋಗ ನಿರೋಧಕ ಶಕ್ತಿಯನ್ನು ಕಡಿಮೆ ಮಾಡುತ್ತದೆ ಎಂದು ಹೊಸ ಅಧ್ಯಯನವೊಂದು ತಿಳಿಸಿದೆ.

ಫ್ರಾನ್ಸ್‌ನ ಪಾಸ್ಟೌರ್ ಸಂಸ್ಥೆ ಈ ಬಗ್ಗೆ ಅಧ್ಯಯನ ನಡೆಸಿದೆ. ಕೋವಿಡ್‌ನಿಂದ ಗುಣಮುಖರಾದ 56 ಮಂದಿಯ ರಕ್ತ ಸಂಗ್ರಹಿಸಿ ಸಂಶೋಧಕರು ಈ ಬಗ್ಗೆ ಅಧ್ಯಯನ ನಡೆಸಿದ್ದಾರೆ.

ಮಾಧ್ಯಮ ಸಂಸ್ಥೆಗಳಲ್ಲಿ ಐ.ಟಿ ಶೋಧ

'ಕೇಂದ್ರ ಸರ್ಕಾರದ ವಿರುದ್ಧ ವರದಿ' ಪ್ರಕಟಿಸಿದ ದೈನಿಕ್ ಭಾಸ್ಕರ್, ಭಾರತ್ ಸಮಾಚಾರ್ ಗುರಿ

ಪ್ರಜಾವಾಣಿ ವಾರ್ತೆ

ನವದೆಹಲಿ/ಅಹಮದಾಬಾದ್: ದೈನಿಕ್ ಭಾಸ್ಕರ್ ದಿನಪತ್ರಿಕೆ ಮತ್ತು ಭಾರತ್ ಸಮಾಚಾರ್ ಸುದ್ದಿ ವಾಹಿನಿಯನ್ನು ನಡೆಸುತ್ತಿರುವ ಸಂಸ್ಥೆಗಳಿಗೆ ಸೇರಿದ ಸ್ಥಳಗಳಲ್ಲಿ ಆದಾಯ ತೆರಿಗೆ ಇಲಾಖೆ (ಐ.ಟಿ) ಅಧಿಕಾರಿಗಳು ಗುರುವಾರ ಶೋಧ ನಡೆಸಿದ್ದಾರೆ. ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಕೋವಿಡ್ ಸಾಂಕ್ರಾಮಿಕವನ್ನು ನಿರ್ವಹಿಸಿದ ರೀತಿಯ ಬಗ್ಗೆ ವಿಮರ್ಶಾತ್ಮಕವಾದ ವರದಿಗಳನ್ನು ಈ ಎರಡೂ ಮಾಧ್ಯಮ ಸಂಸ್ಥೆಗಳು ಪ್ರಕಟಿಸಿದ್ದವು.

ತೆರಿಗೆ ವಂಚನೆ ಆರೋಪದಲ್ಲಿ ಹಲವು ಸ್ಥಳಗಳಲ್ಲಿ ಶೋಧ ನಡೆದಿದೆ. ಈ ಕಾರ್ಯಾಚರಣೆಗೆ ವಿರೋಧ ಪಕ್ಷಗಳು ಆಕ್ರೋಶದ ಪ್ರತಿಕ್ರಿಯೆ ನೀಡಿವೆ. ಇದು ಮಾಧ್ಯಮವನ್ನು ಬೆದರಿಸಿ ದಮನಿಸುವ ಪ್ರಯತ್ನ ಎಂದಿವೆ.

ಹಿಂದಿ ಮತ್ತು ಗುಜರಾತಿ ಭಾಷೆಯಲ್ಲಿ ವಿವಿಧ ರಾಜ್ಯಗಳಲ್ಲಿ ಆವೃತ್ತಿಗಳನ್ನು ಪ್ರಕಟಿಸುತ್ತಿರುವ ದೈನಿಕ್ ಭಾಸ್ಕರ್‌ನ ಭೋಪಾಲ್, ಜೈಪುರ, ಅಹಮದಾಬಾದ್, ನೋಯ್ಡಾ ಮತ್ತು ಇತರೆಡೆಗಳಲ್ಲಿರುವ ಕಚೇರಿಗಳಲ್ಲಿ ಏಕಕಾಲಕ್ಕೆ ಶೋಧ ನಡೆಸಲಾಗಿದೆ. ಸಂಸ್ಥೆಯ ಪ್ರವರ್ತಕರಿಗೆ ಸೇರಿದ ಭೋಪಾಲ್‌ನ ಕಚೇರಿಗಳಲ್ಲಿಯೂ ಶೋಧ ನಡೆದಿದೆ.

ಅಹಮದಾಬಾದ್‌ನ ದೈನಿಕ್ ಭಾಸ್ಕರ್ ಕಚೇರಿಯಲ್ಲಿ ಹತ್ತಕ್ಕೂ ಹೆಚ್ಚು ಅಧಿಕಾರಿಗಳು ಶೋಧ ನಡೆಸಿದ್ದು, ಕಚೇರಿಯನ್ನು ಮೊಹರು ಮಾಡಲಾಗಿದೆ.



ದೈನಿಕ್ ಭಾಸ್ಕರ್ ಸಮೂಹದ ಮಾಲೀಕ ಸುಧೀರ್ ಅಗರ್‌ವಾಲ್ ನಿವಾಸದಲ್ಲಿ ಆದಾಯ ತೆರಿಗೆ ಶೋಧ ನಡೆಯುತ್ತಿದ್ದಾಗ ಬಿಗಿ ಭದ್ರತೆ ಒದಗಿಸಲಾಗಿತ್ತು ಪಿಟಿಐ ಚಿತ್ರ

'ಸತ್ಯ ಬಹಿರಂಗ ಪಡಿಸಿದ್ದಕ್ಕೆ ಶೋಧ'

ಗಂಗಾ ನದಿಯಲ್ಲಿ ತೇಲಿ ಬಂದ ಹೆಣಗಳಾಗಲಿ ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ ಆಗಲಿ, ನಿಜವಾದ ಸಂಖ್ಯೆ ಯಾವುದು ಎಂಬುದನ್ನು ನಮ್ಮ ಸಮೂಹವು ಬಹಿರಂಗಪಡಿಸಿದೆ. ಅದಕ್ಕಾಗಿ ಈಗ ಸರ್ಕಾರವು ಶೋಧ ನಡೆಸಿದೆ. 'ನಾನು ಸ್ವತಂತ್ರ, ಯಾಕೆಂದರೆ ನಾನು ಭಾಸ್ಕರ. ಭಾಸ್ಕರನಿಗೆ ಓದುಗರು ಮಾತ್ರ ಮುಖ್ಯ' ಎಂದು ದೈನಿಕ್ ಭಾಸ್ಕರ್ ಸಮೂಹವು ಪ್ರತಿಕ್ರಿಯೆ ನೀಡಿದೆ.

ಗುಜರಾತ್‌ನಲ್ಲಿ ಸಂಸ್ಥೆಯು 'ದಿವ್ಯ ಭಾಸ್ಕರ್' ಎಂಬ ದಿನಪತ್ರಿಕೆಯನ್ನು ಸಂಸ್ಥೆಯು ಪ್ರಕಟಿಸುತ್ತಿದೆ.

12 ರಾಜ್ಯಗಳಲ್ಲಿ ಪತ್ರಿಕೆ, ರೇಡಿಯೊ ಕೇಂದ್ರ, ವೆಬ್ ಪೋರ್ಟಲ್‌ಗಳನ್ನು ದೈನಿಕ್ ಭಾಸ್ಕರ್ ನಡೆಸುತ್ತಿದೆ. ಒಟ್ಟು 30 ಸ್ಥಳಗಳಲ್ಲಿ ಶೋಧ ನಡೆದಿದೆ ಎಂದು ತಿಳಿದು ಬಂದಿದೆ. ಬೆಳಿಗ್ಗೆ 5.30ಕ್ಕೆ ಆರಂಭವಾದ ಕಾರ್ಯಾಚರಣೆ ಸಂಜೆಯವರೆಗೆ ಮುಂದುವರಿದಿದೆ.

ಸಂಸ್ಥೆಯು ಜವಳಿ ಮತ್ತು ಗಣಿಗಾರಿಕೆ ಚಟುವಟಿಕೆಯನ್ನೂ ನಡೆಸುತ್ತಿದೆ. ಈ ಉದ್ಯಮಗಳಿಗೆ ಸಂಬಂಧಿಸಿದ ವಹಿವಾಟಿನ ಮಾಹಿತಿಯನ್ನೂ ಕಲೆ ಹಾಕಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಮಾಧ್ಯಮ ಸಂಸ್ಥೆಗಳ ಕಚೇರಿಗಳಲ್ಲಿ ನಡೆದ ಶೋಧದ ಬಗ್ಗೆ ಆದಾಯ ತೆರಿಗೆ ಇಲಾಖೆಯು ಅಧಿಕೃತವಾಗಿ ಏನನ್ನೂ ಹೇಳಿಲ್ಲ. ಆದರೆ, ಶೋಧದ ವಿಚಾರವು ರಾಜ್ಯಸಭೆಯಲ್ಲಿ ಪ್ರಸ್ತಾಪ ಆಗಿದೆ. ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಆದಾಯ ತೆರಿಗೆ ಇಲಾಖೆಯ ನಡೆಯನ್ನು ಖಂಡಿಸಿದ್ದಾರೆ.

ಲಖನೌದ ಸುದ್ದಿ ವಾಹಿನಿ ಭಾರತ್ ಸಮಾಚಾರ್ ಕಚೇರಿ ಮತ್ತು ಪ್ರಧಾನ ಸಂಪಾದಕ ಬ್ರಿಜೇಶ್ ಮಿಶ್ರಾ, ರಾಜ್ಯ ಘಟಕದ ಮುಖ್ಯಸ್ಥ ವಿರೇಂದ್ರ ಸಿಂಗ್ ಮತ್ತು ಇತರ ಉದ್ಯೋಗಿಗಳ ಮನೆಯಲ್ಲಿಯೂ ಶೋಧ ನಡೆಸಲಾಗಿದೆ.

ನಾಯಕರ ಆಕ್ರೋಶ

ಸತ್ಯವನ್ನು ಹೊರತರುವ ಧ್ವನಿಗಳ ವಿರುದ್ಧ ಪ್ರತೀಕಾರದ ಕ್ರಮ ಇದು. ಎಲ್ಲರೂ ಒಟ್ಟಾಗಿ ಈ ನಿರಂಕುಶವಾದಿಗಳು ಯಶಸ್ವಿಯಾಗದಂತೆ ತಡೆಯೋಣ

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಯಾರೆಲ್ಲಾ ಬಿಜೆಪಿ ಸರ್ಕಾರದ ವಿರುದ್ಧ ಮಾತನಾಡುತ್ತಾರೊ ಅವರನ್ನು ಸುಮ್ಮನೆ ಬಿಡುವುದಿಲ್ಲ. ಈ ಯೋಚನೆಯೇ ಬಹಳ ಆತಂಕಕಾರಿಯಾಗಿದೆ

ಅರವಿಂದ ಕೇಜ್ರಿವಾಲ್, ದೆಹಲಿ ಮುಖ್ಯಮಂತ್ರಿ

ಚಿಕ್ಕ ಟೀಕೆಯನ್ನೂ ಮೋದಿ ನೇತೃತ್ವದ ಸರ್ಕಾರ ಸಹಿಸುವುದಿಲ್ಲ. ಇದು ಬಿಜೆಪಿಯ ಮನಸ್ಥಿತಿಯಾಗಿದೆ

ಅಶೋಕ್ ಗೆಹಲೋತ್, ರಾಜಸ್ಥಾನ ಮುಖ್ಯಮಂತ್ರಿ

ಸತ್ಯ ಮೇಲೆ ಬರದಂತೆ ಬೆದರಿಸಬಹುದು. ಆದರೆ, ಗಂಗಾ ನದಿಯಲ್ಲಿ ಮೃತದೇಹಗಳು ತೇಲಿದಂತೆಯೇ ಸತ್ಯವನ್ನು ಮುಚ್ಚಿಡಲು ಸರ್ಕಾರಕ್ಕೆ ಸಾಧ್ಯವಿಲ್ಲ

ಸೀತಾರಾಮ್ ಯೆಚೂರಿ, ಸಿಪಿಎಂ ಪ್ರಧಾನ ಕಾರ್ಯದರ್ಶಿ

ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಸೋಲುವ ಭಯ ಬಿಜೆಪಿಗೆ ಇದೆ. ಆದ್ದರಿಂದ ಅದು ಮಾಧ್ಯಮಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುತ್ತಿದೆ

ಆಶುತೋಶ್ ವರ್ಮಾ, ಎಸ್‌ಪಿ ವಕ್ತಾರ


ಕೇಂದ್ರೀಯ ಸಂಸ್ಥೆಗಳು ಅವುಗಳ ಕೆಲಸ ಮಾಡುತ್ತಿವೆ. ಅದರಲ್ಲಿ ಸರ್ಕಾರ ಮೂಗು ತೂರಿಸಿಲ್ಲ. ಮಾಹಿತಿ ಅಪೂರ್ಣವಾಗಿದ್ದರೆ ಅಸತ್ಯ ಹೊರಬರುತ್ತದೆ

ಅನುರಾಗ್ ಸಿಂಗ್ ಠಾಕೂರ್, ಕೇಂದ್ರ ಸಚಿವ

'ಕೋವಿಡ್ ಸಾವಿನ ಲೆಕ್ಕ ತಪ್ಪಿಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತದಲ್ಲಿ ಕೋವಿಡ್ ಮರಣ ಪ್ರಮಾಣ ದಾಖಲು ಮಾಡುವಲ್ಲಿ ಲೋಪ ಆಗಿದೆ ಎಂಬ ವರದಿಗಳನ್ನು ಅಲ್ಲಗಳೆದಿರುವ ಕೇಂದ್ರ ಸರ್ಕಾರ, ದೇಶದಲ್ಲಿ ದೃಢವಾದ ಮತ್ತು ಕಾನೂನು ಆಧಾರಿತ ಮರಣ ನೋಂದಣಿ ವ್ಯವಸ್ಥೆ ಇದೆ ಎಂದು ಹೇಳಿದೆ. ಸಾಂಕ್ರಾಮಿಕ ರೋಗ ಮತ್ತು ಅದರ ನಿರ್ವಹಣೆಯ ತತ್ವಗಳ ಪ್ರಕಾರ ಕೆಲವು ಪ್ರಕರಣಗಳು ಪತ್ತೆಯಾಗುವುದಿಲ್ಲವಾದರೂ, ದಾಖಲಾತಿಯಲ್ಲಿ ತಪ್ಪು ಆಗುವುದು ಅಸಂಭವ ಎಂದು ಆರೋಗ್ಯ ಸಚಿವಾಲಯ ಹೇಳಿದೆ.



ಆದಾಗ್ಯೂ, ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಸಂಭವಿಸಿದ ಸಾವಿನ ಲೆಕ್ಕವನ್ನು ಹಲವಾರು ರಾಜ್ಯಗಳು ಪರಿಷ್ಕರಿಸುತ್ತಿವೆ ಎಂದು ತಿಳಿಸಿದೆ.

ಸೆಂಟರ್ ಫಾರ್ ಗ್ಲೋಬಲ್ ಡೆವಲಪ್‌ಮೆಂಟ್ (ಸಿಜಿಡಿ) ನೀಡಿದ ವರದಿಯ ಹಿನ್ನೆಲೆಯಲ್ಲಿ ಕೇಂದ್ರ ಈ ಸ್ಪಷ್ಟನೆ ನೀಡಿದೆ. ಕೋವಿಡ್ ಎರಡನೇ ಅಲೆಯಲ್ಲಿ ಆಸ್ಪತ್ರೆಗಳು ರೋಗಿಗಳಿಂದ ತುಂಬಿಹೋಗಿದ್ದ ಅವಧಿಯಲ್ಲಿ ಸಂಭವಿಸಿರುವ ನೈಜ ಸಾವುಗಳು ಸಾವಿರವಲ್ಲ, ಲಕ್ಷಗಳ ಲೆಕ್ಕದಲ್ಲಿದ್ದು, ಅಧಿಕೃತ ಲೆಕ್ಕಾಚಾರದಲ್ಲಿ ವ್ಯತ್ಯಾಸ ಆಗಿರುವ ಸಾಧ್ಯತೆಯಿದೆ ಎಂದು ವರದಿ ಅಭಿಪ್ರಾಯಪಟ್ಟಿತ್ತು.

ಲಕ್ಷಗಳಲ್ಲಿವೆ ಹೆಚ್ಚುವರಿ ಸಾವು: ವರದಿ

ಕೋವಿಡ್ ಸಾಂಕ್ರಾಮಿಕ ಸಮಯದಲ್ಲಿ 2020 ಜನವರಿಯಿಂದ ಮತ್ತು 2021ರ ಜೂನ್ ನಡುವಿನ ಅವಧಿಯಲ್ಲಿ ಭಾರತದಲ್ಲಿ 34 ಲಕ್ಷದಿಂದ 47 ಲಕ್ಷ ರೋಗಿಗಳು ಸಾವನ್ನಪ್ಪಿದ್ದಾರೆ ಎಂದು ಸಿಜಿಡಿ ವರದಿ ಅಭಿಪ್ರಾಯಪಟ್ಟಿದೆ. ಅಧಿಕೃತ ಎಣಿಕೆಗಿಂತ ಲಕ್ಷಾಂತರ ಜನರು ವೈರಸ್‌ನಿಂದ ಸಾವನ್ನಪ್ಪಿರಬಹುದು. ಇದು ಸರ್ಕಾರದ ಅಧಿಕೃತ ಸಂಖ್ಯೆಗಿಂತ ಎಷ್ಟೋ ಪಟ್ಟು ಹೆಚ್ಚು ಎಂದು ತಿಳಿಸಿದೆ.

ಪ್ರಸ್ತುತ ಭಾರತವು 4.19 ಲಕ್ಷ, ಅಮೆರಿಕ 6.10 ಲಕ್ಷ, ಬ್ರೆಜಿಲ್ 5.45 ಲಕ್ಷ ಸಾವುಗಳನ್ನು ಅಧಿಕೃತವಾಗಿ ವರದಿ ಮಾಡಿವೆ.

ಎರಡು ಸಮಾನಾಂತರ ಕಾನೂನು ವ್ಯವಸ್ಥೆ ಇಲ್ಲ: 'ಸುಪ್ರೀಂ'

ನವದೆಹಲಿ(ಪಿಟಿಐ): 'ದೇಶದಲ್ಲಿ ಎರಡು ರೀತಿಯ ಕಾನೂನು ವ್ಯವಸ್ಥೆ ಇಲ್ಲ' ಎಂದು ಸುಪ್ರೀಂ ಕೋರ್ಟ್ ಗುರುವಾರ ತಿಳಿಸಿದೆ.

'ಶ್ರೀಮಂತರು, ಸಂಪದ್ಭರಿತರು, ರಾಜಕೀಯ ಅಧಿಕಾರ ನಡೆಸುವವರ ಪರ ಹಾಗೂ ನ್ಯಾಯ ಕೇಳಲು ಶಕ್ತಿ ಇಲ್ಲದವರು, ಸಂಪನ್ಮೂಲ ರಹಿತ ಬಡವರ ಪರ ಎಂಬ ಎರಡು ಸಮನಾಂತರ ಕಾನೂನು ವ್ಯವಸ್ಥೆಗಳಿಲ್ಲ' ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ.

'ಜಿಲ್ಲಾ ನ್ಯಾಯಾಲಯಗಳನ್ನು ವಸಾಹತುಶಾಹಿ ಮನಸ್ಥಿತಿ ರೀತಿಯಲ್ಲಿ ನಡೆಸಿಕೊಳ್ಳಲಾಗಿದೆ. ನ್ಯಾಯಾಂಗ ವ್ಯವಸ್ಥೆ ಬಗ್ಗೆ ಜನರ ವಿಶ್ವಾಸ ಉಳಿಸಿಕೊಳ್ಳಲು ಈ ಮನಸ್ಥಿತಿ ಬದಲಾಗಬೇಕು. ಸತ್ಯದ ಪರ ನಿಂತ ನ್ಯಾಯಾಧೀಶರು ಕೆಂಗಣ್ಣಿಗೆ ಗುರಿಯಾಗಿದ್ದಾರೆ' ಎಂದು ಸುಪ್ರೀಂ ಕೋರ್ಟ್ ಕಳವಳ ವ್ಯಕ್ತಪಡಿಸಿದೆ.

ಎರಡು ವರ್ಷಗಳ ಹಿಂದೆ ಕಾಂಗ್ರೆಸ್ ನಾಯಕ ದೇವೇಂದ್ರ ಚೌರಾಸಿಯಾ ಕೊಲೆ ಪ್ರಕರಣದಲ್ಲಿ ಬಂಧಿತರಾಗಿದ್ದ ಬಿಎಸ್‌ಪಿ ಶಾಸಕಿಯ ಪತಿಯ ಜಾಮೀನು ರದ್ದುಗೊಳಿಸಿದ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ಇಂಥ ಗಂಭೀರವಾದ ವಿಚಾರಗಳನ್ನು ಪ್ರಸ್ತಾಪಿಸಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಎಂ. ಆರ್. ಷಾ ಅವರನ್ನೊಳಗೊಂಡ ನ್ಯಾಯಪೀಠ ಜಾಮೀನು ಅರ್ಜಿಯ ವಿಚಾರಣೆ ನಡೆಸಿ ಈ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದೆ.

'ಸ್ವತಂತ್ರ ಮತ್ತು ನಿಷ್ಪಕ್ಷಪಾತ ನ್ಯಾಯಾಂಗವು ಪ್ರಜಾಪ್ರಭುತ್ವದ ಮೂಲಾಧಾರವಾಗಿದೆ. ಇದು ರಾಜಕೀಯ ಒತ್ತಡಗಳಿಂದ ಮುಕ್ತವಾಗಿರಬೇಕು. ಸರ್ಕಾರದ ಆಡಳಿತ ಯಂತ್ರ ಸಹ ಕಾನೂನಿಗೆ ಬದ್ಧವಾಗಿರಬೇಕು' ಎಂದು ಪೀಠವು ಹೇಳಿದೆ.

ಕಣ್ಗಾವಲು ವಿಚಾರ: ಮುಂದುವರಿದ ಆಡಳಿತ–ವಿರೋಧ ಪಕ್ಷಗಳ ಜಟಾಪಟಿ

ಪೆಗಾಸಸ್: ದೇಶದ ಹಲವೆಡೆ ಕಾಂಗ್ರೆಸ್ ಪ್ರತಿಭಟನೆ

ನವದೆಹಲಿ (ಪಿಟಿಐ): ಪೆಗಾಸಸ್ ಗೂಢಚರ್ಯೆಯನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕು ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ಕಾಂಗ್ರೆಸ್ ಕಾರ್ಯಕರ್ತರು ದೇಶದ ಹಲವು ರಾಜ್ಯಗಳಲ್ಲಿ ಪ್ರತಿಭಟನೆ ನಡೆಸಿದ್ದಾರೆ. ಆಯಾ ರಾಜ್ಯದ ರಾಜ್ಯಪಾಲರಿಗೆ ಮನವಿ ಸಲ್ಲಿಸಿದ್ದಾರೆ.

ಛತ್ತೀಸಗಡ, ಮಹಾರಾಷ್ಟ್ರ, ತೆಲಂಗಾಣ, ತಮಿಳುನಾಡು, ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ರಾಜಸ್ಥಾನ, ಪಂಜಾಬ್ ಪ್ರದೇಶ ಕಾಂಗ್ರೆಸ್ ಸಮಿತಿ ಸದಸ್ಯರು ಆಯಾ ರಾಜ್ಯಗಳ ರಾಜಧಾನಿಯಲ್ಲಿ ಪ್ರತಿಭಟನೆ ನಡೆಸಿದ್ದಾರೆ. ನಂತರ ರಾಜಭವನಕ್ಕೆ ತೆರಳಿ, ರಾಜ್ಯಪಾಲರಿಗೆ ಮನವಿ ಸಲ್ಲಿಸಿದ್ದಾರೆ. ಉತ್ತರಾಖಂಡ ರಾಜಭವನಕ್ಕೆ ಮೆರವಣಿಗೆ ಹೊರಡಲು ಮುಂದಾದ ಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿ ಬಿಡುಗಡೆ ಮಾಡಿದ್ದಾರೆ.



ಕೋಲ್ಕತ್ತದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಗುರುವಾರ ಪೆಗಾಸಸ್ ಗೂಢಚರ್ಯೆಯ ವಿರುದ್ಧ ಪ್ರತಿಭಟನಾ ಮೆರವಣಿಗೆ ನಡೆಸಿದರು –ಪಿಟಿಐ ಚಿತ್ರ

ರಾಜಕೀಯ ಕಾರಣಗಳಿಗಾಗಿ ಗೂಢಚರ್ಯೆ ನಡೆಸಲು ಅವಕಾಶ ನೀಡಿದ್ದರ ಹೊಣೆ ಹೊತ್ತು ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ತಮಿಳುನಾಡು ಕಾಂಗ್ರೆಸ್ ಸದಸ್ಯರು ಆಗ್ರಹಿಸಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಕಾರ್ಯಕರ್ತರು ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿದ್ದಾರೆ. ಪೆಗಾಸಸ್ ಗೂಢಚರ್ಯೆಗೆ ಸಂಬಂಧಿಸಿದಂತೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ತಮ್ಮ ಟೀಕೆಯನ್ನು ಮುಂದುವರಿಸಿದ್ದಾರೆ.

ಕೆಲ ಪತ್ರಕರ್ತರ ಮೊಬೈಲ್ ಸಂಖ್ಯೆಯನ್ನು ಎಲ್ಲೋ ಪೇಜಸ್‌ನಿಂದ ತೆಗೆದುಕೊಂಡು ಈ ವರದಿ ಸಿದ್ಧಪಡಿಸಲಾಗಿದೆ. ಇದು ಕಪೋಲಕಲ್ಪಿತ ಕಟ್ಟುಕತೆ

ಮೀನಾಕ್ಷಿ ಲೇಖಿ, ಕೇಂದ್ರ ಸಚಿವೆ

ನಮ್ಮ ವಿರುದ್ಧ ಗೂಢಚರ್ಯೆ ನಡೆಸಿದರೂ, ಪೌರತ್ವ ತಿದ್ದುಪಡಿ ಕಾಯ್ದೆಯ ವಿರುದ್ಧದ ನಮ್ಮ ಹೋರಾಟವನ್ನು ನಿಲ್ಲಿಸುವುದಿಲ್ಲ. ಗೂಢಚರ್ಯೆಗೆ ಹೆದರುವುದಿಲ್ಲ

ಅಖಿಲ ಅಸ್ಸಾಂ ವಿದ್ಯಾರ್ಥಿ ಒಕ್ಕೂಟ

ಇನ್ನಷ್ಟು ಹೆಸರು ಬಹಿರಂಗ

- ಟಿಬೆಟಿಯನ್ ಧರ್ಮಗುರು ದಲೈ ಲಾಮಾ ಅವರ ಆಪ್ತ ಸಹಾಯಕರ ಫೋನ್ ಸಂಖ್ಯೆಯನ್ನು ಗೂಢಚರ್ಯೆಗೆ ಆಯ್ದುಕೊಳ್ಳಲಾಗಿದೆ. ಅಮೆರಿಕದ ಮಾಜಿ ಅಧ್ಯಕ್ಷ ಬರಾಕ್ ಒಬಾಮ ಅವರನ್ನು ದಲೈ ಲಾಮಾ ಅವರು ದೆಹಲಿಯಲ್ಲಿ ಭೇಟಿ ಮಾಡಿದ ಸಂದರ್ಭದಲ್ಲಿ ಈ ಸಂಖ್ಯೆಗಳನ್ನು ಗೂಢಚರ್ಯೆ ಪಟ್ಟಿಗೆ ಸೇರಿಸಲಾಗಿದೆ
- ಸಿಬಿಐ ನಿರ್ದೇಶಕರಾಗಿದ್ದ ಅಲೋಕ್ ವರ್ಮಾ ಮತ್ತು ಅವರ ಕುಟುಂಬದವರ ಫೋನ್ ಸಂಖ್ಯೆ. ಸಿಬಿಐ ಅಧಿಕಾರಿಗಳಾಗಿದ್ದ ರಾಕೇಶ್ ಅಸ್ತಾನಾ ಮತ್ತು ಎ.ಕೆ.ಶರ್ಮಾ ಅವರ ಫೋನ್ ಸಂಖ್ಯೆಯೂ ಈ ಪಟ್ಟಿಯಲ್ಲಿದೆ.
- ಪೌರತ್ವ ತಿದ್ದುಪಡಿ ಕಾಯ್ದೆ ವಿರುದ್ಧ ಪ್ರತಿಭಟನೆ ನಡೆಸಿದ್ದ ಅಖಿಲ ಅಸ್ಸಾಂ ವಿದ್ಯಾರ್ಥಿ ಒಕ್ಕೂಟದ ನಾಯಕರು ಮತ್ತು ಸದಸ್ಯರ ಫೋನ್ ಸಂಖ್ಯೆಗಳೂ ಈ ಪಟ್ಟಿಯಲ್ಲಿವೆ

ಸಂಸತ್ ಭವನ ಸಮೀಪ ತಲುಪಿದ ರೈತರ ಪ್ರತಿಭಟನೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರ ಜಾರಿ ಮಾಡಿರುವ ಮೂರು ಕೃಷಿ ಕಾಯ್ದೆಗಳ ವಿರುದ್ಧ ಎಂಟು ತಿಂಗಳಿಂದ ದೆಹಲಿಯ ಗಡಿಗಳಲ್ಲಿ ಪ್ರತಿಭಟನೆ ನಡೆಸುತ್ತಿದ್ದ ರೈತರು, ಸಂಸತ್ತಿಗೆ ಸ್ವಲ್ಪವೇ ದೂರವಿರುವ ಜಂತರ್ ಮಂತರ್‌ಗೆ ಗುರುವಾರ ತಲುಪಿದರು. ಮುಂಗಾರು ಅಧಿವೇಶನ ನಡೆಯುತ್ತಿರುವ ವೇಳೆಯೇ ರೈತರು ಪ್ರತಿಭಟನೆ ಹಮ್ಮಿಕೊಂಡಿದ್ದಾರೆ.

'ನಮ್ಮ ಹಲವು ಪ್ರೀತಿಪಾತ್ರರನ್ನು ಕಳೆದುಕೊಂಡು ನಾವು ಇಷ್ಟು ದೂರ ಬಂದಿದ್ದೇವೆ. ಇನ್ನೂ ದೀರ್ಘವಾದ ಸಂಘರ್ಷಕ್ಕೆ ನಾವು ತಯಾರಾಗಿಯೇ ಬಂದಿದ್ದೇವೆ' ಎಂದು ಭಾರತೀಯ ಕಿಸಾನ್ ಯೂನಿಯನ್ ಸದಸ್ಯ ಹರ್ಪಾಲ್ ಸಿಂಗ್ ಹೇಳಿದ್ದಾರೆ.

ನಾಲ್ಕು ಬಸ್ಸುಗಳಲ್ಲಿ ವಿವಿಧ ರೈತ ಸಂಘಟನೆಗಳಿಗೆ ಸೇರಿದ ಸುಮಾರು 200 ರೈತರು ತಾವು ಪ್ರತಿನಿಧಿಸುವ ರೈತ ಸಂಘಟನೆಗಳ ಗುರುತಿನ ಫಲಕಗಳು ಮತ್ತು ಧ್ವಜಗಳನ್ನು ಹಿಡಿದು ಇಲ್ಲಿಗೆ ತಲುಪಿದ್ದಾರೆ.

ಹರ್ಪಾಲ್ ಸಿಂಗ್ ಮಾತನಾಡಿ, 'ಮೂರು ಕಡೆಗಳಲ್ಲಿ ಪೊಲೀಸರು ನಮ್ಮನ್ನು ತಪಾಸಣೆಗೆ ಒಳಪಡಿಸಿದರು. ನಮ್ಮ ಆಧಾರ್ ಗುರುತಿನ ಚೀಟಿಗಳನ್ನು ಪರಿಶೀಲಿಸಿದರು. ಪಾಕಿಸ್ತಾನದಿಂದ ಬರುವ ಬಸ್ ಕೂಡಾ ಇಷ್ಟು ಕಟ್ಟುನಿಟ್ಟಿನ ತಪಾಸಣೆಗೆ ಒಳಪಡುವುದಿಲ್ಲ. ಸರ್ಕಾರ ರೈತರಿಗೆ ಕಿರುಕುಳ ನೀಡಲು ನಿರ್ಧರಿಸಿದೆ. ನಮ್ಮ ಎರಡು ಬಸ್ಸುಗಳು ದಾರಿ ಮಧ್ಯೆ ಕೆಟ್ಟುನಿಂತವು. ಆದ್ದರಿಂದ ಪೊಲೀಸರು ನಮ್ಮನ್ನು ಡಿಟಿಸಿ ಬಸ್ಸುಗಳಲ್ಲಿ ಕರೆತಂದರು' ಎಂದಿದ್ದಾರೆ.

ಕಣ್ಗಾವಲು: ರೈತರಿಗೆ ಅನುಮಾನ

ಕೇಂದ್ರ ಸರ್ಕಾರವು ತಮ್ಮ ವಿರುದ್ಧವೂ ಪೆಗಾಸಸ್ ಕುತಂತ್ರಾಂಶವನ್ನು ಬಳಸಿ ಗೂಢಚರ್ಯೆ ನಡೆಸಿರಬಹುದು ಎಂದು ಅನುಮಾನವನ್ನು ಪ್ರತಿಭಟನೆ ನಡೆಸುತ್ತಿರುವ ರೈತರು ವ್ಯಕ್ತಪಡಿಸಿದ್ಧಾರೆ.

'ಇದು ಅನೈತಿಕ ಸರ್ಕಾರ. ಬೇಹುಗಾರಿಕೆ ಹಿಂದೆ ಸರ್ಕಾರವೇ ಇದೆ ಎಂಬುದು ಸ್ಪಷ್ಟ. ನಮ್ಮ ಮೊಬೈಲ್‌ಗಳ ಮೇಲೆಯೂ ಕಣ್ಗಾವಲು ಇರಿಸಲಾಗಿದೆ' ಎಂದು ರೈತರ ಮುಖಂಡ ಶಿವಕುಮಾರ್ ಕಾಕಾ ಹೇಳಿದ್ದಾರೆ. 2020–21ರ ಅವಧಿಯಲ್ಲಿ ಕಣ್ಗಾವಲಿಗೆ ಒಳಗಾದವರ ಪಟ್ಟಿಯಲ್ಲಿ ರೈತ ಮುಖಂಡರ ಮೊಬೈಲ್ ಸಂಖ್ಯೆಗಳೂ ಇರಲಿವೆ ಎಂದು ಸ್ವರಾಜ್ ಇಂಡಿಯಾ ಅಧ್ಯಕ್ಷ ಯೋಗೇಂದ್ರ ಯಾದವ್ ಹೇಳಿದ್ದಾರೆ.

ಬೇಕಿದೆ ವೀಕ್ಷಣಾ ಗೋಪುರ, ಸಿಸಿಟಿವಿ ಕ್ಯಾಮೆರಾ ಕಣ್ಗಾವಲು, ಬೇಲಿಯ ರಕ್ಷಣೆ

ನಗರದೊಳಗಿನ ಅರಣ್ಯಪ್ರದೇಶಕ್ಕೆ ಭದ್ರತೆಯಿಲ್ಲ!

• ಗುರು ಪಿ.ಎಸ್.





ಬಿ.ಎಂ. ಕಾವಲ್ ಅರಣ್ಯಪ್ರದೇಶದಲ್ಲಿ ಕಂಡು ಬಂದ ಆನೆಗಳು (ಎಡಚಿತ್ರ) ತುರಹಳ್ಳಿ ಕಿರುಅರಣ್ಯ ಪ್ರದೇಶದ ನೋಟ – ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಿಶೇಷ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯೊಳಗೇ 2,400 ಎಕರೆಗೂ ಹೆಚ್ಚು ವಿಸ್ತಾರದ ಅರಣ್ಯಪ್ರದೇಶವಿದೆ. ಮಹಾನಗರಕ್ಕೆ ಹೊಂದಿಕೊಂಡಂತೆ ಇಷ್ಟು ವಿಶಾಲ ಪ್ರದೇಶದಲ್ಲಿ ಅರಣ್ಯ ಹರಡಿಕೊಂಡ ನಗರ ತೀರಾ ಅಪರೂಪ. 'ಆಮ್ಲಜನಕ ಉತ್ಪಾದನೆಯ ದೊಡ್ಡ ಕಾರ್ಖಾನೆ'ಯಂತಿರುವ ತುರಹಳ್ಳಿ ಹಾಗೂ ಬಿ.ಎಂ. ಕಾವಲ್ ಅರಣ್ಯಪ್ರದೇಶದ ರಕ್ಷಣೆಗೆ ತೆಗೆದುಕೊಂಡಿರುವ ಕ್ರಮಗಳು ಯಾವುದಕ್ಕೂ ಸಾಲದು ಎನ್ನುತ್ತಾರೆ ಪರಿಸರ ಪ್ರೇಮಿಗಳು.

'ಬಿ.ಎಂ. ಕಾವಲ್ ಮತ್ತು ತುರಹಳ್ಳಿ ಅರಣ್ಯಪ್ರದೇಶದಲ್ಲಿ ಬೇಸಿಗೆಯ ವೇಳೆ ಆಗಾಗ ಕಾಳ್ಗಿಚ್ಚು ಕಾಣಿಸಿಕೊಳ್ಳುತ್ತದೆ. ಒಮ್ಮೆ ಬೆಂಕಿ ಬಿದ್ದಾಗ ಕನಿಷ್ಠ ಐದಾರು ಎಕರೆಯಷ್ಟು ಪ್ರದೇಶಕ್ಕೆ ಅದು ವ್ಯಾಪಿಸಿಕೊಳ್ಳುತ್ತದೆ. ದೊಡ್ಡಪ್ರಾಣಿಗಳು ಹೇಗೋ ಓಡಿ ಹೋಗಿ ತಪ್ಪಿಸಿಕೊಳ್ಳುತ್ತವೆ. ಆದರೆ, ಸೂಕ್ಷ್ಮಜೀವಿಗಳು, ಕ್ರಿಮಿಕೀಟಗಳು, ಸರೀಸೃಪಗಳು, ಅಮೂಲ್ಯ ಸಸ್ಯಸಂಪತ್ತು ನಾಶವಾಗುತ್ತವೆ. ಇದಕ್ಕಾಗಿ ಅರಣ್ಯಪ್ರದೇಶದ ಒಂದೆರಡು ಕಡೆ ವೀಕ್ಷಣಾ ಗೋಪುರ (ವಾಚ್ ಟವರ್) ನಿರ್ಮಿಸಲು ಅರಣ್ಯ ಇಲಾಖೆ ಕ್ರಮ ಕೈಗೊಳ್ಳಬೇಕು' ಎಂದು ಸ್ಥಳೀಯ ನಿವಾಸಿ ಚಂದ್ರಶೇಖರ್ ಹೇಳಿದರು.

16 ಅಡಿ ಎತ್ತರದ ಸಾಮಾನ್ಯ ವೀಕ್ಷಣಾ ಗೋಪುರಕ್ಕೆ ₹5 ಲಕ್ಷ, ಕಾಂಕ್ರೀಟ್ ಕಂಬದಿಂದ ಕಟ್ಟುವ ವೀಕ್ಷಣಾ ಗೋಪುರಕ್ಕೆ ₹11 ಲಕ್ಷ ಖರ್ಚಾಗುತ್ತದೆ. ಬೈನಾಕುಲರ್, ಟೆಲಿಸ್ಕೋಪ್ ಬಳಸಿಕೊಂಡು ಸುಮಾರು ಐದಾರು ಕಿ.ಮೀ. ವ್ಯಾಪ್ತಿಯವರೆಗಿನ ಅರಣ್ಯ ಪ್ರದೇಶದ ಮೇಲೆ ನಿಗಾ ಇಡಬಹುದು ಎಂದು ಇಲಾಖೆಯ ಮೂಲಗಳು ತಿಳಿಸಿವೆ.

ಕಳೆದ ಒಂದೇ ವರ್ಷದಲ್ಲಿ ಎಂಟು ಬಾರಿ ಈ ರೀತಿಯ ಬೆಂಕಿ ಹತ್ತಿಕೊಂಡು ಸೂಕ್ಷ್ಮಜೀವಿಗಳು, ಔಷಧಿ ಸಸ್ಯಗಳು ನಾಶವಾಗಿವೆ.

'ಜನವರಿಯಿಂದ–ಏಪ್ರಿಲ್‌ವರೆಗೆ ಹೆಚ್ಚು ಬಿಸಿಲು ಇದ್ದು, ಕಾಳ್ಗಿಚ್ಚು ಹಬ್ಬುವುದು ಸಾಮಾನ್ಯವಾಗಿರುತ್ತದೆ. ಈ ವೇಳೆ ನಿಗಾ ಇಡುವುದು ತೀರಾ ಅವಶ್ಯಕ. ಬೇರೆ ಸಂದರ್ಭಗಳಲ್ಲಿ ಕೆಲವು ಕಿಡಿಗೇಡಿಗಳು ಕೂಡ ಅರಣ್ಯಪ್ರದೇಶದಲ್ಲಿನ ಮರಗಳಿಗೆ ಬೆಂಕಿ ಇಟ್ಟಿದ್ದ ಉದಾಹರಣೆಗಳು ಇವೆ. ವೀಕ್ಷಣಾ ಗೋಪುರದಿಂದ ನಿಗಾ ವ್ಯವಸ್ಥೆ ಇದ್ದರೆ, ಹೊಗೆ ಕಂಡಕೂಡಲೇ ಕಾರ್ಯ ಪ್ರವೃತ್ತವಾಗಲು ಸಾಧ್ಯವಾಗುತ್ತದೆ. ಬೆಂಕಿ ಹೆಚ್ಚು ವ್ಯಾಪಿಸುವುದನ್ನು ತಪ್ಪಿಸಬಹುದು' ಎಂದು ಚಂದ್ರಶೇಖರ್ ಹೇಳಿದರು.

'ಚಿರತೆ, ಆನೆ, ನವಿಲು, ಮೊಲ, ಜಿಂಕೆ, ಮುಂಗುಸಿ, ನರಿ ಸೇರಿದಂತೆ ಅನೇಕ ಪ್ರಾಣಿಗಳು ಅರಣ್ಯದೊಳಗೆ ಇವೆ. ಮೊಲ, ಜಿಂಕೆಯನ್ನು ಬೇಟೆಯಾಡಿ ತೆಗೆದುಕೊಂಡು ಹೋಗುತ್ತಿರುವ ಪ್ರಕರಣಗಳೂ ವರದಿಯಾಗುತ್ತಿವೆ. ಅಲ್ಲದೆ, ಅರಣ್ಯ ಪ್ರದೇಶದ ಒತ್ತುವರಿ ಆಗುವುದನ್ನೂ ಪತ್ತೆ ಹಚ್ಚಲು ಸುಲಭವಾಗುತ್ತದೆ' ಎಂದರು.

ತಂತಿಬೇಲಿ ಇರಲಿ: 'ವೀಕ್ಷಣಾ ಗೋಪುರದ ಜೊತೆಗೆ, ಅರಣ್ಯದ ಪ್ರಮುಖ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಬೇಕು. ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು, ಕಚೇರಿಯಿಂದಲೇ ನಿಗಾ ಇಡುವ ಕಾರ್ಯವನ್ನು ಇಲಾಖೆ ಮಾಡಿದರೆ ಉತ್ತಮ' ಎಂದು ತುರಹಳ್ಳಿ ನಿವಾಸಿ ಅರುಣ್‌ಕುಮಾರ್ ಹೇಳಿದರು.

'ಅರಣ್ಯಪ್ರದೇಶದ ಹಲವು ಕಡೆ ಇನ್ನೂ ತಂತಿಬೇಲಿಯನ್ನು ಹಾಕಿಲ್ಲ. ಯಾರು ಬೇಕಾದರೂ ಅರಣ್ಯಪ್ರದೇಶದೊಳಗೆ ಸುಲಭವಾಗಿ ಹೋಗಿ ಬಂದರೂ ಕೇಳುವವರು ಯಾರೂ ಇಲ್ಲ. ತಂತಿಬೇಲಿ ಅಳವಡಿಕೆಗೂ ಇಲಾಖೆಯ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು' ಎಂದು ಅವರು ಒತ್ತಾಯಿಸಿದರು.

ಅಂಕಿ-ಅಂಶಗಳು

1,382 ಎಕರೆ
ಬಿ.ಎಂ. ಕಾವಲ್ ಅರಣ್ಯ ಪ್ರದೇಶದ ವಿಸ್ತೀರ್ಣ

529 ಎಕರೆ
ತುರಹಳ್ಳಿ ಕಿರುಅರಣ್ಯ ಪ್ರದೇಶದ ವಿಸ್ತೀರ್ಣ

519 ಎಕರೆ
ತುರಹಳ್ಳಿ ರಾಜ್ಯಮೀಸಲು ಅರಣ್ಯಪ್ರದೇಶದ ವಿಸ್ತೀರ್ಣ

ಕೇರಳ ವಿಧಾನಸಭೆ: ವಿರೋಧ ಪಕ್ಷಗಳ ಸಭಾತ್ಯಾಗ

ತಿರುವನಂತಪುರ (ಪಿಟಿಐ): ಕೇರಳ ವಿಧಾನಸಭೆಯ ಅಧಿವೇಶನದ ಮೊದಲ ದಿನವಾದ ಗುರುವಾರ ವಿರೋಧ ಪಕ್ಷ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಒಕ್ಕೂಟದ ಸದಸ್ಯರ ಪ್ರತಿಭಟನೆ ನಡೆಸಿ, ಸಭಾತ್ಯಾಗ ಮಾಡಿದರು.

ಅರಣ್ಯ ಸಚಿವ ಎ. ಕೆ ಸಸೀಂದ್ರನ್ ಅವರು 'ಲೈಂಗಿಕ ಕಿರುಕುಳ ಪ್ರಕರಣ'ವೊಂದರ ಇತ್ಯರ್ಥಕ್ಕೆ ಯತ್ನಿಸಿದ್ದರು ಎನ್ನಲಾದ ವಿಷಯದ ಬಗ್ಗೆ ಸದನದಲ್ಲಿ ಚರ್ಚೆಯಾಗಬೇಕೆಂದು ಕಾಂಗ್ರೆಸ್ ಸದಸ್ಯರು ಒತ್ತಾಯಿಸಿದರು. ಈ ವಿಷಯ ಕುರಿತು ಕಾಂಗ್ರೆಸ್ ಶಾಸಕ ಪಿ.ಸಿ.ವಿಷ್ಣುನಾಥ್ ನಿಲುವಳಿ ಸೂಚನೆ ಮಂಡಿಸಿದರು. ಇದರ ಮೇಲೆ ಚರ್ಚೆ ನಡೆಸಲು ಸಭಾಧ್ಯಕ್ಷರು ಅವಕಾಶ ನೀಡದ ಕಾರಣ ಯುಡಿಎಫ್ ಒಕ್ಕೂಟದ ಸದಸ್ಯರು ಕಲಾಪವನ್ನು ಬಹಿಷ್ಕರಿಸಿ, ಸಭಾತ್ಯಾಗ ಮಾಡಿದರು.

ಮುಖ್ಯಮಂತ್ರಿ ಪಿಣರಾಯಿ ವಿಜಯನ್, 'ಇದು ಪಕ್ಷಕ್ಕೆ ಸಂಬಂಧಿಸಿದ ವಿಷಯ ಎಂದು ಭಾವಿಸಿ ಮಧ್ಯಪ್ರವೇಶಿಸಿರುವುದಾಗಿ ಸಚಿವರು ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ಈ ಪ್ರಕರಣದಲ್ಲಿ ದೂರುದಾರರು ಮತ್ತು ಆರೋಪಿಗಳು ಇಬ್ಬರೂ ಎನ್‌ಸಿಪಿ ಪಕ್ಷದ ಕಾರ್ಯಕರ್ತರು. ಪಕ್ಷದ ನಾಯಕರಾಗಿ ಕಾರ್ಯಕರ್ತರ ನಡುವೆ ಉಂಟಾಗಿರುವ ವಿವಾದದ ಬಗ್ಗೆ ವಿಚಾರಿಸಿದ್ದಾರೆ' ಎಂದು ವಿಜಯನ್ ಅವರು ಸಚಿವರ ನಡೆಯನ್ನು ಸಮರ್ಥಿಸಿಕೊಂಡರು.

'ಈ ಪ್ರಕರಣದಲ್ಲಿ ಸಂತ್ರಸ್ತೆಯ ದೂರನ್ನು ದಾಖಲಿಸಿಕೊಂಡು ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಹೀಗಾಗಿ ಪುನಃ ಸದನದಲ್ಲಿ ಈ ವಿಷಯವನ್ನು ಚರ್ಚಿಸುವ ಅಗತ್ಯವಿಲ್ಲ' ಎಂದು ವಿಜಯನ್ ಸದನಕ್ಕೆ ತಿಳಿಸಿದರು.

ಇದಕ್ಕೂ ಮುನ್ನ, ಕಲಾಪ ಆರಂಭವಾದಾಗ ಅರಣ್ಯ ಸಚಿವರ ವಿಚಾರವನ್ನು ಪ್ರಸ್ತಾಪಿಸಿದ ವಿಧಾನಸಭೆಯ ವಿರೋಧ ಪಕ್ಷದ ನಾಯಕ ವಿ.ಡಿ.ಸತೀಶನ್, 'ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಧ್ಯಮದಲ್ಲಿ ಪ್ರಸಾರವಾದ ಧ್ವನಿಮುದ್ರಿಕೆ ತುಣುಕಿನಲ್ಲಿ ಪ್ರಕರಣದ ತನಿಖೆಯಲ್ಲಿ ಸಚಿವರು ಹಸ್ತಕ್ಷೇಪ ಮಾಡಿರುವುದು ಹಾಗೂ ಪ್ರಕರಣವನ್ನು ಇತ್ಯರ್ಥಗೊಳಿಸಲು ಸಂತ್ರಸ್ತೆಯ ತಂದೆಯನ್ನು ಕೇಳಿರುವುದು ಸ್ಪಷ್ಟವಾಗಿದೆ' ಎಂದು ಆರೋಪಿಸಿದರು.

ಅಮರಾವತಿ ಭೂ ಹಗರಣ: 'ಸುಪ್ರೀಂ'ನಿಂದ ಅರ್ಜಿ ಹಿಂಪಡೆದ ಆಂಧ್ರಪ್ರದೇಶ ಸರ್ಕಾರ

ನವದೆಹಲಿ(ಪಿಟಿಐ): ಅಮರಾವತಿ ಭೂ ಹಗರಣದ ಬಗ್ಗೆ ಎಸ್‌ಐಟಿ ತನಿಖೆಯನ್ನು ತಡೆಹಿಡಿದಿದ್ದ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿಯನ್ನು ಆಂಧ್ರಪ್ರದೇಶ ಸರ್ಕಾರ ಗುರುವಾರ ಹಿಂಪಡೆದಿದೆ.

ಈ ಸಂಬಂಧ ಹೈಕೋರ್ಟ್ ಮೊರೆ ಹೋಗುವುದಾಗಿ ನ್ಯಾಯಮೂರ್ತಿ ವಿನೀತ್ ಶರಣ್ ಮತ್ತು ದಿನೇಶ್ ಮಾಹೇಶ್ವರಿ ಅವರ ಪೀಠಕ್ಕೆ ರಾಜ್ಯ ಸರ್ಕಾರವು ತಿಳಿಸಿದೆ.

'ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ಅಮರಾವತಿ ಭೂ ಹಗರಣದ ಬಗ್ಗೆ ಸಿಬಿಐ ತನಿಖೆ ನಡೆಸಲು ಸರ್ಕಾರದ ಒಪ್ಪಿಗೆಯಿದೆ' ಎಂದು ಮಾರ್ಚ್ 5ರಂದು ಆಂಧ್ರಪ್ರದೇಶ ಸರ್ಕಾರವು ಸುಪ್ರೀಂಕೋರ್ಟ್‌ಗೆ ತಿಳಿಸಿತ್ತು.

'ಅಮರಾವತಿ ಭೂ ಹಗರಣದ ಬಗ್ಗೆ ಎಸ್‌ಐಟಿ ತನಿಖೆಗೆ ಹೈಕೋರ್ಟ್ ನೀಡಿದ್ದ ತಡೆಯಾಜ್ಞೆಯನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಬೇಕು. ಈ ಮೂಲಕ ಹಗರಣದ ತನಿಖೆಗೆ ಅವಕಾಶ ಕಲ್ಪಿಸಬೇಕು' ಎಂದು ಆಂಧ್ರಪ್ರದೇಶ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಈ ಹಗರಣದ ಬಗ್ಗೆ ತನಿಖೆ ನಡೆಸಲು ಮುಖ್ಯಮಂತ್ರಿ ವೈ.ಎಸ್.ಜಗನ್ ಮೋಹನ್ ರೆಡ್ಡಿ ಅವರ ಸರ್ಕಾರವು ಡಿಜಿಪಿ ನೇತೃತ್ವದ 10 ಸದಸ್ಯರ ಎಸ್‌ಐಟಿ ತಂಡವನ್ನು ರಚಿಸಿತ್ತು.

ಅಮಾನತು ನಿರ್ಣಯ ಪ್ರಶ್ನಿಸಿ 'ಸುಪ್ರೀಂ' ಮೆಟ್ಟಿಲೇರಿದ ಶಾಸಕರು

ನವದೆಹಲಿ(ಪಿಟಿಐ): ಮಹಾರಾಷ್ಟ್ರ ವಿಧಾನಸಭೆಯ ಕಲಾಪದ ವೇಳೆ ಸ್ಪೀಕರ್ ಜತೆ ಅಸಭ್ಯವಾಗಿ ವರ್ತಿಸಿದ ಆರೋಪದಡಿ ಒಂದು ವರ್ಷದವರೆಗೆ ಸದನದಿಂದ ಅಮಾನತುಗೊಂಡಿರುವ ಬಿಜೆಪಿಯ 12 ಶಾಸಕರು, ಅಮಾನತು ಆದೇಶ ಪ್ರಶ್ನಿಸಿ ಗುರುವಾರ ಸುಪ್ರೀಂಕೋರ್ಟ್ ಮೊರೆ ಹೋಗಿದ್ದಾರೆ.

'ಈ ಶಾಸಕರನ್ನು ಒಂದು ವರ್ಷ ಅಮಾನತುಗೊಳಿಸುವಂತೆ ವಿಧಾನಸಭೆ ಅಂಗೀಕರಿಸಿದ ನಿರ್ಣಯವನ್ನು ಪ್ರಶ್ನಿಸಿ, ಶಾಸಕರ ಪರವಾಗಿ ತಾನು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದೇನೆ' ಎಂದು ವಕೀಲ ಅಭಿಕಲ್ಪ್ ಪ್ರತಾಪ್ ಸಿಂಗ್ ಹೇಳಿದ್ದಾರೆ.

ಜುಲೈ 5ರಂದು ಸ್ಪೀಕರ್ ಕೊಠಡಿಯಲ್ಲಿ ಸ್ಪೀಕರ್ ಭಾಸ್ಕರ್ ಜಾಧವ್ ಅವರೊಂದಿಗೆ ಈ 12 ಶಾಸಕರು ಕೆಟ್ಟದಾಗಿ ವರ್ತಿಸಿದರೆಂದು ರಾಜ್ಯ ಸರ್ಕಾರ ಆರೋಪಿಸಿದ್ದರಿಂದ ಇವರನ್ನು ಅಮಾನತುಗೊಳಿಸಲಾಗಿತ್ತು.

ಸಿಧು ಪ್ರಮಾಣ ಇಂದು: ಸಿ.ಎಂ ಭಾಗಿ?



ಚಂಡೀಗಢ (ಪಿಟಿಐ): ಪಂಜಾಬ್ ರಾಜ್ಯದ ಕಾಂಗ್ರೆಸ್ (ಪಿಪಿಸಿಸಿ) ಮುಖ್ಯಸ್ಥರಾಗಿ ನವಜೋತ್ ಸಿಂಗ್ ಸಿಧು ಅವರು ಶುಕ್ರವಾರ ಔಪಚಾರಿಕವಾಗಿ ಅಧಿಕಾರ ವಹಿಸಿಕೊಳ್ಳಲಿದ್ದು, ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಭಾಗವಹಿಸಲಿದ್ದಾರೆ.

ರಾಜ್ಯ ಕಾಂಗ್ರೆಸ್ ಘಟಕಕ್ಕೆ ಹೊಸದಾಗಿ ನೇಮಕಗೊಂಡ ನಾಲ್ವರು ಕಾರ್ಯಾಧ್ಯಕ್ಷರ ಪೈಕಿ ಕುಲ್ಜಿತ್ ಸಿಂಗ್ ನಾಗ್ರಾ ಮತ್ತು ಸಂಗತ್ ಸಿಂಗ್ ಗಿಲ್ಜಿಯಾನ್ ಅವರು ಅಧಿಕಾರ ಸ್ವೀಕಾರ ಸಮಾರಂಭಕ್ಕೆ ಆಗಮಿಸುವಂತೆ ಅಮರಿಂದರ್ ಸಿಂಗ್ ಅವರಿಗೆ ಅವರ ಮೊಹಾಲಿಯ ಸಿಸ್ವಾನ್‌ನಲ್ಲಿರುವ ತೋಟದ ಮನೆಗೆ ತೆರಳಿ ಆಹ್ವಾನ ನೀಡಿದ್ದಾರೆ.

ಅಮರಿಂದರ್ ಸಿಂಗ್ ಅವರನ್ನು ಭೇಟಿಯಾದ ನಂತರ ನಾಗ್ರಾ ಸುದ್ದಿಗಾರರೊಂದಿಗೆ ಮಾತನಾಡಿ, 'ನಮ್ಮ ಆಹ್ವಾನವನ್ನು ಮುಖ್ಯಮಂತ್ರಿ ಸ್ವೀಕರಿಸಿದ್ದು, ನಮ್ಮನ್ನು ಆಶೀರ್ವದಿಸಲು ಆಗಮಿಸುತ್ತಾರೆ' ಎಂದು ಹೇಳಿದರು.

'ಕ್ಯಾಪ್ಟನ್ ಅಮರಿಂದರ್ ಸಿಂಗ್ ಅವರು ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಪಂಜಾಬ್ ಕಾಂಗ್ರೆಸ್ ಭವನದಲ್ಲಿ ಪಕ್ಷದ ಎಲ್ಲಾ ಶಾಸಕರು, ಸಂಸದರು ಮತ್ತು ಪಕ್ಷದ ಹಿರಿಯ ಕಾರ್ಯಕರ್ತರನ್ನು ಚಹಾ ಕೂಟಕ್ಕೆ ಆಹ್ವಾನಿಸಿದ್ದಾರೆ. ಎಲ್ಲರೂ ಒಟ್ಟಾಗಿ ಪಂಜಾಬ್ ಕಾಂಗ್ರೆಸ್ ಭವನದಿಂದ ತೆರಳಿ ಅಧಿಕಾರ ಸ್ವೀಕಾರ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ' ಎಂದು ಪಂಜಾಬ್ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರು ಟ್ವೀಟ್ ಮಾಡಿದ್ದಾರೆ.

ಸಿಧು ಮತ್ತು ಅಮರಿಂದರ್ ಸಿಂಗ್ ನಡುವೆ ಕಳೆದ ಕೆಲವು ದಿನಗಳಿಂದ ತೀವ್ರ ಭಿನ್ನಾಭಿಪ್ರಾಯ ಉಂಟಾಗಿದೆ. ಸಿಧು ಅವರು ಟ್ವೀಟ್ ಮೂಲಕ ಅಮರಿಂದರ್ ಸಿಂಗ್ ವಿರುದ್ಧ ಕಟುವಾಗಿ ಟೀಕಿಸಿ, ವಾಗ್ದಾಳಿ ನಡೆಸಿದ್ದರು.

ಸುಳ್ಳು ಪ್ರಕರಣ ದಾಖಲಿಸಿ ಕಿರುಕುಳ; ಆತ್ಮಹತ್ಯೆಗೆ ಯತ್ನಿಸಿದ್ದ ಶಿವರಾಜ್

ಗಾಂಜಾ ಸೇದಿಸಿದ್ದ ಪೊಲೀಸರ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವ್ಯಕ್ತಿಯೊಬ್ಬರ ಮೇಲೆ ಸುಳ್ಳು ಪ್ರಕರಣ ದಾಖಲಿಸಿಕೊಂಡು ಕಿರುಕುಳ ನೀಡಿ ಕರ್ತವ್ಯಲೋಪ ಎಸಗಿದ ಆರೋಪದಡಿ ಆರ್.ಎಂ.ಸಿ. ಯಾರ್ಡ್ ಠಾಣೆ ಇನ್‌ಸ್ಪೆಕ್ಟರ್ ಎಸ್. ಪಾರ್ವತಮ್ಮ ಹಾಗೂ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ಆಂಜನಪ್ಪ ಸೇರಿ ಮೂವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಯಶವಂತಪುರ ನಿವಾಸಿ ಶಿವರಾಜ್ ಎಂಬುವರ ಮೇಲೆ ಗಾಂಜಾ ಸೇವಿಸಿದ್ದ ಬಗ್ಗೆ ಸುಳ್ಳು ಪ್ರಕರಣ ದಾಖಲಿಸಿ ಕಿರುಕುಳ ನೀಡಿರುವ ಆರೋಪ ಕೇಳಿಬಂದಿತ್ತು. ನೊಂದ ಶಿವರಾಜ್, ವಿಷ ಕುಡಿದು ಇತ್ತೀಚೆಗೆ ಆತ್ಮಹತ್ಯೆಗೆ ಯತ್ನಿಸಿದ್ದರು. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆಸ್ಪತ್ರೆಯಿಂದ ವಿಡಿಯೊ ಹರಿಬಿಟ್ಟಿದ್ದ ಶಿವರಾಜ್, 'ಆರ್.ಎಂ.ಸಿ. ಯಾರ್ಡ್ ಪೊಲೀಸರು ಕಿರುಕುಳ ನೀಡಿದ್ದಾರೆ' ಎಂದು ಆರೋಪಿಸಿದ್ದರು.


ಪಾರ್ವತಮ್ಮ

ವಿಡಿಯೊ ಗಮನಿಸಿದ್ದ ಉತ್ತರ ವಿಭಾಗದ ಡಿಸಿಪಿ ಧರ್ಮೇಂದ್ರಕುಮಾರ್ ಮೀನಾ, ಪ್ರಕರಣದ ಬಗ್ಗೆ ವಿಚಾರಣೆ ನಡೆಸುವಂತೆ ಯಶವಂತಪುರ ಉಪವಿಭಾಗದ ಎಸಿಪಿ ಅವರಿಗೆ ಸೂಚಿಸಿದ್ದರು. ವಿಚಾರಣೆ ನಡೆಸಿ ಪುರಾವೆಗಳ ಸಮೇತ ಎಸಿಪಿ ವರದಿ ನೀಡಿದ್ದರು. ಅದೇ ವರದಿಯನ್ನು ಡಿಸಿಪಿ, ಕಮಿಷನರ್ ಕಮಲ್ ಪಂತ್ ಅವರಿಗೆ ಕಳುಹಿಸಿದ್ದರು.

ವರದಿ ಪರಿಶೀಲಿಸಿದ್ದ ಕಮಲ್ ಪಂತ್, ಇನ್‌ಸ್ಪೆಕ್ಟರ್ ಪಾರ್ವತಮ್ಮ, ಪಿಎಸ್‌ಐ ಆಂಜನಪ್ಪ ಹಾಗೂ ಕಾನ್‌ಸ್ಟೆಬಲ್ ಉಮೇಶ್ ಅವರನ್ನು ಅಮಾನತು ಮಾಡಿ ಗುರುವಾರ ಆದೇಶ ಹೊರಡಿಸಿದ್ದಾರೆ.

ಪ್ರಕರಣ ವಿವರ: 'ತರಕಾರಿ ವ್ಯಾಪಾರಿ ಆಗಿದ್ದ ಶಿವರಾಜ್, ಮೊಬೈಲ್ ನೋಡುತ್ತ ಜುಲೈ 14ರಂದು ರಾತ್ರಿ ಮನೆ ಮುಂದೆ ಕುಳಿತಿದ್ದರು. ಗಸ್ತಿನಲ್ಲಿದ್ದ ಇನ್‌ಸ್ಪೆಕ್ಟರ್, ಗಾಂಜಾ ಸೇದುತ್ತಿದ್ದ ಆರೋಪ ಹೊರಿಸಿ ಶಿವರಾಜ್ ಅವರನ್ನು ವಶಕ್ಕೆ ಪಡೆದು ಠಾಣೆಗೆ ಕರೆದೊಯ್ದಿದ್ದರು. ಅವರ ವಿರುದ್ಧ ಪ್ರಕರಣ ದಾಖಲಿಸುವಂತೆ ಪಿಎಸ್‌ಐ ಆಂಜನಪ್ಪ ಅವರಿಗೆ ಹೇಳಿದ್ದರು' ಎಂದು ಮೂಲಗಳು ಹೇಳಿವೆ.

'ಶಿವರಾಜ್ ಯಾವುದೇ ಗಾಂಜಾ ಸೇದಿರಲಿಲ್ಲ. ಪ್ರಕರಣ ದಾಖಲಿಸಲು ಪುರಾವೆ ಇರಲಿಲ್ಲ. ಅಷ್ಟಕ್ಕೆ ಸುಮ್ಮನಾಗದ ಪಿಎಸ್‌ಐ, ಸಿಗರೇಟ್‌ನಲ್ಲಿ ಗಾಂಜಾ ತುಂಬಿಕೊಟ್ಟು ಸೇದುವಂತೆ ಒತ್ತಾಯಿಸಿದ್ದರು. ಅದಕ್ಕೆ ಒಪ್ಪದಿದ್ದಾಗ ಕಿರುಕುಳ ನೀಡಿ ಒತ್ತಾಯದಿಂದ ಗಾಂಜಾ ಸೇದುವಂತೆ ಮಾಡಿದ್ದರು ಎನ್ನಲಾಗಿದೆ. ನಂತರ, ವೈದ್ಯಕೀಯ ಪರೀಕ್ಷೆ ನಡೆಸಿ ದಂಡ ವಿಧಿಸಿ ಶಿವರಾಜ್ ಅವರನ್ನು ಮನೆಗೆ ಕಳುಹಿಸಿದ್ದರು' ಎಂದೂ ಮೂಲಗಳು ಹೇಳಿವೆ.

'ಪ್ರಕರಣ ದಾಖಲಿಸಿರುವ ವಿಷಯ, ಅಕ್ಕ-ಪಕ್ಕದ ನಿವಾಸಿಗಳಿಗೆ ಗೊತ್ತಾಗಿತ್ತು. ಶಿವರಾಜ್ ಅವರನ್ನು ಮಾತನಾಡಿಸಿದ್ದ ಸ್ಥಳೀಯರು, 'ಏನಪ್ಪ ಗಾಂಜಾ ಸೇದಿ ಜೈಲಿಗೆ ಹೋಗಿ ಬಂದಿಯಾ' ಎನ್ನಲಾರಂಭಿಸಿದ್ದರು. ಅದರಿಂದ ಶಿವರಾಜ್ ನೊಂದಿದ್ದರು. ತಮ್ಮ ಮೇಲೆ ವಿನಾಕಾರಣ ಸುಳ್ಳು ಪ್ರಕರಣ ದಾಖಲಿಸಿದ್ದರಿಂದ ನೊಂದ ಶಿವರಾಜ್, ಆತ್ಮಹತ್ಯೆಗೆ ಯತ್ನಿಸಿದ್ದರು. ಕುಟುಂಬಸ್ಥರೇ ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದರು' ಎಂದೂ ಮೂಲಗಳು ತಿಳಿಸಿವೆ.

ಡಿಸಿಪಿ ವಿರುದ್ಧವೇ ರಹಸ್ಯ ಕಾರ್ಯಾಚರಣೆ ನಡೆಸಿದ್ದ ಪಿಎಸ್‌ಐ

ಆರೋಪದ ಬಗ್ಗೆ ವಿಚಾರಿಸಲು ಪಿಎಸ್‌ಐ ಆಂಜನಪ್ಪ ಅವರನ್ನು ಡಿಸಿಪಿ ಧರ್ಮೇಂದ್ರಕುಮಾರ್ ಅವರು ತಮ್ಮ ಕಚೇರಿಗೆ ಕರೆಸಿದ್ದರು. ಡಿಸಿಪಿ ಹಾಗೂ ತಮ್ಮ ನಡುವಿನ ಮಾತುಕತೆಯನ್ನು ಪಿಎಸ್‌ಐ, ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಲಾರಂಭಿಸಿದ್ದರು. ಕೆಲ ಬಾರಿ ಅನುಮಾನಾಸ್ಪದವಾಗಿ ಪ್ಯಾಂಟ್‌ನ ಜೇಬಿನಲ್ಲಿದ್ದ ಮೊಬೈಲ್ ಒತ್ತುತ್ತಿದ್ದರು. ಅದನ್ನು ಗಮನಿಸಿದ್ದ ಡಿಸಿಪಿ, ಕಚೇರಿ ಸಿಬ್ಬಂದಿಯನ್ನು ಕರೆಸಿ ಜೇಬಿನಲ್ಲಿ ಪರಿಶೀಲನೆ ನಡೆಸಿದ್ದರು. ಅದೇ ವೇಳೆಯೇ ಪಿಎಸ್‌ಐ ನಡೆಸುತ್ತಿದ್ದ ರಹಸ್ಯ ಕಾರ್ಯಾಚರಣೆ ಬಯಲಾಗಿದೆ. ಈ ಸಂಗತಿಯನ್ನೂ ವಿಚಾರಣಾ ವರದಿಯಲ್ಲಿ ಉಲ್ಲೇಖಿಸಲಾಗಿದೆ.

'ರೆಕಾರ್ಡ್ ಮಾಡಿದ್ದ ಆಡಿಯೊ ಇಟ್ಟುಕೊಂಡು ಡಿಸಿಪಿ ಅವರನ್ನೇ ಬೆದರಿಸುವ ಉದ್ದೇಶ ಪಿಎಸ್‌ಐ ಅವರದ್ದಾಗಿತ್ತು' ಎನ್ನಲಾಗಿದೆ.

ಅನಿಲ್ ದೇಶಮುಖ್ ವಿರುದ್ಧ ಸಿಬಿಐ ತನಿಖೆಗೆ ಕೋರ್ಟ್ ಅಸ್ತು

ಮುಂಬೈ (ಪಿಟಿಐ): ಪೊಲೀಸ್ ಸಿಬ್ಬಂದಿ ವರ್ಗಾವಣೆ, ಸ್ಥಳ ನಿಯುಕ್ತಿ ಮತ್ತು ಅಮಾನತುಗೊಂಡಿದ್ದ ಪೊಲೀಸ್ ಅಧಿಕಾರಿ ಸಚಿನ್ ವಾಜೆ ಅವರನ್ನು ಇಲಾಖೆಗೆ ಮರು ನೇಮಕ ಮಾಡುವಲ್ಲಿ ಮಹಾರಾಷ್ಟ್ರದ ಮಾಜಿ ಸಚಿವ ಅನಿಲ್ ದೇಶಮುಖ್ ಹಾಗೂ ಅವರ ಆಪ್ತರು ಯಾವ ರೀತಿಯ ನಂಟು ಹೊಂದಿದ್ದರು ಎನ್ನುವ ಬಗ್ಗೆ ಸಿಬಿಐ ತನಿಖೆ ನಡೆಸಬಹುದು ಎಂದು ಬಾಂಬೆ ಹೈಕೋರ್ಟ್ ಗುರುವಾರ ಹೇಳಿದೆ.

ದೇಶಮುಖ್ ವಿರುದ್ಧ ಸಿಬಿಐ ದಾಖಲಿಸಿರುವ ಎಫ್‌ಐಆರ್‌ನಲ್ಲಿನ ಎರಡು ಪ್ಯಾರಾಗಳನ್ನು ಕೈಬಿಡುವಂತೆ ಕೋರಿ ಮಹಾರಾಷ್ಟ್ರ ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಎಸ್.ಎಸ್. ಶಿಂಧೆ ಮತ್ತು ಎನ್.ಜೆ.ಜಾಮದಾರ್ ಅವರನ್ನು ಒಳಗೊಂಡ ವಿಭಾಗೀಯ ಪೀಠ ವಜಾಗೊಳಿಸಿದೆ.

ಉದ್ಯಮಿ ಮುಖೇಶ್ ಅಂಬಾನಿ ನಿವಾಸದ ಬಳಿ ಸ್ಫೋಟಕಗಳಿದ್ದ ವಾಹನ ಪತ್ತೆ ಪ್ರಕರಣದಲ್ಲಿ ಬಂಧನಕ್ಕೊಳಗಾದ ನಂತರ ಪೊಲೀಸ್ ಸೇವೆಯಿಂದ ವಜಾಗೊಳಿಸಲ್ಪಟ್ಟಿದ್ದ ಸಚಿನ್ ವಾಜೆ ಎನ್‌ಸಿಪಿ ನಾಯಕ ದೇಶಮುಖ್ ವಿರುದ್ಧದ ಆರೋಪಗಳ ಬಗ್ಗೆ ಒಂದು ಪ್ಯಾರಾಗ್ರಾಫ್ ಹೇಳಿದರೆ, ಎರಡನೇ ಪ್ಯಾರಾಗ್ರಾಫ್ ಪೊಲೀಸ್ ಅಧಿಕಾರಿಗಳ ವರ್ಗಾವಣೆ ಮತ್ತು ಸ್ಥಳ ನಿಯುಕ್ತಿಗೆ ಸಂಬಂಧಿಸಿದ್ದಾಗಿದೆ.

'ನಮ್ಮ ದೃಷ್ಟಿಯಲ್ಲಿ ಸಿಬಿಐ, ಪೊಲೀಸ್ ಸಿಬ್ಬಂದಿಯ ವರ್ಗಾವಣೆ ಮತ್ತು ಸ್ಥಳ ನಿಯುಕ್ತಿ ಹಾಗೂ 15 ವರ್ಷಗಳ ನಂತರ ಸಚಿನ್ ವಾಜೆ ಅವರನ್ನು ಪೊಲೀಸ್ ಇಲಾಖೆಗೆ ಮರು ನೇಮಕ ಮಾಡಿಕೊಂಡಿರುವ ಬಗ್ಗೆ ಕಾನೂನುಬದ್ಧವಾಗಿ ತನ್ನ ವಿಚಾರಣೆ ಮುಂದುವರಿಸಬಹುದು. ಏಕೆಂದರೆ ಇದು ಮಾಜಿ ಗೃಹ ಸಚಿವ ದೇಶಮುಖ್ ಮತ್ತು ಅವರ ಆಪ್ತರಿಗೆ ಸಂಬಂಧಿಸಿದೆ' ಎಂದು ನ್ಯಾಯಾಲಯ ಹೇಳಿದೆ.

ಭ್ರಷ್ಟಾಚಾರ ಮತ್ತು ಅಧಿಕಾರ ದುರುಪಯೋಗಪಡಿಸಿಕೊಂಡ ಆರೋಪದ ಮೇಲೆ ಸಿಬಿಐ ಈ ವರ್ಷದ ಏಪ್ರಿಲ್ 21 ರಂದು ದೇಶಮುಖ್ ವಿರುದ್ಧ ಎಫ್‌ಐಆರ್ ದಾಖಲಿಸಿದೆ. ಏಪ್ರಿಲ್ 5 ರಂದು ಹೈಕೋರ್ಟ್ ನೀಡಿದ ಆದೇಶದ ಹಿನ್ನೆಲೆಯಲ್ಲಿ ಎನ್‌ಸಿಪಿ ಮುಖಂಡರ ವಿರುದ್ಧ ಸಿಬಿಐ ಪ್ರಾಥಮಿಕ ತನಿಖೆ ಆರಂಭಿಸಿತ್ತು.

ಮುಂಬೈ: ಪರಮ್‌ಬೀರ್ ಸಿಂಗ್ ವಿರುದ್ಧ ಎಫ್‌ಐಆರ್

ಮುಂಬೈ: ಸುಲಿಗೆ ಆರೋಪದ ಮೇಲೆ ಹಿರಿಯ ಐಪಿಎಸ್ ಅಧಿಕಾರಿ ಪರಮ್‌ಬೀರ್‌ಸಿಂಗ್, ಐವರು ಪೊಲೀಸ್ ಸಿಬ್ಬಂದಿ ಮತ್ತು ಇತರ ಇಬ್ಬರ ವಿರುದ್ಧ ಮುಂಬೈ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ಗುರುವಾರ ತಿಳಿಸಿದರು.

'ತಮ್ಮ ವಿರುದ್ಧ ದಾಖಲಾಗಿದ್ದ ದೂರನ್ನು ಹಿಂದಕ್ಕೆ ಪಡೆಯಲು ₹15 ಕೋಟಿಗೆ ಬೇಡಿಕೆ ಇಟ್ಟಿದ್ದಾರೆಂದು ಆರೋಪಿಸಿ ಬಿಲ್ಡರ್ ನೀಡಿದ ದೂರಿನ ಮೇಲೆ, ದಕ್ಷಿಣ ಮುಂಬೈನ ಮೆರೈನ್ ಡ್ರೈವ್ ಪೊಲೀಸ್ ಠಾಣೆಯಲ್ಲಿ ಇವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ' ಎಂದು ಅವರು ತಿಳಿಸಿದ್ದಾರೆ.

ಈ ಪ್ರಕರಣದಲ್ಲಿ, ಸುನೀಲ್ ಜೈನ್ ಮತ್ತು ಸಂಜಯ್ ಪುನಾಮಿಯಾ ಎಂಬ ಇಬ್ಬರು ಪಾಲುದಾರ ಬಿಲ್ಡರ್‌ಗಳನ್ನು ಬಂಧಿಸಲಾಗಿದೆ. ದೂರಿನ ಪ್ರಕಾರ, ಜೈನ್ ಮತ್ತು ಪುನಾಮಿಯಾ, ಪೊಲೀಸರೊಂದಿಗೆ ಸೇರಿ ಸಂಚು ರೂಪಿಸಿ, ದೂರನ್ನು ಹಿಂಪಡೆಯಲು ಆತನಿಂದ ₹15 ಕೋಟಿಗೆ ಬೇಡಿಕೆ ಇಟ್ಟಿದ್ದರು' ಎಂದು ಮೂಲಗಳು ತಿಳಿಸಿವೆ.

ರೌಡಿ ಬಬ್ಲಿ ಹತ್ಯೆ ಪ್ರಕರಣ: ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆ • ಇಬ್ಬರ ಬಂಧನ, ಏಳು ಮಂದಿ ವಶಕ್ಕೆ

ಜೈಲಿನಲ್ಲಿ ರೂಪಿಸಿದ ಸಂಚು; ಬ್ಯಾಂಕ್‌ನಲ್ಲಿ ಕೊಂದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರಮಂಗಲದ ಬ್ಯಾಂಕೊಂದರಲ್ಲಿ ನಡೆದಿದ್ದ ರೌಡಿ ಜೋಸೆಫ್ ಅಲಿಯಾಸ್ ಬಬ್ಲಿ ಹತ್ಯೆ ಪ್ರಕರಣದಲ್ಲಿ ಇಬ್ಬರು ಆರೋಪಿಗಳನ್ನು ಕಾಲಿಗೆ ಗುಂಡು ಹಾರಿಸಿ ಸೆರೆಹಿಡಿದಿರುವ ಪೊಲೀಸರು, ಇದೀಗ ಏಳು ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.



ಪತ್ನಿ ಹಾಗೂ ಮಗಳ ಜೊತೆಯಲ್ಲಿ ಜುಲೈ 19ರಂದು ಬ್ಯಾಂಕ್‌ಗೆ ಬಂದಿದ್ದ ಬಬ್ಲಿಯನ್ನು ಹಾಡಹಗಲೇ ರಸ್ತೆಯಲ್ಲಿ ರೌಡಿ ಬಬ್ಲಿ ಅಟ್ಟಾಡಿಸಿ ಬ್ಯಾಂಕ್‌ನೊಳಗೆ ನುಗ್ಗಿ ಕೊಲೆ ಮಾಡಲಾಗಿತ್ತು. ತನಿಖೆ ಕೈಗೊಂಡ ಪೊಲೀಸರು, 24 ಗಂಟೆಯೊಳಗೆ ಆರೋಪಿಗಳ ಸುಳಿವು ಪತ್ತೆ ಹಚ್ಚಿದ್ದರು.

ಹತ್ಯೆ ಬಳಿಕ ತಲೆಮರೆಸಿಕೊಂಡಿದ್ದ ಆರೋಪಿಗಳಾದ ಪ್ರದೀಪ್ ಅಲಿಯಾಸ್ ಚೋಟೆ ಹಾಗೂ ರವಿ, ಬೇಗೂರು ಕೆರೆ ಬಳಿ ಬುಧವಾರ ಬೆಳಿಗ್ಗೆ ಕಾಣಿಸಿಕೊಂಡಿದ್ದರು. ಬಂಧಿಸಲು ಹೋದ ಪೊಲೀಸರ ಮೇಲೆ ಹಲ್ಲೆ ಮಾಡಿದ್ದರು. ಅವರಿಬ್ಬರ ಕಾಲಿಗೆ ಗುಂಡು ಹಾರಿಸಿ ಪೊಲೀಸರು ಸೆರೆ ಹಿಡಿದಿದ್ದರು. ಅವರಿಬ್ಬರ ವಿಚಾರಣೆಯಿಂದ ಹಲವು ಮಾಹಿತಿಗಳು ಹೊರಬಿದ್ದಿದ್ದು, ಅದನ್ನು ಆಧರಿಸಿ ಏಳು ಮಂದಿಯನ್ನು ವಶಕ್ಕೆ ಪಡೆದಿದ್ದಾರೆ. ಇವರೆಲ್ಲ ರೌಡಿಗಳು ಹಾಗೂ ಅಪರಾಧ ಹಿನ್ನೆಲೆಯುಳ್ಳವರು.

ಜೈಲಿನಲ್ಲೇ ಸಂಚು: 'ಆಡುಗೋಡಿ ಠಾಣೆ ರೌಡಿಪಟ್ಟಿಯಲ್ಲಿ ಬಬ್ಲಿ ಹೆಸರಿತ್ತು. ತನ್ನದೇ ಕಚೇರಿ ಮಾಡಿಕೊಂಡು ಸಣ್ಣಪುಟ್ಟ ಗುತ್ತಿಗೆ ಕೆಲಸ ಮಾಡಿಕೊಂಡಿದ್ದ. ರೌಡಿ ಶಿವು ಎಂಬಾತನ ಮೇಲೆ ಈ ಹಿಂದೆ ದಾಳಿ ಮಾಡಿದ್ದ. ಪ್ರಕರಣವೊಂದರಲ್ಲಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಸೇರಿದ್ದ ಶಿವು, ಬಬ್ಲಿ ಮೇಲೆ ಸೇಡು ತೀರಿಸಿಕೊಳ್ಳಲು ಕಾಯುತ್ತಿದ್ದ. ಜೈಲಿನಲ್ಲೇ ಸಂಚು ರೂಪಿಸಿದ್ದ ಆತ, ತನ್ನ ಸಹಚರರ ಮೂಲಕ ಹತ್ಯೆ ಮಾಡಿಸಿದ್ದಾನೆಂಬ ಸಂಗತಿ ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ರೌಡಿ ಶಿವುನನ್ನು ಜೈಲಿನಲ್ಲಿ ವಿಚಾರಣೆ ನಡೆಸಲಾಗಿದೆ. ಆತನ ಸಹಚರರನ್ನು ವಶಕ್ಕೆ ಪಡೆಯಲಾಗಿದೆ' ಎಂದೂ ತಿಳಿಸಿವೆ.

ಮಾರಕಾಸ್ತ್ರ ಹಿಡಿದು ಸಂಭ್ರಮ: ಬಬ್ಲಿ ಹತ್ಯೆ ನಂತರ ಆರೋಪಿಗಳು ಮಾರಕಾಸ್ತ್ರಗಳನ್ನು ಎತ್ತಿ ಹಿಡಿದು ಸಂಭ್ರಮಿಸಿದ್ದ ದೃಶ್ಯಗಳು ಬ್ಯಾಂಕ್‌ನ ಸಿ.ಸಿ. ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ.

ಬೈಕ್‌ನಲ್ಲಿ ಬ್ಯಾಂಕ್ ಎದುರು ಬಂದಿದ್ದ ಬಬ್ಲಿ, ಪತ್ನಿಯನ್ನು ಬ್ಯಾಂಕ್‌ನೊಳಗೆ ಕಳುಹಿಸಿದ್ದ. ಆತ ಮಗಳ ಜೊತೆ ಬೈಕ್ ಮೇಲೆ ಕುಳಿತಿದ್ದ. ಅದೇ ಸಂದರ್ಭದಲ್ಲೇ ದ್ವಿಚಕ್ರ ವಾಹನಗಳಲ್ಲಿ ಬಂದಿದ್ದ ಆರೋಪಿಗಳು, ಆತನ ಮೇಲೆ ಮಾರಕಾಸ್ತ್ರ ಬೀಸಿದ್ದರು. ತಪ್ಪಿಸಿಕೊಂಡು ಓಡಾಡಿದ್ದ ಬಬ್ಲಿ, ಬ್ಯಾಂಕ್‌ನೊಳಗೆ ಹೋಗಿದ್ದ. ಪತ್ನಿಯೂ ರಕ್ಷಣೆಗೆ ಹೋಗಿದ್ದರು. ಮಗಳು ಸಹ ಅತ್ತಿದ್ದ ಓಡಾಡಿದ್ದಳು. ಬ್ಯಾಂಕ್‌ನೊಳಗೆ ನುಗ್ಗಿದ್ದ ಆರೋಪಿಗಳು, ಅಲ್ಲಿಯೇ ಬಬ್ಲಿಯನ್ನು ಕೊಚ್ಚಿ ಕೊಂದಿದ್ದಾರೆ. ನಂತರ, ಮಾರಕಾಸ್ತ್ರ ಹಿಡಿದುಕೊಂಡು ಸಂಭ್ರಮಿಸುತ್ತಲೇ ಬ್ಯಾಂಕ್‌ನಿಂದ ಹೊರಗೆ ಬಂದು ಹೊರಟು ಹೋಗಿದ್ದಾರೆ. ರಸ್ತೆಯಲ್ಲೂ ಮಾರಕಾಸ್ತ್ರ ತೋರಿಸಿ ಆರೋಪಿಗಳು ಸಂಭ್ರಮಿಸಿದ್ದಾರೆ. ಈ ದೃಶ್ಯ ವಿಡಿಯೊದಲ್ಲಿದೆ.

ದುಪ್ಪಟ್ಟು ಲಾಭದ ಆಮಿಷ; ವಂಚನೆ

ಬೆಂಗಳೂರು: ದುಪ್ಪಟ್ಟು ಲಾಭದ ಆಮಿಷವೊಡ್ಡಿ ಆ್ಯಪ್ ಮೂಲಕ ₹ 3 ಲಕ್ಷ ಹೂಡಿಕೆ ಮಾಡಿಸಿಕೊಂಡು ವಂಚಿಸಲಾಗಿದ್ದು, ಈ ಬಗ್ಗೆ ದಕ್ಷಿಣ ವಿಭಾಗ ಸೈಬರ್ ಕ್ರೈಂ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಜೆ.ಪಿ.ನಗರ 6ನೇ ಹಂತದ 21 ವರ್ಷದ ಯುವತಿಯೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹೂಡಿಕೆ ಹಣದ ಮೇಲೆ ದುಪ್ಪಟ್ಟು ಲಾಭ ನೀಡುವುದಾಗಿ 'ಶೋಫರ್' ಹೆಸರಿನ ಆ್ಯಪ್ ಪ್ರತಿನಿಧಿಗಳು ತಿಳಿಸಿದ್ದರು. ಅದನ್ನು ನಂಬಿದ್ದ ಯುವತಿ ಹಾಗೂ ಅವರ ಸ್ನೇಹಿತರು, ₹ 3 ಲಕ್ಷ ಹೂಡಿಕೆ ಮಾಡಿದ್ದರು. ಅದಾದ ನಂತರ ಲಾಭ ಆ್ಯಪ್ ಕಡೆಯಿಂದ ಬಂದಿಲ್ಲ. ಅಸಲು ಸಹ ವಾಪಸು ಕೊಟ್ಟಿಲ್ಲ.'

ವಾಹನಗಳ ಗಾಜು ಒಡೆದ ಕಿಡಿಗೇಡಿಗಳು

ಬೆಂಗಳೂರು: ವಿಜಯನಗರ ಠಾಣೆ ವ್ಯಾಪ್ತಿಯ ಆರ್.ಪಿ.ಸಿ ಬಡಾವಣೆಯಲ್ಲಿ ಮೂವರು ಕಿಡಿಗೇಡಿಗಳು ರಸ್ತೆ ಬದಿ ನಿಲ್ಲಿಸಿದ್ದ ವಾಹನಗಳ ಗಾಜುಗಳನ್ನು ಒಡೆದು ಹಾಕಿದ್ದಾರೆ.

ಬುಧವಾರ ತಡರಾತ್ರಿ ಕಿಡಿಗೇಡಿಗಳು ಎಸಗಿರುವ ಕೃತ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಅದನ್ನು ಆಧರಿಸಿ ಪ್ರಕರಣ ದಾಖಲಿಸಿಕೊಂಡಿರುವ ವಿಜಯನಗರ ಪೊಲೀಸರು, ಆರೋಪಿಗಳಿಗಾಗಿ ಹುಡುಕಾಡುತ್ತಿದ್ದಾರೆ.

'ಸ್ಥಳೀಯ ನಿವಾಸಿಗಳು ರಸ್ತೆ ಬದಿಯಲ್ಲಿ ವಾಹನಗಳನ್ನು ನಿಲ್ಲಿಸಿದ್ದರು. ತಡರಾತ್ರಿ ಸ್ಥಳದಲ್ಲಿ ಓಡಾಡಿದ್ದ ಆರೋಪಿಗಳು, ಕಲ್ಲು ಹಾಗೂ ದೊಣ್ಣೆಯಿಂದ ವಾಹನಗಳ ಗಾಜುಗಳನ್ನು ಒಡೆದು ಹಾಕಿದ್ದಾರೆ. ಆರು ವಾಹನಗಳು ಜಖಂಗೊಂಡಿವೆ. ಗಾಂಜಾ ನಶೆ ಅಥವಾ ಮದ್ಯದ ಅಮಲಿನಲ್ಲಿ ಆರೋಪಿಗಳು ಕೃತ್ಯ ಎಸಗಿರುವ ಸಾಧ್ಯತೆ ಇದೆ' ಎಂದು ಪೊಲೀಸರು ಹೇಳಿದರು. 'ಆರೋಪಿಗಳು, ಸ್ಥಳೀಯ ನಿವಾಸಿಗಳು ಎಂಬುದು ಗೊತ್ತಾಗಿದೆ. ಅವರ ಗುರುತು ಪತ್ತೆಯಾಗಿದ್ದು, ಆದಷ್ಟು ಬೇಗ ಬಂಧಿಸಲಾಗುವುದು' ಎಂದೂ ತಿಳಿಸಿದರು.

ಇತ್ತೀಚೆಗಷ್ಟೇ ಬಸವೇಶ್ವರನಗರ ಠಾಣೆ ವ್ಯಾಪ್ತಿಯಲ್ಲೂ ಇಂಥ ಘಟನೆ ನಡೆದಿತ್ತು. ಪ್ರೀತಿಸುತ್ತಿದ್ದ ಯುವತಿ ಮಾತನಾಡಲು ನಿರಾಕರಿಸಿದ್ದಳೆಂಬ ಕಾರಣಕ್ಕೆ ಸತೀಶ್ ಎಂಬಾತ ದೊಣ್ಣೆಯಿಂದ ವಾಹನಗಳ ಗಾಜು ಒಡೆದಿದ್ದ. ಆತನನ್ನು ಪೊಲೀಸರು ಬಂಧಿಸಿದ್ದರು.

₹ 3.44 ಲಕ್ಷ ಕಿತ್ತ ಇನ್‌ಸ್ಟಾಗ್ರಾಮ್ ಗೆಳತಿ

ಅಪರಾಧ ಸುದ್ದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಜಾಲತಾಣ 'ಇನ್‌ಸ್ಟಾಗ್ರಾಮ್' ಆ್ಯಪ್ ಮೂಲಕ ಪರಿಚಯವಾಗಿದ್ದ ಯುವತಿಯೊಬ್ಬಳು ಉಡುಗೊರೆ ಆಮಿಷವೊಡ್ಡಿ ನಗರದ ನಿವಾಸಿಯೊಬ್ಬರಿಂದ ₹ 3.44 ಲಕ್ಷ ಪಡೆದು ವಂಚಿಸಿದ್ದಾಳೆ.

'ಕುಮಾರಸ್ವಾಮಿ ಲೇಔಟ್ ನಿವಾಸಿಯಾಗಿರುವ 35 ವರ್ಷದ ವ್ಯಕ್ತಿ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಆರೋಪಿ ಎನ್ನಲಾದ ವಾಟ್ಸನ್ ಪಾರಿಸೆ ಎಂಬಾಕೆ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರ ಇನ್‌ಸ್ಟಾಗ್ರಾಮ್ ಆ್ಯಪ್‌ನಲ್ಲಿ ಖಾತೆ ತೆರೆದಿದ್ದರು. ಅಲ್ಲಿಯೇ ಯುವತಿ ಪರಿಚಯವಾಗಿತ್ತು. ನಂತರ ಇಬ್ಬರ ನಡುವೆ ಆತ್ಮೀಯತೆ ಬೆಳೆದಿತ್ತು. ಇಬ್ಬರೂ ಆ್ಯಪ್‌ನಲ್ಲಿ ಮಾತುಕತೆ ನಡೆಸಲಾರಂಭಿಸಿದ್ದರು. 'ನಿನ್ನ ಸ್ನೇಹ ನನಗೆ ತುಂಬಾ ಇಷ್ಟವಾಗಿದೆ. ಸ್ನೇಹದ ಸಂಕೇತವಾಗಿ ನಿನಗೊಂದು ಉಡುಗೊರೆ ಕಳುಹಿಸುತ್ತೇನೆ' ಎಂದು ಯುವತಿ ಹೇಳಿದ್ದಳು.'

'ಕೆಲ ದಿನಬಿಟ್ಟು ದೂರುದಾರರಿಗೆ ಕರೆ ಮಾಡಿದ್ದ ಅಪರಿಚಿತ, 'ವಾಟ್ಸನ್ ಪಾರಿಸೆ ಎಂಬುವರು ನಿಮ್ಮ ಹೆಸರಿಗೆ ಬೆಲೆಬಾಳುವ ಉಡುಗೊರೆಗಳನ್ನು ಕಳುಹಿಸಿದ್ದಾರೆ. ಕೆಲ ಶುಲ್ಕಗಳನ್ನು ಪಾವತಿ ಮಾಡಿದರೆ ನಿಮ್ಮ ವಿಳಾಸಕ್ಕೆ ಉಡುಗೊರೆ ಕಳುಹಿಸಲಾಗುವುದು' ಎಂದಿದ್ದ. ಅದನ್ನು ನಂಬಿದ್ದ ದೂರುದಾರ, ಆರೋಪಿ ಹೇಳಿದ್ದ ಬ್ಯಾಂಕ್ ಖಾತೆಗಳಿಗೆ ಹಂತ ಹಂತವಾಗಿ ₹ 3.44 ಲಕ್ಷ ಹಾಕಿದ್ದರು. ಅದಾದ ನಂತರ ಯಾವುದೇ ಉಡುಗೊರೆ ಬಂದಿಲ್ಲ. ಇನ್‌ಸ್ಟಾಗ್ರಾಮ್ ಗೆಳತಿ ಸಹ ನಾಪತ್ತೆಯಾಗಿದ್ದಾಳೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಊರಿಗೆ ಮರಳಲಾಗದೇ ಸೌದಿಯಲ್ಲಿ ಕಣ್ಣೀರು ಇಡುತ್ತಿರುವ ಮಹಿಳೆಯರು

ಸೌದಿಗೆ ಮಾನವ ಸಾಗಣೆ ದಂಧೆ

• ಬಾಲಕೃಷ್ಣ ಪಿ.ಎಚ್.

ದಾವಣಗೆರೆ: ಅಧಿಕೃತ ವೀಸಾದೊಂದಿಗೆ ಸೌದಿ ಅರೇಬಿಯಾಕ್ಕೆ ಹೋಗಿ ನೆಮ್ಮದಿಯ ಜೀವನ ಕಂಡುಕೊಂಡ ಭಾರತೀಯರ ಸಂಖ್ಯೆ ಅಧಿಕ ಇದೆ. ಇದರ ಜತೆಗೆ ಕೆಲಸ ಕೊಡಿಸುವುದಾಗಿ ಹೇಳಿ, ವಿಸಿಟಿಂಗ್ ವೀಸಾದಲ್ಲಿ ಕರೆದುಕೊಂಡು ಹೋಗಿ ಗೃಹಬಂಧನದಲ್ಲಿ ಇಡುವ ದಂಧೆಯೂ ಅವ್ಯಾಹತವಾಗಿ ನಡೆದಿದೆ. ಈ ರೀತಿ ಅನಧಿಕೃತವಾಗಿ ಸಿಲುಕಿಕೊಂಡಿರುವವರೆಲ್ಲರೂ ಮಹಿಳೆಯರೇ ಆಗಿದ್ದಾರೆ.

ಕರ್ನಾಟಕದ ದಾವಣಗೆರೆ, ತುಮಕೂರು, ಮೈಸೂರು, ಶ್ರೀರಂಗಪಟ್ಟಣ, ಮಂಡ್ಯ ಹೀಗೆ ನಾನಾ ಕಡೆಗಳಿಂದ ಮಹಿಳೆಯರು ಸೌದಿಗೆ ಹೋಗಿ ಸಿಲುಕಿಕೊಂಡಿದ್ದಾರೆ. ಪಂಜಾಬ್, ಉತ್ತರ ಪ್ರದೇಶ, ಬಿಹಾರ ಸಹಿತ ವಿವಿಧ ರಾಜ್ಯಗಳಿಂದಲೂ ಇದೇ ರೀತಿ ಮಹಿಳೆಯರನ್ನು ಸಾಗಾಟ ಮಾಡಲಾಗುತ್ತಿದೆ.

'ನಾನು ಭಾರತಕ್ಕೆ ಬರುವ ಪ್ರಯತ್ನದಲ್ಲಿ ಗಲಾಟೆ ಆಗಿದ್ದರಿಂದ ನನ್ನನ್ನು ಕಫೀಲ್ (ಪ್ರಾಯೋಜಕ) ಮನೆಗೆ ಕರೆತಂದಿದ್ದರು. ಆಗ ಅಲ್ಲಿ ಸಬಿಹಾ ಪರಿಚಯವಾಯಿತು. ಅವರೂ ಸಿಲುಕಿರುವುದು ಗೊತ್ತಾಯಿತು. ಇದಲ್ಲದೇ ಐದಾರು ವರ್ಷಗಳಿಂದ ಸೌದಿಯಿಂದ ಊರಿಗೆ ಮರಳಲಾರದೇ ಸಿಕ್ಕಿಹಾಕಿಕೊಂಡಿರುವ ಹಲವು ಮಹಿಳೆಯರು ಅಲ್ಲಿದ್ದರು. ಅದರಲ್ಲಿ ಮೈಸೂರು, ಮಂಡ್ಯ, ಶ್ರೀರಂಗಪಟ್ಟದವರೂ ಇದ್ದರು. ಬೇರೆ ರಾಜ್ಯದವರೂ ಇದ್ದರು. ಎಲ್ಲರೂ ಬಡತನದಿಂದಾಗಿ ದುಡಿಯಲು ಬಂದವರು. ನನಗೆ ಮತ್ತು ಸಬಿಹಾಗೆ ಹೇಗೋ ಭಾರತಕ್ಕೆ ಮರಳಲು ಅವಕಾಶ ಸಿಕ್ಕಿತು. ಉಳಿದವರು ಇನ್ನೂ ಅಲ್ಲೇ ನರಳುತ್ತಿದ್ದಾರೆ' ಎಂದು ತಿಂಗಳ ಹಿಂದೆ ಭಾರತಕ್ಕೆ ಮರಳಿದ್ದ ಫೈರೋಜಾಬಾನು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.


ಫೈರೋಜಾ ಬಾನು


ಸಬಿಹಾ


ಪಿ.ಎ. ಹಮೀದ್ ಪಡುಬಿದ್ರಿ

'ಭಾರತದಿಂದಷ್ಟೇ ಅಲ್ಲ. ಇಂಡೋನೇಷ್ಯಾ, ಬಾಂಗ್ಲಾ ದೇಶದಿಂದಲೂ ಇದೇ ರೀತಿ ಮಹಿಳೆಯರನ್ನು ಸೌದಿಗೆ ಸಾಗಿಸಲಾಗಿದೆ. ವಿಸಿಟಿಂಗ್ ವೀಸಾದಲ್ಲಿ ಕರೆದುಕೊಂಡು ಹೋಗಿ ಆಮೇಲೆ ಯಾರದ್ದೋ ಮನೆಯಲ್ಲಿ ಬಿಟ್ಟುಬಿಡುತ್ತಾರೆ. ಮನೆಯ ಒಳಗೇ ಇರುವುದರಿಂದ ವೀಸಾ ಇಲ್ಲದೇ ನೆಲೆಸಿದ್ದಾರೆ ಎಂಬುದು ಕೂಡ ಗೊತ್ತಾಗುವುದಿಲ್ಲ' ಎಂದು ಸೌದಿಯಲ್ಲಿರುವ ಕನ್ನಡಿಗ ಪಿ.ಎ. ಹಮೀದ್ ಪಡುಬಿದ್ರಿ ವಿವರಿಸಿದ್ದಾರೆ.

'ನಾನು ಇರುವ ರಿಯಾದ್‌ನಿಂದ ಫೈರೋಜಾಬಾನು, ಸಬಿಹಾ ಸಾವಿರ ಕಿಲೋಮೀಟರ್ ದೂರದಲ್ಲಿದ್ದರು. ಉಳಿದವರೂ ಇದೇ ರೀತಿ ಸಾವಿರಾರು ಕಿಲೋಮೀಟರ್ ದೂರದಲ್ಲಿ ಇರುವುದರಿಂದ ಪತ್ತೆ ಕಾರ್ಯ ಸುಲಭವಲ್ಲ. ನಾನು, ಯಾಸಿನ್ ಕಲಬುರ್ಗಿ, ತ್ರಿಶೂರಿನ ಸಲೀಂ ಹೀಗೆ ಸೌದಿಯಲ್ಲಿರುವ ನಾವು ನಮ್ಮ ಪ್ರಯತ್ನ ಮುಂದುವರಿಸುತ್ತೇವೆ' ಎನ್ನುತ್ತಾರೆ ಅವರು.

ತುಮಕೂರಿನ ಮಹಿಳೆ ಭಾರತಕ್ಕೆ

ದಾವಣಗೆರೆಯಿಂದ ಹೋಗಿ ಸೌದಿಯಲ್ಲಿ ಸಿಲುಕಿದ್ದ ಫೈರೋಜಾಬಾನು ಒಂದು ತಿಂಗಳ ಹಿಂದೆ ಭಾರತಕ್ಕೆ ಮರಳಿದ್ದರು. ಇದೀಗ ತುಮಕೂರಿನಿಂದ ಮೂರು ವರ್ಷಗಳ ಹಿಂದೆ ಹೋಗಿ ಸೌದಿಯಲ್ಲಿ ಸಿಲುಕಿದ್ದ ಸಬಿಹಾ ಕೂಡ ಗುರುವಾರ ಜೆದ್ದಾದಿಂದ ಹೊರಟು ಕೊಚ್ಚಿನ್ ವಿಮಾನ ನಿಲ್ದಾಣಕ್ಕೆ ಬಂದಿದ್ದಾರೆ.

ಫೈರೋಜಾಬಾನು ಅವರು ಸೌದಿಯಲ್ಲಿ ಸಿಲುಕಿರುವ ಬಗ್ಗೆ 'ಪ್ರಜಾವಾಣಿ' ವರದಿ ಮಾಡಿತ್ತು. ಸೌದಿಯಲ್ಲಿದ್ದ ಹಮೀದ್ ಪಡುಬಿದ್ರಿ prajavani.netನಲ್ಲಿ ಈ ವರದಿ ಓದಿ ಅವರನ್ನು ಪತ್ತೆ ಹಚ್ಚಲು ಪ್ರಯತ್ನಿಸುತ್ತಿದ್ದಾಗ ತುಮಕೂರಿನ ಸಬಿಹಾ ಅವರೂ ಸಿಲುಕಿಕೊಂಡಿರುವುದು ಬೆಳಕಿಗೆ ಬಂದಿತ್ತು. ಈ ಇಬ್ಬರನ್ನೂ ಊರಿಗೆ ಕಳುಹಿಸುವ ಹೊತ್ತಿಗೆ ಇಂಥ ಹಲವು ಮಹಿಳೆಯರು ಸಿಲುಕಿಕೊಂಡಿರುವುದು ಗೊತ್ತಾಗಿದೆ.

ಪರಿಶುದ್ಧ ನೀರಿನ ಘಟಕಗಳ ಕಳಪೆ ನಿರ್ವಹಣೆ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಪರಿಶುದ್ಧ ನೀರಿನ ಘಟಕಗಳ ಸರಿಯಾದ ನಿರ್ವಹಣೆ ಇಲ್ಲದೇ ಮಾವಳ್ಳಿಪುರ ಗ್ರಾಮದ ಸುತ್ತಮುತ್ತಲಿನ 14 ಗ್ರಾಮಗಳ ಗ್ರಾಮಸ್ಥರು ಶುದ್ಧ ಕುಡಿಯುವ ನೀರಿಗಾಗಿ ಪರದಾಡುವಂತೆ ಆಗಿದೆ.

ಮಾವಳ್ಳಿಪುರ ಗ್ರಾಮದಲ್ಲಿ ಸುರಿದ ಕಸವನ್ನು ಬಿಬಿಎಂಪಿಯು ವೈಜ್ಞಾನಿಕವಾಗಿ ವಿಲೇವಾರಿ ಮಾಡದೇ ಇದ್ದಿದ್ದರಿಂದ ನೂರಾರು ಎಕರೆ ಭೂ ಒಡಲು ಕಸದಿಂದ ಹೊರ ಹೊಮ್ಮಿದ ವಿಷಯುಕ್ತ ರಾಸಾಯನಿಕವನ್ನು ಹೀರಿ ಕಲುಷಿತಗೊಂಡಿತ್ತು. ಸಾವಿರಾರು ಅಡಿ ಆಳದಿಂದ ಕೊರೆದ ಕೊಳವೆ ಬಾವಿಯಿಂದಲೂ ವಿಷಯುಕ್ತ ನೀರು ಹೊರ ಬಂದಿತ್ತು. ಇದರಿಂದ ಗ್ರಾಮಸ್ಥರಿಗೆ ಕುಡಿಯಲು ಶುದ್ಧ ನೀರು ಸಿಗದೇ ಅನೇಕ ರೋಗಗಳಿಗೆ ತುತ್ತಾದರು. ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಮೂಲಕ ಈ ಸಮಸ್ಯೆಯನ್ನು ಗಮನಕ್ಕೆ ತರಲಾಯಿತು. ಇದನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಾಲಯವು ಮಾವಳ್ಳಿಪುರ ಗ್ರಾಮದ ಸುತ್ತಮುತ್ತಲಿನ 14 ಗ್ರಾಮಗಳಿಗೆ ಉಚಿತವಾಗಿ ಪರಿಶುದ್ಧ ನೀರನ್ನು ಒದಗಿಸುವಂತೆ ಆದೇಶ ನೀಡಿತ್ತು. ಆದರೆ, ರಾಮಗೊಂಡನಹಳ್ಳಿ ಗ್ರಾಮದಲ್ಲಿ ಸ್ಥಾಪಿಸಿದ್ದ ನಾಲ್ಕು ಪರಿಶುದ್ಧ ನೀರಿನ ಘಟಕಗಳು ಒಂದು ವರ್ಷ ಮಾತ್ರ ಕಾರ್ಯನಿರ್ವಹಿಸಿ ಸ್ಥಗಿತಗೊಂಡಿವೆ. ಪರಿಶುದ್ಧ ನೀರಿನ ಘಟಕಗಳ ನೀರಿನ ಗುಣಮಟ್ಟದ ಬಗ್ಗೆ ಬಿಬಿಎಂಪಿ ಪರಿಶೀಲನೆ ಮಾಡುತ್ತಿಲ್ಲ.


ಶಿವಕೋಟೆ ಗ್ರಾಮದಲ್ಲಿರುವ ಪರಿಶುದ್ಧ ನೀರಿನ ಘಟಕಕ್ಕೆ ಕಾಯಿನ್ ಬೂತ್ ಅಳವಡಿಸಲಾಗಿದೆ.

'ಹೈಕೋರ್ಟ್ ಆದೇಶ ನೀಡಿದ ಕೂಡಲೇ ಪಾಲಿಕೆಯು ಹೈದರಾಬಾದ್‌ನ ಸ್ಮಾರ್ಟ್ ಕಂಪನಿಗೆ ಪರಿಶುದ್ಧ ನೀರಿನ ಘಟಕಗಳ ನಿರ್ವಹಣೆಗೆ ಗುತ್ತಿಗೆ ನೀಡಿತ್ತು. ಆದರೆ, ಆ ಕಂಪನಿಯು ಕೇವಲ ಒಂದು ವರ್ಷಗಳ ಕಾಲ ಕಾರ್ಯನಿರ್ವಹಿಸಿತ್ತು. ನಂತರ ಬಿಬಿಎಂಪಿ ಪರಿಶುದ್ಧ ನೀರಿನ ಘಟಕಗಳನ್ನು ನಿರ್ವಹಣೆ ಮಾಡುತ್ತಿದೆ. ಆದರೆ, ಪರಿಶುದ್ಧ ನೀರಿನ ಘಟಕಗಳ ಗುಣಮಟ್ಟ ಉತ್ತಮವಾಗಿಲ್ಲ. ಘಟಕಗಳಲ್ಲಿ ಶೇಕಡ 20ರಷ್ಟು ನೀರು ಹೊರ ಹೋಗಿ ಶೇಕಡ 30ರಷ್ಟು ಪರಿಶುದ್ಧ ನೀರು ಜನರಿಗೆ ಸಿಗಬೇಕು. ಆದರೆ, ಈಗ ಈ ಕ್ರಮ ಅನುಸರಿಸುತ್ತಿಲ್ಲ' ಎಂದು ಮಾವಳ್ಳಿಪುರ ಗ್ರಾಮದ ಸಾರ್ವಜನಿಕ ಹಿತಾಸಕ್ತಿ ಅರ್ಜಿದಾರ ಮತ್ತು ವಕೀಲ ಶ್ರೀನಿವಾಸ್ ಬೇಸರ ವ್ಯಕ್ತಪಡಿಸಿದರು.

'ಸ್ಮಾರ್ಟ್ ಕಂಪನಿಯು ಪ್ರತಿ ಆರು ತಿಂಗಳಿಗೆ ಒಮ್ಮೆ ನೀರಿನ ಗುಣಮಟ್ಟ ಪರಿಶೀಲಿಸಿ ವರದಿ ನೀಡುತ್ತಿತ್ತು. ನ್ಯಾಯಾಲಯವು ಸ್ಪಷ್ಟವಾಗಿ ಉಚಿತ ನೀರನ್ನು ನೀಡಿ ಎಂದು ಹೇಳಿದರೂ ಶಿವಕೋಟೆ, ಮೈಲಪ್ಪನಹಳ್ಳಿ ಗ್ರಾಮಗಳಲ್ಲಿ ನಾಣ್ಯಗಳ ಪೆಟ್ಟಿಗೆ ಅಳವಡಿಸಲಾಗಿದೆ. ಅದು ಅಲ್ಲದೇ ಕೆಲವು ಖಾಸಗಿ ವ್ಯಕ್ತಿಗಳಿಗೆ ನಿರ್ವಹಣೆಗೆ ನೀಡಿದ್ದಾರೆ. ಅವರು ಲಾಭದ ಉದ್ದೇಶಕ್ಕಾಗಿ ಮಾತ್ರ ನೀರು ನೀಡುತ್ತಿದ್ದಾರೆ' ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

'ಕಸದ ವಿಷಯುಕ್ತ ಕಲುಷಿತ ನೀರಿನಿಂದ ಜನರ ಆರೋಗ್ಯ ಮತ್ತು ಪರಿಸರ ಎಲ್ಲವೂ ಹಾಳಾಗಿ ಹೋಗಿದೆ. ಗುಣಮಟ್ಟದ ನೀರನ್ನು ಬಿಬಿಎಂಪಿ ಒದಗಿಸಬೇಕು. ಆದರೆ, ಶುದ್ಧ ನೀರನ್ನು ಒದಗಿಸುವಲ್ಲಿ ಅಧಿಕಾರಿಗಳು ವಿಫಲವಾಗಿದ್ದಾರೆ" ಎಂದು ಅವರು ತಿಳಿಸಿದರು.

ಯಾವ ಗ್ರಾಮಗಳಲ್ಲಿ ಎಷ್ಟು ಪರಿಶುದ್ಧ ನೀರಿನ ಘಟಕ

ಮಾವಳ್ಳಿಪುರ- 5, ಲಿಂಗರಾಜಪುರ- 1, ಮುತ್ತುಗದ ಹಳ್ಳಿ- 1, ಮೈಲಪ್ಪನ ಹಳ್ಳಿ- 1, ಕುರುಬರಹಳ್ಳಿ -2, ಶಿವಕೋಟೆ -3, ಮತ್ಕೂರು-1, ಕೊಂಡಶೆಟ್ಟಿಹಳ್ಳಿ- 1, ಮಧುಗಿರಿಹಳ್ಳಿ- 1, ಚಿಕ್ಕಬ್ಯಾಲಕೆರೆ- 1, ದೊಡ್ಡಬ್ಯಾಲಕೆರೆ -2, ಸುಬೇದಾರ್ ಪಾಳ್ಯ -1, ರಾಮಗೊಂಡನಹಳ್ಳಿ-4.

ಯುವಕರ ಸೆಳೆಯುವ ಪಾಕ್ ಬೆಂಬಲಿತ ಸಂಘಟನೆಗಳು

ಕೇರಳದಲ್ಲಿ ಭಯೋತ್ಪಾದನೆ ಚಟುವಟಿಕೆ ಹೆಚ್ಚಿಸಲು ಯತ್ನ!

ತಿರುವನಂತಪುರ: ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಪ್ರಾಬಲ್ಯ ಹೆಚ್ಚಾಗುತ್ತಿದ್ದಂತೆಯೇ ಪಾಕಿಸ್ತಾನ ಪ್ರಾಯೋಜಿತ ಭಯೋತ್ಪಾದನೆ ಸಂಘಟನೆಗಳು ಕಾಶ್ಮೀರ ಮಾತ್ರವಲ್ಲ, ಕೇರಳದ ಮೇಲೆಯೂ ಕಣ್ಣಿಟ್ಟಿವೆ.

ತಾಲಿಬಾನ್ ಮೂಲಕ ಪಾಕಿಸ್ತಾನ ಬೆಂಬಲಿತ ಸಂಘಟನೆಗಳು ಭಾರತವು ಸೇರಿದಂತೆ ವಿವಿಧೆಡೆ ತಮ್ಮ ಚಟುವಟಿಕೆಗಳನ್ನು ತೀವ್ರಗೊಳಿಸಲು ಯತ್ನಿಸುತ್ತಿವೆ.

ಕೇರಳದ ನೂರಾರು ಯುವಕರು ಹಲವು ವರ್ಷಗಳಿಂದ ಇಸ್ಲಾಂ ಉಗ್ರಗಾಮಿ ಸಂಘಟನೆಗಳನ್ನು ಸೇರಿದ್ದಾರೆ ಮತ್ತು ಹಲವರು ಎನ್‌ಕೌಂಟರ್‌ನಲ್ಲಿ ಸಾವಿಗೀಡಾಗಿರುವುದು ವರದಿಯಾಗಿದೆ. ಈಗ ಮತ್ತೊಮ್ಮೆ ಈ ಸಂಘಟನೆಗಳು ತಮ್ಮ ಚಟುವಟಿಕೆಗಳನ್ನು ವಿಸ್ತರಿಸುವ ಕಾರ್ಯದಲ್ಲಿ ತೊಡಗಿವೆ ಎನ್ನಲಾಗಿದೆ.

'ತಾಲಿಬಾನ್ ಬಳಸಿಕೊಂಡು ಪಾಕಿಸ್ತಾನ ಪ್ರಾಯೋಜಿತ ಚಟುವಟಿಕೆಗಳು ಅಫ್ಗಾನಿಸ್ತಾನದಲ್ಲಿ ಸ್ಥಗಿತಗೊಳ್ಳುವ ಲಕ್ಷಣಗಳು ಗೋಚರಿಸುತ್ತಿಲ್ಲ. ಹೀಗಾಗಿ, ಮುಂದಿನ ದಿನಗಳಲ್ಲಿ ಕಾಶ್ಮೀರ ಮತ್ತು ಕೇರಳದಲ್ಲಿ ಚಟುವಟಿಕೆಗಳನ್ನು ಹೆಚ್ಚಿಸಬಹುದು' ಎಂದು ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಮಿರಪುರದ ಲೇಖಕ ಮತ್ತು ಕಾರ್ಯಕರ್ತರಾಗಿರುವ ಅಮ್ಜದ್ ಮಿರ್ಜಾ ಅಭಿಪ್ರಾಯಪಟ್ಟಿದ್ದಾರೆ.

'ಕೇರಳದಲ್ಲಿ ಹಲವು ವರ್ಷಗಳಿಂದ ಭಯೋತ್ಪಾದನೆಗೆ ಸಂಬಂಧಿಸಿದ ಚಟುವಟಿಕೆಗಳನ್ನು ಉದ್ದೇಶಪೂರ್ವಕವಾಗಿಯೇ ಎಲ್ಲ ರೀತಿಯಿಂದ ಯೋಚಿಸಿಯೇ ಹೆಚ್ಚಿಸಲಾಗಿದೆ. ಇದು ಪಾಕಿಸ್ತಾನಿ ಜಿಹಾದಿ ಮಿಲಿಟರಿಯ ಕಾರ್ಯತಂತ್ರ' ಎಂದು ಅವರು ವಿಶ್ಲೇಷಿಸಿದ್ದಾರೆ.

ತಾಲಿಬಾನ್ ಚಟುವಟಿಕೆಗಳ ಬಗ್ಗೆ ಇತ್ತೀಚೆಗೆ ಲೇಖನ ಬರೆದಿರುವ ಮಿರ್ಜಾ ಅವರು, 'ಒಂದು ವೇಳೆ, ಕಾಬೂಲ್ ಅನ್ನು ತಾಲಿಬಾನ್ ನಿಯಂತ್ರಣಕ್ಕೆ ತೆಗೆದುಕೊಂಡರೆ, ಕೇರಳದ ಜಿಹಾದಿಗಳನ್ನು ಪಾಕಿಸ್ತಾನವು ತನ್ನ ಅಸ್ತ್ರವನ್ನಾಗಿ ಬಳಸಿಕೊಳ್ಳುತ್ತದೆ. ಈ ಮೂಲಕ ಭಾರತದಲ್ಲಿ ಭಯೋತ್ಪಾದನೆ ಚಟುವಟಿಕೆಗಳನ್ನು ಹೆಚ್ಚಿಸಲಿದೆ' ಎಂದು ವಿವರಿಸಿದ್ದಾರೆ.

ಆದರೆ, ಈ ಅಭಿಪ್ರಾಯಗಳಿಗೆ ಆಧಾರ ಇಲ್ಲ ಎಂದು ಗುಪ್ತ ದಳದ ಹಿರಿಯ ಅಧಿಕಾರಿಯೊಬ್ಬರು ಅಭಿಪ್ರಾಯಪಟ್ಟಿದ್ದಾರೆ.

'ಕೆಲವು ಸಂಘಟನೆಗಳು ಯುವಕರನ್ನು ಸೆಳೆದಿರಬಹುದು. ಆದರೆ, ಈ ರೀತಿಯ ಹೇಳಿಕೆಗಳನ್ನು ನೀಡಲು ಅಥವಾ ಅಭಿಪ್ರಾಯ ವ್ಯಕ್ತಪಡಿಸಲು ಇದೇ ಅಂಶವೇ ಪ್ರಮುಖ ಆಧಾರ ಅಲ್ಲ. ಬೇಹುಗಾರಿಕೆ ಮತ್ತು ಭದ್ರತಾ ಇಲಾಖೆಗಳು ನಿರಂತರವಾಗಿ ಕಟ್ಟೆಚ್ಚರವಹಿಸಿವೆ ಮತ್ತು ಉಗ್ರರ ಚಟುವಟಿಕೆಗಳನ್ನು ವಿಫಲಗೊಳಿಸಿವೆ' ಎಂದು ಅವರು ಪ್ರತಿಪಾದಿಸಿದ್ದಾರೆ.

ಐಎಸ್ ಸಂಘಟನೆಗೆ ಸುಮಾರು 100 ಮಂದಿ ಕೇರಳದವರು ಸೇರಿದ್ದಾರೆ ಮತ್ತು ಕನಿಷ್ಠ 28 ಮಂದಿ ಎನ್‌ಕೌಂಟರ್‌ಗಳಲ್ಲಿ ಸಾವಿಗೀಡಾಗಿದ್ದಾರೆ ಎಂದು ಹೇಳಲಾಗಿದೆ. ಕೇರಳದಲ್ಲಿ ಐಎಸ್ ಉಗ್ರರು ಇದ್ದಾರೆ ಎಂದು ವಿಶ್ವಸಂಸ್ಥೆಯ ಭಯೋತ್ಪಾದನೆ ಕುರಿತಾದ ವರದಿಯಲ್ಲಿ ಉಲ್ಲೇಖಿಸಲಾಗಿದೆ.

'ಕೇರಳದಲ್ಲಿ ಉಗ್ರಗಾಮಿ ಚಟುವಟಿಕೆಗಳು ಹೆಚ್ಚುತ್ತಿರುವುದು ಆತಂಕಕಾರಿ. ರಾಜ್ಯವು ಉಗ್ರಗಾಮಿ ಸಂಘಟನೆಗಳಿಗೆ ಯುವಕರನ್ನು ಸೇರಿಸುವ ನೇಮಕಾತಿ ಕೇಂದ್ರವಾಗುತ್ತಿದೆ. ಅತಿ ಹೆಚ್ಚು ಶಿಕ್ಷಣ ಪಡೆದ ಯುವಕರು ಇಲ್ಲಿ ಲಭ್ಯವಾಗುತ್ತಿದ್ದಾರೆ' ಎಂದು ಕಳೆದ ತಿಂಗಳು ನಿವೃತ್ತಿಯಾದ ರಾಜ್ಯ ಪೊಲೀಸ್ ಪಡೆಯ ಮುಖ್ಯಸ್ಥರಾಗಿದ್ದ ಲೋಕನಾಥ್ ಬೆಹೆರಾ ಕೆಲವು ಮಾಧ್ಯಮಗಳಿಗೆ ಹೇಳಿಕೆ ನೀಡಿದ್ದರು.

ಚಿತ್ರಾವಳಿ



ಬಿಬಿಎಂಪಿ ಮಹಿಳಾ ಮಾರ್ಷಲ್‌ವೊಬ್ಬರು ಕೆ.ಆರ್‌.ಮಾರುಕಟ್ಟೆ ಬಳಿ ಮಾಸ್ಕ್ ಧರಿಸದ ಸಾರ್ವಜನಿಕರಿಗೆ ಗುರುವಾರ ದಂಡ ವಿಧಿಸಿದರು –ಪ್ರಜಾವಾಣಿ ಚಿತ್ರ


ರಾಜಭವನ ರಸ್ತೆಯಲ್ಲಿ ನಡೆಯುತ್ತಿರುವ ಸ್ಮಾರ್ಟ್‌ಸಿಟಿ ಯೋಜನೆಯ ಕಾಮಗಾರಿಯ ಕಾರ್ಮಿಕರನ್ನು ಟ್ರ್ಯಾಕ್ಟರ್‌ನಲ್ಲಿ ಗುರುವಾರ ಕರೆತರಲಾಯಿತು – ಪ್ರಜಾವಾಣಿ ಚಿತ್ರ

ಬಿಡುಗಡೆಯಾಗದ ಹಣ: ಫಲಾನುಭವಿಗಳಿಗೆ ನಿರಾಸೆ

ಮಾತೃವಂದನಾ: ಸಿಗದ ಅನುದಾನ

• ಆರ್.ಜಿತೇಂದ್ರ

ರಾಮನಗರ: ಕೇಂದ್ರ ಸರ್ಕಾರ ಪುರಸ್ಕೃತ ಮಾತೃ ವಂದನಾ ಯೋಜನೆಗೆ ಅನುದಾನ ಬಿಡುಗಡೆ ವಿಳಂಬವಾಗಿದ್ದು, ಕಳೆದ ಏಳು ತಿಂಗಳಿಂದಲೂ ಫನಾನುಭವಿಗಳ ಖಾತೆಗೆ ಹಣ ಜಮೆ ಆಗಿಲ್ಲ.

ಗರ್ಭಿಣಿ ಹಾಗು ಬಾಣಂತಿಯರ ಆರೈಕೆ, ಪೌಷ್ಟಿಕ ಆಹಾರ ಸೇವನೆಗಾಗಿ ಕೇಂದ್ರ ಸರ್ಕಾರವು 2017ರ ಜನವರಿಯಿಂದ ಈ ಯೋಜನೆ ಜಾರಿಗೆ ತಂದಿದೆ. ಗರ್ಭಿಣಿಯರಿಗೆ ಮೊದಲ ಹಂತದಲ್ಲಿ 1 ಸಾವಿರ, ಆರು ತಿಂಗಳ ಪ್ರಸವದ ಅವಧಿಯಲ್ಲಿ 2 ಸಾವಿರ ಹಾಗೂ ಮಗು ಜನನದ ಮೂರು ತಿಂಗಳ ಬಳಿಕ 2 ಸಾವಿರ ಸೇರಿದಂತೆ ಒಟ್ಟು 5 ಸಾವಿರ ಹಣವನ್ನು ಫಲಾನುಭವಿಗಳ ಖಾತೆಗೆ ನೇರ ವರ್ಗಾವಣೆ ಮಾಡಲಾಗುತ್ತಿದೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮೂಲಕ ಸದ್ಯ ಯೋಜನೆಗೆ ಅರ್ಜಿ ಆಹ್ವಾನಿಸಲಾಗಿದೆ. ಆದರೆ ಕಳೆದ ಡಿಸೆಂಬರ್‌ನಿಂದಲೂ ಇದಕ್ಕೆ ಹಣ ಬಿಡುಗಡೆ ಆಗಿಲ್ಲ. ರಾಜ್ಯದಾದ್ಯಂತ ಈ ಸಮಸ್ಯೆ ಇದೆ. ಇದರಿಂದ ಯೋಜನೆಯ ಉದ್ದೇಶವೇ ಈಡೇರದಂತೆ ಆಗಿದೆ ಎಂದು ಫಲಾನುಭವಿಗಳು ಬೇಸರ ವ್ಯಕ್ತಪಡಿಸುತ್ತಾರೆ.

ಸದ್ಯ ಅನುದಾನದ ಕೊರತೆ ಇದ್ದು, ಕೆಲ ದಿನದಲ್ಲೇ ಕೇಂದ್ರದಿಂದ ಫಲಾನುಭವಿಗಳ ಖಾತೆಗೆ ನೇರವಾಗಿ ಹಣ ಸಂದಾಯ ಆಗಲಿದೆ. ಈ ಸಾಲಿಗೆ ಮತ್ತೆ ಅರ್ಜಿ ಆಹ್ವಾನಿಸಿದ್ದೇವೆ

ಸಿ.ವಿ. ರಾಮನ್ ಉಪನಿರ್ದೇಶಕ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ

ಯೋಜನೆಗೆ ನೋಂದಾಯಿಸಿದ್ದು, ಮೊದಲ ಕಂತಿನ ಹಣ ಮಾತ್ರ ಬಂದಿತ್ತು. ಕಳೆದ ಆರು ತಿಂಗಳಿಂದ ನನ್ನ ಖಾತೆಗೆ ಹಣ ಸಂದಾಯ ಆಗಿಲ್ಲ. ಸಕಾಲದಲ್ಲಿ ಕೊಡದೇ ಹೋದರೆ ಏನು ಪ್ರಯೋಜನ?

ಸ್ಫೂರ್ತಿ, ರಾಮನಗರ ನಿವಾಸಿ

'ವಿದ್ಯಾರ್ಥಿಗಳ ಜಾಮೀನು ರದ್ದು ಸಾಧ್ಯತೆ ಇಲ್ಲ'

ಪ್ರಜಾವಾಣಿ ವಾರ್ತೆ


ನವದೆಹಲಿ: ವಿದ್ಯಾರ್ಥಿ ಕಾರ್ಯಕರ್ತರಾದ ಆಸಿಫ್ ಇಕ್ಬಾಲ್ ತನ್ಹಾ, ದೇವಾಂಗನಾ ಕಾಲಿತಾ ಮತ್ತು ನತಾಶಾ ನರ್ವಾಲ್ ಅವರಿಗೆ ನೀಡಿರುವ ಜಾಮೀನು ರದ್ದುಪಡಿಸುವ ಸಾಧ್ಯತೆಗಳು ಕಡಿಮೆ ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ದೆಹಲಿಯಲ್ಲಿ ನಡೆದ ಕೋಮು ಗಲಭೆಗೆ ಸಂಬಂಧಿಸಿದಂತೆ ಈ ಮೂವರನ್ನು ಕಳೆದ ವರ್ಷ ಬಂಧಿಸಲಾಗಿತ್ತು. ಬಳಿಕ, ಜೂನ್ 15ರಂದು ದೆಹಲಿ ಹೈಕೋರ್ಟ್ ಜಾಮೀನು ನೀಡಿತ್ತು.

ಈ ಜಾಮೀನಿನ ವಿರುದ್ಧ ದೆಹಲಿ ಪೊಲೀಸ್ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ಸುಪ್ರಿಂ ಕೋರ್ಟ್, 'ಈ ಪ್ರಕರಣದಲ್ಲಿ ಜಾಮೀನು ನೀಡಿರುವುದು ಒಂದು ವಿಷಯವಾದರೆ, ಜಾಮೀನು ನೀಡುವ ಪ್ರಕ್ರಿಯೆಯಲ್ಲಿ ನಡೆಸಿದ ವಿಶ್ಲೇಷಣೆಯೂ ಇನ್ನೊಂದು ಭಾಗವಾಗಿದೆ. ಈ ವಿದ್ಯಾರ್ಥಿಗಳನ್ನು ಮತ್ತೆ ವಶಕ್ಕೆ ಒಪ್ಪಿಸುವ ಸಾಧ್ಯತೆಗಳು ಕಡಿಮೆ' ಎಂದು ಹೇಳಿದೆ.

ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಮತ್ತು ಹೇಮಂತ್ ಗುಪ್ತಾ ಅವರನ್ನೊಳಗೊಂಡ ಪೀಠವು ವಿಚಾರಣೆ ಸಂದರ್ಭದಲ್ಲಿ ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಷೇರುಪೇಟೆ ವಹಿವಾಟು 639



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,632
ಇಂದಿನ ಅಂತ್ಯ	15,824
▲	192
ದಿನದ ಗರಿಷ್ಠ	15,834

ವಿನಿಮಯ ದರ

$ ಡಾಲರ್	74.46
£ ಪೌಂಡ್	102.37
€ ಯುರೊ	87.82
¥ ಯೆನ್ (100ಕ್ಕೆ)	68

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹525
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹525

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1470 (1470)
ಸೋಯಾ (ರಿಫೈನ್ಡ್)	₹1395 (1400)
ಸೂರ್ಯಕಾಂತಿ (ರಿಫೈನ್ಡ್)	₹1460(1450)
ಪಾಮೋಲಿನ್	₹1210(1215)

ಬೆಂಗಳೂರು ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದೊಡ್ಡ	₹1800-2000
ಮಧ್ಯಮ	₹1600-1800
ಸಣ್ಣ	₹1000-1600

ಕೊಬ್ಬರಿ ಧಾರಣೆ

ಪುತ್ತೂರು	₹4000-10500
ತುಮಕೂರು	₹8100-9500
ತುರುವೇಕೆರೆ	₹15800-15800

ತೆಂಗು ಧಾರಣೆ (ಸಾವಿರಕ್ಕೆ)

1ನೇ ದರ್ಜೆ ₹21000-27000
2ನೇ ದರ್ಜೆ ₹10000-14000

11ನೇ ವರ್ಷದ ಚಿರಸ್ಮರಣೆ



ಶ್ರೀಮತಿ ಕೆ. ನಾರಾಯಣಿ

ಜನನ: 12-06-1950 ಮರಣ: 23-07-2010

ಸಂಕ್ಷಿಪ್ತ ಸುದ್ದಿ

ಎಂಎಸ್‌ಎಂಇ: 13 ಲಕ್ಷ ಖಾತೆಗಳ ಸಾಲ ಮರುಹೊಂದಾಣಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಜೂನ್ 25ರವರೆಗೆ 13.06 ಲಕ್ಷ ಕಿರು, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳ (ಎಂಎಸ್‌ಎಂಇ) ₹ 55,333 ಕೋಟಿ ಮೊತ್ತದ ಸಾಲವನ್ನು ಮರುಹೊಂದಾಣಿಕೆ ಮಾಡಿವೆ ಎಂದು ಕೇಂದ್ರ ಸರ್ಕಾರವು ಲೋಕಸಭೆಗೆ ಮಾಹಿತಿ ನೀಡಿದೆ.

ಎಂಎಸ್‌ಎಂಇ ಸಚಿವ ನಾರಾಯಣ್ ರಾಣೆ ಅವರು ಗುರುವಾರ ಈ ಮಾಹಿತಿ ನೀಡಿದ್ದಾರೆ. ತುರ್ತು ಸಾಲ ಖಾತರಿ ಯೋಜನೆಯ ಅಡಿ ಜುಲೈ 2ರವರೆಗೆ ₹ 2.73 ಲಕ್ಷ ಕೋಟಿ ಮಂಜೂರು ಮಾಡಲಾಗಿದೆ ಎಂದು ಅವರು ತಿಳಿಸಿದ್ದಾರೆ. ಈ ಯೋಜನೆಯ ಅಡಿ, ಕೇಂದ್ರ ಸರ್ಕಾರದ ಶೇ 100ರಷ್ಟು ಖಾತರಿಯೊಂದಿಗೆ ಎಂಎಸ್‌ಎಂಇ-ಗಳನ್ನೂ ಸೇರಿದಂತೆ ಉದ್ದಿಮೆಗಳಿಗೆ ತುರ್ತು ಸಾಲ ಸಿಗುತ್ತದೆ.

ಮಿಶ್ರಲೋಹದ ಉಕ್ಕು ತಯಾರಿಕೆಗೆ ಉತ್ತೇಜನ

ನವದೆಹಲಿ: ಮಿಶ್ರಲೋಹದ ಉಕ್ಕು ಆಮದು ಪ್ರಮಾಣವನ್ನು ತಗ್ಗಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು, ಉತ್ಪಾದನೆ ಆಧಾರಿತ ಉತ್ತೇಜನ (ಪಿಎಲ್‌ಐ) ಯೋಜನೆಯ ಅಡಿಯಲ್ಲಿ ಈ ವಲಯಕ್ಕೆ ₹ 6,322 ಕೋಟಿ ಘೋಷಿಸಿದೆ. ಈ ಕ್ರಮದಿಂದಾಗಿ 5.25 ಲಕ್ಷ ಹೊಸ ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆ ಇದೆ.

'ಜಗತ್ತಿನಲ್ಲಿ ಕಚ್ಚಾ ಉಕ್ಕು ತಯಾರಿಕೆಯಲ್ಲಿ ಭಾರತವು ಎರಡನೆಯ ಸ್ಥಾನದಲ್ಲಿದೆ. ಹೀಗಿದ್ದರೂ ದೇಶವು ಮಿಶ್ರ ಲೋಹದ ಉಕ್ಕು ಆಮದು ಮಾಡಿಕೊಳ್ಳುವ ಸ್ಥಿತಿಯಲ್ಲಿ ಇದೆ. ಹೊಸ ಕ್ರಮವು, ಮಿಶ್ರಲೋಹದ ಉಕ್ಕು ತಯಾರಿಕೆಯಲ್ಲಿ ಭಾರತವನ್ನು ಸ್ವಾವಲಂಬಿ ಆಗಿಸುವ ಉದ್ದೇಶ ಹೊಂದಿದೆ' ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ತಿಳಿಸಿದರು.

ಹೊಸ ಕ್ರಮದಿಂದಾಗಿ ₹ 40 ಸಾವಿರ ಕೋಟಿ ಹೂಡಿಕೆ ಆಗಲಿದೆ. ಈ ಯೋಜನೆಯು ಐದು ವರ್ಷಗಳವರೆಗೆ ಜಾರಿಯಲ್ಲಿ ಇರಲಿದೆ. ಭಾರತದಲ್ಲಿ ನೋಂದಣಿ ಆಗಿರುವ, ಮಿಶ್ರಲೋಹದ ಉಕ್ಕು ತಯಾರಿಕೆಯಲ್ಲಿ ತೊಡಗಿಸಿಕೊಂಡಿರುವ ಯಾವುದೇ ಕಂಪನಿಗೆ ಈ ಯೋಜನೆಯಲ್ಲಿ ಭಾಗಿಯಾಗಲು ಅವಕಾಶ ಇದೆ.

'ವರ್ಷವೊಂದರಲ್ಲಿ ಒಂದು ಕಂಪನಿಗೆ ಗರಿಷ್ಠ ₹ 200 ಕೋಟಿ ನೆರವು ನೀಡಬಹುದು' ಸಚಿವರು ಎಂದು ಹೇಳಿದರು.

ಬಿಪಿಸಿಎಲ್ ಖಾಸಗೀಕರಣ: ಎಫ್‌ಡಿಐ ಮಿತಿ ಹೆಚ್ಚಳ

ನವದೆಹಲಿ (ಪಿಟಿಐ): ಖಾಸಗಿಯವರಿಗೆ ಮಾರಾಟ ಮಾಡಲು ಗುರುತಿಸಲಾಗಿರುವ, ಸರ್ಕಾರಿ ಸ್ವಾಮ್ಯದ ತೈಲ ಸಂಸ್ಕರಣಾ ಕಂಪನಿಗಳಲ್ಲಿ ವಿದೇಶಿ ಬಂಡವಾಳ (ಎಫ್‌ಡಿಐ) ಹೂಡಿಕೆಗೆ ಇರುವ ಮಿತಿಯನ್ನು ಹೆಚ್ಚಿಸುವ ಪ್ರಸ್ತಾವಕ್ಕೆ ಕೇಂದ್ರ ಸಚಿವ ಸಂಪುಟವು ಗುರುವಾರ ಅನುಮೋದನೆ ನೀಡಿದೆ.

ಇದರಿಂದಾಗಿ ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ಕಂಪನಿಯನ್ನು ಮಾರಾಟ ಮಾಡಲು ಕೇಂದ್ರಕ್ಕೆ ಸಹಾಯ ಆಗಲಿದೆ ಎನ್ನಲಾಗಿದೆ.

ಈಗ ತೈಲ ಸಂಸ್ಕರಣಾ ಕಂಪನಿಗಳಲ್ಲಿ ಎಫ್‌ಡಿಐ ಮಿತಿ ಶೇಕಡ 49ರಷ್ಟು ಇದೆ. ಇದನ್ನು ಶೇ 100ಕ್ಕೆ ಹೆಚ್ಚಿಸಲು ಕೇಂದ್ರವು ಒಪ್ಪಿಗೆ ನೀಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಮಿತಿಯು ಮುಂದುವರಿದಿದ್ದರೆ ಬಿಪಿಸಿಎಲ್ ಕಂಪನಿಯನ್ನು ವಿದೇಶಿ ಕಂಪನಿಗೆ ಮಾರಾಟ ಮಾಡಲು ಸಾಧ್ಯವಾಗುತ್ತಿರಲಿಲ್ಲ.

ಬಿಪಿಸಿಎಲ್‌ನಲ್ಲಿ ಕೇಂದ್ರ ಹೊಂದಿರುವ ಶೇ 52.98ರಷ್ಟು ಷೇರು ಖರೀದಿಸಲು ಆಸಕ್ತಿ ತೋರಿರುವ ಮೂರು ಕಂಪನಿಗಳ ಪೈಕಿ ಎರಡು ವಿದೇಶಿ ಮೂಲದವು. 'ಖಾಸಗೀಕರಣಕ್ಕೆ ಗುರುತಿಸಲಾಗಿರುವ ಕಂಪನಿಗಳಲ್ಲಿ ಮಾತ್ರ ಎಫ್‌ಡಿಐ ಮಿತಿ ಹೆಚ್ಚಿಸಲು ಒಪ್ಪಿಗೆ ನೀಡಲಾಗಿದೆ' ಎಂದು ಅಧಿಕಾರಿಯೊಬ್ಬರು ವಿವರಿಸಿದರು.

ಬೆಂಗಳೂರು ಚಿನ್ನದ ಧಾರಣೆ

ಶುದ್ಧ ಚಿನ್ನ 10ಗ್ರಾಂಗೆ	₹49,280 ▲
ಬೆಳ್ಳಿ ಕೆ.ಜಿಗೆ	₹69,200 ▲

ಸೆಬಿ ಅಧ್ಯಕ್ಷ ಅಜಯ್ ತ್ಯಾಗಿ ಮಾಹಿತಿ

ಸಣ್ಣ ಹೂಡಿಕೆದಾರರ ಭಾಗವಹಿಸುವಿಕೆ ಹೆಚ್ಚಳ

ನವದೆಹಲಿ (ಪಿಟಿಐ): 'ದೇಶದ ಷೇರು ಮಾರುಕಟ್ಟೆಗಳತ್ತ ಸಣ್ಣ ಹೂಡಿಕೆದಾರರು ಹೆಚ್ಚು ಆಕರ್ಷಿತರಾಗಿದ್ದಾರೆ. ಏಪ್ರಿಲ್‌ನಿಂದ ಜೂನ್‌ವರೆಗಿನ ಅವಧಿಯಲ್ಲಿ ಪ್ರತಿ ತಿಂಗಳೂ ಸರಾಸರಿ 24.5 ಲಕ್ಷ ಡಿಮ್ಯಾಟ್ ಖಾತೆಗಳನ್ನು ಹೊಸದಾಗಿ ತೆರೆಯಲಾಗಿದೆ' ಎಂದು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ ಅಧ್ಯಕ್ಷ ಅಜಯ್ ತ್ಯಾಗಿ ಹೇಳಿದರು.

ಆಕರ್ಷಣೆಗೆ ಕಾರಣಗಳು

- ಕಂಪನಿಗಳ ಕಡೆಯಿಂದ ನಡೆಯುವ ಆರಂಭಿಕ ಹಂತದ ಷೇರು ಮಾರಾಟ
- ರಿಯಲ್ ಎಸ್ಟೇಟ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್‌ಗಳು, ಮೂಲಸೌಕರ್ಯ ಹೂಡಿಕೆ ಟ್ರಸ್ಟ್‌ಗಳು
- ಇಎಸ್‌ಜಿ (ಪರಿಸರ, ಸಾಮಾಜಿಕ ಬದ್ಧತೆ, ಕಾರ್ಪೊರೇಟ್ ಆಡಳಿತ) ಕೇಂದ್ರಿತ ಮ್ಯೂಚುವಲ್ ಫಂಡ್‌ಗಳು
- ವಿನಿಮಯ ವಹಿವಾಟು ನಿಧಿಗಳು (ಇಟಿಎಫ್)

ನಿಶ್ಚಿತ ಠೇವಣಿಗಳಿಗೆ ಕಡಿಮೆ ಬಡ್ಡಿ ಸಿಗುತ್ತಿರುವುದು ಹಾಗೂ ಹಣಕಾಸು ವ್ಯವಸ್ಥೆಯಲ್ಲಿ ನಗದು ಲಭ್ಯತೆ ಜಾಸ್ತಿ ಇರುವುದು ಷೇರು ಮಾರುಕಟ್ಟೆಯಲ್ಲಿ ಸಣ್ಣ ಹೂಡಿಕೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಿರುವುದಕ್ಕೆ ಕಾರಣಗಳು ಎಂದು ಅವರು ಹೇಳಿದ್ದಾರೆ. ನಗದು ಲಭ್ಯತೆ ಕಡಿಮೆ ಆದರೆ ಅಥವಾ ಬಡ್ಡಿ ದರ ಜಾಸ್ತಿ ಆದರೆ ಷೇರು ಮಾರುಕಟ್ಟೆಗಳ ಮೇಲೆ ಪರಿಣಾಮ ಆಗಬಹುದು ಎಂದೂ ಹೇಳಿದ್ದಾರೆ.

2020-21ನೆಯ ಹಣಕಾಸು ವರ್ಷದ ಆರಂಭದಲ್ಲಿ ದೇಶದಲ್ಲಿನ ಡಿಮ್ಯಾಟ್ ಖಾತೆಗಳ ಸಂಖ್ಯೆ 4.1 ಕೋಟಿ ಆಗಿತ್ತು. ಇದು ಆ ಹಣಕಾಸು ವರ್ಷದ ಅಂತ್ಯದ ವೇಳೆಗೆ 5.5 ಕೋಟಿಗೆ ತಲುಪಿದೆ. ಡಿಮ್ಯಾಟ್ ಖಾತೆಗಳ ಪ್ರಮಾಣದಲ್ಲಿ ಶೇಕಡ 34.7ರಷ್ಟು ಹೆಚ್ಚಳ ಕಂಡುಬಂದಿದೆ. 2020-21ರಲ್ಲಿ ಪ್ರತಿ ತಿಂಗಳು ಸರಾಸರಿ 12 ಲಕ್ಷ ಡಿಮ್ಯಾಟ್ ಖಾತೆಗಳನ್ನು, 2019-20ರಲ್ಲಿ ಪ್ರತಿ ತಿಂಗಳು 4.2 ಲಕ್ಷ ಖಾತೆಗಳನ್ನು ತೆರೆಯಲಾಗುತ್ತಿತ್ತು ಎಂದು ತ್ಯಾಗಿ ಮಾಹಿತಿ ನೀಡಿದ್ದಾರೆ.

2019-20ರಲ್ಲಿ ಷೇರು ಮಾರುಕಟ್ಟೆಯ ವಾರ್ಷಿಕ ವಹಿವಾಟು ₹ 96.6 ಲಕ್ಷ ಕೋಟಿ ಆಗಿತ್ತು. ಇದು 2020-21ರಲ್ಲಿ ₹ 164.4 ಲಕ್ಷ ಕೋಟಿಗೆ ಹೆಚ್ಚಳವಾಗಿದೆ. 'ಷೇರು ವಹಿವಾಟುಗಳು ಮೊಬೈಲ್ ಸಾಧನಗಳ ಮೂಲಕ ಆಗುತ್ತಿರುವುದು ಹಾಗೂ ಇಂಟರ್ನೆಟ್ ಆಧಾರಿತ ವೇದಿಕೆಗಳ ಮೂಲಕ ವಹಿವಾಟು ಹೆಚ್ಚು ನಡೆಯುತ್ತಿರುವುದು ಸಣ್ಣ ಹೂಡಿಕೆದಾರರ ಭಾಗವಹಿಸುವಿಕೆ ಜಾಸ್ತಿ ಆಗಿರುವುದರ ಸೂಚಕ' ಎಂದೂ ತ್ಯಾಗಿ ಹೇಳಿದ್ದಾರೆ.

2020-21ರಲ್ಲಿ ಸಾಂಕ್ರಾಮಿಕದ ಸಮಸ್ಯೆ ಇದ್ದರೂ ಮಾರುಕಟ್ಟೆಗಳಿಂದ ಒಟ್ಟು ₹ 10.12 ಲಕ್ಷ ಕೋಟಿ ಬಂಡವಾಳ ಸಂಗ್ರಹಿಸಲಾಗಿದೆ. ಅದರ ಹಿಂದಿನ ವರ್ಷದಲ್ಲಿ ₹ 9.96 ಲಕ್ಷ ಕೋಟಿ ಬಂಡವಾಳ ಸಂಗ್ರಹ ಆಗಿತ್ತು.

ಮೂರು ದಿನಗಳ ಬಳಿಕ ಸಕಾರಾತ್ಮಕ ಹಾದಿಗೆ ವಹಿವಾಟು

ಸೆನ್ಸೆಕ್ಸ್ 639 ಅಂಶ ಏರಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳು ಮೂರು ದಿನಗಳ ಬಳಿಕ ಸಕಾರಾತ್ಮಕ ಹಾದಿಗೆ ಮರಳಿವೆ. ವಿದೇಶಿ ಮಾರುಕಟ್ಟೆಗಳ ಉತ್ತಮ ವಹಿವಾಟು ಹಾಗೂ ಐ.ಟಿ, ಬ್ಯಾಂಕಿಂಗ್ ಮತ್ತು ಹಣಕಾಸು ವಲಯಗಳ ಗಳಿಕೆಯು ದೇಶಿ ಷೇರುಪೇಟೆಯ ಏರುಮುಖ ಚಲನೆಗೆ ಕಾರಣವಾದವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 639 ಅಂಶ ಚೇತರಿಕೆ ಕಂಡು 52,837 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತು. ಹೂಡಿಕೆದಾರರ ಸಂಪತ್ತು ₹ 2.93 ಲಕ್ಷ ಕೋಟಿಯಷ್ಟು ಹೆಚ್ಚಾಗಿದ್ದು ಷೇರುಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯವು ₹ 233.94 ಲಕ್ಷ ಕೋಟಿಗೆ ಏರಿಕೆ ಕಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 192 ಅಂಶ ಏರಿಕೆ ಕಂಡು 15,824 ಅಂಶಗಳಿಗೆ ತಲುಪಿದೆ.



ಜಾಗತಿಕ ಮಾರುಕಟ್ಟೆಗಳ ಸಕಾರಾತ್ಮಕ ಚಟುವಟಿಕೆಯಿಂದಾಗಿ, ಕೋವಿಡ್-19 ಪ್ರಕರಣಗಳು ಇನ್ನಷ್ಟು ಹೆಚ್ಚಾಗುವ ಭೀತಿ ಮತ್ತು ವಿದೇಶಿ ಬಂಡವಾಳ ಹೊರಹರಿವಿನ ಆತಂಕದಿಂದ ಹೊರಬಂದ ದೇಶಿ ಷೇರುಪೇಟೆಗಳು ಏರುಗತಿಯ ವಹಿವಾಟು ನಡೆಸಿದವು ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 15 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹ 74.46ರಂತೆ ವಿನಿಮಯಗೊಂಡಿತು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾತೈಲ ದರ ಶೇ 1ರಷ್ಟು ಏರಿಕೆ ಆಗಿ ಬ್ಯಾರಲ್‌ಗೆ 72.95 ಡಾಲರ್‌ಗಳಿಗೆ ತಲುಪಿದೆ.



ಚೀನಾದ ಹೆನಾನ್ ಪ್ರಾಂತ್ಯದ ಜೆಂಗ್‌ಜೌ ನಗರದಲ್ಲಿ ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿರುವ ಸಿಬ್ಬಂದಿ —ರಾಯಿಟರ್ಸ್ ಚಿತ್ರ

ಚೀನಾ ಪ್ರವಾಹ: ಮೃತರ ಸಂಖ್ಯೆ 33ಕ್ಕೆ ಏರಿಕೆ

ಬೀಜಿಂಗ್ (ಪಿಟಿಐ): 'ಚೀನಾದಲ್ಲಿ ಭಾರಿ ಮಳೆಯಿಂದಾಗಿ ಉಂಟಾದ ಪ್ರವಾಹದಲ್ಲಿ ಸಾವಿಗೀಡಾದವರ ಸಂಖ್ಯೆ 33ಕ್ಕೆ ಏರಿಕೆಯಾಗಿದ್ದು, 8 ಮಂದಿ ನಾಪತ್ತೆಯಾಗಿದ್ದಾರೆ' ಎಂದು ಅಧಿಕಾರಿಗಳು ಗುರುವಾರ ತಿಳಿಸಿದರು.

'ಹೆನಾನ್ ಪ್ರಾಂತ್ಯದಲ್ಲಿ ಭಾರಿ ಮಳೆಯಿಂದಾಗಿ 30 ಲಕ್ಷಕ್ಕೂ ಹೆಚ್ಚು ಜನರು ಸಂಕಷ್ಟಕ್ಕೆ ಸಿಲುಕಿದ್ದು, 3,76,000 ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ' ಎಂದು ಪ್ರಾಂತ್ಯದ ತುರ್ತು ನಿರ್ವಹಣಾ ಇಲಾಖೆಯು ತಿಳಿಸಿದೆ.

'ಪ್ರವಾಹದಿಂದಾಗಿ 2,15,200 ಹೆಕ್ಟರ್‌ಗೂ ಹೆಚ್ಚು ಬೆಳೆಗಳು ಹಾನಿಯಾಗಿವೆ. ಹೆನಾನ್ ಪ್ರಾಂತ್ಯದ ಜೆಂಗ್‌ಜೌನಲ್ಲಿ ಸಬ್‌ವೇ ಮಾರ್ಗಗಳು ಜಲಾವೃತಗೊಂಡಿವೆ' ಎಂದು ವರದಿಯಾಗಿದೆ.

'ಪ್ರವಾಹ ಪರಿಸ್ಥಿತಿ ಅತ್ಯಂತ ಕಠೋರವಾಗಿದೆ. ಇದರಿಂದಾಗಿ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಹೆನಾನ್ ಪ್ರಾಂತ್ಯ ಮತ್ತು ಜೆಂಗ್‌ಜೌ ನಗರವು ಪ್ರವಾಹದಿಂದಾಗಿ ಅತಿ ಹೆಚ್ಚು ಹಾನಿಗೊಳಗಾಗಿದೆ. ಹಾಗಾಗಿ ಅಧಿಕಾರಿಗಳು ಜನರ ಸುರಕ್ಷತೆಗೆ ಪ್ರಮುಖ ಆದ್ಯತೆ ಕೊಡಬೇಕು' ಎಂದು ಚೀನಾದ ಅಧ್ಯಕ್ಷ ಷಿ ಜಿಂಗ್‌ಪಿನ್ ಆದೇಶಿಸಿದ್ದಾರೆ.

'ಜೆಂಗ್‌ಜೌ ಮತ್ತು ಇತರೆ ನಗರಗಳು ಜಲಾವೃತವಾಗಿವೆ. ಹಲವು ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ. ಹಲವು ಅಣೆಕಟ್ಟೆಗಳಿಗೆ ತೀವ್ರ ಹಾನಿ ಉಂಟಾಗಿದೆ. ಕೆಲವು ಕಡೆಗಳಲ್ಲಿ ರೈಲು ಮತ್ತು ವಿಮಾನ ಸೇವೆಯನ್ನು ರದ್ದುಗೊಳಿಸಲಾಗಿದೆ' ಎಂದು ಅವರು ಮಾಹಿತಿ ನೀಡಿದರು.

80ಕ್ಕೂ ಹೆಚ್ಚು ಬಸ್‌ಗಳನ್ನು ಸ್ಥಗಿತಗೊಳಿಸಲಾಗಿದೆ. 100 ಕ್ಕೂ ಹೆಚ್ಚು ರಸ್ತೆಗಳನ್ನು ತಾತ್ಕಾಲಿಕವಾಗಿ ಮುಚ್ಚಲಾಗಿದೆ. ಸಬ್‌ವೇ ಸೇವೆಗಳನ್ನು ತಾತ್ಕಾಲಿಕವಾಗಿ ರದ್ದುಗೊಳಿಸಲಾಗಿದೆ.

'ಆರ್‌ಬಿಐನಿಂದ ಡಿಜಿಟಲ್ ಕರೆನ್ಸಿ ಶೀಘ್ರ'

ನವದೆಹಲಿ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತನ್ನದೇ ಆದ ಡಿಜಿಟಲ್ ಕರೆನ್ಸಿಯನ್ನು ಸಗಟು ಮತ್ತು ಚಿಲ್ಲರೆ ವ್ಯಾಪಾರ ವಲಯಗಳಿಗೆ ಶೀಘ್ರವಾಗಿ, ಹಂತ ಹಂತವಾಗಿ ಚಲಾವಣೆ ತರಲು ಕೆಲಸ ನಡೆಸಿದೆ ಎಂದು ಆರ್‌ಬಿಐ ಡೆಪ್ಯುಟಿ ಗವರ್ನರ್ ಟಿ. ರವಿಶಂಕರ್ ತಿಳಿಸಿದ್ದಾರೆ.

ವಿಶ್ವದ ಹಲವು ಕೇಂದ್ರೀಯ ಬ್ಯಾಂಕ್‌ಗಳು ತಮ್ಮದೇ ಆದ ಡಿಜಿಟಲ್ ಕರೆನ್ಸಿಯನ್ನು ರೂಪಿಸುತ್ತಿವೆ ಎಂದೂ ಅವರು ಹೇಳಿದ್ದಾರೆ. ಕೆಲವು ವರ್ಚುವಲ್ ಕರೆನ್ಸಿಗಳ ಮೌಲ್ಯದಲ್ಲಿ ಕಂಡುಬರುತ್ತಿರುವ ಭಾರಿ ಅಸ್ಥಿರತೆಯಿಂದ ಗ್ರಾಹಕರನ್ನು ರಕ್ಷಿಸಲು ಕೇಂದ್ರೀಯ ಬ್ಯಾಂಕ್‌ಗಳು ತಮ್ಮದೇ ಆದ ಡಿಜಿಟಲ್ ಕರೆನ್ಸಿ ಹೊಂದುವುದು ಅಗತ್ಯ ಎಂದು ರವಿಶಂಕರ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕೇಂದ್ರ ಹಣಕಾಸು ಸಚಿವಾಲಯ ರಚಿಸಿರುವ ಅಂತರ ಸಚಿವಾಲಯದ ಸಮಿತಿಯೊಂದು, ಕೇಂದ್ರೀಯ ಬ್ಯಾಂಕ್ ವತಿಯಿಂದ ಡಿಜಿಟಲ್ ಕರೆನ್ಸಿಯನ್ನು ಚಲಾವಣೆಗೆ ತರಬೇಕು ಎಂದು ಶಿಫಾರಸು ಮಾಡಿದೆ. 'ಈ ಬಗೆಯ ಕರೆನ್ಸಿಯನ್ನು ಚಲಾವಣೆಗೆ ಬಿಡುವುದರ ಸಾಧಕ, ಬಾಧಕವನ್ನು ಆರ್‌ಬಿಐ ಪರಿಶೀಲಿಸುತ್ತಿದೆ' ಎಂದು ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1100-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	385
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-43000
ಹಳತು	42500-52000
ಕುಮಟ	
ಚಿಪ್ಪು	29529-35224
ಕೋಕ	23099-30120
ಹಳೆಚಾಲಿ	38999-43799
ಹೊಸಚಾಲಿ	36369-38969
ಪುತ್ತೂರು	
ಕೋಕ	9500-25000
ಹೊಸತು	30000-43000
ಸಿದ್ದಾಪುರ	
ಬಿಳಿಗೋಟು	26512-33099
ಕೋಕ	23800-31699
ಚಾಲಿ	35299-38199
ಕೆಂಪುಗೋಟು	29112-29289
ರಾಶಿ	38812-40599
ತಟ್ಟಿಬೆಟ್ಟೆ	31099-33089
ಯಲ್ಲಾಪುರ	
ಬಿಳಿಗೋಟು	31120-33469
ಕೋಕ	20100-30892
ಚಾಲಿ	36629-38680
ಕೆಂಪುಗೋಟು	30395-32099
ರಾಶಿ	39619-43979
ತಟ್ಟಿಬೆಟ್ಟೆ	35890-38299
ಶಿರಸಿ	
ಬೆಟ್ಟೆ	21899-39298
ಬಿಳಿಗೋಟು	20099-34279
ಚಾಲಿ	32699-38821
ರಾಶಿ	37099-41108
ರಾಮನಗರ ರೇಷ್ಮೆ	
ಮಿಶ್ರತಳಿ	232-419
ದ್ವಿತಳಿ	271-446

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	12000	11900	176 ಸೆಂಟ್ಸ್
ಎಸಿ	---	4600	4750	
ಆರ್‌ಪಿ	---	5700	5825	ಲಂಡನ್
ಆರ್‌ಸಿ	---	3350	3425	1779 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ 22-7-2021

ಜಾವಾ 70/80(ಹೊಸ)	10150-10200
ಜಾವಾ 80/90(ಹೊಸ)	9250-9300
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1480 (1480)
ಒಂದು ವಾರದ ಡೆಲಿವರಿ	1475 (1475)
ಸೋಯಾ ಕಚ್ಚಾ	1347 (1360)
ಪಾಮ್ ವಾರದ ಡೆಲಿವರಿ	1208 (1213)
ಸೂರ್ಯಕಾಂತಿ ಎಣ್ಣೆ ಕಚ್ಚಾ	1380 (1380)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 47,350 (47,700)
ಬೆಳ್ಳಿ ಕೆ.ಜಿ 66,750 (67,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಚಂದನವನಕ್ಕೆ ಶ್ರೀಲಂಕಾ ಬೆಡಗಿ!



ಜಾಕ್ವೆಲಿನ್ ಫರ್ನಾಂಡಿಸ್

ಬಾಲಿವುಡ್‌ನಲ್ಲಿ ಮಿಂಚಿದ ಶ್ರೀಲಂಕಾ ಬೆಡಗಿ ಜಾಕ್ವೆಲಿನ್ ಫರ್ನಾಂಡಿಸ್ ಇದೀಗ 'ವಿಕ್ರಾಂತ್ ರೋಣ' ಸಿನಿಮಾ ಮುಖಾಂತರ ಇದೇ ಮೊದಲ ಬಾರಿಗೆ ಚಂದನವನಕ್ಕೆ ಕಾಲಿಟ್ಟಿದ್ದಾರೆ. ಐಟಂ ಹಾಡಿಗೆ ಹೆಜ್ಜೆ ಹಾಕುವುದಷ್ಟೇ ಅಲ್ಲದೆ, ಒಂದು ಪಾತ್ರಕ್ಕೆ ಬಣ್ಣಹಚ್ಚಿ, 'ಕನ್ನಡಿಗರಿಗೆ ನಮಸ್ಕಾರ' ಎಂದು ಡೈಲಾಗ್ ಹೊಡೆದಿದ್ದಾರೆ.

ಪ್ರಜಾವಾಣಿ ನೋಡಿಯೊ — ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಅಭಿಲಾಷ್ ಪಿ.ಎಸ್.

ಬಾಲಿವುಡ್‌ನಲ್ಲಿ 'ಏಕ್ ದೊ ತೀನ್'...'ಚಿಟಿಯಾ ಕಲ್ಯೆಂಯಾವೆ' ಎನ್ನುತ್ತಾ ಹೆಜ್ಜೆಹಾಕಿ ಪ್ರೇಕ್ಷಕರ ಮನಗೆದ್ದಿದ್ದ ಶ್ರೀಲಂಕಾ ಬೆಡಗಿ ಜಾಕ್ವೆಲಿನ್ ಫರ್ನಾಂಡಿಸ್, 'ವಿಕ್ರಾಂತ್ ರೋಣ' ಮುಖಾಂತರ ಚಂದನವನಕ್ಕೆ ಹೆಜ್ಜೆ ಇಟ್ಟಿದ್ದಾರೆ. ಬಂದಿದ್ದು ಏಳು ದಿನಗಳ ಚಿತ್ರೀಕರಣಕ್ಕಾದರೂ ಕನ್ನಡವನ್ನು ಕಲಿತು, 'ಕನ್ನಡಿಗರಿಗೆ ನಮಸ್ಕಾರ' ಎಂದಿದ್ದಾರೆ.

ನಟ ಕಿಚ್ಚ ಸುದೀಪ್ ನಟನೆಯ ಪ್ಯಾನ್ ಇಂಡಿಯಾ ಬಿಗ್‌ಬಜೆಟ್ ಚಿತ್ರ 'ವಿಕ್ರಾಂತ್ ರೋಣ' ಅದ್ದೂರಿಯಾಗಿ ತೆರೆಯ ಮೇಲೆ ಬರಲು ಸಜ್ಜಾಗಿದೆ. ಅನೂಪ್ ಭಂಡಾರಿ ನಿರ್ದೇಶನದ ಈ ಚಿತ್ರದಲ್ಲಿ ನಿರೂಪ್ ಭಂಡಾರಿ ಹಾಗೂ ನೀತಾ ಅಶೋಕ್ ಮುಖ್ಯಭೂಮಿಕೆಯಲ್ಲಿ ನಟಿಸಿದ್ದಾರೆ. ಈಗಾಗಲೇ ಚಿತ್ರೀಕರಣ ಪೂರ್ಣಗೊಂಡು, ಸುದೀಪ್ ಅವರ ಡಬ್ಬಿಂಗ್ ಕೂಡಾ ಮುಗಿದಿದೆ. ಚಿತ್ರೀಕರಣದ ಕೊನೆಯ ಹಂತದಲ್ಲಿ ಜಾಕ್ವೆಲಿನ್ ಹಾಗೂ ಸುದೀಪ್ ಅವರ ನೃತ್ಯದ ಭಾಗವನ್ನು ಇತ್ತೀಚೆಗೆ ಚಿತ್ರತಂಡವು ಚಿತ್ರೀಕರಿಸಿಕೊಂಡಿದ್ದು, ಅದ್ದೂರಿಯಾಗಿ ಇದು ಮೂಡಿಬಂದಿದೆ.

₹5 ಕೋಟಿ ವೆಚ್ಚ: ಜಾನಿ ಮಾಸ್ಟರ್ ನೃತ್ಯ ನಿರ್ದೇಶನದಲ್ಲಿ 300 ಡ್ಯಾನ್ಸರ್ ನಡುವೆ, ಬೃಹತ್ ಸೆಟ್‌ನಲ್ಲಿ ಜಾಕ್ವೆಲಿನ್ ಹಾಗೂ ಸುದೀಪ್ ಹಾಡಿಗೆ ಹೆಜ್ಜೆ ಹಾಕಿದ್ದಾರೆ. ಈ ಅದ್ದೂರಿ ಹಾಡಿನ ಚಿತ್ರೀಕರಣಕ್ಕೇ ₹5 ಕೋಟಿ ವ್ಯಯಿಸಲಾಗಿದೆ ಎನ್ನುತ್ತಾರೆ ನಿರ್ಮಾಪಕ ಜಾಕ್ ಮಂಜು.

'ಹೌಸ್‌ಫುಲ್' ಸರಣಿ, 'ರಾಯ್', 'ರೇಸ್–2', 'ಡಿಶ್ಯುಂ' ಮುಂತಾದ ಹಿಟ್ ಚಿತ್ರಗಳಲ್ಲಿ ನಾಯಕಿಯಾಗಿ ನಟಿಸಿದ್ದ ಜಾಕ್ವೆಲಿನ್, 'ಭಾಗಿ–2' ಚಿತ್ರದಲ್ಲಿ 'ಏಕ್ ದೊ ತೀನ್', 'ಹೌಸ್‌ಫುಲ್'ನಲ್ಲಿ 'ಆಪ್ ಕ್ಯಾ ಹೋಗ' ಮುಂತಾದ ಐಟಂ ಹಾಡಿನಲ್ಲಿ ಮೈಬಳುಕಿಸಿದ್ದರು. ಚಂದನವನಕ್ಕೆ ಕಾಲಿಟ್ಟ ಬಗ್ಗೆ ಮನದಾಳ ಹಂಚಿಕೊಂಡಿರುವ ಜಾಕ್ವೆಲಿನ್, 'ಊರಲ್ಲಿ ಇವತ್ತು ಇವರೊಬ್ಬರದ್ದೇ ಹೆಸರು ಚಾಲ್ತಿಯಲ್ಲಿದೆ. ವಿಕ್ರಾಂತ್ ರೋಣ. ನನ್ನನ್ನು ಆತ್ಮೀಯವಾಗಿ ಬರಮಾಡಿಕೊಂಡ ಕನ್ನಡ ಪ್ರೇಕ್ಷಕರಿಗೆ ಧನ್ಯವಾದ. ನಾನು ಮತ್ತೊಮ್ಮೆ ಭೇಟಿ ನೀಡಲು ಇಚ್ಛಿಸುವ ಸ್ಥಳ ಬೆಂಗಳೂರು. ಹೌದು, ನಾನು ವಿಕ್ರಾಂತ್ ರೋಣ ಸಿನಿಮಾದಲ್ಲಿ ವಿಶೇಷ ಪಾತ್ರವೊಂದನ್ನು ಮಾಡುತ್ತಿದ್ದೇನೆ. ಚಿತ್ರದಲ್ಲಿ ನಾನು ಹೇಗೆ ಕಾಣಿಸಿಕೊಳ್ಳುತ್ತಿದ್ದೇನೆ ಎನ್ನುವುದನ್ನು ಪ್ರೇಕ್ಷಕರ ಮುಂದಿಡಲು ಕಾತುರದಿಂದಿದ್ದೇನೆ. ಸುದೀಪ್ ಅವರ ಜೊತೆಗಿನ ನಟನೆಯ ಅನುಭವ ಬಹುಕಾಲ ನೆನಪಿನಲ್ಲಿ ಉಳಿಯುವಂತಹದು' ಎಂದಿದ್ದಾರೆ.

ಪಾತ್ರಕ್ಕೂ ಒಪ್ಪಿಕೊಂಡಿದ್ದ ಜಾಕ್ವೆಲಿನ್: 'ಪಾತ್ರ ಹಾಗೂ ನೃತ್ಯ ಎರಡನ್ನೂ ಒಳಗೊಂಡು ಯಾರನ್ನು ಕರೆತರಬಹುದು ಎಂದು ಯೋಚಿಸಿದಾಗ ಹಲವು ಹೆಸರುಗಳು ನಮ್ಮ ಮುಂದೆ ಇದ್ದವು. ಒಂದಿಬ್ಬರು ಕೇವಲ ನೃತ್ಯಕ್ಕಷ್ಟೇ ಬರಲು ಸಿದ್ಧವಿದ್ದರು. ಇಲ್ಲಿಯವರೆಗೂ ದಕ್ಷಿಣ ಭಾರತದ ಚಿತ್ರಗಳಲ್ಲಿ ನಟಿಸದೇ ಇರುವವರ ಪೈಕಿ ಯಾರು ಆಗಬಹುದು ಎಂದು ಚಿಂತಿಸಿ ಜಾಕ್ವೆಲಿನ್ ಫರ್ನಾಂಡಿಸ್ ಅವರನ್ನು ಅಂತಿಮಗೊಳಿಸಿದೆವು. ಪ್ಯಾನ್ ಇಂಡಿಯಾ ಸಿನಿಮಾ ಆಗಿರುವುದರಿಂದ ಎಲ್ಲ ರೀತಿಯಲ್ಲೂ ಇವರು ಸೂಕ್ತ ಎಂದುಕೊಂಡೆವು. ಚಿತ್ರೀಕರಣಕ್ಕೆ ಆಗಮಿಸುವ ಮುನ್ನವೇ ತಮ್ಮ ಸಂಭಾಷಣೆಗಳನ್ನು ಕಲಿತು, ಚಾಚೂ ತಪ್ಪದೆ ನಟಿಸಿದವರು ಜ್ಯಾಕಲೀನ್. ಚಿತ್ರಕ್ಕೆ ಡಬ್ಬಿಂಗ್ ಕೂಡಾ ಅವರೇ ಮಾಡಲಿದ್ದಾರೆ' ಎಂದು ಮಂಜು ಹೇಳುತ್ತಾರೆ.



ಜಾಕ್ ಮಂಜು

'ಕನ್ನಡ ಚಿತ್ರರಂಗ ಇವತ್ತು ಬಹಳಷ್ಟು ಬೆಳೆದಿದೆ. ಇದಕ್ಕೆ ಎಲ್ಲರೂ ಕೊಡುಗೆ ನೀಡುತ್ತಿದ್ದೇವೆ. ನಾವು ಅದ್ದೂರಿಯಾಗಿ ಸಿನಿಮಾ ಮಾಡದೇ ಹೋದಲ್ಲಿ, ಜನರು ಬೇರೆಯ ಹಿಂದಿ, ತೆಲುಗು ಚಿತ್ರಕ್ಕೆ ಹೋಲಿಸಲು ಆರಂಭಿಸುತ್ತಾರೆ. ಇದಕ್ಕಾಗಿ 'ವಿಕ್ರಾಂತ್ ರೋಣ'ದಂತಹ ಒಳ್ಳೆ ಕಥೆ ಸಿಕ್ಕಿದಾಗ ಬಂಡವಾಳದ ಬಗ್ಗೆ ನಾನು ಯೋಚಿಸಲಿಲ್ಲ' ಎಂದು ವಿವರಿಸುತ್ತಾರೆ.

'ಚಿತ್ರೀಕರಣ ಮುಗಿಸಿ ತೆರಳುವಾಗ ನಮ್ಮ ಬ್ಯಾನರ್‌ನಲ್ಲಿ ಮತ್ತೊಂದು ಪ್ಯಾನ್ ಇಂಡಿಯಾ ಸಿನಿಮಾ ಅಥವಾ ಕನ್ನಡ ಸಿನಿಮಾವಷ್ಟೇ ಇದ್ದರೂ ನಟಿಸುವ ಅಭಿಲಾಷೆಯನ್ನೂ ಜಾಕ್ವೆಲಿನ್ ವ್ಯಕ್ತಪಡಿಸಿದ್ದಾರೆ. ಯಾವುದೇ ಅಹಂಕಾರ ಇಲ್ಲದೇ, ಐದು ದಿನ ನೃತ್ಯದ ಚಿತ್ರೀಕರಣ ಹಾಗೂ ಎರಡು ದಿನ ಪಾತ್ರದ ಚಿತ್ರೀಕರಣದಲ್ಲಿ ಬೆಳಗ್ಗೆ 9 ರಿಂದ ರಾತ್ರಿ 9.30ರವರೆಗೂ ದಣಿವಿಲ್ಲದೆ ಸತತವಾಗಿ ಭಾಗವಹಿಸಿದವರು ಜಾಕ್ವೆಲಿನ್' ಎಂದು ಮಂಜು ನೆನಪಿಸಿಕೊಳ್ಳುತ್ತಾರೆ.

ಮೂರು ತಿಂಗಳು ವಿಳಂಬ: 'ವಿಕ್ರಾಂತ್ ರೋಣ' ಆಗಸ್ಟ್ 19ಕ್ಕೆ ಬಿಡುಗಡೆಯಾಗಲಿದೆ ಎಂದು ನಾವು ತೀರ್ಮಾನಿಸಿದ ಸಂದರ್ಭದಲ್ಲಿ 'ಕೋಟಿಗೊಬ್ಬ–3' ಏಪ್ರಿಲ್‌ನಲ್ಲಿ ಬಿಡುಗಡೆಯಾಗಬೇಕಿತ್ತು. ಲಾಕ್‌ಡೌನ್ ಬಂದ ಕಾರಣ, 'ಕೋಟಿಗೊಬ್ಬ–3' ಬಿಡುಗಡೆ ವಿಳಂಬವಾಗಿದೆ. ಈಗಾಗಲೇ ಸುದೀಪ್ ಅವರು ಈ ಚಿತ್ರದ ಡಬ್ಬಿಂಗ್‌ನಲ್ಲಿ ಇದ್ದಾರೆ. 'ಕೋಟಿಗೊಬ್ಬ–3' ಬಿಡುಗಡೆಯಾದ 2–3 ತಿಂಗಳ ನಂತರ 'ವಿಕ್ರಾಂತ್ ರೋಣ' ತೆರೆ ಕಾಣಲಿದೆ. ಈ ಚಿತ್ರ 2ಡಿ ಹಾಗೂ 3ಡಿಯಲ್ಲಿ ಪ್ರೇಕ್ಷಕರ ಮುಂದೆ ಬರಲಿದ್ದು, ಸ್ವತಃ ಸುದೀಪ್ ಅವರೇ ಕನ್ನಡದ ಜೊತೆಗೆ, ಹಿಂದಿ, ತಮಿಳು, ತೆಲುಗು ಹಾಗೂ ಇಂಗ್ಲಿಷ್‌ನ ಡಬ್ಬಿಂಗ್ ಮಾಡಲಿದ್ದಾರೆ. ❖



ಚಂದನಾ

ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಚಂದನಾ ಅವರನ್ನು ಕಿರುತೆರೆ ಕರೆದಿದೆ. ಮೊದಲ ಪ್ರಯತ್ನದಲ್ಲೇ ಸ್ಟಾರ್ ಸುವರ್ಣ ವಾಹಿನಿಯ 'ಆಕಾಶದೀಪ' ಹೊಸ ಧಾರಾವಾಹಿಯ ನಾಯಕಿಯಾಗಿ ಅವರು ಅಭಿನಯಿಸುತ್ತಿದ್ದಾರೆ. ನಟನೆಯಲ್ಲೇ ಮುಂದುವರಿಯಲು ನಿರ್ಧರಿಸಿರುವ ಅವರಿಗೆ ತೆರೆ ಮೇಲಿನ ಬದುಕಿನ ಬಗ್ಗೆ ದೃಢ ಗುರಿ, ಕನಸು ಇದೆ.

ಅವಕಾಶದ ದಾರಿಯಲ್ಲಿ ಚಂದನಾ ಪಯಣ

ಕಿರುತೆರೆ

ಶರತ್ ಹೆಗ್ಡೆ

- **ತೆರೆಯ ಮೇಲೆ ಕಾಣಿಸಿಕೊಳ್ಳುತ್ತಿರುವ ಸಂದರ್ಭ ಏನನ್ನಿಸುತ್ತದೆ?**

ನನ್ನ ಓರಗೆಯವರೆಲ್ಲಾ ಅಚ್ಚರಿ ಮತ್ತು ಖುಷಿ ವ್ಯಕ್ತಪಡಿಸುತ್ತಿದ್ದಾರೆ. ನಮ್ಮ ಕಾಲೇಜು ತರಗತಿಯಲ್ಲಿ ಹಲವಾರು ಮಂದಿ ಚಂದನಾ ಹೆಸರಿನವರಿದ್ದರು. ಅವರ ಪೈಕಿ ನಾನೀಗ ಭಿನ್ನವಾಗಿ ಗುರುತಿಸಿಕೊಂಡಿದ್ದೇನೆ. ನೀನು ಆ ಚಂದನಾ ತಾನೇ ಎಂದು ಕುತೂಹಲದಿಂದ ಕೇಳುತ್ತಿದ್ದಾರೆ. ನೋಡಿ, ಎಷ್ಟೋ ಸಹಪಾಠಿಗಳು, ಗೆಳೆಯರು ಏನೇನೋ ಉದ್ಯೋಗ, ಉದ್ಯಮ ಮಾಡಿಕೊಂಡು ಇದ್ದಾರೆ. ನಾನು ನಟನೆಯನ್ನು ಆಯ್ಕೆ ಮಾಡಿಕೊಂಡಿದ್ದೇನೆ ಎಂದಾಗ ಅಚ್ಚರಿಯಿಂದ ನೋಡಿ ಶುಭ ಹಾರೈಸುತ್ತಿದ್ದಾರೆ.

- **ನಟನೆಗೆ ಬಂದ ಬಗೆ ಹೇಗೆ?**

ಬಾಲ್ಯದಿಂದಲೂ ನನಗೆ ಟಿ.ವಿಯಲ್ಲಿ ಕಾಣಿಸಿಕೊಳ್ಳಬೇಕು. ಮೇಕಪ್ ಮಾಡಿಕೊಳ್ಳಬೇಕು, ನಟಿಸಬೇಕು ಎಂದೆಲ್ಲಾ ಆಸೆಗಳಿದ್ದವು. ಸಹಜವಾಗಿ ನಟ–ನಟಿಯರ ಅನುಕರಣೆ ಮಾಡುತ್ತಿದ್ದೆ. ಶಾಲೆಯ ಪ್ರಹಸನಗಳಲ್ಲಿ ಭಾಗವಹಿಸುತ್ತಿದ್ದೆ. ಶಿಕ್ಷಣ ಮುಗಿದ ಬಳಿಕ ನಾಗತಿಹಳ್ಳಿ ಟೆಂಟ್ ಸಿನಿಮಾ ಶಾಲೆಗೆ ಸೇರಿ ನಾಲ್ಕು ತಿಂಗಳ ಅಭಿನಯ ಕೋರ್ಸ್ ಕಲಿತೆ. ಅದಾಗಿ ಉದ್ಯೋಗಕ್ಕೆ ಸೇರಿದ ಬಳಿಕ ಸ್ನೇಹಿತರ ಮೂಲಕ 'ಆಕಾಶದೀಪ' ಆಡಿಷನ್ ಬಂದಿತು. ಅಲ್ಲಿ ಹತ್ತಾರು ಮಂದಿಯ ನಡುವೆ ನಾನು ಆಯ್ಕೆ ಆದೆ. ಅದೆಲ್ಲವೂ ಅಚ್ಚರಿಯೇ.

- **ಧಾರಾವಾಹಿಯಲ್ಲಿ ಸ್ಪಷ್ಟ ಕನ್ನಡ ಹೇಗೆ ಮಾತನಾಡುತ್ತೀರಿ?**

ಅದೊಂದು ದೊಡ್ಡ ಕಥೆ. ಶಾಲೆಯಲ್ಲಿ ಕನ್ನಡ ಮಾತನಾಡಿದರೆ ದಂಡ ಹಾಕುತ್ತಿದ್ದರು. ಅಲ್ಲಿನ ನಿಯಮ ಹಾಗೆಯೇ ಇತ್ತು. ಕನ್ನಡದ ಗೆಳೆಯರು ಸಿಕ್ಕಾಗ ರಾಜ್ಯದ ಬೇರೆ ಬೇರೆ ಶೈಲಿಯ ಕನ್ನಡದಲ್ಲಿ ಮಾತನಾಡಲು ಪ್ರಯತ್ನಿಸುತ್ತೇನೆ. ಸೆಟ್‌ನಲ್ಲಿ ಇದ್ದಾಗ ನಾನು ಕನ್ನಡ ಮಾತನಾಡುವ ರೀತಿಯೇ ಬೇರೆ ಆಗಿದೆ. ಹಾಗಾಗಿ ಒಂಥರಾ ಕನ್ನಡದ ಮರುಕಲಿಕೆಯೇ ಅನ್ನಬಹುದು. ಧಾರಾವಾಹಿ ತಂಡ ತುಂಬಾ ಕಲಿಸುತ್ತಿದೆ.

- **ಆಕಾಶದೀಪ ತಂಡ ಸೇರಿದಾಗ ನಿಮ್ಮ ಕುತೂಹಲ, ಕಾತರ ಏನಿತ್ತು?**

ಹೌದು, ಖಂಡಿತಾ ಇತ್ತು. ಮೊದಲು ಕ್ಯಾಮೆರಾ ನೋಡಿದಾಗ ಸ್ವಲ್ಪ ಆತಂಕಕ್ಕೊಳಗಾಗಿದ್ದೆ. ಅಲ್ಲಿ ಸಂಸ್ಕೃತ ಶ್ಲೋಕಗಳು, ಅಚ್ಚ ಕನ್ನಡದ ಮಾತು ಬೇಕಿತ್ತು. ಇದನ್ನೆಲ್ಲಾ ಮಾಡಬಲ್ಲೆನೇ ಎಂದು ಆತಂಕ ಇತ್ತು. ನಮ್ಮ ಆತಂಕ ಯಾವುದೇ ಕಾರಣಕ್ಕೂ ಕ್ಯಾಮೆರಾದಲ್ಲಿ ಗೋಚರಿಸಬಾರದು. ಇದಕ್ಕೆ ಬೇಕಾದಂತೆ ನಿರ್ದೇಶಕರು ತುಂಬಾ ಪ್ರೋತ್ಸಾಹ ನೀಡುತ್ತಿದ್ದರು.

- **ನಿಮ್ಮ ಮತ್ತು ಜಯ್ ಡಿಸೋಜಾ ಕಾಂಬಿನೇಷನ್ ಹೇಗಿದೆ?**

ವೈಯಕ್ತಿಕವಾಗಿ ನಾವು ತುಂಬಾ ಆತ್ಮೀಯರಾಗಿಬಿಟ್ಟಿದ್ದೇವೆ. ಅವರು ಸಾಕಷ್ಟು ಧಾರಾವಾಹಿಗಳಲ್ಲಿ ಅಭಿನಯಿಸಿದ್ದಾರೆ. ತೆರೆಮೇಲಿನ ಕೆಮಿಸ್ಟ್ರಿ ತುಂಬಾ ಹೊಂದಾಣಿಕೆ ಆಗುತ್ತದೆ ಎಂದು ಪ್ರೇಕ್ಷಕರಿಂದ ಅಭಿಪ್ರಾಯ ಬಂದಿದೆ. ಸಾಮಾಜಿಕ ಜಾಲತಾಣಗಳಲ್ಲಿ ಜನರು ಒಳ್ಳೆಯ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. ಆನ್‌ಸ್ಕ್ರೀನ್– ಆಫ್‌ಸ್ಕ್ರೀನ್ ಹೊಂದಾಣಿಕೆ ಚೆನ್ನಾಗಿದೆ.

- **ಅಂಧ ಆಕಾಶ್‌ನ ಬದುಕಿಗೆ ದೀಪಾ ಬೆಳಕಾಗಿ ಬರುತ್ತಾಳಾ?**

ಆಕಾಶ್ ಅನ್ನುವ ಅಂಧ ಪಾತ್ರ ತುಂಬಾ ಶಕ್ತಿಶಾಲಿ. ಅವರಿಗೆ ಕಣ್ಣು ಕಾಣಿಸುವುದಿಲ್ಲ ಅಷ್ಟೇ. ಉಳಿದಂತೆ ಅವರು ಎಲ್ಲ ರೀತಿಯಲ್ಲಿ ಶಕ್ತಿಶಾಲಿ. ಇಂಥ ವ್ಯಕ್ತಿಯ ಬದುಕಿಗೆ ಹೇಗೆ ನಾನೂ ಕೂಡಾ ಅಷ್ಟೇ ಶಕ್ತಿಶಾಲಿಯಾಗಿ ಬೆಳೆದು ನಾಯಕಿಯಾಗುತ್ತೇನೆ ಅನ್ನುವುದೇ ಕಥೆಯ ತಿರುಳು. ಉಳಿದಂತೆ ಧಾರಾವಾಹಿಯಲ್ಲೇ ನೋಡಿ.

- **ಚಂದನಾ ಮುಂದಿನ ಕನಸುಗಳು?**

ಹೇಗೆ ಅವಕಾಶಗಳ ಹರಿವು ಇದೆಯೋ ಹಾಗೆಯೇ ಮುಂದುವರಿಯುತ್ತೇನೆ. ನಾನು ಇನ್ನಷ್ಟು ಪಕ್ವ ಆಗಬೇಕು. ಕಲಿಯುತ್ತಲೇ ಬೆಳೆಯಬೇಕು. ಮುಖ್ಯವಾಗಿ ನನ್ನ ತಂದೆ ತಾಯಿ ನಾನು ಈ ಕ್ಷೇತ್ರಕ್ಕೆ ಬಂದದ್ದಕ್ಕಾಗಿ ಹೆಮ್ಮೆಪಡುವಂತಾಗಬೇಕು. ❖


ಸಿನಿ ಸಂಕ್ಷಿಪ್ತ

'ಓ ಮೈ ಲವ್' ಚಿತ್ರೀಕರಣ ಪುನರಾರಂಭ

ನಟ ಶಶಿಕುಮಾರ್ ಪುತ್ರ ಅಕ್ಷಿತ್ ಶಶಿಕುಮಾರ್ ಮತ್ತು ಕೀರ್ತಿ ಕಲ್ಕೆರೆ ನಟನೆಯ 'ಓ ಮೈ ಲವ್' ಚಿತ್ರದ ಮೂರನೇ ಹಂತದ ಚಿತ್ರೀಕರಣವನ್ನು ಇದೇ ವಾರದಲ್ಲಿ ಪ್ರಾರಂಭಿಸಲು ಚಿತ್ರತಂಡ ಸಿದ್ಧತೆ ಮಾಡಿಕೊಂಡಿದೆ.

ಬೆಂಗಳೂರು, ಕೆಂಗೇರಿ ಉಪನಗರ ಸುತ್ತಮುತ್ತ ಮಗಧೀರ ವಿಲನ್ ದೇವಗಿಲ್ ಹಾಗೂ ಅಕ್ಷಿತ್ ಶಶಿಕುಮಾರ್ ನಡುವಿನ ಚೇಸಿಂಗ್ ದೃಶ್ಯದ ಚಿತ್ರೀಕರಣ ಈ ಹಂತದಲ್ಲಿ ನಡೆಯಲಿದೆ. ಈಗಾಗಲೇ ಚಿತ್ರದ ಶೇ.60ರಷ್ಟು ಚಿತ್ರೀಕರಣ ಪೂರ್ಣಗೊಂಡಿದ್ದು, ಪ್ರೇಮಕಥೆಯೇ ಚಿತ್ರದ ಕಥಾಹಂದರವಾಗಿದ್ದರೂ, ಸಾಹಸ ದೃಶ್ಯಗಳಿಗೆ ಒತ್ತುಕೊಟ್ಟ ನಿರ್ದೇಶಕ ಸ್ಮೈಲ್ ಶ್ರೀನು ಅವರು ಚಿತ್ರಕಥೆ ಮಾಡಿಕೊಂಡಿದ್ದಾರೆ. ಜಿಸಿಬಿ ಪ್ರೊಡಕ್ಷನ್ಸ್ ಲಾಂಛನದಲ್ಲಿ ಚಿತ್ರವು ತೆರೆಗೆ ಬರುತ್ತಿದೆ.

ಚಿತ್ರಕ್ಕೆ ಚರಣ್ ಅರ್ಜುನ್ ಸಂಗೀತ, ರಿಯಲ್ ಸತೀಶ್ ಸಾಹಸ, ಡಾ. ವಿ. ನಾಗೇಂದ್ರ ಪ್ರಸಾದ್ ಸಾಹಿತ್ಯ, ವಿ. ಮುರಳಿ ನೃತ್ಯ ನಿರ್ದೇಶನವಿದೆ. ಹಿರಿಯ ನಿರ್ದೇಶಕ ಎಸ್.ನಾರಾಯಣ್ ಸೇರಿದಂತೆ ದೀಪಿಕಾ ಆರಾಧ್ಯ, ಪೃಥ್ವಿರಾಜ್, ಎಸ್. ನಾರಾಯಣ್, ಸಾಧು ಕೋಕಿಲ, ಪವಿತ್ರಾ ಲೋಕೇಶ್, ಸಂಗೀತಾ, ಆನಂದ್, ಭಾಗ್ಯಶ್ರೀ , ಶಿಲ್ಪಾ, ರವಿ ರಾಮ್ ಕುಮಾರ್ ತಾರಾ ಬಳಗದಲ್ಲಿದ್ದಾರೆ. ❖



ಓ ಮೈ ಲವ್ — ಅಕ್ಷಿತ್, ಕೀರ್ತಿ



ಶಿವರಾಜ್‌ಕುಮಾರ್‌ಗೆ ಮೆಹ್ರೀನ್ ನಾಯಕಿ


ನಟ ಶಿವರಾಜ್‌ಕುಮಾರ್ ನಾಯಕರಾಗಿ ಅಭಿನಯಿಸಲಿರುವ 124ನೇ ಚಿತ್ರಕ್ಕೆ ಖ್ಯಾತ ನಟಿ ಮೆಹ್ರೀನ್ ಪಿರ್‌ಜಾದ ನಾಯಕಿಯಾಗಿ ನಟಿಸಲಿದ್ದಾರೆ.

ಈಗಾಗಲೇ ತೆಲುಗು ಹಾಗೂ ತಮಿಳು ಚಿತ್ರರಂಗದಲ್ಲಿ ಹೆಸರು ಮಾಡಿರುವ ಅವರು, ಎಫ್2 ಹಾಗೂ ಪಟಾಸ್ ಚಿತ್ರಗಳ ಮೂಲಕ ಜನಮನಸೂರೆಗೊಂಡಿದ್ದಾರೆ. ಸದ್ಯ ಅನಿಲ್ ರವಿಪುಡಿ ಅವರ ಎಫ್3 ಚಿತ್ರದಲ್ಲಿ ಮೆಹ್ರೀನ್ ತಲ್ಲೀನರಾಗಿದ್ದಾರೆ.

ಚಿತ್ರದ ಕಥೆ ಇಷ್ಟಪಟ್ಟಿರುವ ಮೆಹ್ರೀನ್, ತಾವು ಈ ಚಿತ್ರದಲ್ಲಿ ನಟಿಸುವುದಾಗಿ ಹೇಳಿದ್ದಾರಂತೆ. ರಾಮ್ ದುಲಿಪುಡಿ ನಿರ್ದೇಶನದಲ್ಲಿ ಶಿವರಾಜ್‌ಕುಮಾರ್ ಅವರ 124ನೇ ಚಿತ್ರ ತೆರೆ ಮೇಲೆ ಬರಲಿದ್ದು, ಬಾಲಶ್ರೀರಾಮ್ ಸ್ಟುಡಿಯೋಸ್ ಲಾಂಛನದಲ್ಲಿ ಸ್ವಾತಿ ವನಪಲ್ಲಿ, ಶ್ರೀಕಾಂತ್ ದುಲಿಪುಡಿ ಹಾಗೂ ನಾರಾಲ ಶ್ರೀನಿವಾಸ ರೆಡ್ಡಿ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಈ ಚಿತ್ರದ ಚಿತ್ರೀಕರಣ ಆಗಸ್ಟ್‌ನಲ್ಲಿ ಆರಂಭವಾಗಲಿದೆ.

70 ದಿನಗಳ ಕಾಲ ಚಿಕ್ಕಮಗಳೂರು, ಬೆಂಗಳೂರು, ಕಾಶ್ಮೀರ ಮುಂತಾದ ಕಡೆ ಚಿತ್ರೀಕರಣ ನಡೆಯಲಿದೆ. 'ಟಗರು' ಖ್ಯಾತಿಯ ಚರಣ್ ರಾಜ್ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ. ದೀಪು ಎಸ್ ಕುಮಾರ್ ಸಂಕಲನ, ರವಿವರ್ಮ ಸಾಹಸ ನಿರ್ದೇಶನ ಹಾಗೂ ರವಿ ಸಂತೆಹಕ್ಲು ಕಲಾ ನಿರ್ದೇಶನ ಈ ಹೊಸ ಚಿತ್ರಕ್ಕಿದೆ. ಖ್ಯಾತ ನಟರಾದ ನಾಜರ್, ಸಂಪತ್ ಹಾಗೂ ಮಂಗ್ಲಿ(ಗಾಯಕಿ) ಸಹ ಈ ಚಿತ್ರದ ಮುಖ್ಯ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಕುಡಿಪುಡಿ ವಿಜಯಕುಮಾರ್ ಕಾರ್ಯಕಾರಿ ನಿರ್ಮಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ❖

ಕೃಷ್ಣನ ಅತಿಥಿಯಾಗಿ ರಿಷಬ್ ಶೆಟ್ಟಿ



ನಟ ಡಾರ್ಲಿಂಗ್ ಕೃಷ್ಣ ನಾಯಕರಾಗಿ ನಟಿಸಿರುವ 'srikrishna@gmail.com' ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದೆ. ಚಿತ್ರದಲ್ಲಿ ಅತಿಥಿ ಪಾತ್ರದಲ್ಲಿ ನಿರ್ದೇಶಕ, ನಟ ರಿಷಬ್ ಶೆಟ್ಟಿ ನಟಿಸಿದ್ದಾರೆ. ಮೇಲುಕೋಟೆ, ಮೈಸೂರು ಸುತ್ತಮುತ್ತ ಹಾಡಿನ ಚಿತ್ರೀಕರಣ ನಡೆದಿದೆ. ಸಂದೇಶ್ ಪ್ರೊಡಕ್ಷನ್ಸ್ ಲಾಂಛನದ ಅಡಿ ಸಂದೇಶ್ ನಾಗರಾಜ್ ಚಿತ್ರ ನಿರ್ಮಿಸುತ್ತಿದ್ದಾರೆ. ಒಟ್ಟು 90 ದಿನಗಳ ಚಿತ್ರೀಕರಣ ನಡೆದಿದೆ. ಮೈಸೂರಿನ ಸಂದೇಶ್ ಹೋಟೆಲ್‌ನಲ್ಲಿ ಚಿತ್ರೀಕರಣ ಪೂರ್ಣಗೊಳಿಸಿ ಕುಂಬಳಕಾಯಿ ಒಡೆಯಲಾಯಿತು.

ಈ ಚಿತ್ರಕ್ಕೆ ನಾಗಶೇಖರ್ ಕಥೆ, ಚಿತ್ರಕಥೆ ಬರೆದಿದ್ದಾರೆ. ಭಾವನಾ ಈ ಚಿತ್ರದ ನಾಯಕಿ. ಚಂದನ್ ಗೌಡ ಇನ್ನೊಬ್ಬ ನಾಯಕ ಪಾತ್ರದಲ್ಲಿದ್ದಾರೆ. ದತ್ತಣ್ಣ, ಸಾಧುಕೋಕಿಲ, ಚಿಕ್ಕಣ್ಣ, ಸಾತ್ವಿಕ್(ಕಾರ್ಪೋರೇಟರ್), ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಮುಂತಾದವರು ತಾರಾಗಣದಲ್ಲಿದ್ದಾರೆ. ಕವಿರಾಜ್ ಅವರ ಗೀತರಚನೆ ಚಿತ್ರಕ್ಕಿದೆ. ಸತ್ಯ ಹೆಗಡೆ ಅವರ ಛಾಯಾಗ್ರಹಣ, ದೀಪು ಎಸ್. ಕುಮಾರ್ ಸಂಕಲನ ಹಾಗೂ ಅರುಣ್ ಸಾಗರ್ ಕಲಾ ನಿರ್ದೇಶನ ಈ ಚಿತ್ರಕ್ಕಿದೆ. ❖

'...ಖಾತೆಯಲ್ಲಿ ಹಣವಿಲ್ಲ'ದ ಲಿರಿಕಲ್ ಹಾಡು

ದಿಗಂತ್ - ಐಂದ್ರಿತಾ ರೇ ಜೋಡಿ ನಾಯಕ - ನಾಯಕಿಯಾಗಿ ನಟಿಸಿರುವ 'ಕ್ಷಮಿಸಿ ನಿಮ್ಮ ಖಾತೆಯಲ್ಲಿ ಹಣವಿಲ್ಲ' ಚಿತ್ರದ ಲಿರಿಕಲ್ ಹಾಡು ಬಿಡುಗಡೆಯಾಗಿದೆ. ಗೋಲ್ಡನ್ ಸ್ಟಾರ್ ಗಣೇಶ್ ಈ ಲಿರಿಕಲ್ ಹಾಡನ್ನು ಬಿಡುಗಡೆಗೊಳಿಸಿದರು.

'ನಾನು ಮೂಲತಃ ಮಲೆನಾಡಿನವನು. ಅಡಿಕೆ ಬೆಳೆದು ನನಗೆ ಅಭ್ಯಾಸವಿದೆ.. ಈ ಸಿನಿಮಾ ಮಲೆನಾಡಿನ ಹುಡುಗನ ಕಥೆಯನ್ನೇ ಆಧರಿಸಿರುವುದರಿಂದ ನನಗೆ ನಟಿಸಲು ಸುಲಭವಾಯಿತು' ಎಂದರು ದಿಗಂತ್.

'ಜನ ಈಗ ಉತ್ತಮ ಕಥಾವಸ್ತುವುಳ್ಳ ಚಿತ್ರಗಳನ್ನು ಇಷ್ಟಪಡುತ್ತಿದ್ದಾರೆ. ನಮ್ಮ ಚಿತ್ರವನ್ನು ಕನ್ನಡ ಕಲಾರಸಿಕರು ಇಷ್ಟಪಟ್ಟು ಯಶಸ್ಸು ಗಳಿಸುವುದರಲ್ಲಿ ಯಾವುದೇ ಸಂದೇಹವಿಲ್ಲ' ಎಂದರು ಚಿತ್ರದ ಮತ್ತೊಬ್ಬ ನಾಯಕಿ ರಂಜನಿ ರಾಘವನ್.

ಕೊರೊನಾ ಹಾವಳಿ ಕಡಿಮೆಯಾದರೆ ಸೆಪ್ಟೆಂಬರ್ ವೇಳೆಗೆ ಚಿತ್ರವನ್ನು ತೆರೆಗೆ ತರುತ್ತೇವೆ ಎಂದು ನಿರ್ದೇಶಕ ವಿನಾಯಕ ಕೋಡ್ಸರ ಹೇಳಿದರು. ❖



ದಿಗಂತ್, ಗಣೇಶ್

ಬರುತ್ತಿವೆ ಬಿಗ್‌ಬಜೆಟ್ ಚಿತ್ರಗಳು



'ಸಲಗ' ಚಿತ್ರದಲ್ಲಿ ದುನಿಯಾ ವಿಜಯ್

ರಾಜ್ಯ ಸರ್ಕಾರ ಕೋವಿಡ್ ಲಾಕ್‌ಡೌನ್ ನಿರ್ಬಂಧಗಳನ್ನು ಮತ್ತಷ್ಟು ಸಡಿಲಿಸಿ, ರಾಜ್ಯದಾದ್ಯಂತ ಚಿತ್ರಮಂದಿರಗಳಲ್ಲಿ ಕಳೆದ ಸೋಮವಾರದಿಂದಲೇ ಚಲನಚಿತ್ರ ಪ್ರದರ್ಶನ ಆರಂಭಿಸಲು ಒಪ್ಪಿಗೆ ನೀಡಿದೆ. ಆದರೆ, ಪ್ರೇಕ್ಷಕರ ಸಂಖ್ಯೆಯನ್ನು ಶೇ 50 ನಿರ್ಬಂಧಿಸಿರುವುದು ಚಿತ್ರಮಂದಿರಗಳು ಇನ್ನೂ 'ಲಾಕ್‌ಡೌನ್'ಯಲ್ಲೇ ಇರುವಂತೆ ಮಾಡಿದೆ.

ಪ್ರೇಕ್ಷಕರ ಸಂಖ್ಯೆ ನಿರ್ಬಂಧಿಸಿದ ಕಾರಣ, ನಷ್ಟದ ಭೀತಿಯಲ್ಲಿ ತಕ್ಷಣವೇ ಹೊಸ ಚಿತ್ರಗಳ ಬಿಡುಗಡೆಗೆ ನಿರ್ಮಾಪಕರು ಹಿಂದೇಟು ಹಾಕಿದ್ದರು. ಇದೀಗ ಆಗಸ್ಟ್ ಮೊದಲ ಅಥವಾ ಎರಡನೇ ವಾರದಲ್ಲಿ ರಾಜ್ಯ ಸರ್ಕಾರ ಚಿತ್ರಮಂದಿರಗಳು, ಮಲ್ಟಿಪ್ಲೆಕ್ಸ್‌ಗಳಲ್ಲಿ ಶೇ 100 ಪ್ರೇಕ್ಷಕರಿಗೆ ಅವಕಾಶ ನೀಡುವ ಭರವಸೆಯೊಂದಿಗೆ ಬಿಗ್‌ಬಜೆಟ್ ಚಿತ್ರಗಳ ಬಿಡುಗಡೆ ದಿನಾಂಕವನ್ನು ಚಿತ್ರತಂಡಗಳು ಘೋಷಿಸಿವೆ. ಹೀಗಾಗಿ ವರಮಹಾಲಕ್ಷ್ಮಿ ಹಬ್ಬದಿಂದ ಚಿತ್ರಮಂದಿರಗಳಲ್ಲಿ ಮತ್ತದೇ ಹಿಂದಿನ ಶಿಳ್ಳೆ, ಚಪ್ಪಾಳೆ, ಜೈಕಾರ ಮಾರ್ದನಿಸಲಿದೆ.

ಆ.20ರಂದು 'ಸಲಗ': ನಟ ದುನಿಯಾ ವಿಜಯ್ ನಟನೆಯ 'ಸಲಗ' ಚಿತ್ರವು ವರಮಹಾಲಕ್ಷ್ಮಿ ಹಬ್ಬಕ್ಕೆ ಚಿತ್ರಮಂದಿರಕ್ಕೆ ಲಗ್ಗೆ ಇಡಲಿದೆ. ಇದೇ ಮೊದಲ ಬಾರಿಗೆ ನಟ ವಿಜಯ್, ಈ ಚಿತ್ರದ ಮುಖಾಂತರ ನಿರ್ದೇಶಕನ ಕ್ಯಾಪ್ ತೊಟ್ಟಿದ್ದಾರೆ. ಈ ಚಿತ್ರವು ಏ.15ಕ್ಕೆ ಬಿಡುಗಡೆಯಾಗಬೇಕಿತ್ತು. ಆದರೆ ಲಾಕ್‌ಡೌನ್ ಕಾರಣದಿಂದ ಮುಂದೂಡಲ್ಪಟ್ಟಿತ್ತು.

ಗಣೇಶ ಚತುರ್ಥಿಗೆ 'ಭಜರಂಗಿ–2': ಎ.ಹರ್ಷ ನಿರ್ದೇಶನದ, ನಟ ಶಿವರಾಜ್‌ಕುಮಾರ್ ಅಭಿನಯದ ಬಹುನಿರೀಕ್ಷಿತ 'ಭಜರಂಗಿ–2' ಚಿತ್ರವು ಸೆ.10ರಂದು ಗಣೇಶ ಚತುರ್ಥಿಗೆ ತೆರೆಕಾಣಲಿದೆ. ಇದೇ ಕಾಂಬಿನೇಷನ್‌ನಲ್ಲಿ ಮೂಡಿಬಂದಿದ್ದ 'ಭಜರಂಗಿ' ಚಂದನವನದಲ್ಲಿ ದೊಡ್ಡಮಟ್ಟದ ಹಿಟ್ ಆಗಿತ್ತು.



ಶಿವರಾಜ್‌ಕುಮಾರ್ ನಟನೆಯ 'ಭಜರಂಗಿ 2'

ಶೀಘ್ರದಲ್ಲೇ 'ಕೋಟಿಗೊಬ್ಬ–3' ತೆರೆಗೆ: ಈ ಎರಡೂ ಚಿತ್ರಗಳ ಬಿಡುಗಡೆ ಬಳಿಕ ನಟ ಸುದೀಪ್ ನಟನೆಯ 'ಕೋಟಿಗೊಬ್ಬ–3' ಬಿಡುಗಡೆಯಾಗಲಿದೆ. ಬಾಕಿ ಉಳಿದಿದ್ದ ತಮ್ಮ ಪಾತ್ರದ ಡಬ್ಬಿಂಗ್ ಅನ್ನೂ ಸುದೀಪ್ ಅವರು ಪೂರ್ಣಗೊಳಿಸಿದ್ದಾರೆ. ಈ ಕುರಿತು ಟ್ವೀಟ್ ಮಾಡಿರುವ ಅವರು, 'ಸತ್ಯ ಹಾಗೂ ಶಿವ ಶೀಘ್ರದಲ್ಲೇ ತೆರೆಯ ಮೇಲೆ ಬರಲಿದ್ದಾರೆ'ಎಂದಿದ್ದಾರೆ.

ಡಾಲಿ ಧನಂಜಯ್ ನಟನೆಯ 'ಬಡವ ರಾಸ್ಕಲ್' ಚಿತ್ರವು ಸೆ.24ರಂದು ತೆರೆ ಕಾಣಲಿದೆ. ಇದಾದ ನಂತರದಲ್ಲಿ ಯಶ್ ನಟನೆಯ 'ಕೆಜಿಎಫ್–2', ಸುದೀಪ್ ನಟನೆಯ 'ವಿಕ್ರಾಂತ್ ರೋಣ'ದಂತಹ ಬಿಗ್‌ಬಜೆಟ್ ಚಿತ್ರಗಳು ತೆರೆಗೆ ಬರಲು ಸಜ್ಜಾಗಿವೆ. ಜೊತೆಗೆ ಅಜೇಯ್ ರಾವ್ ನಟನೆಯ 'ಕೃಷ್ಣಾ ಟಾಕೀಸ್' ಮರುಬಿಡುಗಡೆಗೆ ಸಿದ್ಧತೆ ನಡೆಸಿದೆ. ಆಗಸ್ಟ್‌ನಲ್ಲೇ ಸೂರಜ್ ಗೌಡ ಹಾಗೂ ಧನ್ಯಾ ರಾಮ್‌ಕುಮಾರ್ ನಟನೆಯ 'ನಿನ್ನ ಸನಿಹಕೆ' ಚಿತ್ರವೂ ಬಿಡುಗಡೆಯಾಗುವ ಸಾಧ್ಯತೆ ಇದೆ. ❖

ಆರ್ಚರಿ ಇಂದು ಆರಂಭ: ಕಣದಲ್ಲಿ ಭಾರತದ ನಾಲ್ವರು; ದೀಪಿಕಾ –ಅತನು ದಂಪತಿ ಮೇಲೆ ನಿರೀಕ್ಷೆ

ಇವರ ಕಣ್ಣು ಪದಕದ ಮೇಲೆ



ಅತನು ದಾಸ್ ಟ್ವಿಟರ್ ಚಿತ್ರ



ಚಿತ್ರ: ಕೆ. ಎನ್. ಶಾಂತಕುಮಾರ್

ಟೋಕಿಯೊ (ಪಿಟಿಐ): ವಿವಿಧ ಕೂಟಗಳಲ್ಲಿ ಅಮೋಘ ಸಾಧನೆ ಮಾಡಿ ಟೋಕಿಯೊಗೆ ತೆರಳಿರುವ ಭಾರತದ ಆರ್ಚರಿ ಪಟುಗಳು ಒಲಿಂಪಿಕ್ಸ್‌ನ ರ‍್ಯಾಂಕಿಂಗ್ ಸುತ್ತಿನಲ್ಲಿ ಶುಕ್ರವಾರ ಕಣಕ್ಕೆ ಇಳಿಯಲಿದ್ದಾರೆ. ಮಹಿಳಾ ತಂಡ ಈ ಬಾರಿ ಅರ್ಹತೆ ಗಳಿಸಲು ವಿಫಲವಾಗಿದೆ. ಆದರೆ ವೈಯಕ್ತಿಕ ವಿಭಾಗದಲ್ಲಿ ದೀಪಿಕಾ ಕುಮಾರಿ ಭರವಸೆ ಮೂಡಿಸಿದ್ದಾರೆ.

ಅತನು ದಾಸ್, ತರುಣದೀಪ್ ರಾಯ್ ಮತ್ತು ಪ್ರವೀಣ್ ಜಾಧವ್ ಪುರುಷರ ವೈಯಕ್ತಿಕ ವಿಭಾಗದಲ್ಲಿ ಪದಕ ಗೆಲ್ಲುವ ನಿರೀಕ್ಷೆಯಲ್ಲಿದ್ದಾರೆ. ಈ ಮೂವರು ಪುರುಷರ ಡಬಲ್ಸ್ ವಿಭಾಗದಲ್ಲೂ ಪಾಲ್ಗೊಳ್ಳಲಿದ್ದಾರೆ. ದೀಪಿಕಾ ಕುಮಾರಿ ಮತ್ತು ಅತನು ದಾಸ್ ದಂಪತಿಯ ಮಿಶ್ರ ಡಬಲ್ಸ್ ವಿಭಾಗದ ಸ್ಪರ್ಧೆಗಳು ಶನಿವಾರ ನಡೆಯಲಿದ್ದು ಪ್ಯಾರಿಸ್‌ನಲ್ಲಿ ನಡೆದಿದ್ದ ವಿಶ್ವಕಪ್ ಟೂರ್ನಿಯಲ್ಲಿ ತೋರಿದ ಸಾಮರ್ಥ್ಯವನ್ನು ಮತ್ತೆ ತೋರಿಸಲು ಸಜ್ಜಾಗಿದ್ದಾರೆ.

1988ರಿಂದ ಭಾರತದಲ್ಲಿ ಆರ್ಚರಿ ಕ್ರೀಡೆ ವೇಗವಾಗಿ ಬೆಳೆದಿದೆ. ಲಿಂಬಾ ರಾಮ್, ಡೋಲಾ ಬ್ಯಾನರ್ಜಿ ಅವರಂಥ ದಿಗ್ಗಜರನ್ನು ಕಂಡಿರುವ ಭಾರತ ಎಲ್ಲ ಕ್ರೀಡಾಕೂಟಗಳಲ್ಲೂ ಪ್ರಶಸ್ತಿ ಗೆದ್ದಿದೆ. ಆದರೆ ಒಲಿಂಪಿಕ್ಸ್ ಪಕದ ಮಾತ್ರ ಮರೀಚಿಕೆಯಾಗಿದೆ.


2006ರಲ್ಲಿ ಜಯಂತ ತಾಲೂಕುದಾರ ವಿಶ್ವ ಕ್ರಮಾಂಕದಲ್ಲಿ ಎರಡನೇ ಸ್ಥಾನಕ್ಕೇರಿದ್ದರು. ಮುಂದಿನ ವರ್ಷ ಡೋಲಾ ವಿಶ್ವ ಚಾಂಪಿಯನ್ ಆಗಿದ್ದರು. ಆದರೆ 2008ರ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ನಿರೀಕ್ಷೆ ಹುಸಿಯಾಗಿತ್ತು. ಅನಂತರ ಮುನ್ನೆಲೆಗೆ ಬಂದವರು ದೀಪಿಕಾ ಕುಮಾರಿ. ಯೂತ್ ವಿಶ್ವ ಚಾಂಪಿಯನ್‌ಷಿಪ್ ಮತ್ತು ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಚಿನ್ನಕ್ಕೆ ಮುತ್ತಿಟ್ಟ ಅವರು ಲಂಡನ್ ಒಲಿಂಪಿಕ್ಸ್‌ನಲ್ಲಿ ಮೊದಲ ಸುತ್ತಿನಲ್ಲೇ ಹೊರಬಿದ್ದಿದ್ದರು. ಈಗ ಮೂರನೇ ಒಲಿಂಪಿಕ್ಸ್‌ನಲ್ಲಿ ಪದಕದ ಮೇಲೆ ಕಣ್ಣಿಟ್ಟಿದ್ದಾರೆ.



ತರುಣ್‌ದೀಪ್ ರಾಯ್

ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಭಾರತದಿಂದ ಎಂಟು ಮಂದಿ ಮತ್ತು ಲಂಡನ್ ಒಲಿಂಪಿಕ್ಸ್‌ನಲ್ಲಿ 10 ಮಂದಿ ಪಾಲ್ಗೊಂಡಿದ್ದರು. ಕೆಲವೊಮ್ಮೆ ಉತ್ತಮ ಸಾಮರ್ಥ್ಯ ತೋರಿದರೂ ನಾಕೌಟ್ ಹಂತಗಳಲ್ಲಿ ಬಲಿಷ್ಠ ದೇಶಗಳ ಸವಾಲು ಎದುರಿಸಲಾಗದೆ ಮರಳಿದ್ದಾರೆ.

ಅತನು ದಾಸ್ ಎರಡು ವರ್ಷಗಳ ಅವಧಿಯಲ್ಲಿ ಆರು ಪದಕಗಳನ್ನು ಗೆದ್ದಿದ್ದು, ಒಲಿಂಪಿಕ್ಸ್‌ನಲ್ಲಿ ಉತ್ತಮ ಸಾಮರ್ಥ್ಯ ತೋರಲು ನೆರವಾಗಲಿದೆ. ವಿಶ್ವಕಪ್‌ನ ವೈಯಕ್ತಿಕ ಸ್ಪರ್ಧೆ ಹಾಗೂ ಮಿಶ್ರ ತಂಡ ವಿಭಾಗದಲ್ಲಿ ಚಿನ್ನ ಜಯಿಸಿದ್ದರು. ಹೋದ ವರ್ಷ ವೈಯಕ್ತಿಕ, ರಿಕರ್ವ್ ತಂಡ ಮತ್ತು ಮಿಶ್ರ ತಂಡ ವಿಭಾಗದಲ್ಲಿ ಕಂಚಿನ ಸಾಧನೆ ಮಾಡಿದ್ದರು. ಸೇನೆಯಲ್ಲಿ ಆರ್ಚರಿ ಪಟು ಆಗಿರುವ ತರುಣದೀಪ್ ರಾಯ್ ಕೂಡ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡ ಅನುಭವ ಹೊಂದಿದ್ದಾರೆ.



ಪ್ರವೀಣ್ ಜಾಧವ್– ಟ್ವಿಟರ್ ಚಿತ್ರ

ಯಾವ ಕ್ರೀಡೆ ಯಾವಾಗಿನಿಂದ...

- ಆರ್ಚರಿ 1900–1908, 1920; 1972ರಿಂದ
- ಆರ್ಟಿಸ್ಟಿಕ್ ಈಜು 1984ರಿಂದ
- ಬ್ಯಾಡ್ಮಿಂಟನ್ 1992ರಿಂದ
- ಬೇಸ್‌ಬಾಲ್ 1992–2008, 2020
- ಬ್ಯಾಸ್ಕೆಟ್‌ಬಾಲ್ 1936ರಿಂದ
- ಬಾಸ್ಕ್ ಪೆಲೋಟ 1900ರಲ್ಲಿ ಮಾತ್ರ
- ಬಾಕ್ಸಿಂಗ್ 1904, 1908; 1920ರಿಂದ
- ಕೆನೋಯಿಂಗ್ 1936ರಿಂದ
- ಕ್ರಿಕೆಟ್ 1900ರಲ್ಲಿ ಮಾತ್ರ
- ಕ್ರಾಕೆಟ್ 1900ರಲ್ಲಿ ಮಾತ್ರ
- ಡೈವಿಂಗ್ 1904ರಿಂದ
- ಈಕ್ವೆಸ್ಟ್ರಿಯನ್ 1900; 1912ರಿಂದ
- ಹಾಕಿ 1908, 1920; 1928ರಿಂದ
- ಫುಟ್‌ಬಾಲ್ 1900–1928; 1936ರಿಂದ
- ಗಾಲ್ಫ್ 1900, 1904; 2016ರಿಂದ
- ಹ್ಯಾಂಡ್‌ಬಾಲ್ 1936; 1972ರಿಂದ
- ಜ್ಯೂಡಿ ಪಾಮ್ 1908ರಲ್ಲಿ ಮಾತ್ರ
- ಜೂಡೊ 1964; 1972ರಿಂದ
- ಕರಾಟೆ 2020
- ಲ್ಯಾಕ್ರೊಸ್ 1904, 1908
- ಪೆಂಟಾಥ್ಲಾನ್ 1912ರಿಂದ
- ಪೋಲೊ 1900, 1908, 1920, 1924, 1936
- ರ‍್ಯಾಕೆಟ್ಸ್ 1908
- ರಾಕ್ 1904
- ರೋಯಿಂಗ್ 1900ರಿಂದ
- ರಗ್ಬಿ 1900, 1908, 1920, 1924
- ರಗ್ಬಿ ಸೆವೆನ್ಸ್ 2016ರಿಂದ
- ಸೇಲಿಂಗ್ 1900; 1908ರಿಂದ
- ಶೂಟಿಂಗ್ 1896, 1900, 1908–1924; 1932
- ಸ್ಕೇಟ್ ಬೋರ್ಡಿಂಗ್ 2020
- 1996–2008; 2020
- ಸ್ಪೋರ್ಟ್ ಕ್ಲೈಂಬಿಂಗ್ 2020
- ಸರ್ಫಿಂಗ್ 2020
- ಟೇಬಲ್ ಟೆನಿಸ್ 1988ರಿಂದ
- ಟೇಕ್ವಾಂಡೊ 2000ರಿಂದ
- ಟೆನಿಸ್ 1896–1924; 1988ರಿಂದ
- ಟ್ರಯಥ್ಲಾನ್ 2000ರಿಂದ
- ಟಗ್ ಆಫ್ ವಾರ್ 1900–1920
- ವಾಲಿಬಾಲ್ 1964ರಿಂದ
- ವಾಟರ್ ಮೋಟರ್ ಸ್ಪೋರ್ಟ್ 1908
- ವಾಟರ್ ಪೋಲೊ 1900
- ವೇಟ್ ಲಿಫ್ಟಿಂಗ್ 1896, 1904; 1920ರಿಂದ
- ಕುಸ್ತಿ 1896; 1904

ಎಲ್ಲ ಆವೃತ್ತಿಗಳಲ್ಲಿ ಇದ್ದ ಕ್ರೀಡೆಗಳು

- ಅಥ್ಲೆಟಿಕ್ಸ್ * ಸೈಕ್ಲಿಂಗ್ * ಫೆನ್ಸಿಂಗ್ * ಜಿಮ್ನಾಸ್ಟಿಕ್ಸ್ * ಈಜು

ಫುಟ್‌ಬಾಲ್: ಜಪಾನ್ ತಂಡಕ್ಕೆ ಜಯ

ಟೋಕಿಯೊ (ಎಎಫ್‌ಪಿ): ಆತಿಥೇಯ ಜಪಾನ್ ತಂಡ ಒಲಿಂಪಿಕ್ಸ್ ಫುಟ್‌ಬಾಲ್‌ನ ಮೊದಲ ಪಂದ್ಯದಲ್ಲಿ ಜಯ ಸಾಧಿಸಿದೆ. ಗುರುವಾರ ನಡೆದ ಹಣಾಹಣಿಯಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಜಪಾನ್ 1–0 ಅಂತರದಲ್ಲಿ ಮಣಿಸಿತು.

ವಿಡಿಯೊ ಅನಲಿಸ್ಟ್ ಮತ್ತು ಇಬ್ಬರು ಆಟಗಾರರಾದ ಜೇಮ್ಸ್ ಮೊನ್ಯಾನೆ ಮತ್ತು ಕಮೊಹೆಲೊ ಮಲತ್ಸಿ ಅವರಲ್ಲಿ ಕೊರೊನಾ ಕಾಣಿಸಿಕೊಂಡಿದ್ದ ಕಾರಣ ದಕ್ಷಿಣ ಆಫ್ರಿಕಾಕ್ಕೆ ಕಠಿಣ ಕ್ವಾರಂಟೈನ್‌ನಲ್ಲಿ ಇರುವಂತೆ ಸೂಚಿಸಲಾಗಿತ್ತು.

ಹೀಗಾಗಿ ಅಭ್ಯಾಸದ ಎರಡು ಅವಧಿಗಳು ನಷ್ಟವಾಗಿದ್ದವು.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕೋವಿಡ್ ಸೋಂಕಿಗೆ ಒಳಗಾದವರು ನಿರ್ದಿಷ್ಟ ಪಂದ್ಯ ಆರಂಭಕ್ಕೂ ಆರು ತಾಸು ಮೊದಲು ಪರೀಕ್ಷೆ ಮಾಡಿಸಿಕೊಂಡು ನೆಗೆಟಿವ್ ವರದಿ ಬಂದರೆ ಮಾತ್ರ ಕಣಕ್ಕೆ ಇಳಿಯಲು ಅವಕಾಶವಿದೆ. ಬದಲಿ ಆರು ಆಟಗಾರರನ್ನು ಬಳಸಿಕೊಂಡು ದಕ್ಷಿಣ ಆಫ್ರಿಕಾ ತಂಡ ಪಂದ್ಯದಲ್ಲಿ ಆಡಿತ್ತು.

71ನೇ ನಿಮಿಷದಲ್ಲಿ ದಕ್ಷಿಣ ಆಫ್ರಿಕಾದ ರಕ್ಷಣಾ ವಿಭಾಗಕ್ಕೆ ಚಳ್ಳೆಹಣ್ಣು ತಿನ್ನಿಸಿ ತಕೆಫೂಸಾ ಕುಬೊ ಗೋಲು ಗಳಿಸಿದರು. ಮೆಕ್ಸಿಕೊಗೆ ಮಣಿದ ಫ್ರಾನ್ಸ್: ಮೆಕ್ಸಿಕೊ ಎದುರಿನ ಪಂದ್ಯದಲ್ಲಿ ಫ್ರಾನ್ಸ್ 1–4ರಿಂದ ಸೋಲನುಭವಿಸಿತು. ವೇಗಾ (47ನೇ ನಿಮಿಷ), ಕೊರ್ಡೊವಾ (55ನೇ ನಿ), ಆ್ಯಂಟುನಾ (80ನೇ ನಿ) ಮತ್ತು ಅಗ್ವುರೆ (90ನೇ ನಿ) ಮೆಕ್ಸಿಕೊ ಪರವಾಗಿ ಗೋಲು ಗಳಿಸಿದರೆ 69ನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿ ಅವಕಾಶದಲ್ಲಿ ಗಿಗ್ನಾಕ್ ಅವರು ಫ್ರಾನ್ಸ್‌ಗಾಗಿ ಏಕೈಕ ಗೋಲು ಗಳಿಸಿದರು. ರಿಚಾರ್ಲಿಸನ್ (7, 22, 30ನೇ ನಿ) ಗಳಿಸಿದ ಹ್ಯಾಟ್ರಿಕ್ ಗೋಲುಗಳ ಬಲದಿಂದ ಬ್ರೆಜಿಲ್ 4–2ರಲ್ಲಿ ಜರ್ಮನಿಯನ್ನು ಮಣಿಸಿತು. ಪೌಲಿನ್ಹೊ (90 + 5ನೇ ನಿ) ಬ್ರೆಜಿಲ್ ಪರ ನಾಲ್ಕನೇ ಗೋಲು ಗಳಿಸಿದರು. ಅಮಿರಿ (57ನೇ ನಿ) ಮತ್ತು ಅಚಿ (84ನೇ ನಿ) ಜರ್ಮನಿಯ ಸೋಲಿನ ಅಂತರ ಕಡಿಮೆ ಮಾಡಿದರು.

ಅರ್ಜೆಂಟೀನಾಗೆ ಸೋಲು: ಆಸ್ಟ್ರೇಲಿಯಾ ತಂಡವು 2–0ಯಿಂದ ಅರ್ಜೆಂಟೀನಾ ಎದುರು ಗೆಲುವು ಸಾಧಿಸಿತು. 14ನೇ ನಿಮಿಷ ವೇಲ್ಸ್, 80ನೇ ನಿಮಿಷದಲ್ಲಿ ಟಲಿಯೊ ವಿಜೇತ ತಂಡದ ಪರ ಗೋಲು ಹೊಡೆದರು.



ಜಪಾನ್‌ನ ತಕೆಫೂಸಾ ಕುಬೊ –ಎಎಫ್‌ಪಿ ಚಿತ್ರ



ಬ್ರೆಜಿಲ್‌ನ ರಿಚಾರ್ಲಿಸನ್ –ರಾಯಿಟರ್ಸ್

ಚಿನ್ನ ಗೆಲ್ಲುವವರಿಗೆ ₹ 75 ಲಕ್ಷ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆಲ್ಲುವವರಿಗೆ ₹ 75 ಲಕ್ಷ ನೀಡಲಾಗುವುದು ಎಂದು ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಗುರುವಾರ ತಿಳಿಸಿದೆ. ಬೆಳ್ಳಿ ಪದಕ ಗೆಲ್ಲುವವರಿಗೆ ₹ 40 ಲಕ್ಷ ಮತ್ತು ಕಂಚಿನ ಪದಕ ಗಳಿಸುವವರಿಗೆ ₹ 25 ಲಕ್ಷ, ದೇಶವನ್ನು ಪ್ರತಿನಿಧಿಸುವ ಪ್ರತಿಯೊಬ್ಬರಿಗೆ ತಲಾ ಒಂದು ಲಕ್ಷ ನೀಡುವುದಾಗಿಯೂ ಹೇಳಿದೆ.

ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ ಕ್ರೀಡೆಯನ್ನು ಪ್ರತಿನಿಧಿಸುವ ಫೆಡರೇಷನ್‌ಗೆ ತಲಾ ₹ 25 ಲಕ್ಷ ಹೆಚ್ಚುವರಿ ಹಣ ನೀಡಲು ಮತ್ತು ಪದಕ ಗೆಲ್ಲುವ ಕ್ರೀಡೆಯನ್ನು ಪ್ರತಿನಿಧಿಸುವ ಫೆಡರೇಷನ್‌ಗೆ ₹ 30 ಲಕ್ಷ ನೀಡಲು, ಪ್ರತಿಯೊಬ್ಬರಿಗೆ ದಿನವೊಂದಕ್ಕೆ ₹ 50 ಭತ್ಯೆ ನೀಡಲು ಸಲಹಾ ಸಮಿತಿ ಶಿಫಾರಸು ಮಾಡಿದೆ.

‘ಪದಕ ವಿಜೇತರಿಗೆ ಮತ್ತು ಅವರನ್ನು ತಯಾರು ಮಾಡುವ ಫೆಡರೇಷನ್‌ಗಳಿಗೆ ಐಒಎ ಬಹುಮಾನ ನೀಡುತ್ತಿರುವುದು ಇದೇ ಮೊದಲು’ ಎಂದು ಐಒಎ ಪ್ರಧಾನ ಕಾರ್ಯದರ್ಶಿ ರಾಜೀವ್ ಮೆಹ್ತಾ ತಿಳಿಸಿದ್ದಾರೆ.

ವಿಶ್ವದ ಕ್ರೀಡಾ ಹಬ್ಬದಲ್ಲಿ ನಾಲ್ಕು ಕ್ರೀಡೆಗಳ ‘ಪದಾರ್ಪಣೆ’

ಚಕ್ರಗಳ ಮೇಲೆ ಸಾಹಸ; ಕರಾಟೆ ‘ಕಿಕ್’

ಟೋಕಿಯೊ (ಪಿಟಿಐ): ಕೊರೊನಾ ವೈರಸ್ ಆತಂಕದ ನಡುವೆಯೂ ಆಯೋಜನೆಗೊಳ್ಳುತ್ತಿರುವ ಈ ಬಾರಿಯ ಒಲಿಂಪಿಕ್ ಕೂಟದಲ್ಲಿ ‘ಪದಾರ್ಪಣೆ’ ಮಾಡಲು ಹೊಸ ಕ್ರೀಡೆಗಳು ಸಜ್ಜಾಗಿವೆ.

ಈ ಬಾರಿ ಕರಾಟೆ, ಸರ್ಫಿಂಗ್, ಸ್ಕೇಟ್ ಬೋರ್ಡಿಂಗ್ ಮತ್ತು ಸ್ಪೋರ್ಟ್ ಕ್ಲೈಂಬಿಂಗ್ ಸ್ಪರ್ಧೆಗಳು ಒಲಿಂಪಿಕ್ಸ್‌ನಲ್ಲಿ ಕಾಣಿಸಿಕೊಳ್ಳಲಿವೆ. ಈ ಪೈಕಿ ಕರಾಟೆ ತನ್ನ ‘ತವರಿನಲ್ಲೇ’ ಒಲಿಂಪಿಕ್ಸ್‌ನಲ್ಲಿ ಸೇರಿಕೊಳ್ಳಲು ಸಜ್ಜಾಗಿದೆ. ಸಮರಕಲೆಯಾದ ಕರಾಟೆ ಆರಂಭಗೊಂಡದ್ದು ಜಪಾನಿನ ಒಕಿನಾವಾದಲ್ಲಿ. 1920ರ ಸಂದರ್ಭದಲ್ಲಿ ಜಪಾನಿನಾದ್ಯಂತ ಹೆಸರು ಗಳಿಸಿದ ಇದು ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ವಿಶ್ವಕ್ಕೆ ತಲುಪಿತು.

ಪ್ರತಿರೋಧ, ಕಿಕ್ ಮತ್ತು ಪಂಚಿಂಗ್ ನಿಂದಾಗಿ ಆತ್ಮರಕ್ಷಣೆಗೆ ಅತ್ಯಂತ ಉತ್ತಮ ‘ಕಲೆ’ ಎಂಬ ಹೆಸರನ್ನೂ ಗಳಿಸಿರುವ ಈ ಕ್ರೀಡೆಯನ್ನು ಒಲಿಂಪಿಕ್ಸ್‌ನಲ್ಲಿ ಸೇರಿಸಲು 1970ರಿಂದಲೇ ಪ್ರಯತ್ನಗಳು ನಡೆದಿವೆ. ಜಪಾನ್‌ನ ಅಧ್ಯಾತ್ಮ ತಾಣವಾದ ನಿಪ್ಪೋ ಬುಡೋಕಾನ್‌ನಲ್ಲಿ ಕಟಾ ಮತ್ತು ಕುಮಿಟೆ ಮಾದರಿಗಳಲ್ಲಿ ಪದಕಗಳಿಗಾಗಿ ಸ್ಪರ್ಧಿಗಳು ಪೈಪೋಟಿ ನಡೆಸುವರು. ಕಟಾ ಏಕವ್ಯಕ್ತಿ ಪ್ರದರ್ಶನ. ಏಳು ವಿಭಾಗಗಳಲ್ಲಿ ತೋರುವ ಸಾಮರ್ಥ್ಯಕ್ಕೆ ತಕ್ಕಂತೆ ಕರಾಟೆಕಾಗಳಿಗೆ ಪಾಯಿಂಟ್ ನೀಡಲಾಗುತ್ತದೆ. ಕುಮಿಟೆಯಲ್ಲಿ ಇಬ್ಬರು ಮುಖಾಮುಖಿಯಾಗುತ್ತಾರೆ. ಪಂದ್ಯದ ಅವಧಿ ಮೂರು ನಿಮಿಷ. ಕರಾಟೆಯ ಕೆಲವು ಅಂಶಗಳನ್ನು ಹೊಂದಿರುವ ಟೇಕ್ವಾಂಡೊ ಮತ್ತು ಜೂಡೊ ಈಗಾಗಲೇ ಒಲಿಂಪಿಕ್ಸ್‌ನಲ್ಲಿ ಸೇರ್ಪಡೆಯಾಗಿವೆ.

ಆದರೆ ಅನೇಕ ಶೈಲಿಗಳನ್ನು ಹೊಂದಿದ್ದ ಕರಾಟೆಗೆ ಒಂದು ಏಕರೂಪದ ಚೌಕಟ್ಟು ನೀಡಲು ಸಾಧ್ಯವಾಗಿರಲಿಲ್ಲ. ಇದೀಗ ಆ ಅಡೆತಡೆ ನಿವಾರಣೆಯಾಗಿದೆ. ಚಕ್ರಗಳ ಮೇಲೆ ಮರದ ಅಥವಾ ತಗಡಿನ ಹಾಳೆ ಇರಿಸಿ ರಸ್ತೆಗಳಲ್ಲಿ ಸುಮ್ಮನೇ ಓಡಾಡುವುದನ್ನು ಸಾಮಾನ್ಯವಾಗಿ ಕಾಣುತ್ತೇವೆ. ಇದುವೇ ಸ್ಕೇಟ್‌ಬೋರ್ಡಿಂಗ್. ಬಳಸುವ ತಂತ್ರಗಳು, ವೇಗ, ತೋರುವ ಸೊಗಸು ಮತ್ತು ಜಿಗಿಯುವ ಎತ್ತರದ ಆಧಾರದಲ್ಲಿ ಕ್ರೀಡಾಪಟುಗಳಿಗೆ ಪಾಯಿಂಟ್ ನೀಡಲಾಗುತ್ತದೆ.

1940ರಲ್ಲಿ ಅಮೆರಿಕದ ಪಶ್ಚಿಮ ಕರಾವಳಿಯಲ್ಲಿ ಆರಂಭಗೊಂಡ ಈ ಕ್ರೀಡೆಯಲ್ಲಿ ಆರಂಭದಲ್ಲಿ ಲೋಹದ ಚಕ್ರಗಳ ಮೇಲೆ ಕಟ್ಟಿಗೆಯ ಹಾಳೆ ಇರಿಸಿ ಆಡಲಾಗುತ್ತಿತ್ತು. 1950ರ ವೇಳೆ ಇದರಲ್ಲಿ ಅನೇಕ ಬದಲಾವಣೆಗಳು ಆದವು.



ಅಭ್ಯಾಸ ನಡೆಸಿದ ಫ್ರಾನ್ಸ್‌ನ ಕರಾಟೆಕ ಅಲೆಕ್ಸಾಂಡ್ರ ಫೆರಾಸಿ ಎಎಫ್‌ಪಿ ಚಿತ್ರ

ಎತ್ತರೆತ್ತರಕ್ಕೆ...ಕ್ಲೈಂಬಿಂಗ್

ವಾಲ್ ಕ್ಲೈಂಬಿಂಗ್ ಎಂದೂ ಕರೆಯಲಾಗುವ ಸ್ಪೋರ್ಟ್ ಕ್ಲೈಂಬಿಂಗ್ ಕ್ರೀಡೆಯಲ್ಲಿ ಸ್ಪೀಡ್ ಕ್ಲೈಂಬಿಂಗ್, ಬುಲ್ಡರಿಂಗ್ ಮತ್ತು ಲೀಡ್ ಕ್ಲೈಂಬಿಂಗ್ ವಿಭಾಗಗಳು ಒಲಿಂಪಿಕ್ಸ್‌ನಲ್ಲಿ ಇರುತ್ತವೆ. ಸ್ಪೀಡ್ ಕ್ಲೈಂಬಿಂಗ್‌ನಲ್ಲಿ ಇಬ್ಬರು ಕ್ರೀಡಾಪಟುಗಳು ಹಗ್ಗ ಬಳಸಿಕೊಂಡು ಒಂದೇ ಸಮಯದಲ್ಲಿ 15 ಮೀಟರ್ ಎತ್ತರದ ಗೋಡೆ ಹತ್ತುವರು. ಬುಲ್ಡರಿಂಗ್‌ನಲ್ಲಿ ಹಗ್ಗ ಇರುವುದಿಲ್ಲ. ನಾಲ್ಕು ಮೀಟರ್ ಎತ್ತರದ ಗೋಡೆಯಲ್ಲಿ ನಿಗದಿಪಡಿಸಿದ ದಾರಿಯಲ್ಲಿ ಹತ್ತಬೇಕು. ಲೀಡ್ ಕ್ಲೈಂಬಿಂಗ್‌ನಲ್ಲಿ 15 ಮೀಟರ್ ಎತ್ತರದ ಗೋಡೆ ಹತ್ತಬೇಕು. ಇದರಲ್ಲಿ ಸುರಕ್ಷತೆಗಾಗಿ ಮಾತ್ರ ಹಗ್ಗ ನೀಡಲಾಗುತ್ತದೆ.

ತೆರೆಗಳ ಸವಾಲು ಮೀರಿ ಸರ್ಫಿಂಗ್

ಸಾಗರದಲ್ಲಿ ಅಡೆ–ತಡೆಗಳನ್ನು ದಾಟಿ ಮುನ್ನುಗ್ಗುವ ಆಟ ಸರ್ಫಿಂಗ್. 20ರಿಂದ 25 ನಿಮಿಷಗಳ ಕಾಲ ಕ್ರೀಡಾಪಟುಗಳು ತೋರುವ ಸಾಮರ್ಥ್ಯದ ಆಧಾರದಲ್ಲಿ ಪಾಯಿಂಟ್ ನೀಡಲಾಗುತ್ತದೆ. ಒಂದು ಅವಧಿಯಲ್ಲಿ ನಾಲ್ವರನ್ನು ಸಾಗರಕ್ಕೆ ಇಳಿಸಲಾಗುತ್ತದೆ. ಅಗ್ರ ಸ್ಥಾನ ಗಳಿಸುವ ಇಬ್ಬರಿಗೆ ಮುಂದಿನ ಹಂತಕ್ಕೆ ಬಡ್ತಿ ನೀಡಲಾಗುತ್ತದೆ.

ಒಲಿಂಪಿಕ್ಸ್ ಈಜಿನಲ್ಲಿ ಮೂರು ಚಿನ್ನದ ಪದಕಗಳನ್ನು ಗೆದ್ದಿರುವ ಡ್ಯೂಕ್ ಕಹನಮೊಕು ಅವರು ಸರ್ಫಿಂಗ್ ಕ್ರೀಡೆಯನ್ನು ಜನಪ್ರಿಯಗೊಳಿಸಿದವರು. ಅವರನ್ನು ಆಧುನಿಕ ಸರ್ಫಿಂಗ್‌ನ ಪಿತಾಮಹ ಎಂದೇ ಕರೆಯಲಾಗುತ್ತದೆ. ಲಾಂಗ್‌ಬೋರ್ಡ್ ಮತ್ತು ಶಾರ್ಟ್‌ಬೋರ್ಡ್ ಎಂಬ ವಿಭಾಗಗಳಲ್ಲಿ ಸ್ಪರ್ಧೆ ನಡೆಯುತ್ತದೆ.

ಬೇಸ್‌ಬಾಲ್ ಮತ್ತೆ ಮುನ್ನೆಲೆಗೆ: ಹಿಂದಿನ ಎರಡು ಆವೃತ್ತಿಗಳಲ್ಲಿ ಸ್ಥಾನ ಗಳಿಸದೇ ಇದ್ದ ಬೇಸ್ ಬಾಲ್ ಕ್ರೀಡೆ ಟೋಕಿಯೊದಲ್ಲಿ ಮತ್ತೆ ಗರಿಗೆದರಲಿದೆ. ಬ್ಯಾಸ್ಕೆಟ್‌ಬಾಲ್‌ನಲ್ಲಿ ತ್ರಿ ಎ ಸೈಡ್ ವಿಭಾಗದ ಸ್ಪರ್ಧೆಯನ್ನು ಈ ಬಾರಿ ಸೇರಿಸಲಾಗಿದೆ.



ಸರ್ಫಿಂಗ್ ಅಭ್ಯಾಸಕ್ಕೆ ಸಿದ್ಧತೆ ನಡೆಸಿದ ಇಸ್ರೇಲ್‌ನ ಅನಾಟ್ ಲೆಲ್ಯೋರ್ – ರಾಯಿಟರ್ಸ್ ಚಿತ್ರ

ಒಲಿಂಪಿಕ್ಸ್ ಬೆಂಬಿಡದ ಡೋಪಿಂಗ್

ಟೋಕಿಯೊ/ಪ್ಯಾರಿಸ್ (ಪಿಟಿಐ/ರಾಯಿಟರ್ಸ್/ಎಎಫ್‌ಪಿ): ಒಲಿಂಪಿಕ್ಸ್ ಮತ್ತು ಡೋಪಿಂಗ್ ವಿವಾದಗಳಿಗೆ ‘ನಂಟು’ ಆರಂಭವಾಗಿ ವರ್ಷಗಳೇ ಕಳೆದಿವೆ. ಈ ಬಾರಿಯ ಕ್ರೀಡಾಕೂಟ ಶುರುವಾಗಲು ಎರಡು ದಿನ ಬಾಕಿ ಇರುವಾಗಲೇ ಇಕ್ವಡೋರ್‌ನ 200 ಮೀಟರ್ಸ್ ಓಟಗಾರ ಅಲೆಕ್ಸ್ ಕ್ವಿನೊನೆಜ್ ಡೋಪಿಂಗ್ ಹಗರಣದಲ್ಲಿ ಸಿಕ್ಕಿಬಿದ್ದಿದ್ದಾರೆ. 2019ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದಿದ್ದ ಅವರು ಟೋಕಿಯೊದಲ್ಲಿ ಟ್ರ್ಯಾಕ್‌ಗೆ ಇಳಿಯಲು ಸಜ್ಜಾಗುತ್ತಿರುವಾಗಲೇ ಅಥ್ಲೆಟಿಕ್ಸ್ ಇಂಟೆಗ್ರಿಟಿ ಯೂನಿಟ್‌ನಿಂದ ಒಂದು ವರ್ಷದ ನಿಷೇಧಕ್ಕೆ ಒಳಗಾಗಿದ್ದಾರೆ. ಹೀಗಾಗಿ ಸ್ಪರ್ಧಿಸುವ ಕನಸು ಕಮರಿಹೋಗಿದೆ.



ಒಂಬತ್ತು ವರ್ಷಗಳ ಹಿಂದೆ ನಡೆದಿದ್ದ ಲಂಡನ್ ಒಲಿಂಪಿಕ್ಸ್‌ನ ಉದ್ದೀಪನ ಮದ್ದು ಸೇವನೆ ಪರೀಕ್ಷೆಯ ಅವಧಿ ಈಗಷ್ಟೇ ಮುಗಿದಿದೆ. ಹೀಗಾಗಿ ಆ ಕೂಟದಲ್ಲಿ ಗೆದ್ದ ಪದಕಗಳು ಇನ್ನು ಮುಂದೆ ಖಚಿತ ಎನ್ನಬಹುದಾಗಿದೆ. ಈ ಹಿನ್ನೆಲೆಯಲ್ಲಿ ಟೋಕಿಯೊ ಒಲಿಂಪಿಕ್ಸ್‌ನ ಪದಕಗಳಿಗೂ ನಿಜವಾಗಿ ಬೆಲೆ ಸಿಗುವುದು ಮುಂದಿನ ಎಂಟು ವರ್ಷಗಳ ನಂತರ.

ಒಲಿಂಪಿಕ್ ಇತಿಹಾಸಕಾರ ಬಿಲ್ ಮಲೋನ್ ಅವರ ಪ್ರಕಾರ ಉದ್ದೀಪನ ಮದ್ದು ಸೇವನೆ ಪರೀಕ್ಷೆ ಆರಂಭಗೊಂಡಾಗಿನಿಂದ ಒಟ್ಟು 140 ಕ್ರೀಡಾಪಟುಗಳು ನಿಷೇಧಕ್ಕೆ ಒಳಗಾಗಿದ್ದಾರೆ ಅಥವಾ ಅನರ್ಹಗೊಂಡಿದ್ದಾರೆ. ಈ ಪೈಕಿ 42 ಮಂದಿ ಪದಕ ಗೆದ್ದವರು. ಅದರಲ್ಲೂ 13 ಮಂದಿ ಚಿನ್ನಕ್ಕೆ ಮುತ್ತು ನೀಡಿದವರು.

ವಿಶ್ವ ಉದ್ದೀಪನ ಮದ್ದು ನಿಷೇಧ ಘಟಕ (ವಾಡಾ) ಅಸ್ತಿತ್ವಕ್ಕೆ ಬಂದದ್ದು 2000ನೇ ಇಸವಿಯಲ್ಲಿ. ಮುಂದಿನ ವರ್ಷ ವಿಶ್ವ ಉದ್ದೀಪನ ಮದ್ದು ನಿಷೇಧ ನಿಯಮ ಜಾರಿಗೆ ಬಂತು. 2009, 2015 ಮತ್ತು 2021ರಲ್ಲಿ ಇದಕ್ಕೆ ತಿದ್ದುಪಡಿಯನ್ನೂ ಮಾಡಲಾಯಿತು. ಡೋಪಿಂಗ್ ನಿಷೇಧಕ್ಕೆ ಸಂಬಂಧಿಸಿದ ಸಂಶೋಧನೆಗಳಿಗೆ ವಾಡಾ ಭಾರಿ ಮೊತ್ತ ವಿನಿಯೋಗಿಸಿದೆ.

ಒಲಿಂಪಿಕ್ಸ್ ವೇಳಾಪಟ್ಟಿ-1 (ಭಾರತದ ಸ್ಪರ್ಧೆಗಳು)

ಆರ್ಚರಿ

ಜುಲೈ 23

ಆರಂಭ; ವಿಭಾಗ(ಸ್ಪರ್ಧಿಗಳು)

ಬೆಳಿಗ್ಗೆ 5.30; ಮಹಿಳಾ ವೈಯಕ್ತಿಕ ಅರ್ಹತಾ ಸುತ್ತುಗಳು(ದೀಪಿಕಾ ಕುಮಾರಿ)
ಬೆಳಿಗ್ಗೆ 9.30; ಪುರುಷರ ವೈಯಕ್ತಿಕ ಅರ್ಹತಾ ಸುತ್ತುಗಳು(ಅತನು ದಾಸ್, ಪ್ರವೀಣ್ ಜಾಧವ್, ತರುಣದೀಪ್ ರಾಯ್)

ಜುಲೈ 24

ಬೆಳಿಗ್ಗೆ 6 ಗಂಟೆ; ಮಿಶ್ರ ತಂಡದ ಎಲಿಮಿನೇಷನ್ಸ್(ಅತನು ದಾಸ್, ದೀಪಿಕಾ ಕುಮಾರಿ)

ಜುಲೈ 26

ಬೆಳಿಗ್ಗೆ 6; ಪುರುಷರ ತಂಡದ ಎಲಿಮಿನೇಷನ್ಸ್(ಅತನು ದಾಸ್, ಪ್ರವೀಣ್ ಜಾಧವ್, ತರುಣದೀಪ್ ರಾಯ್)

ಜುಲೈ 27ರಿಂದ 31

ಬೆಳಿಗ್ಗೆ 6 ಗಂಟೆ; ಪುರುಷ, ಮಹಿಳಾ ವೈಯಕ್ತಿಕ ವಿಭಾಗದ ಎಲಿಮಿನೇಷನ್ಸ್
ಮಧ್ಯಾಹ್ನ 1 ಗಂಟೆ; ಪದಕದ ಸುತ್ತಿನ ಪಂದ್ಯಗಳು

ಬ್ಯಾಡ್ಮಿಂಟನ್

ಜುಲೈ 24

ಬೆಳಿಗ್ಗೆ 8.50; ಪುರುಷರ ಡಬಲ್ಸ್ ಗುಂಪು ಹಂತ (ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ)
ಬೆಳಿಗ್ಗೆ 9.30; ಪುರುಷರ ಸಿಂಗಲ್ಸ್ ಗುಂಪು ಹಂತ (ಸಾಯಿ ಪ್ರಣೀತ್)

ಜುಲೈ 25

ಬೆಳಿಗ್ಗೆ 7.10; ಮಹಿಳಾ ಸಿಂಗಲ್ಸ್ ಗುಂಪು ಹಂತ (ಪಿ.ವಿ.ಸಿಂಧು)

ಜುಕೈ 26ರಿಂದ 29

ಬೆಳಿಗ್ಗೆ 5.30; ಎಲ್ಲ ವಿಭಾಗಗಳ ಗುಂಪು ಹಂತದ ಪಂದ್ಯಗಳು (ಪಿ.ವಿ.ಸಿಂಧು, ಸಾಯಿ ಪ್ರಣೀತ್, ಸಾತ್ವಿಕ ಸಾಯಿರಾಜ್ ರಣಕಿರೆಡ್ಡಿ, ಚಿರಾಗ್ ಶೆಟ್ಟಿ)

ಜುಲೈ 29

ಬೆಳಿಗ್ಗೆ 5.30; ಪುರುಷರ ಡಬಲ್ಸ್ ಕ್ವಾರ್ಟರ್‌ಫೈನಲ್ಸ್

ಜುಲೈ 30

ಬೆಳಿಗ್ಗೆ 5.30; ಮಹಿಳಾ ಸಿಂಗಲ್ಸ್ ಕ್ವಾರ್ಟರ್‌ಫೈನಲ್
ಮಧ್ಯಾಹ್ನ 12 ಗಂಟೆ; ಪುರುಷರ ಡಬಲ್ಸ್ ಸೆಮಿಫೈನಲ್

ಜುಲೈ 31

ಬೆಳಿಗ್ಗೆ 5.30; ಪುರುಷರ ಸಿಂಗಲ್ಸ್ ಕ್ವಾರ್ಟರ್‌ಫೈನಲ್ಸ್
ಮಧ್ಯಾಹ್ನ 2.30; ಮಹಿಳಾ ಸಿಂಗಲ್ಸ್ ಸೆಮಿಫೈನಲ್ಸ್
ಮಧ್ಯಾಹ್ನ 2.30; ಪುರುಷರ ಡಬಲ್ಸ್ ಫೈನಲ್

ಆಗಸ್ಟ್ 1

ಬೆಳಿಗ್ಗೆ 9.30; ಪುರುಷರ ಸಿಂಗಲ್ಸ್ ಸೆಮಿಫೈನಲ್ಸ್
ಸಂಜೆ 5; ಮಹಿಳಾ ಸಿಂಗಲ್ಸ್ ಫೈನಲ್

ಆಗಸ್ಟ್ 2

ಸಂಜೆ 4.30; ಪುರುಷರ ಸಿಂಗಲ್ಸ್ ಫೈನಲ್

ಬಾಕ್ಸಿಂಗ್

ಜುಲೈ 24

ಬೆಳಿಗ್ಗೆ 8 ಗಂಟೆ; ಮಹಿಳೆಯರ ವೆಲ್ಟರ್‌ವೇಟ್ ರೌಂಡ್ 32 (ಲವ್ಲಿನಾ ಬೊರ್ಗೊಹೈನ್)
ಬೆಳಿಗ್ಗೆ 9.30; ಪುರುಷರ ವೆಲ್ಟರ್‌ವೇಟ್ ರೌಂಡ್ 32 (ವಿಕಾಸ್ ಕ್ರಿಶನ್)

ಜುಲೈ 25

ಬೆಳಿಗ್ಗೆ 7.30; ಮಹಿಳೆಯರ ಫ್ಲೈವೇಟ್ ರೌಂಡ್ 32 (ಮೇರಿ ಕೋಮ್)
ಬೆಳಿಗ್ಗೆ 8.48; ಪುರುಷರ ಲೈಟ್‌ವೇಟ್ ರೌಂಡ್ 32 (ಮನೀಷ್ ಕೌಶಿಕ್)

ಜುಲೈ 26

ಬೆಳಿಗ್ಗೆ 7.30; ಪುರುಷರ ಫ್ಲೈವೇಟ್ ರೌಂಡ್ 32 (ಅಮಿತ್ ಪಂಘಲ್)
ಬೆಳಿಗ್ಗೆ 9.06; ಪುರುಷರ ಮಿಡ್ಲ್‌ವೇಟ್ ರೌಂಡ್ 32 (ಆಶಿಶ್ ಕುಮಾರ್)

ಜುಲೈ 27

ಬೆಳಿಗ್ಗೆ 7.30; ಪುರುಷರ ವೆಲ್ಟರ್‌ವೇಟ್ ಪ್ರೀಕ್ವಾರ್ಟರ್‌ಫೈನಲ್
ಬೆಳಿಗ್ಗೆ 9.36; ಮಹಿಳೆಯರ ಲೈಟ್‌ವೇಟ್ ರೌಂಡ್ 32 (ಸಿಮ್ರನ್‌ಜೀತ್ ಕೌರ್)
ಬೆಳಿಗ್ಗೆ 10.09; ಮಹಿಳೆಯರ ವೆಲ್ಟರ್‌ವೇಟ್ ಪ್ರೀಕ್ವಾರ್ಟರ್‌ಫೈನಲ್

ಜುಲೈ 28

ಬೆಳಿಗ್ಗೆ 8; ಮಹಿಳೆಯರ ಮಿಡ್ಲ್‌ವೇಟ್ ಪ್ರೀಕ್ವಾರ್ಟರ್‌ಫೈನಲ್ (ಪೂಜಾ ರಾಣಿ)

ಜುಲೈ 29

ಬೆಳಿಗ್ಗೆ 7.30; ಪುರುಷರ ಮಿಡ್ಲ್‌ವೇಟ್ ಪ್ರೀಕ್ವಾರ್ಟರ್‌ಫೈನಲ್
ಬೆಳಿಗ್ಗೆ 8.33; ಪುರುಷರ ಸೂಪರ್ ಹೆವಿವೇಟ್ ಪ್ರೀಕ್ವಾರ್ಟರ್‌ಫೈನಲ್ (ಸತೀಶ್ ಕುಮಾರ್)
ಬೆಳಿಗ್ಗೆ 9.36; ಮಹಿಳೆಯರ ಫ್ಲೈವೇಟ್ ಪ್ರೀಕ್ವಾರ್ಟರ್‌ಫೈನಲ್

ಜುಲೈ 30

ಬೆಳಿಗ್ಗೆ 7.30; ಮಹಿಳೆಯರ ಲೈಟ್‌ವೇಟ್ ಪ್ರೀಕ್ವಾರ್ಟರ್‌ಫೈನಲ್

ಜುಲೈ 31ರಿಂದ ಆಗಸ್ಟ್ 8

ಎಲ್ಲ ವಿಭಾಗಗಳ ಅಂತಿಮ ಮತ್ತು ಪದಕದ ಸುತ್ತಿನ ಪಂದ್ಯಗಳು

ಶೂಟಿಂಗ್

ಜುಲೈ 24

ಬೆಳಿಗ್ಗೆ 5 ಗಂಟೆ; ಮಹಿಳೆಯರ 10 ಮೀ. ಏರ್ ರೈಫಲ್ ಅರ್ಹತಾ ಸುತ್ತು (ಇಳವೆನ್ನಿಲಾ ವಾಳರಿವನ್, ಅಪೂರ್ವಿ ಚಾಂಡೇಲ)
ಬೆಳಿಗ್ಗೆ 7.15; ಮಹಿಳೆಯರ 10 ಮೀ.ಏರ್ ರೈಫಲ್ ಫೈನಲ್
ಬೆಳಿಗ್ಗೆ 9.30; ಪುರುಷರ 10 ಮೀ. ಏರ್ ಪಿಸ್ತೂಲ್ ಅರ್ಹತಾ ಸುತ್ತು (ಸೌರಭ್ ಚೌಧರಿ, ಅಭಿಷೇಕ್ ಶರ್ಮಾ)
ಮಧ್ಯಾಹ್ನ 12; ಪುರುಷರ 10 ಮೀ. ಏರ್ ಪಿಸ್ತೂಲ್ ಫೈನಲ್

ಜುಲೈ 25

ಬೆಳಿಗ್ಗೆ 5.30; ಮಹಿಳೆಯರ 10 ಮೀ. ಏರ್ ಪಿಸ್ತೂಲ್ ಅರ್ಹತಾ ಸುತ್ತು (ಮನು ಭಾಕರ್, ಯಶಸ್ವಿನಿ ಸಿಂಗ್ ದೇಸ್ವಾಲ್)
ಬೆಳಿಗ್ಗೆ 6 ಗಂಟೆ; ಪುರುಷರ ಸ್ಕೀಟ್ ಅರ್ಹತಾ ಸುತ್ತು ಮೊದಲ ದಿನ (ಅಂಗದ್ ಬಾಜ್ವಾ, ಮೈರಾಜ್ ಅಹಮದ್ ಖಾನ್)
ಬೆಳಿಗ್ಗೆ 7.45; ಮಹಿಳೆಯರ 10 ಮೀ. ಏರ್ ಪಿಸ್ತೂಲ್ ಫೈನಲ್
ಬೆಳಿಗ್ಗೆ 9.30; ಪುರುಷರ 10 ಮೀ. ಏರ್ ರೈಫಲ್ ಅರ್ಹತಾ ಸುತ್ತು (ದೀಪಕ್ ಕುಮಾರ್, ದಿವ್ಯಾಂಶ್ ಸಿಂಗ್ ಪನ್ವರ್)
ಮಧ್ಯಾಹ್ನ 12 ಗಂಟೆ; ಪುರುಷರ 10 ಮೀ. ಏರ್ ರೈಫಲ್ ಫೈನಲ್

ಜುಲೈ 26

ಬೆಳಿಗ್ಗೆ 6.30; ಪುರುಷರ ಸ್ಕೀಟ್ ಅರ್ಹತಾ ಸುತ್ತು ಎರಡನೇ ದಿನ (ಅಂಗದ್ ಬಾಜ್ವಾ, ಮೈರಾಜ್ ಅಹಮದ್ ಖಾನ್)
ಮಧ್ಯಾಹ್ನ 12 ಗಂಟೆ; ಪುರುಷರ ಸ್ಕೀಟ್ ಫೈನಲ್

ಜುಲೈ 27

ಬೆಳಿಗ್ಗೆ 5.30; ಮಿಶ್ರ ತಂಡ ವಿಭಾಗದ 10 ಮೀ. ಏರ್ ಪಿಸ್ತೂಲ್ ಅರ್ಹತಾ ಸುತ್ತು (ಸೌರಭ್ ಚೌಧರಿ– ಮನು ಭಾಕರ್, ಅಭಿಷೇಕ್ ವರ್ಮಾ–ಯಶಸ್ವಿನಿ ಸಿಂಗ್ ದೇಸ್ವಾಲ್)
ಬೆಳಿಗ್ಗೆ 7.30; ಮಿಶ್ರ ತಂಡ ವಿಭಾಗದ 10 ಮೀ. ಏರ್ ಪಿಸ್ತೂಲ್ ಕಂಚಿನ ಪದಕದ ಸುತ್ತು
ಬೆಳಿಗ್ಗೆ 8.05; ಮಿಶ್ರ ತಂಡ ವಿಭಾಗದ 10 ಮೀ. ಏರ್ ಪಿಸ್ತೂಲ್ ಫೈನಲ್
ಬೆಳಿಗ್ಗೆ 9.45; ಮಿಶ್ರ ತಂಡ ವಿಭಾಗದ 10 ಮೀ. ಏರ್ ರೈಫಲ್ ಅರ್ಹತಾ ಸುತ್ತು (ದಿವ್ಯಾಂಶ ಸಿಂಗ್–ಇಳವೆನ್ನಿಲಾ, ದೀಪಕ್ ಕುಮಾರ್–ಅಂಜುಮ್ ಮೌದ್ಗಿಲ್)
ಬೆ.11.45; ಮಿಶ್ರ ತಂಡ ವಿಭಾಗದ 10 ಮೀ. ಏರ್ ರೈಫಲ್ ಕಂಚಿನ ಪದಕದ ಸುತ್ತು
ಮಧ್ಯಾಹ್ನ 12.20; ಮಿಶ್ರ ತಂಡ ವಿಭಾಗದ 10 ಮೀ. ಏರ್ ರೈಫಲ್ ಫೈನಲ್

ಜುಲೈ 29

ಬೆಳಿಗ್ಗೆ 5.30; ಮಹಿಳೆಯರ 25 ಮೀ. ಪಿಸ್ತೂಲ್ ಅರ್ಹತಾ ಸುತ್ತು (ಮನು ಭಾಕರ್, ರಾಹಿ ಸರ್ನೋಬತ್)

ಜುಲೈ 30

ಬೆಳಿಗ್ಗೆ 5.30; ಮಹಿಳೆಯರ 25 ಮೀ. ರ‍್ಯಾಪಿಡ್ ಪಿಸ್ತೂಲ್ ಅರ್ಹತಾ ಸುತ್ತು (ಮನು ಭಾಕರ್, ರಾಹಿ ಸರ್ನೋಬತ್)
ಬೆಳಿಗ್ಗೆ 11.20; ಮಹಿಳೆಯರ 25 ಮೀ. ಪಿಸ್ತೂಲ್ ಫೈನಲ್

ಜುಲೈ 31

ಬೆಳಿಗ್ಗೆ 8.30; ಮಹಿಳೆಯರ 50 ಮೀ. ರೈಫಲ್ 3 ಪೊಸಿಷನ್ಸ್ ಅರ್ಹತಾ ಸುತ್ತು (ಅಂಜುಮ್ ಮೌದ್ಗಿಲ್, ತೇಜಸ್ವಿನಿ ಸಾವಂತ್)
ಮಧ್ಯಾಹ್ನ 12.30; ಮಹಿಳೆಯರ 50 ಮೀ. ರೈಫಲ್ 3 ಪೊಸಿಷನ್ಸ್ ಫೈನಲ್

ಆಗಸ್ಟ್ 2

ಬೆಳಿಗ್ಗೆ 8 ಗಂಟೆ; ಪುರುಷರ 50 ಮೀ. ರೈಫಲ್ 3 ಪೊಸಿಷನ್ಸ್ ಅರ್ಹತಾ ಸುತ್ತು (ಸಂಜೀವ್ ರಜಪೂತ್, ಐಶ್ವರಿ ಪ್ರತಾಪ್ ಸಿಂಗ್)
ಮಧ್ಯಾಹ್ನ 1.20; ಪುರುಷರ 50 ಮೀ. ರೈಫಲ್ 3 ಪೊಸಿಷನ್ಸ್ ಫೈನಲ್

ಈಜು

ಜುಲೈ 25

ಮಧ್ಯಾಹ್ನ 3.32; ಮಹಿಳೆಯರ 100 ಮೀ. ಬ್ಯಾಕ್‌ಸ್ಟ್ರೋಕ್ ಹೀಟ್ಸ್ (ಮಾನಾ ಪಟೇಲ್)
ಮಧ್ಯಾಹ್ನ 3.52; ಪುರುಷರ 200 ಮೀ. ಫ್ರೀಸ್ಟೈಲ್ ಹೀಟ್ಸ್ (ಸಜನ್ ಪ್ರಕಾಶ್)
ಸಂಜೆ 4.49; ಪುರುಷರ 100 ಮೀ. ಬ್ಯಾಕ್‌ಸ್ಟ್ರೋಕ್ ಹೀಟ್ಸ್ (ಶ್ರೀಹರಿ ನಟರಾಜ್)

ಜುಲೈ 26

ಬೆಳಿಗ್ಗೆ 7.07; ಪುರುಷರ 200 ಮೀ. ಫ್ರೀಸ್ಟೈಲ್ ಸೆಮಿಫೈನಲ್ಸ್
ಬೆಳಿಗ್ಗೆ 8.01; ಪುರುಷರ 100 ಮೀ. ಬ್ಯಾಕ್‌ಸ್ಟ್ರೋಕ್ ಸೆಮಿಫೈನಲ್ಸ್
ಬೆಳಿಗ್ಗೆ 8.23; ಮಹಿಳೆಯರ 100 ಮೀ. ಬ್ಯಾಕ್‌ಸ್ಟ್ರೋಕ್ ಸೆಮಿಫೈನಲ್ಸ್
ಮಧ್ಯಾಹ್ನ 3.59; ಪುರುಷರ 200 ಮೀ. ಬಟರ್‌ಫ್ಲೈ ಹೀಟ್ಸ್ (ಸಜನ್ ಪ್ರಕಾಶ್)

ಜುಲೈ 27

ಬೆಳಿಗ್ಗೆ 8.05; ಪುರುಷರ 200 ಮೀ. ಬಟರ್‌ಫ್ಲೈ ಸೆಮಿಫೈನಲ್ಸ್

ಜುಲೈ 29

ಸಂಜೆ 4.20; ಪುರುಷರ 100 ಮೀ. ಬಟರ್‌ಫ್ಲೈ ಹೀಟ್ಸ್ (ಸಜನ್ ಪ್ರಕಾಶ್)

ಜುಲೈ 30

ಬೆಳಿಗ್ಗೆ 7 ಗಂಟೆ; ಪುರುಷರ 100 ಮೀ. ಬಟರ್‌ಫ್ಲೈ ಸೆಮಿಫೈನಲ್ಸ್

ಟೇಬಲ್ ಟೆನಿಸ್

ಜುಲೈ 24

ಬೆಳಿಗ್ಗೆ 5.30; ಮಹಿಳಾ ಮತ್ತು ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯಗಳು (ಜಿ.ಸತ್ಯನ್, ಶರತ್ ಕಮಲ್, ಮಣಿಕಾ ಬಾತ್ರಾ, ಸುತೀರ್ಥಾ ಮುಖರ್ಜಿ)
ಬೆಳಿಗ್ಗೆ 7.45; ಮಿಶ್ರ ಡಬಲ್ಸ್ ಪ್ರೀಕ್ವಾರ್ಟರ್‌ಫೈನಲ್ (ಶರತ್ ಕಮಲ್ ಮತ್ತು ಮಣಿಕಾ ಬಾತ್ರಾ)

ಜುಲೈ 25

ಬೆಳಿಗ್ಗೆ 6.30; ಮಿಶ್ರ ಡಬಲ್ಸ್ ಕ್ವಾರ್ಟರ್‌ಫೈನಲ್
ಬೆಳಿಗ್ಗೆ 10.30; ಪುರುಷ ಮತ್ತು ಮಹಿಳೆಯರ ಸಿಂಗಲ್ಸ್ ವಿಭಾಗದ ಎರಡು ಮತ್ತು ಮೂರನೇ ಸುತ್ತಿನ ಪಂದ್ಯಗಳು
ಸಂಜೆ 4.30; ಮಿಶ್ರ ಡಬಲ್ಸ್ ಕಂಚಿನ ಪದಕದ ಪಂದ್ಯ
ಸಂಜೆ 5.30; ಮಿಶ್ರ ಡಬಲ್ಸ್ ಫೈನಲ್ ಪಂದ್ಯ

ಜುಲೈ 27

ಮಧ್ಯಾಹ್ನ 1 ಗಂಟೆ; ಪುರುಷ ಮತ್ತು ಮಹಿಳಾ ಸಿಂಗಲ್ಸ್ ಪ್ರೀಕ್ವಾರ್ಟರ್‌ಫೈನಲ್

ಟೆನಿಸ್


ಜುಲೈ 24-ಆಗಸ್ಟ್ 1

ಮಹಿಳಾ ಡಬಲ್ಸ್–ಸಾನಿಯಾ ಮಿರ್ಜಾ, ಅಂಕಿತಾ ರೈನಾ
ಪುರುಷರ ಸಿಂಗಲ್ಸ್–ಸುಮಿತ್ ನಗಾಲ್

ಭಾರತೀಯ ಕಾಲಮಾನ | ಲೈವ್ ಸೋನಿ ನೆಟ್‌ವರ್ಕ್

ಪದಕಗಳ ಬೇಟೆಯಾಡಲು ಕ್ರೀಡಾಪಟುಗಳು ಸಿದ್ಧ; ಕೋವಿಡ್ ಸವಾಲಿಗೆ ಒಲಿಂಪಿಕ್ ಸೆಡ್ಡು

ಟೋಕಿಯೊದಲ್ಲಿ ಅರಳಲಿದೆ ನವೋಲ್ಲಾಸದ ಜಗತ್ತು



ಟೋಕಿಯೊ ಕ್ರೀಡಾಂಗಣ

ಟೋಕಿಯೊ: ಕೋವಿಡ್ ಪಿಡುಗಿನಿಂದ ಬಸವಳಿದಿರುವ ಮನುಕುಲಕ್ಕೆ ನವೋಲ್ಲಾಸ ತುಂಬುವ ನಿರೀಕ್ಷೆಯೊಂದಿಗೆ ಟೋಕಿಯೊ ಒಲಿಂಪಿಕ್ಸ್ ಶುಕ್ರವಾರ ಆರಂಭವಾಗಲಿದೆ.

ಸಹೋದರತ್ವ, ಮಾನವೀಯತೆ ಮತ್ತು ವಿಶ್ವಬಾಂಧವ್ಯವದ ಸಂದೇಶ ಸಾರುವ ಒಲಿಂಪಿಕ್ ಕ್ರೀಡೆಗಳು ಇತಿಹಾಸವನ್ನು ನೆನಪಿಸುವುದರ ಜೊತೆಗೆ ಉಜ್ವಲ ಭವಿಷ್ಯದ ಕನಸನ್ನೂ ಬಿತ್ತುತ್ತವೆ. ಆದರೆ ಈ ಕೂಟವು ಹಿಂದಿನ ಎಲ್ಲ ಒಲಿಂಪಿಕ್ಸ್‌ಗಳಿಗಿಂತ ವಿಭಿನ್ನವಾಗಿದೆ. ಈ ಬಾರಿ ಕ್ರೀಡಾಪಟುಗಳ ಮುಂದೆ ಪದಕಗಳ ಬೇಟೆಯ ಗುರಿಯೊಂದೇ ಅಲ್ಲ. ಕಣ್ಣಿಗೆ ಕಾಣದ ಕೊರೊನಾ ವೈರಸ್ ವಿರುದ್ಧ ಹೋರಾಟಕ್ಕೆ ಬಲ ತುಂಬುವ ಹೊಣೆಯೂ ಇದೆ. ತಮ್ಮ ಶಿಸ್ತು, ಸಾಮರ್ಥ್ಯ ಮತ್ತು ಕೌಶಲಗಳ ಮೂಲಕ ಕ್ರೀಡಾಪ್ರೇಮಿಗಳಲ್ಲಿ ನವೋಲ್ಲಾಸ ಮೂಡಿಸುವ ಅವಕಾಶವೂ ಇದೆ.

2020ರಲ್ಲಿಯೇ ಆಯೋಜನೆಗೊಳ್ಳಬೇಕಿದ್ದ ಕೂಟವು ಆರೋಗ್ಯ ತುರ್ತುಪರಿಸ್ಥಿತಿಯಿಂದಾಗಿ ಈ ವರ್ಷಕ್ಕೆ ಮುಂದೂಡಲಾಯಿತು. 206 ದೇಶಗಳಿಂದ ಈ ಕನಸಿನ ನಗರಿಗೆ ಬಂದಿಳಿದಿರುವ 11 ಸಾವಿರಕ್ಕೂ ಹೆಚ್ಚು ಕ್ರೀಡಾಪಟುಗಳನ್ನು ಸುರಕ್ಷಿತವಾಗಿ ನೋಡಿಕೊಂಡು ಆಗಸ್ಟ್ 8ರಂದು ಸಂತಸದಿಂದ ಬೀಳ್ಕೊಡುವ ಸವಾಲು ಜಪಾನ್ ಸರ್ಕಾರ ಮತ್ತು ಅಂತರರಾಷ್ಟ್ರೀಯ ಒಲಿಂಪಿಕ್ ಕೌನ್ಸಿಲ್ (ಐಒಸಿ) ಮುಂದಿದೆ.

ಇಂತಹ ಸವಾಲು ಇದೇ ಮೊದಲೇನಲ್ಲ. ಒಲಿಂಪಿಕ್ಸ್ ಇತಿಹಾಸದ ಪುಟಗಳನ್ನು ತಿರುವಿಹಾಕಿದರೆ ರಾಜಕೀಯ, ಉಗ್ರರ ದಾಳಿ, ಜನಾಂಗೀಯ ದ್ವೇಷದ ದಳ್ಳುರಿ, ಉದ್ದೀಪನ ಮದ್ದು ಸೇವನೆಯ ಕಳಂಕ ಸೇರಿದಂತೆ ಹತ್ತಾರು ಸವಾಲುಗಳನ್ನು ಮೀರಿ ಒಲಿಂಪಿಕ್ಸ್ ಇಂದಿಗೂ ಅಚ್ಚಳಿಯದೇ ಉಳಿದಿದೆ. 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಝಿಕಾ ವೈರಸ್ ಭೀತಿ, ಭಯೋತ್ಪಾದಕರ ದಾಳಿ ಬೆದರಿಕೆಗಳು ಇದ್ದವು. ಆದರೆ, ಆಗೆಲ್ಲ ಆತಿಥೇಯ ದೇಶಗಳಿಗೆ ಸ್ಥಳೀಯರ ಬೆಂಬಲ ಹೆಚ್ಚು ಇರುತ್ತಿತ್ತು. ಈ ಬಾರಿಯದ್ದು ತದ್ವಿರುದ್ಧ. ಸ್ಥಳೀಯ ಜನರಿಂದಲೇ ಬಹಳಷ್ಟು ವಿರೋಧವನ್ನು ಸಂಘಟಕರು ಎದುರಿಸಬೇಕಾಗಿದೆ. ಜಪಾನ್‌ನಲ್ಲಿ ಪ್ರತಿದಿನವೂ ಕೋವಿಡ್ ಪ್ರಕರಣಗಳ ಸಂಖ್ಯೆ ಏರುಗತಿಯಲ್ಲಿರುವುದೇ ಇದಕ್ಕೆ ಕಾರಣ.

ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಹಿರೋಶಿಮಾ–ನಾಗಾಸಾಕಿಯ ಮೇಲಿನ ಬಾಂಬ್ ದಾಳಿಯ ಭೀಕರತೆ, ಇತ್ತೀಚಿನ ಕೆಲವು ವರ್ಷಗಳಲ್ಲಿ ಸುನಾಮಿ, ಭೂಕಂಪಗಳಿಂದಾದ ಹಾನಿಯನ್ನೂ ಲೆಕ್ಕಿಸದೇ ವಿಶ್ವವೇ ಕಣ್ಣುಕುಕ್ಕುವಂತೆ ಎದ್ದು ನಿಂತಿರುವ ಜಪಾನ್ ಕೋವಿಡ್ ಸವಾಲಿಗೂ ಈಗ ಎದೆಯೊಡ್ಡಿದೆ. ಪ್ರೇಕ್ಷಕರಿಲ್ಲದ ಖಾಲಿ ಕ್ರೀಡಾಂಗಣದಲ್ಲಿಯೇ ಕ್ರೀಡಾ ಮಹಾಮೇಳವನ್ನು ನಡೆಸಲು ಮುಂದಾಗಿದೆ. 1964ರಲ್ಲಿಯೂ ಜಪಾನ್ ಒಲಿಂಪಿಕ್ಸ್‌ಗೆ ಆತಿಥ್ಯ ವಹಿಸಿತ್ತು.

ಈ ಸಲದ ಕೂಟಕ್ಕಾಗಿ 2013ರಲ್ಲಿ ಬಿಡ್ ಪಡೆದುಕೊಂಡಿತ್ತು. ಜಪಾನ್ ತನ್ನ ಆಧುನಿಕ ತಂತ್ರಜ್ಞಾನದ ಸಾಮರ್ಥ್ಯವನ್ನು ಪ್ರದರ್ಶಿಸಲು ಈ ಕೂಟವನ್ನು ವೇದಿಕೆಯಾಗಿಸಿಕೊಂಡಿದೆ. ಮನುಷ್ಯರ ಜೊತೆಗೆ ರೊಬೋಗಳು ಕೂಡ ಕಾರ್ಯಕರ್ತರಾಗಿ ಇಲ್ಲಿ ಕಾರ್ಯನಿರ್ವಹಿಸಲಿವೆ. ಕ್ರೀಡಾಪಟುಗಳ ಪ್ರಯಾಣಕ್ಕೆ ಸ್ವಯಂಚಾಲಿತ ಬ್ಯಾಟರಿ ವಾಹನಗಳು ಓಡಾಡಲಿವೆ. ಹೀಗೆ ಹತ್ತು ಹಲವು ತಂತ್ರಜ್ಞಾನ ವಿಸ್ಮಯಗಳು ಇಲ್ಲಿ ಗಮನ ಸೆಳೆಯಲಿವೆ.

ಕ್ರೀಡಾಪಟುಗಳ ನಿರೀಕ್ಷೆ: ಹೋದ ವರ್ಷವೇ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದವರಿಗೆ ಒಂದು ವರ್ಷದ ಹೆಚ್ಚುವರಿ ತರಬೇತಿಗೆ ಅವಕಾಶ ಲಭಿಸಿತು. ಅವರೆಲ್ಲರೂ ಈಗ ಪದಕ ಜಯದ ಕನಸು ಕಾಣುತ್ತಿದ್ದಾರೆ. ಇನ್ನೂ ಕೆಲವು ಆಟಗಾರರು ಕಳೆದ ಕೆಲವು ತಿಂಗಳುಗಳಲ್ಲಿ ನಡೆದ ಕ್ರೀಡಾಕೂಟಗಳಲ್ಲಿ ಅರ್ಹತೆ ಗಳಿಸಿ ಟೋಕಿಯೊಗೆ ಬಂದಿದ್ದಾರೆ.

ರಿಯೊ ಒಲಿಂಪಿಕ್ಸ್‌ನಲ್ಲಿ ಅಮೆರಿಕ 121 ಪದಕ (46 ಚಿನ್ನ, 37 ಬೆಳ್ಳಿ, 38 ಕಂಚು) ಗೆದ್ದು ಅಗ್ರಸ್ಥಾನ ಪಡೆದಿತ್ತು. ಈ ಬಾರಿಯೂ ತನ್ನ ಸ್ಥಾನವನ್ನು ಕಾಪಾಡಿಕೊಳ್ಳುವತ್ತ ಚಿತ್ತ ನೆಟ್ಟಿದೆ. ಗ್ರೇಟ್ ಬ್ರಿಟನ್ 67 ಪದಕ ಮತ್ತು ಚೀನಾ 70 ಪದಕಗಳೊಂದಿಗೆ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದ್ದವು. ತಮ್ಮ ಪದಕಗಳ ಸಂಖ್ಯೆಯನ್ನು ಹೆಚ್ಚಿಸಲು ಈ ಎರಡೂ ರಾಷ್ಟ್ರಗಳು ಪೈಪೋಟಿಗಿಳಿಯುವುದು ಖಚಿತ.

ಆದರೆ 'ಕಪ್ಪು ಚಿರತೆ' ಉಸೇನ್ ಬೋಲ್ಟ್ ಅವರ ಓಟವನ್ನು ಆಸ್ವಾದಿಸುವ ಅವಕಾಶ ಈ ಬಾರಿ ಇಲ್ಲ. ಏಕೆಂದರೆ ಅವರು ಹೋದ ಸಲವೇ ನಿವೃತ್ತರಾಗಿದ್ದಾರೆ. ಅವರ ಸ್ಥಾನವನ್ನು ತುಂಬುವ ಕನಸಿನೊಂದಿಗೆ ನೊಹಾ ಲೈಲ್ಸ್ ಟ್ರ್ಯಾಕ್‌ಗೆ ಇಳಿಯಲಿದ್ದಾರೆ. ಅಮೆರಿಕದ 24 ವರ್ಷದ ಈ ಹುಡುಗನ ಮೇಲೆ ಈಗ ಎಲ್ಲರ ಕಣ್ಣುಗಳು ನೆಟ್ಟಿವೆ. ಈಜುಕೊಳದ ಚಿನ್ನದ ಮೀನು ಮೈಕೆಲ್ ಫೆಲ್ಪ್ಸ್ ಈ ಬಾರಿ ವೀಕ್ಷಕ ವಿವರಣೆಗಾರರಾಗಿ ಕಾರ್ಯನಿರ್ವಹಿಸುವರು. ಇವರ ಸ್ಥಾನವನ್ನು ತುಂಬುವ ನವತಾರೆಗಳು ಪ್ರವರ್ಧಮಾನಕ್ಕೆ ಬರುವ ಸಮಯ ಇದು.

ಸಾಮಾನ್ಯವಾದ ಕೌಟುಂಬಿಕ, ಆರ್ಥಿಕ ಹಿನ್ನೆಲೆಯಲ್ಲಿ ಬೆಳೆದ, ವಿಭಿನ್ನ ಧರ್ಮ, ವರ್ಣ ಮತ್ತು ರಾಷ್ಟ್ರಗಳಿಂದ ಬಂದವರೆಲ್ಲರೂ ಸೇರುವ ಏಕೈಕ ತಾಣ ಒಲಿಂಪಿಕ್ ಕೂಟ. ಇದೇ ಸಾಮಾನ್ಯ ಹಿನ್ನೆಲೆಯ ಯುವಪ್ರತಿಭೆಗಳು ದಿಗ್ಗಜರಾಗಿ ಹೊರಹೊಮ್ಮುವ ವೇದಿಕೆ ಕೂಡ ಹೌದು.

ಇವರ ಮೇಲೆ ಎಲ್ಲರ ಗಮನ

ನೊವಾಕ್ ಜೊಕೊವಿಚ್



ವಿಶ್ವ ಟೆನಿಸ್‌ನ 'ಚಕ್ರವರ್ತಿ' ಜೊಕೊವಿಚ್, ಚೊಚ್ಚಲ ಚಿನ್ನದ ಕನಸಿನೊಂದಿಗೆ ಒಲಿಂಪಿಕ್ಸ್ ಅಭಿಯಾನ ಆರಂಭಿಸಲಿದ್ದಾರೆ. ಎಲ್ಲಾ ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲೂ ಎರಡು ಹಾಗೂ ಅದಕ್ಕಿಂತ ಹೆಚ್ಚು ಪ್ರಶಸ್ತಿಗಳನ್ನು ಗೆದ್ದಿರುವ ಸರ್ಬಿಯಾದ ಆಟಗಾರನಿಗೆ ಒಲಿಂಪಿಕ್ಸ್ ಚಿನ್ನ ಕೈಗೆಟುಕಿಲ್ಲ. ಆ ಕೊರಗು ನೀಗಿಸಿಕೊಳ್ಳುವ ವಿಶ್ವಾಸದಲ್ಲಿ ಅವರಿದ್ದಾರೆ.

ವಯಸ್ಸು: 34
ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ: 20
ಒಲಿಂಪಿಕ್ಸ್ ಸಾಧನೆ: ಕಂಚು (2008).

ಸಿಮೊನಾ ಬೈಲ್ಸ್



ಜಿಮ್ನಾಸ್ಟಿಕ್ಸ್‌ನಲ್ಲಿ ಹೊಸ ಸಂಚಲನ ಮೂಡಿಸಿರುವ ತಾರೆ ಬೈಲ್ಸ್. ಅಮೆರಿಕದ ಈ ಪ್ರತಿಭಾನ್ವಿತೆ ಟೋಕಿಯೊದಲ್ಲಿ ಚಿನ್ನ ಗೆದ್ದು ಹೊಸ ಇತಿಹಾಸ ರಚಿಸುವ ಕಾತರದಲ್ಲಿದ್ದಾರೆ. 2013ರಿಂದ 2019ರ ಅವಧಿಯಲ್ಲಿ ಈ ಯುವ ಜಿಮ್ನಾಸ್ಟಿಕ್ ಪಟು ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಗೆದ್ದ ಪದಕಗಳು 25. ಇದರಲ್ಲಿ 19 ಚಿನ್ನ ಸೇರಿವೆ. ಹೀಗಾಗಿ ಇವರ ಮೇಲೆ ಈಗ ಎಲ್ಲರ ಕಣ್ಣುಗಳು ನೆಟ್ಟಿವೆ.

ವಯಸ್ಸು: 24
ಒಲಿಂಪಿಕ್ಸ್ ಸಾಧನೆ: 4 ಚಿನ್ನ, 1 ಕಂಚು (2016)

ನವೊಮಿ ಒಸಾಕ



ಜಪಾನ್‌ನ ಕುದಿರಕ್ತದ ಹುಡುಗಿ ಒಸಾಕ ತವರು ನೆಲದಲ್ಲೇ ಒಲಿಂಪಿಕ್ಸ್‌ಗೆ ಅಡಿ ಇಡಲು ಉತ್ಸುಕರಾಗಿದ್ದಾರೆ. ಒಸಾಕ, 2018ರ ಅಮೆರಿಕ ಓಪನ್ ಟೆನಿಸ್ ಟೂರ್ನಿಯಲ್ಲಿ ಸೆರೆನಾ ವಿಲಿಯಮ್ಸ್ ಅವರಂತಹ ಅನುಭವಿಯನ್ನೇ ಮಣಿಸಿ ಟೆನಿಸ್ ಲೋಕದ ಗಮನ ಸೆಳೆದಿದ್ದ ದಿಟ್ಟೆ. ಚೊಚ್ಚಲ ಪ್ರಯತ್ನದಲ್ಲೇ ಚಿನ್ನ ಗೆದ್ದು ಚೊಚ್ಚಲ ಒಲಿಂಪಿಕ್ಸ್ ಅನ್ನು ಸ್ಮರಣೀಯವಾಗಿಸಿಕೊಳ್ಳುವ ಸವಾಲು ಅವರ ಎದುರಿಗಿದೆ.

ವಯಸ್ಸು: 23
ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ: 4.

ಎಲ್ಯೂಡ್ ಕಿಪ್‌ಚೋಗ್



'ಮ್ಯಾರಥಾನ್ ಮಾಸ್ಟರ್' ಎಂದೇ ಹೆಸರಾಗಿರುವವರು ಕಿಪ್‌ಚೋಗ್. ಎರಡು ಗಂಟೆಯೊಳಗೆ ಮ್ಯಾರಥಾನ್ ಪೂರ್ಣಗೊಳಿಸಿದ ಹಿರಿಮೆ ಅವರದ್ದು. 5,000 ಮೀಟರ್ಸ್ ಓಟದಲ್ಲೂ ಅವರು ಹೆಜ್ಜೆ ಗುರುತು ಮೂಡಿಸಿದ್ದಾರೆ. ವಿಶ್ವ ಮ್ಯಾರಥಾನ್‌ನಲ್ಲಿ 8 ಚಿನ್ನದ ಪದಕಗಳನ್ನೂ ಅವರು ಕೊರಳಿಗೇರಿಸಿಕೊಂಡಿದ್ದಾರೆ.

ವಯಸ್ಸು: 36
ಒಲಿಂಪಿಕ್ಸ್ ಸಾಧನೆ: ಚಿನ್ನ (2016), ಬೆಳ್ಳಿ (2008), ಕಂಚು (2004).

ಅಲಿಸನ್ ಫೆಲಿಕ್ಸ್



ಅಥ್ಲೆಟಿಕ್ಸ್‌ನಲ್ಲಿ ಅಚ್ಚಳಿಯದ ಹೆಜ್ಜೆಗುರುತು ಮೂಡಿಸಿರುವ ತಾರೆ ಫೆಲಿಕ್ಸ್. ಒಲಿಂಪಿಕ್ಸ್‌ನ ಟ್ರ್ಯಾಕ್ ಮತ್ತು ಫೀಲ್ಡ್ ವಿಭಾಗದಲ್ಲಿ ಅತಿಹೆಚ್ಚು ಪದಕಗಳನ್ನು ಜಯಿಸಿದ ಏಕೈಕ ಓಟಗಾರ್ತಿ ಎಂಬ ಹೆಗ್ಗಳಿಕೆ ಅವರದ್ದು. ತಾಯಿಯಾದ ಮೇಲೂ ಅಥ್ಲೆಟಿಕ್ಸ್ ಪಯಣ ಮುಂದುವರಿಸಿರುವ ಅವರು ಟೋಕಿಯೊದಲ್ಲೂ ಪದಕ ಕೊರಳಿಗೇರಿಸಿಕೊಳ್ಳುವ ಕನವರಿಕೆಯಲ್ಲಿದ್ದಾರೆ.

ವಯಸ್ಸು: 35
ಒಲಿಂಪಿಕ್ಸ್ ಸಾಧನೆ: ಒಟ್ಟು 6 ಚಿನ್ನ (2008, 2012, 2016), ಮೂರು ಬೆಳ್ಳಿ (2004, 2008, 2016)

ಶೆಲ್ಲಿ ಆ್ಯನ್ ಫ್ರೇಸರ್



'ಪಾಕೆಟ್–ರಾಕೆಟ್' ಎಂದೇ ಪ್ರಸಿದ್ಧರಾಗಿರುವ ಶೆಲ್ಲಿ ಒಲಿಂಪಿಕ್ಸ್‌ನ 100 ಮೀಟರ್ಸ್ ಓಟದಲ್ಲಿ 3ನೇ ಚಿನ್ನ ಗೆದ್ದ ಓಟಗಾರ್ತಿ ಎಂಬ ದಾಖಲೆ ನಿರ್ಮಿಸಲು ಸಿದ್ಧರಾಗಿದ್ದಾರೆ. ಟೋಕಿಯೊ ಕೂಟದಲ್ಲಿ ಅವರಿಂದ ಈ ಸಾಧನೆ ಅರಳುವ ನಿರೀಕ್ಷೆ ಇದೆ. ಜಮೈಕಾದ ಈ ತಾರೆ ಜೂನ್‌ನಲ್ಲಿ ನಡೆದಿದ್ದ ಸ್ಪರ್ಧೆಯೊಂದರಲ್ಲಿ 10.63 ಸೆಕೆಂಡುಗಳಲ್ಲಿ ಗುರಿ ಕ್ರಮಿಸಿ ಗಮನ ಸೆಳೆದಿದ್ದರು.

ವಯಸ್ಸು: 34
ಒಲಿಂಪಿಕ್ಸ್ ಸಾಧನೆ: 2 ಚಿನ್ನ (2008, 2012), 3 ಬೆಳ್ಳಿ (2012, 2016), 1 ಕಂಚು (2016).

ಕೇಟಿ ಲೆಡೆಕಿ



ಐದು ವರ್ಷಗಳ ಹಿಂದೆ ಬ್ರೆಜಿಲ್‌ನ ರಿಯೊ ಡಿ ಜನೈರೊದಲ್ಲಿ ನಡೆದಿದ್ದ ಒಲಿಂಪಿಕ್ಸ್‌ನಲ್ಲಿ ಪದಕಗಳ ಬೇಟೆಯಾಡಿದ್ದ ಈಜುಪಟು ಕೇಟಿ ಲೆಡೆಕಿ. 400 ಮತ್ತು 800 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ ವಿಶ್ವ ದಾಖಲೆ ಬರೆದ ಹಿರಿಮೆಯೂ ಅವರದ್ದು. 15ನೇ ವಯಸ್ಸಿನಲ್ಲೇ 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದ ಅವರು 800 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ ಚಿನ್ನ ಜಯಿಸಿದ್ದರು. ಆಗ ಅವರ ವಯಸ್ಸು ಕೇವಲ 15.

ವಯಸ್ಸು: 24
ಒಲಿಂಪಿಕ್ಸ್ ಸಾಧನೆ: 5 ಚಿನ್ನ (2016, 2012), 1 ಬೆಳ್ಳಿ (2016).

ಭಾರತದ ಭರವಸೆ

ಪಿ.ವಿ.ಸಿಂಧು



ಬ್ಯಾಡ್ಮಿಂಟನ್‌ನಲ್ಲಿ ಸಿಂಧು, ಭಾರತಕ್ಕೆ ಚಿನ್ನದ ಪದಕ ಗೆದ್ದುಕೊಡಬಲ್ಲ ಸಾಮರ್ಥ್ಯ ಹೊಂದಿದ್ದಾರೆ. ರಿಯೊ ಕೂಟದಲ್ಲಿ ಅವರು ಬೆಳ್ಳಿ ಜಯಿಸಿದ್ದರು. ಸದ್ಯ ಅವರು ವಿಶ್ವ ರ್‍ಯಾಂಕಿಂಗ್‌ನಲ್ಲಿ 7ನೇ ಸ್ಥಾನದಲ್ಲಿದ್ದಾರೆ.

ಮನು–ಸೌರಭ್


ಶೂಟಿಂಗ್ ಸ್ಪರ್ಧಿಗಳಾದ ಮನು ಭಾಕರ್ ಮತ್ತು ಸೌರಭ್ ಚೌಧರಿ ಜೋಡಿಯ ಮೇಲೂ ಎಲ್ಲರ ಕಣ್ಣುಗಳು ನೆಟ್ಟಿವೆ. 19 ವರ್ಷದ ಸೌರಭ್, ಪ್ರಸ್ತುತ ವಿಶ್ವ ರ್‍ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನ ಹೊಂದಿದ್ದಾರೆ. ಪಾಲ್ಗೊಂಡ ಐದು ವಿಶ್ವಕಪ್‌ಗಳಲ್ಲೂ ಶ್ರೇಷ್ಠ ಸಾಮರ್ಥ್ಯ ತೋರಿದ್ದಾರೆ. ವಿಶ್ವಕಪ್‌ನಲ್ಲಿ ಭಾಕರ್ ಕೂಡ ನಿಖರ ಗುರಿ ಹಿಡಿಯುವಲ್ಲಿ ಯಶಸ್ವಿಯಾಗಿದ್ದರು.

ನೀರಜ್ ಚೋಪ್ರಾ




ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ನೀರಜ್ ಮೇಲೆ ನಿರೀಕ್ಷೆಯ ಭಾರ ಹೆಚ್ಚಿದೆ. ಈ ವರ್ಷ ನೀರಜ್ ನಿರಂತರವಾಗಿ 85 ಮೀಟರ್ಸ್ ಸಾಮರ್ಥ್ಯ ತೋರಿದ್ದಾರೆ. ಜಾವೆಲಿನ್‌ನಲ್ಲಿ ಈ ರೀತಿ ಸ್ಥಿರತೆ ಕಾಯ್ದುಕೊಳ್ಳುವುದು ತೀರಾ ಅಪರೂಪ. 23 ವರ್ಷದ ನೀರಜ್ ಟೋಕಿಯೊ ಅಂಗಳದಲ್ಲೂ ಮೋಡಿ ಮಾಡಬಲ್ಲರು.

ಬಜರಂಗ್ ಪುನಿಯಾ



ಹಿಂದಿನ ನಾಲ್ಕು ವರ್ಷಗಳಿಂದ ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಒಂದಿಲ್ಲೊಂದು ಪದಕ ಗೆಲ್ಲುತ್ತಲೇ ಬಂದಿರುವ ಬಜರಂಗ್ ಪುನಿಯಾ ಕುಸ್ತಿಯಲ್ಲಿ ಭಾರತದ ಪದಕದ ಭರವಸೆ ಹೆಚ್ಚಿಸಿದ್ದಾರೆ. 65 ಕೆ.ಜಿ.ವಿಭಾಗದಲ್ಲಿ ಸ್ಪರ್ಧಿಸಲಿರುವ ಅವರು ಟೋಕಿಯೊ ಕೂಟದಲ್ಲಿ ಎರಡನೇ ಶ್ರೇಯಾಂಕ ಹೊಂದಿದ್ದಾರೆ.

ಅಮಿತ್ ಪಂಗಲ್



ಹೋದ ವರ್ಷ ನಡೆದಿದ್ದ ಬಾಕ್ಸಿಂಗ್ ವಿಶ್ವಕಪ್‌ನಲ್ಲಿ ಚಾಂಪಿಯನ್ ಆಗಿದ್ದ ಅಮಿತ್ ಮೇಲೆ ಎಲ್ಲರ ನಿರೀಕ್ಷೆ ಇದೆ. 52 ಕೆ.ಜಿ.ಫ್ಲೈವೇಟ್ ವಿಭಾಗದಲ್ಲಿ ರಿಂಗ್‌ಗೆ ಇಳಿಯಲಿರುವ ಅಮಿತ್‌ಗೆ ಶಕೊಬಿದಿನ್ ಜೊಯಿರೊವ್ ಪ್ರಬಲ ಸವಾಲೊಡ್ಡಬಲ್ಲರು. ಜೊಯಿರೊವ್ ಸವಾಲು ಮೀರಿದರೆ ಭಾರತದ ಬಾಕ್ಸರ್‌ಗೆ ಪದಕ ನಿಶ್ಚಿತ ಎಂದು ಹೇಳಲಾಗಿದೆ.

ವಿನೇಶಾ ಪೋಗಟ್



ರೋಮ್ ರ್‍ಯಾಂಕಿಂಗ್ ಸೀರಿಸ್, ಏಷ್ಯನ್ ಚಾಂಪಿಯನ್‌ಷಿಪ್ ಮತ್ತು ಪೋಲೆಂಡ್ ಓಪನ್‌ನಲ್ಲಿ ಅಮೋಘ ಸಾಮರ್ಥ್ಯ ತೋರಿದ್ದ ವಿನೇಶಾ ಪೋಗಟ್ ಮಹಿಳಾ ಕುಸ್ತಿಯಲ್ಲಿ ಪದಕ ಜಯಿಸುವ ನೆಚ್ಚಿನ ತಾರೆ ಎನಿಸಿದ್ದಾರೆ. 53 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಲಿರುವ ಅವರು ಅಗ್ರ ಶ್ರೇಯಾಂಕ ಪಡೆದಿದ್ದಾರೆ. ವಿಶ್ವ ಚಾಂಪಿಯನ್ ಪಾಕ್ ಯೊಂಗ್ ಮಿ ಕೂಟದಿಂದ ಹಿಂದೆ ಸರಿದಿದ್ದಾರೆ. ಹೀಗಾಗಿ ವಿನೇಶಾ ಹಾದಿ ಮತ್ತಷ್ಟು ಸುಗಮವಾಗಿದೆ.

ಮೀರಾಬಾಯಿ ಚಾನು



ವೇಟ್‌ಲಿಫ್ಟಿಂಗ್‌ನಲ್ಲಿ ಮೀರಾಬಾಯಿ ಚಾನು ಎಲ್ಲರ ಕಣ್ಮಣಿಯಾಗಿದ್ದಾರೆ. ಸದ್ಯ ಅವರು 49 ಕೆ.ಜಿ.ವಿಭಾಗದ ವಿಶ್ವ ರ್‍ಯಾಂಕಿಂಗ್‌ನಲ್ಲಿ ನಾಲ್ಕನೇ ಸ್ಥಾನದಲ್ಲಿದ್ದಾರೆ. ಅವರಿಗಿಂತ ಮೇಲಿನ ಸ್ಥಾನದಲ್ಲಿದ್ದ ಇಬ್ಬರು ಸ್ಪರ್ಧಿಗಳು ಕೂಟದಲ್ಲಿ ಪಾಲ್ಗೊಳ್ಳುತ್ತಿಲ್ಲ. ಹೀಗಾಗಿ ಚಾನುಗೆ ಪದಕ ಗೆಲ್ಲುವ ಅವಕಾಶ ಹೆಚ್ಚಿದೆ. ಕ್ಲೀನ್ ಮತ್ತು ಜರ್ಕ್‌ನಲ್ಲಿ ಭಾರತದ ಸ್ಪರ್ಧಿ ದಾಖಲೆ ಹೊಂದಿದ್ದಾರೆ.

ಚುಟುಕು ಸುದ್ದಿಗಳು

ರಿಂಗ್‌ಗಳ ವೈಶಿಷ್ಟ್ಯ



ಒಲಿಂಪಿಕ್ಸ್ ರಿಂಗ್‌ಗಳು ಐದು ಖಂಡಗಳನ್ನು ಪ್ರತಿನಿಧಿಸುತ್ತವೆ. ಫ್ರಾನ್ಸ್‌ನ ಪಿ.ಡಿ.ಕೌಬರ್ಟಿನ್ 1913ರಲ್ಲಿ ಐದು ರಿಂಗ್‌ಗಳನ್ನೊಳಗೊಂಡ ಒಲಿಂಪಿಕ್ಸ್ ಧ್ವಜ ವಿನ್ಯಾಸಗೊಳಿಸಿದ್ದರು.

ಡಿಡಿ ಸ್ಪೋರ್ಟ್ಸ್‌ನಲ್ಲೂ ನೇರ ಪ್ರಸಾರ

ಭಾರತದಲ್ಲಿ ಒಲಿಂಪಿಕ್ಸ್ ನೇರ ಪ್ರಸಾರ ಮಾಡುವ ಹಕ್ಕನ್ನು ಸೋನಿ ನೆಟ್‌ವರ್ಕ್ ಪಡೆದುಕೊಂಡಿದೆ. ದೂರದರ್ಶನದಲ್ಲೂ ಬೆಳಿಗ್ಗೆ 5ರಿಂದ ಸಂಜೆ 7ರವರೆಗೂ ಸ್ಪರ್ಧೆಗಳ ನೇರ ಪ್ರಸಾರ ವೀಕ್ಷಿಸಬಹುದು.

ಟೋಕಿಯೊ ಲಾಂಛನ

ಟೋಕಿಯೊ ಕೂಟದ ಲಾಂಛನಕ್ಕೆ 'ಮಿರಾಟೊಯಿವ್ರಾ' ಎಂದು ಹೆಸರಿಡಲಾಗಿದೆ. 1968ರ ಚಳಿಗಾಲದ ಒಲಿಂಪಿಕ್ಸ್‌ನಲ್ಲಿ ಲಾಂಛನದ ಪರಿಕಲ್ಪನೆ ಪರಿಚಯಿಸಲಾಗಿತ್ತು. 1972ರಲ್ಲಿ ಇದು ಅಧಿಕೃತಗೊಂಡಿತ್ತು. ಲಾಂಛನವು ಸಂಘಟಕರ ಆದಾಯದ ಮೂಲವೂ ಹೌದು.

ಸ್ವಾರಸ್ಯಕರ ಸುದ್ದಿ

ಮುಂದೂಡಲಾದ ಮೊದಲ ಕೂಟ

ಯುದ್ಧೇತರ ಕಾರಣಗಳಿಂದಾಗಿ ಮುಂದೂಡಲಾದ ಮೊದಲ ಒಲಿಂಪಿಕ್ಸ್ ಇದಾಗಿದೆ. ಖಾಲಿ ಕ್ರೀಡಾಂಗಣಗಳಲ್ಲಿ ಸ್ಪರ್ಧೆಗಳು ನಡೆಯುವುದು ಕೂಡ ಇದೇ ಮೊದಲು. ಈ ಬಾರಿ ವಿಜೇತ ಕ್ರೀಡಾಪಟುಗಳ ಕೊರಳಿಗೆ ಗಣ್ಯರು ಪದಕ ಹಾಕುವುದಿಲ್ಲ. ಸೋಂಕು ನಿವಾರಕ ಸಿಂಪಡಿಸಿದ ಟ್ರೇಗಳಲ್ಲಿ ಇಟ್ಟಿರುವ ಪದಕಗಳನ್ನು ಕ್ರೀಡಾಪಟುಗಳೇ ಎತ್ತಿ ಕೊರಳಿಗೆ ಹಾಕಿಕೊಳ್ಳಬೇಕು.

ತ್ಯಾಜ್ಯದಿಂದ ರೂಪುಗೊಂಡ ಪದಕ



ನಿರುಪಯೋಗಿ ಎಲೆಕ್ಟ್ರಾನಿಕ್ ವಸ್ತುಗಳನ್ನು ಬಳಸಿ 5 ಸಾವಿರ ಚಿನ್ನ, ಬೆಳ್ಳಿ ಹಾಗೂ ಕಂಚಿನ ಪದಕಗಳನ್ನು ತಯಾರಿಸಲಾಗಿದೆ. ಇದನ್ನು ವಿಜೇತರಿಗೆ ವಿತರಿಸಲಾಗುತ್ತದೆ. ಈ ಪದಕಗಳು ಕ್ರೀಡಾಪಟುಗಳ ಶಕ್ತಿ ಹಾಗೂ ವೈವಿಧ್ಯತೆಯನ್ನು ಬಿಂಬಿಸುತ್ತವೆ. ಜಪಾನ್ ಸಂಸ್ಕೃತಿಯ ಪ್ರತೀಕವೂ ಹೌದು. ಪದಕದ ಮುಂಭಾಗದಲ್ಲಿ ಟೋಕಿಯೊ ಕೂಟದ ಲಾಂಛನ ಚಿತ್ರಿಸಲಾಗಿದೆ. ಹಿಂಬದಿಯಲ್ಲಿ ಗ್ರೀಕ್‌ನ ವಿಜಯ ದೇವತೆಯ ಚಿತ್ರ ಇದೆ.

ಲಿಂಗ ಸಮಾನತೆ ಸಾರುವ ಕೂಟ

ಈ ಸಲದ ಕೂಟದಲ್ಲಿ ಲಿಂಗ ಸಮಾನತೆಗೆ ಒತ್ತು ನೀಡಿರುವುದಾಗಿ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ) ಈಗಾಗಲೇ ಪ್ರಕಟಿಸಿದೆ. ಎಲ್ಲರೂ ಲಿಂಗ ಸಮಾನತೆ ಕಾಪಾಡಬೇಕು ಎಂದು ತನ್ನ ಅಧೀನಕ್ಕೊಳಪಡುವ 206 ಸದಸ್ಯ ಸಮಿತಿಗಳಿಗೂ ಸೂಚನೆ ನೀಡಿದೆ. ಒಲಿಂಪಿಕ್ಸ್‌ನಲ್ಲಿ ಪ್ರತಿ ಬಾರಿಯೂ ಪ್ರಾಬಲ್ಯ ಮೆರೆಯುವ ಚೀನಾ, ಅಮೆರಿಕ, ಆಸ್ಟ್ರೇಲಿಯಾ ಹಾಗೂ ಕೆನಡಾ ದೇಶಗಳು ಈ ಬಾರಿ ಪುರುಷರಿಗಿಂತಲೂ ಮಹಿಳಾ ಸ್ಪರ್ಧಿಗಳನ್ನೇ ಹೆಚ್ಚಾಗಿ ಕಳುಹಿಸಿವೆ.

ಶೂಟರ್‌ಗಳಿಗೆ ಮೊದಲ ಪದಕ

ಜುಲೈ 24ರಂದು ಮಹಿಳೆಯರ 10 ಮೀಟರ್ಸ್ ಏರ್ ರೈಫಲ್ ಶೂಟಿಂಗ್ ಫೈನಲ್ ನಿಗದಿಯಾಗಿದೆ. ಇದರಲ್ಲಿ ಉತ್ತಮ ಸಾಮರ್ಥ್ಯ ತೋರಿದವರು ಈ ಬಾರಿಯ ಕೂಟದಲ್ಲಿ ಪದಕ ಗೆದ್ದ ಮೊದಲಿಗರು ಎನಿಸಲಿದ್ದಾರೆ.

ತಾರೆಗಳ ಅನುಪಸ್ಥಿತಿ

ರೋಜರ್ ಫೆಡರರ್



ಟೆನಿಸ್ ಲೋಕದ 'ಚಿರ ಯುವಕ' ರೋಜರ್ ಫೆಡರರ್ ಈ ಬಾರಿಯ ಒಲಿಂಪಿಕ್ಸ್‌ನಿಂದ ಹಿಂದೆ ಸರಿದಿದ್ದಾರೆ. ಸ್ವಿಟ್ಜರ್ಲೆಂಡ್‌ನ ಈ ದಿಗ್ಗಜ ಆಟಗಾರ ಮೊಣಗಂಟಿನ ನೋವಿನಿಂದಾಗಿ ಈ ನಿರ್ಧಾರ ಕೈಗೊಂಡಿದ್ದಾರೆ.

ವಯಸ್ಸು: 39
ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ: 20
ಒಲಿಂಪಿಕ್ಸ್ ಸಾಧನೆ: ಸಿಂಗಲ್ಸ್‌ನಲ್ಲಿ ಬೆಳ್ಳಿ (2012), ಡಬಲ್ಸ್‌ನಲ್ಲಿ ಚಿನ್ನ (2008).

ರಫೆಲ್ ನಡಾಲ್

'ಕ್ಲೇ ಕೋರ್ಟ್ ಕಿಂಗ್' ಖ್ಯಾತಿಯ ರಫೆಲ್ ನಡಾಲ್ ಕೂಡ ಟೋಕಿಯೊ ಕೂಟದಲ್ಲಿ ಕಾಣಿಸಿಕೊಳ್ಳುತ್ತಿಲ್ಲ. 'ದೈಹಿಕ ಆರೋಗ್ಯ ಕಾಪಾಡಿಕೊಂಡು ವೃತ್ತಿ ಜೀವನವನ್ನು ಮತ್ತಷ್ಟು ಸುದೀರ್ಘವಾಗಿಸುವ ದೃಷ್ಟಿಯಿಂದ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳದಿರಲು ನಿರ್ಧರಿಸಿರುವುದಾಗಿ' ಸ್ಪೇನ್‌ನ ನಡಾಲ್ ಇತ್ತೀಚೆಗೆ ಟ್ವೀಟ್ ಮಾಡಿದ್ದರು. ಬಹಳಷ್ಟು ಯೋಚಿಸಿಯೇ ಇಂತಹ ಕಠಿಣ ತೀರ್ಮಾನ ತೆಗೆದುಕೊಂಡಿದ್ದಾಗಿ ಹೇಳಿದ್ದರು.

ವಯಸ್ಸು: 35
ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ: 20
ಒಲಿಂಪಿಕ್ಸ್ ಸಾಧನೆ: ಸಿಂಗಲ್ಸ್ (2008) ಮತ್ತು ಡಬಲ್ಸ್‌ನಲ್ಲಿ (2016) ಚಿನ್ನ.

ಲಿಯಾಂಡರ್ ಪೇಸ್



'ಲವ್ ಗೇಮ್' ಎಂದೇ ಕರೆಯಲಾಗುವ ಟೆನಿಸ್‌ನ ವಿಶಿಷ್ಟ ರಾಯಭಾರಿ ಲಿಯಾಂಡರ್ ಪೇಸ್. ಭಾರತದ ಟೆನಿಸ್‌ಗೆ ಹೊಸ ಮೆರಗು ನೀಡಿರುವ ಈ ಧ್ರುವ ತಾರೆ ಟೋಕಿಯೊ ಕೂಟಕ್ಕೆ ಲಭ್ಯರಿಲ್ಲ.

ವಯಸ್ಸು: 48
ಗ್ರ್ಯಾನ್‌ಸ್ಲಾಮ್ ಸಾಧನೆ: ಪುರುಷರ ಡಬಲ್ಸ್‌ನಲ್ಲಿ 8, ಮಿಶ್ರಡಬಲ್ಸ್‌ನಲ್ಲಿ 10 ಪ್ರಶಸ್ತಿ.
ಒಲಿಂಪಿಕ್ಸ್: ಸಿಂಗಲ್ಸ್ ಕಂಚು (1996).

ಸೈನಾ ನೆಹ್ವಾಲ್

ಭಾರತದ ಬ್ಯಾಡ್ಮಿಂಟನ್‌ಗೆ ಹೊಸ ದಿಕ್ಕು ತೋರಿದ ಆಟಗಾರ್ತಿ ಸೈನಾ ನೆಹ್ವಾಲ್. ಕೋವಿಡ್ ಕಾರಣ ಒಲಿಂಪಿಕ್ಸ್ ಅರ್ಹತಾ ಟೂರ್ನಿಗಳು ರದ್ದುಗೊಂಡಿರುವುದರಿಂದ ಸೈನಾಗೆ ಟೋಕಿಯೊ ಟಿಕೆಟ್ ಸಿಕ್ಕಿಲ್ಲ.

ವಯಸ್ಸು: 31
ವಿಶ್ವ ಚಾಂಪಿಯನ್‌ಷಿಪ್: ಬೆಳ್ಳಿ (2015), ಕಂಚು (2017)
ಒಲಿಂಪಿಕ್ಸ್ ಸಾಧನೆ: ಕಂಚು (2012).

ಜಸ್ಟಿನ್ ಗ್ಯಾಟ್ಲಿನ್



ಅಥ್ಲೆಟಿಕ್ಸ್ ವಲಯದಲ್ಲಿ 'ಬ್ಯಾಡ್ ಬಾಯ್' ಎಂದೇ ಕರೆಯಲ್ಪಡುವ ಗ್ಯಾಟ್ಲಿನ್ ಟೋಕಿಯೊ ಕೂಟದ ನಂತರ ವೃತ್ತಿಬದುಕಿಗೆ ವಿದಾಯ ಪ್ರಕಟಿಸುವುದಾಗಿ ಈ ಹಿಂದೆ ಹೇಳಿದ್ದರು. ವಿಪರ್ಯಾಸವೆಂದರೆ ಅವರೀಗ ಕೂಟಕ್ಕೇ ಅರ್ಹತೆ ಗಳಿಸಿಲ್ಲ. ಅಮೆರಿಕದ ಈ ಓಟಗಾರ ಹೋದ ತಿಂಗಳು ನಡೆದಿದ್ದ ಒಲಿಂಪಿಕ್ಸ್ ಟ್ರಯಲ್ಸ್‌ನ 100 ಮೀಟರ್ಸ್ ಓಟದಲ್ಲಿ ಕೊನೆಯವರಾಗಿ ಗುರಿ ಮುಟ್ಟಿದ್ದರು. ಹೀಗಾಗಿ ನಾಲ್ಕನೇ ಬಾರಿ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವ ಕನಸು ಕಮರಿತು.

ವಯಸ್ಸು: 39
ಒಲಿಂಪಿಕ್ಸ್ ಸಾಧನೆ (100 ಮೀ): ಚಿನ್ನ (2004), ಬೆಳ್ಳಿ (2016), ಕಂಚು (2012).

ಸೆರೆನಾ ವಿಲಿಯಮ್ಸ್



ಟೆನಿಸ್ ಲೋಕದ 'ಲೇಡಿ ಸೂಪರ್ ಸ್ಟಾರ್' ಸೆರೆನಾ, ಒಲಿಂಪಿಕ್ಸ್‌ನಿಂದ ಹಿಂದೆ ಸರಿದಿದ್ದಾರೆ. ಇದಕ್ಕೆ ಅವರು ನಿಖರ ಕಾರಣ ನೀಡಿಲ್ಲ. ಹಿಂದಿನ ಒಲಿಂಪಿಕ್ಸ್‌ನಲ್ಲಿ ಸೆರೆನಾ ಅಭಿಮಾನಿಗಳ ಆಕರ್ಷಣೆ ಎನಿಸಿದ್ದರು. ಸಿಂಗಲ್ಸ್ ಮತ್ತು ಡಬಲ್ಸ್‌ನಲ್ಲಿ ಮಿಂಚಿದ್ದರು.

ವಯಸ್ಸು: 39,
ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ: 23
ಒಲಿಂಪಿಕ್ಸ್ ಸಾಧನೆ: ಸಿಂಗಲ್ಸ್ ಚಿನ್ನ (2012), ಡಬಲ್ಸ್‌ನಲ್ಲಿ ಮೂರು ಚಿನ್ನ (2000, 2008, 2012).

ಈ ಬಾರಿ ಕಣದಲ್ಲಿರುವ ಕನ್ನಡಿಗರು



ಶ್ರೀಹರಿ ನಟರಾಜ್
ಈಜು



ಫವಾದ್ ಮಿರ್ಜಾ
ಈಕ್ವೆಸ್ಟ್ರಿಯನ್



ಅದಿತಿ ಅಶೋಕ್
ಗಾಲ್ಫ್



ಗಣಪತಿ ಚೆಂಗಪ್ಪ
ಸೇಲಿಂಗ್

ವರದಿ ಮತ್ತು ಮಾಹಿತಿ: ಗಿರೀಶ ದೊಡ್ಡಮನಿ, ವಿಕ್ರಂ ಕಾಂತಿಕೆರೆ, ಜಿ.ಶಿವಕುಮಾರ, ಬಸವರಾಜ ದಳವಾಯಿ.
ಪುಟ ವಿನ್ಯಾಸ: ಶಶಿಧರ ಹಳೇಮನಿ, ಮಂಜುನಾಥ ಹುಲಕೊಪ್ಪದ.

ಕ್ರಿಕೆಟ್: ಕ್ಲೀನ್‌ಸ್ವೀಪ್‌ನತ್ತ ಭಾರತ ಕಣ್ಣು

ಕೊಲಂಬೊ(ಪಿಟಿಐ): ಶಿಖರ್ ಧವನ್ ನಾಯಕತ್ವದ ಭಾರತ ತಂಡವು ಶ್ರೀಲಂಕಾ ವಿರುದ್ಧದ ಏಕದಿನ ಸರಣಿಯನ್ನು ಕ್ಲೀನ್‌ಸ್ವೀಪ್ ಮಾಡುವ ಹುಮ್ಮಸ್ಸಿನಲ್ಲಿದೆ.

ಮೊದಲ ಎರಡೂ ಪಂದ್ಯಗಳಲ್ಲಿ ಜಯ ಸಾಧಿಸಿರುವ ಭಾರತ ತಂಡವು ಶುಕ್ರವಾರ ನಡೆಯುವ ಮೂರನೇ ಪಂದ್ಯಕ್ಕೆ ಆತ್ಮವಿಶ್ವಾಸದಿಂದ ಸಜ್ಜಾಗಿದೆ. 2ಡನೇ ಪಂದ್ಯದಲ್ಲಿ ತಂಡವನ್ನು ಸೋಲಿನಿಂದ ಪಾರು ಮಾಡಿದ ದೀಪಕ್ ಚಾಹರ್ ಈಗ ಚರ್ಚೆಯ ಕೇಂದ್ರಬಿಂದುವಾಗಿದ್ದಾರೆ. ಅರ್ಧಶತಕ ಗಳಿಸಿದ್ದ ಅವರು, ಬೌಲಿಂಗ್‌ನಲ್ಲಿಯೂ ಮಿಂಚಿದ್ದರು.

ಈಗಾಗಲೇ ತಂಡವು ಸರಣಿ ಜಯಿಸಿದ್ದು, ಈ ಪಂದ್ಯದಲ್ಲಿ ಹೊಸಪ್ರತಿಭೆಗಳಿಗೆ ಕಣಕ್ಕಿಳಿಸುವ ಪ್ರಯತ್ನ ನಡೆಯುವ ಸಾಧ್ಯತೆ ಇದೆ. ಇದರಿಂದಾಗಿ ಪೃಥ್ವಿ ಶಾಗೆ ವಿಶ್ರಾಂತಿ ನೀಡಿ, ಕನ್ನಡಿಗ ದೇವದತ್ತ ಪಡಿಕ್ಕಲ್‌ಗೆ ಇನಿಂಗ್ಸ್ ಆರಂಭಿಸುವ ಹೊಣೆ ನೀಡಬಹುದು. ಸ್ಪಿನ್ನರ್ ಕುಲದೀಪ್ ಯಾದವ್‌ಗೆ ವಿಶ್ರಾಂತಿ ಕೊಟ್ಟು ಆಫ್‌ಸ್ಪಿನ್ನರ್ ಕೃಷ್ಣಪ್ಪ ಗೌತಮ್‌ಗೂ ಪದಾರ್ಪಣೆಯ ಅವಕಾಶ ನೀಡಬಹುದು. ಶ್ರೀಲಂಕಾ ಕಳೆದ ಪಂದ್ಯದಲ್ಲಿ ಜಯಿಸುವ ಅವಕಾಶವನ್ನು ಕೈಚೆಲ್ಲಿತು ಎಂದು ಈಗಾಗಲೇ ಬಹಳಷ್ಟು ಟೀಕೆಗೆ ಗುರಿಯಾಗಿದೆ. ಆದ್ದರಿಂದ ಸಮಾಧಾನಕರ ಜಯಕ್ಕಾಗಿ ಪ್ರಯತ್ನಿಸುವ ಎಲ್ಲ ಸಾಧ್ಯತೆಯೂ ಇದೆ.

ಪಂದ್ಯ ಆರಂಭ: ಮಧ್ಯಾಹ್ನ 3.00

ನೇರ ಪ್ರಸಾರ: ಸೋನಿ ನೆಟ್‌ವರ್ಕ್

ಬಿಟಿಸಿ: ಎರಡನೇ ಬಾರಿ ಹೊಸ ವೇಳಾಪಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈಗಾಗಲೇ ತಡವಾಗಿರುವ ಬೇಸಿಗೆ ಋತುವಿಗೆ ಬೆಂಗಳೂರು ಟರ್ಫ್ ಕ್ಲಬ್ (ಬಿಟಿಸಿ) ಎರಡನೇ ಬಾರಿ ಹೊಸ ವೇಳಾಪಟ್ಟಿಯ ಕರಡು ಪ್ರಕಟಿಸಿದೆ. ರಾಜ್ಯ ಸರ್ಕಾರದ ಸಮ್ಮತಿಗಾಗಿ ಅದು ಕಾಯುತ್ತಿದೆ.

ಕಳೆದ ತಿಂಗಳ ಕೊನೆಯಲ್ಲಿ ಬಿಟಿಸಿ ಜುಲೈ ಈ ತಿಂಗಳ 18ರಂದು ಹೊಸ ಋತುವಿನ ಚಟುವಟಿಕೆ ಆರಂಭಿಸುವ ಉದ್ದೇಶದಿಂದ ತಾತ್ಕಾಲಿಕ ವೇಳಾಪಟ್ಟಿ ಬಿಡುಗಡೆ ಮಾಡಿತ್ತು. ಆದರೆ ಸರ್ಕಾರದಿಂದ ಹಸಿರು ನಿಶಾನೆ ಸಿಕ್ಕಿರಲಿಲ್ಲ. ಹೊಸ ಕರಡು ವೇಳಾಪಟ್ಟಿಯಲ್ಲಿ ಆಗಸ್ಟ್ ಏಳರಿಂದ ಸೆಪ್ಟೆಂಬರ್ 19ರ ವರೆಗೆ ರೇಸ್‌ಗಳನ್ನು ಆಯೋಜಿಸುವ ಉದ್ದೇಶ ಹೊಂದಿದೆ.

ಬ್ಯಾಸ್ಕೆಟ್‌ಬಾಲ್: ಒರಿಯನ್ಸ್ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೋಘ ಆಟವಾಡಿದ ಯಂಗ್ ಒರಿಯನ್ಸ್ ತಂಡದವರು ಪ್ರೊ.ಪರಪ್ಪ ಸ್ಮಾರಕ ಟ್ರೋಫಿ ರಾಜ್ಯ 'ಎ' ಡಿವಿಷನ್ ಲೀಗ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಬ್ಯಾಂಕ್ ಆಫ್ ಬರೋಡಾಗೆ ಆಘಾತ ನೀಡಿದರು.

ಗುರುವಾರ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಜಾನ್ ಗಳಿಸಿದ 32 ಪಾಯಿಂಟ್ಸ್ ನೆರವಿನಿಂದ ಯಂಗ್ ಒರಿಯನ್ಸ್ 80–61ರಿಂದ ಎದುರಾಳಿಗೆ ಸೋಲುಣಿಸಿತು. ವಿಜೇತ ತಂಡದ ತನಯ್ 19 ಮತ್ತು ಬ್ಯಾಂಕ್ ಆಫ್ ಬರೋಡಾದ ಹರೀಶ್ 17 ಪಾಯಿಂಟ್ಸ್ ಕಲೆಹಾಕಿದರು.

ಇನ್ನೊಂದು ಪಂದ್ಯದಲ್ಲಿ ಸಿಎಂಪಿ 74–56ರಿಂದ ಜೆಎಸ್‌ಸಿ ತಂಡವನ್ನು ಮಣಿಸಿತು. ಸಿಎಂಪಿ ಪರ ಆಲ್ವಿನ್ 21 ಮತ್ತು ಜೆಎಸ್‌ಸಿ ತಂಡದ ಅನಿಕೇತ್ 13 ಪಾಯಿಂಟ್ಸ್ ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಬಲವಾನ್ ಗಳಿಸಿದ 17 ಹಾಗೂ ಇಸಾಕ್ ಅವರ 10 ಪಾಯಿಂಟ್ಸ್ ನೆರವಿನಿಂದ ಎಎಸ್‌ಸಿ 85–64ರಿಂದ ಐಬಿಬಿಸಿ ಎದುರು ಜಯ ಸಾಧಿಸಿತು. ಬೀಗಲ್ಸ್ 85–70ರಿಂದ ರಾಜ್‌ಮಹಲ್ ಬಿಸಿ ವಿರುದ್ಧ ಜಯ ಸಾಧಿಸಿತು.

ಜಿಎಸ್‌ಟಿ ಆ್ಯಂಡ್ ಕಸ್ಟಮ್ಸ್ ತಂಡವು 67–59ರಿಂದ ಡಿವೈಇಎಸ್ ಬೆಂಗಳೂರು ಎದುರು, ಎಸ್. ಬ್ಲ್ಯೂಸ್ 77–65ರಿಂದ ಬಿಎಸ್‌ಎನ್‌ಎಲ್ ತಂಡಗಳನ್ನು ಸೋಲಿಸಿದವು.

ಕುಸ್ತಿ: ತನ್ನು, ಪ್ರಿಯಾ ವಿಶ್ವ ಚಾಂಪಿಯನ್

ಬುಡಾಪೆಸ್ಟ್ (ಹಂಗರಿ) (ಪಿಟಿಐ): ಯುವ ಕುಸ್ತಿಪಟುಗಳಾದ ತನ್ನು ಮತ್ತು ಪ್ರಿಯಾ ಅವರು ಗುರುವಾರ ವಿಶ್ವ ಚಾಂಪಿಯನ್ ಪಟ್ಟಕ್ಕೇರಿದರು.

ಇಲ್ಲಿ ನಡೆಯುತ್ತಿರುವ ಕೆಡೆಟ್ ವಿಶ್ವ ಚಾಂಪಿಯನ್‌ಷಿಪ್‌ನ 43 ಕೆಜಿ ವಿಭಾಗದ ಫೈನಲ್‌ನಲ್ಲಿ ತನ್ನು ಅವರು ಬೆಲಾರಸ್‌ನ ವಲೇರಿಯಾ ಮಿಕಿಶಿಚ್ ವಿರುದ್ಧ ಜಯ ಗಳಿಸಿದರು.

73 ಕೆಜಿ ವಿಭಾಗದಲ್ಲಿ ಪ್ರಿಯಾ 5–0ಯಿಂದ ಬೆಲಾರಸ್‌ನ ಸೆನಿಯಾ ಪಟಪೊವಿಚ್ ಎದುರು ಗೆಲುವು ಸಾಧಿಸಿದರು.

ಒಂದು ಪಾಯಿಂಟ್ ಕೂಡ ಬಿಟ್ಟುಕೊಡದೆ ಪ್ರಶಸ್ತಿ ಸುತ್ತು ಪ್ರವೇಶಿಸಿದ್ದ ತನ್ನು ಅವರಿಗೆ ಆರಂಭದಲ್ಲಿ ಸ್ವಲ್ಪ ಪ್ರತಿರೋಧ ಒಡ್ಡುವಲ್ಲಿ ಎದುರಾಳಿ ಕುಸ್ತಿಪಟು ಯಶಸ್ವಿಯಾದರು. ಆದರೆ ತಕ್ಷಣ ಚೇತರಿಸಿಕೊಂಡ ತನ್ನು ಏಕಪಕ್ಷೀಯವಾಗಿ ಜಯದತ್ತ ಮುನ್ನುಗ್ಗಿದರು.

48 ಕೆಜಿ ವಿಭಾಗದಲ್ಲಿ ಅಮನ್ ಗುಲಿಯಾ ಮತ್ತು 80 ಕೆಜಿ ವಿಭಾಗದಲ್ಲಿ ಸಾಗರ್ ಜಗ್ಲಾನ್ ಪ್ರಶಸ್ತಿ ಗೆದ್ದುಕೊಂಡರು. ಈ ಮೂಲಕ ಭಾರತ ಇದೇ ಮೊದಲ ಬಾರಿ ತಂಡ ಚಾಂಪಿಯನ್‌ಷಿಪ್ ತನ್ನದಾಗಿಸಿಕೊಂಡಿತು.

65 ಕೆಜಿ ವಿಭಾಗದಲ್ಲಿ ವರ್ಷಾ ಕಂಚಿನ ಪದಕ ಗೆದ್ದುಕೊಂಡರು. ಟರ್ಕಿಯ ದುಯ್ಗು ಜೆನ್ ಅವರನ್ನು ವರ್ಷಾ ಮಣಿಸಿದರು.

ಭಾರತ ಒಟ್ಟಾರೆ 147 ಪಾಯಿಂಟ್‌ಗಳೊಂದಿಗೆ ಬಲಿಷ್ಠ ಅಮೆರಿಕವನ್ನು ನಾಲ್ಕು ಪಾಯಿಂಟ್‌ಗಳಿಂದ ಹಿಂದಿಕ್ಕಿತು. ರಷ್ಯಾ 140 ಪಾಯಿಂಟ್ ಗಳಿಸಿತು.